ವಿಶ್ವವಾಣಿ
ವಿಶ್ವಾಸವೇ ವಿಶ್ವ

ತೇಜಸ್ವಿ-ಅಣ್ಣಾಮಲೈ ಐರನ್ ಮ್ಯಾನ್

ಗೋವಾದಲ್ಲಿ ನಡೆದ ಐರನ್ ಮ್ಯಾನ್ 70.3 ಓಟದಲ್ಲಿ ಸಂಸದ ತೇಜಸ್ವಿ ಸೂರ್ಯ ಅವರು ಎರಡನೇ ಬಾರಿ ಭಾಗಿಯಾಗಿ ಸ್ಪರ್ಧೆ ಪೂರ್ಣಗೊಳಿಸಿದ್ದಾರೆ. ತಮಿಳುನಾಡು ಬಿಜೆಪಿ ರಾಜ್ಯಾಧ್ಯಕ್ಷ ಕೆ.ಅಣ್ಣಾಮಲೈ ಕೂಡ ಭಾಗಿಯಾಗಿದ್ದರು. ಸ್ಪರ್ಧೆಯು 1.9 ಕಿಮೀ ಈಜು, 90 ಕಿಮೀ ಸೈಕ್ಲಿಂಗ್ ಮತ್ತು 21.1 ಕಿಮೀ ಓಟವನ್ನು ಒಳಗೊಂಡಿತ್ತು.

ಸೊಂಪಾದ ಪುಟಗಳು



ಬಿಜೆಪಿ ನಾಯಕರು ಭಾಗವತ ಓದಬೇಕು
ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ 6

ನಿಸರ್ಗ ಎಂದಾಕ್ಷಣ ಮನುಷ್ಯ ನೆನಪಾಗುತ್ತಾನಾ?
ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್ 7

ದಾರಿದೀಪೋಕ್ತಿ

ನಿಮ್ಮ ನಡೆ ಚೆಸ್ ಆಟಗಾರನಂತೆ ಇರಬೇಕು. ಆತ ಇಡೀ ಆಟದಲ್ಲಿ ಮಾತೇ ಆಡುವುದಿಲ್ಲ. ಕೊನೆಯಲ್ಲಿ ಚೆಕ್‌ಮೇಟ್ ಎಂದು ಹೇಳುತ್ತಾನೆ. ಸಾಧಿಸುವುದಕ್ಕಿಂತ ಮುನ್ನ ಏನೇ ಹೇಳಿದರೂ ಪ್ರಯೋಜನವಿಲ್ಲ.

ವಕ್ರತುಂಡೋಕ್ತಿ

ಎಲ್ಲಿಯವರೆಗೆ ಸಾಕಿದ ನಾಯಿಗಳನ್ನು ಶೌಚಕ್ಕೆಂದು ಬೀದಿಗಳಿಗೆ ಕರೆದುಕೊಂಡು ಹೋಗುತ್ತೇವೋ ಅಲ್ಲಿಯವರೆಗೂ ನಗರಗಳು ಬಯಲು ಶೌಚ ಮುಕ್ತವಾಗುವುದಿಲ್ಲ.

ಪಾಕ್ ಸೇನೆಗೆ ಗರಿಷ್ಠ ಅಧಿಕಾರ

ಇಸ್ಲಾಮಾಬಾದ್: ಪಾಕಿಸ್ತಾನ ಹಂತಹಂತವಾಗಿ ಮಿಲಿಟರಿ ಆಡಳಿತದತ್ತ ಸಾಗುತ್ತಿದೆ. ಅದನ್ನು ಪುಷ್ಟೀಕರಿಸುವಂತೆ ಪಾಕ್ ಸರಕಾರದ ನಡೆ ಕಾಣ ಬರುತ್ತಿದೆ. ಪಾಕ್‌ನ ಸಂವಿಧಾನಕ್ಕೆ 27ನೇ ತಿದ್ದುಪಡಿ ತಂದು ಸಂಸತ್ತಿನಲ್ಲಿ ವಿಧೇಯಕ ಮಂಡಿಸಲಾಗಿದೆ.

ಹೊಸದಾಗಿ ಮೂರೂ ರಕ್ಷಣಾ ಪಡೆಗಳ ಮಹಾ ದಂಡನಾಯಕ ಹುದ್ದೆ ರಚಿಸಲೆಂದೇ ಸಾಂವಿಧಾನಿಕ ತಿದ್ದುಪಡಿ ತಂದಿದೆ. ಪಾಕ್ ಸೇನಾ ಮುಖ್ಯಸ್ಥ ಅಸೀಮ್ ಮುನೀರ್‌ಗೆ ವಿಪರೀತ ಅಧಿಕಾರ ಸಿಕ್ಕಿದೆ. ಇನ್ನು ಪಾಕ್ ರಾಷ್ಟ್ರೀಯ ಕಾರ್ಯತಂತ್ರ ನಿರ್ಧರಿಸುವುದೇ ಸೇನಾ ಮುಖ್ಯಸ್ಥರು. ಈ ಮುಖ್ಯಸ್ಥರನ್ನು ನೇಮಿಸುವುದು ಸೇನೆ!

ಗುಜರಾತಿನಲ್ಲಿ 3 ಐಸಿಸ್ ಉಗ್ರರ ಸೆರೆ

ಗಾಂಧಿನಗರ: ದೇಶದ ವಿವಿಧೆಡೆ ದೊಡ್ಡ ಮಟ್ಟದಲ್ಲಿ ಭಯೋತ್ಪಾದಕ ದಾಳಿಗೆ ಸಂಚು ರೂಪಿಸುತ್ತಿದ್ದ ಹಾಗೂ 'ಐಸಿಸ್' ಭಯೋತ್ಪಾದಕ ಸಂಘಟನೆಯಿಂದ ತರಬೇತಿ ಪಡೆದಿರುವ ಮೂವರು ಉಗ್ರ ರನ್ನು ಗುಜರಾತ್ ರಾಜ್ಯದ ಭಯೋತ್ಪಾ ದಕ ನಿಗ್ರಹ ದಳ (ಎಟಿಎಸ್) ಭಾನು ವಾರ ಗಾಂಧಿನಗರದಲ್ಲಿ ಬಂಧಿಸಿದೆ. ಆ ಮೂಲಕ ದೇಶದ ವಿವಿಧೆಡೆ ದೊಡ್ಡ ಮಟ್ಟದಲ್ಲಿ ಭಯೋತ್ಪಾದಕ ದಾಳಿಗೆ ನಡೆದಿದ್ದ ಸಂಚನ್ನು ವಿಫಲಗೊಳಿಸಲಾಗಿದೆ. ಬಂಧಿತರಾಗಿರುವ ಮೂವರೂ ಭಯೋತ್ಪಾದಕರ ಚಲನವಲನದ ಮೇಲೆ ಒಂದು ವರ್ಷದಿಂದಲೂ ಗುಜರಾತ್ ಎಟಿಎಸ್ ತಂಡ ನಿಗಾ ಇರಿಸಿತ್ತು.

ಫನ್‌ತರಂಗ

- ರಘುಪತಿ ಶೃಂಗೇರಿ -

ಪರಪ್ಪನ ಅಗ್ರಹಾರ ಜೈಲಿನಲ್ಲಿ ಉಗ್ರರಿಗೆ ರಾಜಾತಿಥ್ಯ
ಒಳಗಿರುವ ಲಷ್ಕರ್ ಉಗ್ರರ ಕೈಯಲ್ಲಿ ಮೊಬೈಲ್‌ಗಳು
ಸುದ್ದಿ

ಸಂಘದ ನೋಂದಣಿ ಕಡ್ಡಾಯವಲ್ಲ: ಸರಸಂಘಚಾಲಕ ಭಾಗವತ್ ಹಿಂದೂ ಧರ್ಮವು ನೋಂದಣಿ ಆಗಿದೆಯೇ ಎಂದು ಮರುಪ್ರಶ್ನೆ

ಆರ್‌ಎಸ್‌ಎಸ್ ಸಂವಿಧಾನಬದ್ಧ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಳೆದೊಂದು ತಿಂಗಳಿನಿಂದ ರಾಜ್ಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದ್ದ ಆರ್‌ಎಸ್‌ಎಸ್ 'ನೋಂದಣಿ' ವಿವಾದಕ್ಕೆ ಇದೀಗ ಕರ್ನಾಟಕದಲ್ಲಿಯೇ ಸಂಘದ ಮುಖ್ಯಸ್ಥ ಡಾ.ಮೋಹನ್ ಭಾಗವತ್ ಉತ್ತರಿಸಿದ್ದಾರೆ. ಈ ಮೂಲಕ ಕರ್ನಾಟಕದಲ್ಲಿ ಕಾಂಗ್ರೆಸ್ ಸರಕಾರ ಹಾಗೂ ಆರ್‌ಎಸ್‌ಎಸ್ ನಡುವಿನ 'ತಿಕ್ಕಾಟ'ಕ್ಕೆ ಇದೇ ಮೊದಲ ಬಾರಿಗೆ ಸಂಘ ಖಡಕ್ ಪ್ರತಿಕ್ರಿಯೆ ನೀಡಿದೆ.

ಪಿಇಎಸ್ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ 'ಸಂಘದ 100 ವರ್ಷದ ಪಯಣ: ನವಕ್ಷಿತಿಜ' ಉಪನ್ಯಾಸ ಮಾಲೆಯ ಎರಡನೇ ದಿನ 'ಸಂಘವನ್ನು ಏಕೆ ನೋಂದಣಿ ಮಾಡಿಸಿಲ್ಲ' ಎನ್ನುವ ಗಣ್ಯರ ಪ್ರಶ್ನೆಗೆ ಉತ್ತರಿಸುವ ಜತೆಜತೆಗೆ ಕಾಂಗ್ರೆಸ್‌ಗೆ ಟಾಂಗ್ ಕೊಟ್ಟ ಮೋಹನ್ ಭಾಗವತ್ ಅವರು, ಹಿಂದೂ ಧರ್ಮವನ್ನು ಈಗಲೂ ನೋಂದಣಿ ಮಾಡಿಲ್ಲ. ಅಂದ ಮಾತ್ರಕ್ಕೆ ಅದು ತಪ್ಪೇ? ಅದೇ ರೀತಿ ನಾವು ಕೂಡ ಆರ್‌ಎಸ್‌ಎಸ್ ನೋಂದಣಿ ಮಾಡಿಸಿಕೊಂಡಿಲ್ಲ ಎಂದು ಸಮರ್ಥಿಸಿಕೊಂಡರು.

ಆರ್‌ಎಸ್‌ಎಸ್ ಸ್ಥಾಪನೆಯಾಗಿದ್ದು, 1925ರಲ್ಲಿ. ಆಗ ದೇಶವನ್ನು ಬ್ರಿಟಿಷರು ಆಳುತ್ತಿದ್ದರು. ಅವರ ಬಳಿ ನಾವು ಸಂಘವನ್ನು ನೋಂದಣಿ ಮಾಡಿಸಿಕೊಳ್ಳಬೇಕಿತ್ತೆ? ನೀವು ಅದನ್ನು ನಿರೀಕ್ಷೆ ಮಾಡುತ್ತಿರಾ? ನಾವು ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದ್ದೆವು. ಇನ್ನು ದೇಶಕ್ಕೆ ಸ್ವಾತಂತ್ರ್ಯ ಬಂದ ಬಳಿಕ ನೆಲದ ಕಾನೂನಿನಲ್ಲಿ ನಂತರ ಸಂಘಗಳನ್ನು ನೋಂದಣಿ ಮಾಡಬೇಕೆಂಬ ಕಡ್ಡಾಯ ನಿಯಮವಿಲ್ಲ. ಅದಕ್ಕೆ ನಾವು ಮಾಡಿಸಿಲ್ಲ. ಆದರೆ ಯಾರು ಏನೇ ಆರೋಪ ಮಾಡಿಕೊಂಡಿರಲಿ. ಸಂಘ ಪರಿವಾರ ಸ್ವತಂತ್ರ ಹಾಗೂ ಕಾನೂನಾತ್ಮಕ ಸಂಸ್ಥೆಯಾಗಿದ್ದು, ದೇಶದ ಸಂವಿಧಾನದಡಿಯಲ್ಲಿಯೇ ಕಾರ್ಯ ನಿರ್ವಹಿಸುತ್ತಿದೆ ಎಂದು ಸ್ಪಷ್ಟಪಡಿಸಿದರು.

ನಮ್ಮನ್ನು ಗುರುತಿಸಿದ್ದಾರೆ: ನಾವು ನಿಷೇಧಕ್ಕೆ ಒಳಗಾಗಿದ್ದೇವೆ ಎಂದರೆ ಸರಕಾರ ನಮ್ಮನ್ನು ಗುರುತಿಸಿದೆ ಎಂದರ್ಥ. ನಾವು ಇಲ್ಲದಿದ್ದರೆ ಯಾರು ತಾನೇ ಗುರುತಿಸುತ್ತಾರೆ? ನಾವು ಸಮಗ್ರ ಭಾರತ ಧರ್ಮ ರಕ್ಷಣೆಯ ಕಲ್ಪನೆಯ ತಳಹದಿಯ ಮೇಲೆ ಕಾರ್ಯ ನಿರ್ವಹಿಸುತ್ತೇವೆ. ನಾವು ಯಾವುದೇ ಒಂದು ಧರ್ಮ ಜಾತಿಯನ್ನು ಗುರಿಯಾಗಿಟ್ಟುಕೊಂಡಿಲ್ಲ. ಆರ್‌ಎಸ್‌ಎಸ್ ಅಧಿಕಾರ ಅಥವಾ ರಾಜಕೀಯ ಪ್ರಾಬಲ್ಯವನ್ನು ಬಯಸುವುದಿಲ್ಲ. ಆದರೆ ಭಾರತ ಮಾತೆಯ ವೈಭವಕ್ಕಾಗಿ ಹಿಂದೂ ಸಮಾಜವನ್ನು ಸಂಘಟಿಸುವ ಗುರಿ ಹೊಂದಿದೆ ಎಂದು ಅಭಿಪ್ರಾಯಪಟ್ಟರು.

ದೇಶದಲ್ಲಿ ಮೂರು ಬಾರಿ ಆರ್‌ಎಸ್‌ಎಸ್ ನಿಷೇಧಕ್ಕೆ ಒಳಪಟ್ಟಿತ್ತು. → 11



ಸ್ವಾತಂತ್ರ್ಯದ ನಂತರ ಸರಕಾರಗಳು ಸಂಘವನ್ನು 'ವ್ಯಕ್ತಿಗಳ ಸಂಘಟನೆ' ಎಂದು ಗುರುತಿಸಿದೆ. ಆದಾಯ ತೆರಿಗೆ ಇಲಾಖೆಯು ಗುರುದಕ್ಷಿಣೆ ಹಣಕ್ಕೆ ಆದಾಯ ತೆರಿಗೆ ವಿನಾಯಿತಿ ನೀಡಿದೆ. ಮೂರು ಬಾರಿ ಸರಕಾರವು ಸಂಘವನ್ನು ನಿಷೇಧಿಸಿದೆ ಎಂದರೆ ಅದೂ ಗುರುತಿಸಿದೆ ಎಂದಲ್ಲವೇ? ಸಂಘವು ಸಂಪೂರ್ಣವಾಗಿ ಕಾನೂನುಬದ್ಧವಾಗಿದೆ, ಸಂವಿಧಾನಬದ್ಧವಾಗಿದೆ. ಹಾಗೆ ನೋಡಿದರೆ ಹಿಂದೂ ಧರ್ಮವೂ ನೋಂದಣಿ ಆಗಿಲ್ಲ ಅಲ್ಲವೇ?

-ಡಾ.ಮೋಹನ್ ಭಾಗವತ್, ಸರಸಂಘಚಾಲಕ, ಆರ್‌ಎಸ್‌ಎಸ್

ಭಾಗವತ್‌ಗೆ ಪ್ರಿಯಾಂಕ್ 11 ಪ್ರಶ್ನೆ

ಮೋಹನ್ ಭಾಗವತ್‌ರ ಮಾತಿಗೆ ಸಚಿವ ಪ್ರಿಯಾಂಕ್ ಖರ್ಗೆ 11 ಮರು ಪ್ರಶ್ನೆ ಹಾಕಿದ್ದಾರೆ. ಈ ಸ್ವಯಂಸೇವಕರು ಯಾರು, ಹೇಗೆ ಗುರುತಿಸಲಾಗುತ್ತದೆ?, ನೀಡಲಾದ ದೇಣಿಗೆಗಳ ಪ್ರಮಾಣ ಮತ್ತು ಸ್ವರೂಪ ಏನು?, ಈ ಕೊಡುಗೆಗಳನ್ನು ಯಾವ ಕಾರ್ಯವಿಧಾನಗಳು ಅಥವಾ ಯಾವ ಮಾರ್ಗಗಳ ಮೂಲಕ ಕೊಡುಗೆ ಸ್ವೀಕರಿಸಲಾಗುತ್ತೆ?, ಆರ್‌ಎಸ್‌ಎಸ್ ಪಾರದರ್ಶಕವಾಗಿ ಕಾರ್ಯನಿರ್ವಹಿಸುತ್ತಿದ್ದರೆ ತನ್ನದೇ ಆದ ನೋಂದಾಯಿತ ಗುರುತಿನಡಿಯಲ್ಲಿ ಸಂಸ್ಥೆಗೆ ನೇರವಾಗಿ ದೇಣಿಗೆಗಳನ್ನು ಏಕೆ ನೀಡಲಾಗುವುದಿಲ್ಲ? ಎಂದೆಲ್ಲ ಕೇಳಿದ್ದಾರೆ.

ಟೀಕೆಗಳಿಗೆಲ್ಲ ಉತ್ತರಿಸುವ ಅಗತ್ಯವಿಲ್ಲ

ಸಂಘದ ಕುರಿತು ಟೀಕೆಗಳಿಗೆ ಏಕೆ ಪ್ರತಿಕ್ರಿಯೆ ನೀಡುವುದಿಲ್ಲ ಎಂಬ ಪ್ರಶ್ನೆಗೆ ಉತ್ತರಿಸಿದ ಉತ್ತರಿಸಿದ ಭಾಗವತ್, ಸಂಘವು ಎಲ್ಲ ಪ್ರಶ್ನೆಗಳಿಗೂ ಉತ್ತರಿಸಬೇಕಾಗಿಲ್ಲ. ಕೆಲವರು ಸುಖಾಸುಮ್ಮನೆ ಪ್ರಶ್ನೆ ಕೇಳುತ್ತಾರೆ, ಅವರಿಗೆ ಉತ್ತರಿಸುವ ಅಗತ್ಯವಿಲ್ಲ. ಆ ರೀತಿ ಎಲ್ಲರಿಗೂ ಉತ್ತರಿಸುತ್ತಾ ನಮ್ಮ ಸಮಯವನ್ನು ವ್ಯರ್ಥ ಮಾಡಲು ಬಯಸುವುದಿಲ್ಲ, ನಮಗೆ ಮಾಡಲು ಬೇರೆ ಕೆಲಸಗಳಿವೆ. ಇಷ್ಟು ವರ್ಷಗಳ ನಂತರವೂ, ಟೀಕೆಗಳೇ ನಮ್ಮನ್ನು ಹೆಚ್ಚು ಪ್ರಸಿದ್ಧ ಮಾಡುತ್ತಿವೆ. ಯಾರು ನೈಜ ಉದ್ದೇಶ ಹೊಂದಿ ಪ್ರಶ್ನೆ ಮಾಡುತ್ತಾರೆಯೋ ಅವರಿಗೆ ಉತ್ತರಿಸಿದ್ದೇವೆ, ಉತ್ತರಿಸುತ್ತೇವೆ ಎಂದು ಸ್ಪಷ್ಟಪಡಿಸಿದರು.

ಭಾಗವತ್ ಹೇಳಿದ್ದೇನು?

- ಭಾರತೀಯರು ಮನಸ್ಸು ಮಾಡಿದರೆ ನಾಳೆಯೇ ಹಿಂದೂ ರಾಷ್ಟ್ರ
- ಪಾಕಿಸ್ತಾನದ ಸಂಚಿನ ದಾಳಿಗಳಿಗೆ ಬಲವಾಗಿ ಪ್ರತಿಕ್ರಿಯಿಸಬೇಕು
- ಸಂಘಕ್ಕೆ ಯಾವುದೇ ಒಂದು ಪಕ್ಷದ ಮೇಲೆ ವಿಶೇಷ ಪ್ರೀತಿ ಇಲ್ಲ
- ಯಾವುದೇ ಧರ್ಮದವರು ಸಂಘದ ಶಾಖೆಗೆ ಬರಲು ಅವಕಾಶ
- ಎಲ್ಲ ಮುಸ್ಲಿಮರನ್ನೂ ಒಂದೇ ಚೌಕಟ್ಟಿಗೆ ತರುವ ಅಗತ್ಯವಿಲ್ಲ
- ಹಿಂದೂಗಳು ಎಂದಿಗೂ ಜಾತ್ಯತೀತ ಆಡಳಿತವನ್ನೇ ಮಾಡ್ತಾರೆ

ತಮ್ಮ ಸರಕಾರ ಯಾವುದೇ ಒಂದು ಸಂಘಟನೆಗೆ ಸೀಮಿತವಾಗಿ ಸರಕಾರಿ ಸ್ವತ್ತುಗಳಲ್ಲಿ ಚಟುವಟಿಕೆಗಳನ್ನು ನಿಷೇಧಿಸಿಲ್ಲ. ಆದರೆ ಆರ್‌ಎಸ್‌ಎಸ್‌ನವರು ತಮಗಾಗಿಯೇ ಈ ಆದೇಶ ಹೊರಡಿಸಲಾಗಿದೆ ಎಂದು ಭಾವಿಸಿಕೊಂಡಿದ್ದಾರೆ. ಯಾವುದೇ ಸಂಘಟನೆಗಳಾದರೂ ಜಿಲ್ಲಾಧಿಕಾರಿಗಳ ಅನುಮತಿ ಪಡೆದು ಚಟುವಟಿಕೆ ನಡೆಸಬೇಕು. ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದ್ದಕ್ಕೆಲ್ಲಾ ಉತ್ತರ ಕೊಡಬೇಕಾಗಿಲ್ಲ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಕೈದಿಗಳಿಗೆ ರಾಜಾತಿಥ್ಯ: ಇಂದು ಪರಂ ಸಭೆ ಪರಪ್ಪನ ಅಗ್ರಹಾರದ ಬ್ಯಾರಕ್ ತಪಾಸಣೆ

ಜೈಲಿನಲ್ಲಿ ಮಜಾ ತಲೆದಂಡ ಸಂಭವ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮಾಡಿದ ತಪ್ಪಿಗೆ ಪರಪ್ಪನ ಅಗ್ರಹಾರ ಜೈಲಿನಲ್ಲಿ ಶಿಕ್ಷೆ ಅನುಭವಿಸಬೇಕಿದ್ದ ಕೈದಿಗಳು ಐಷಾರಾಮಿ ಜೀವನ ನಡೆಸುತ್ತಿರುವ ವಿಡಿಯೋ ವೈರಲ್ ಆಗುತ್ತಿದ್ದಂತೆ, ಎಚ್ಚೆತ್ತಿರುವ ಗೃಹ ಇಲಾಖೆ ಸೋಮವಾರ ರಾಜಾತಿಥ್ಯಕ್ಕೆ ಸಂಬಂಧಿಸಿದಂತೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ ನೇತೃತ್ವದಲ್ಲಿ ಉನ್ನತ ಮಟ್ಟದ ಸಭೆ ನಡೆಯಲಿದ್ದು, ತಪ್ಪಿತಸ್ಥ ಅಧಿಕಾರಿಯ ವಿರುದ್ಧ 'ಕಠಿಣ' ಕ್ರಮ ಕೈಗೊಳ್ಳುವ ಸಾಧ್ಯತೆಯಿದೆ.

ವಿಕೃತಕಾಮಿ ಉಮೇಶ್ ರೆಡ್ಡಿ, ಉಗ್ರ ಜುಹಾದ್ ಹಮೀದ್ ಶಕೀಲ್ ರಾಜಾರೋಷವಾಗಿ ಫೋನ್‌ನಲ್ಲಿ ಮಾತಾಡಿಕೊಂಡಿರುವುದು, ವಿಡಿಯೋಗಳನ್ನು ನೋಡುತ್ತಿರುವುದು, ಎಲ್‌ಇಡಿ ಟಿವಿಯ ವ್ಯವಸ್ಥೆಯಿರುವ ವಿಡಿಯೋ ಭಾನುವಾರ ವೈರಲ್ ಆಗಿತ್ತು. ಇದಕ್ಕೂ ಮೊದಲು ನಟ ದರ್ಶನ್ ಆ್ಯಂಡ್ ಗ್ಯಾಂಗ್ ಮೋಜು ಮಸ್ತಿ ಮಾಡುತ್ತಿರುವ ಫೋಟೋ ವೈರಲ್ ಆಗಿತ್ತು. ಈ ಘಟನೆಗಳ ಮೂಲಕ ಜೈಲಿನಲ್ಲಿರುವ ಭ್ರಷ್ಟಾಚಾರದ ಬಗ್ಗೆ ತೀವ್ರ ಆಕ್ಷೇಪಗಳು ಬಂದಿದ್ದವು. ಇದೀಗ ಮತ್ತೆ ವಿಡಿಯೋ ಹರಿದಾಡುತ್ತಿರುವುದರಿಂದ, ಸರಕಾರ ಮುಜುಗರಕ್ಕೆ ಸಿಲುಕಿದೆ. → 4

ಈ ಹಿಂದಿನ ವಿವಾದಗಳೇನು?

- ರೌಡಿ ಶೀಟರ್ ಗುಬ್ಬಚ್ಚಿ ಸೀನಾ ಹುಟ್ಟು ಹಬ್ಬ ಆಚರಣೆಯ ಫೋಟೋ ವೈರಲ್
- ವಿಚಾರಣಾಧೀನ ಕೈದಿಗಳಿಗೆ ಎಲ್‌ಇಡಿ ಟಿವಿ ಸೌಲಭ್ಯ, ಜತೆಗೆ ಅಡುಗೆ ಅವಕಾಶ
- ಬ್ಯಾರಕ್‌ಗಳಲ್ಲಿ ಮೊಟ್ಟೆ, ಕೋಳಿ ಮಾಂಸ, ಮೊಬೈಲ್, ಚಾರ್ಜರ್‌ಗಳು ಪತ್ತೆ
- ಹಲವು ಬಾರಿ ಸೌಂಡ್ ಬಾಕ್ಸ್ ಬಳಸಿ ಪಾರ್ಟಿ ಮಾಡಿರುವ ವಿಡಿಯೋ ವೈರಲ್
- ನಟ ದರ್ಶನ್ ಗ್ಯಾಂಗ್ ರೌಡಿಗಳೊಂದಿಗೆ ಸಿಗರೇಟ್ ಸೇದಿದ ಫೋಟೋ ವೈರಲ್

ಬಂದೀಖಾನೆಗಳಲ್ಲಿ ಕೈದಿಗಳಿಗೆ ರಾಜಾತಿಥ್ಯ ನೀಡಿರುವ ಪ್ರಕರಣಗಳು ಮುಂದಿನ ದಿನಗಳಲ್ಲಿ ಮರುಕಳಿಸದಂತೆ ಮುನ್ನೆಚ್ಚರಿಕೆ ತೆಗೆದುಕೊಳ್ಳಲಾಗುವುದು. ಈ ಸಂಬಂಧ ಪರಮೇಶ್ವರ್ ನೇತೃತ್ವದಲ್ಲಿ ಪ್ರತ್ಯೇಕ ಸಭೆ ನಡೆಯಲಿದೆ. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಪರಪ್ಪನ ಅಗ್ರಹಾರದಲ್ಲಿ ಪದೇಪದೆ ಈ ರೀತಿಯ ಆರೋಪ ಕೇಳಿ ಬರುತ್ತಿದೆ. ಈ ಹಿಂದೆ ಕೆಲವರನ್ನು ಅಮಾನತುಗೊಳಿಸಲಾಗಿತ್ತು. ಈ ಬೆಳವಣಿಗೆಗೆ ಯಾರು ಹೊಣೆಗಾರರಾಗಿದ್ದಾರೋ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುತ್ತೇವೆ. ಸಂಬಂಧಪಟ್ಟವರ ವಿರುದ್ಧ ಕ್ರಮ ಖಾತ್ರಿ.

-ಡಾ.ಜಿ.ಪರಮೇಶ್ವರ್, ಗೃಹಸಚಿವ

ಅಂಗೋಲಾದಲ್ಲಿ ರಾಷ್ಟ್ರಪತಿ

ಲುವಾಂಡ: ಭಾರತದ ರಾಷ್ಟ್ರಪತಿ ದ್ರೌಪದಿ ಮುರ್ಮುಗೆ ಅಂಗೋಲಾ ರಾಜಧಾನಿ ಲುವಾಂಡದಲ್ಲಿ ಅದ್ದೂರಿ ಸ್ವಾಗತ ಲಭಿಸಿದೆ. ಮುರ್ಮುಗೆ ಸ್ವಾಗತ ನೀಡಲು ಅಂಗೋಲಾ ಅಧ್ಯಕ್ಷ ಜೊಯಾವೊ ಮ್ಯಾನ್ಯುಯೆಲ್ ಗೋನ್ಸಾಲ್ವೆಸ್ ಲೌರೆಂಕೊ ಹಾಜರಿದ್ದರು. ಇದು ಅಂಗೋಲಾಗೆ ಮುರ್ಮು ಅವರ ಅಧಿಕೃತ ಭೇಟಿ. ಎರಡೂ ದೇಶಗಳ ದ್ವಿಪಕ್ಷೀಯ ಬಾಂಧವ್ಯ ಹೆಚ್ಚಿಸುವ ಉದ್ದೇಶ ಹೊಂದಲಾಗಿದೆ. ಇದು ಎರಡೂ ದೇಶಗಳ ನಡುವೆ ರಾಜತಾಂತ್ರಿಕ ಬಾಂಧವ್ಯ ಶುರುವಾಗಿ 40ನೇ ವರ್ಷಾಚರಣೆಯೂ ಹೌದು.

ಭದ್ರಾ ನಾಲೆ: 2 ಸಾವು

ಸಂತೇಬೆನ್ನೂರು (ದಾವಣಗೆರೆ): ಚಾಲಕನ ನಿಯಂತ್ರಣ ಕಳೆದುಕೊಂಡ ಕಾರು ಚನ್ನಗಿರಿ ತಾಲೂಕಿನ ಹೊಸೂರು ಗ್ರಾಮದ ಭದ್ರಾ ನಾಲೆಗೆ ಭಾನುವಾರ ಉರುಳಿಬಿದ್ದಿದೆ. ಇಬ್ಬರು ಮೃತಪಟ್ಟಿದ್ದಾರೆ. ದಾವಣಗೆರೆ ನಗರದ ನಿವಾಸಿಗಳಾದ ಮಲ್ಲಿಕಾರ್ಜುನ್ (29), ಸಿದ್ದೇಶ್ (38) ಮೃತರು. ಉಳಿದ ನಾಲ್ವರು ಈಜಿಕೊಂಡು ನಾಲೆಯ ದಡ ಸೇರಿದ್ದಾರೆ. ಆರು ಜನ ಸ್ನೇಹಿತರು ಮಂಗಳೂರು ಪ್ರವಾಸ ಮುಗಿಸಿಕೊಂಡು ವಾಪಸ್ ಮರಳುತ್ತಿದ್ದಾಗ ಈ ದುರ್ಘಟನೆ ನಡೆದಿದೆ.

81 ಸೈಬರ್‌ಗಳ್ಳರ ಸೆರೆ

ಹೈದರಾಬಾದ್: ಸತತ 25 ದಿನಗಳ ಕಾಲ 5 ರಾಜ್ಯಗಳಲ್ಲಿ ಕಾರ್ಯಾಚರಣೆ ನಡೆಸಿದ ತೆಲಂಗಾಣ ಸೈಬರ್ ಭದ್ರತಾ ಮಂಡಳಿ (ಟಿಜಿಸಿಎಸ್‌ಬಿ) 81 ವಂಚಕರನ್ನು ಬಂಧಿಸಿದೆ. ಈ ಹೋರಾಟದಲ್ಲಿ ಟಿಜಿಸಿಎಸ್‌ಬಿ ಒಟ್ಟು 95 ಕೋಟಿ ರು.ಗಳನ್ನು ವಶಪಡಿಸಿಕೊಂಡಿದೆ. ಒಟ್ಟು 25 ದಿನಗಳ ಕಾರ್ಯಾಚರಣೆಯಲ್ಲಿ ಮಹಾರಾಷ್ಟ್ರ, ಕರ್ನಾಟಕ, ಕೇರಳ, ತಮಿಳುನಾಡು, ಆಂಧ್ರಪ್ರದೇಶ ರಾಜ್ಯಗಳಿಗೆ ಸೇರಿದ ತಪ್ಪಿತಸ್ಥರನ್ನು ಬಂಧನ ಮಾಡಲಾಗಿದೆ. ದೇಶಾದ್ಯಂತ 754 ಅಪರಾಧದ ಕೊಂಡಿಗಳನ್ನು ಪೊಲೀಸರು ಪತ್ತೆಹಚ್ಚಿದ್ದಾರೆ.



ಸಿಎಂ ಸಿದ್ದು ಜಲಭಾಗ್ಯ

ಕೂಡ್ಲಿಗಿ: ವಿಜಯನಗರ ಜಿಲ್ಲೆಯ ಕೂಡ್ಲಿಗಿಯಲ್ಲಿ ಭಾನುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ 74 ಕೆರೆ ತುಂಬಿಸುವ ಯೋಜನೆಗೆ ಚಾಲನೆ ನೀಡಿದರು. ಈ ವೇಳೆ ಅವರು ₹1,250 ಕೋಟಿಗೂ ಅಧಿಕ ವೆಚ್ಚದ ವಿವಿಧ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು. ಇದೇ ವೇಳೆ ಕಬ್ಬು ಬೆಳೆಗಾರರ ಹೋರಾಟಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಕೇಂದ್ರ ಸರಕಾರದ ವಿರುದ್ಧ ಹರಿಹಾಯ್ದರು. ಕಬ್ಬಿಗೆ ಎಫ್‌ಆರ್‌ಪಿ ಮತ್ತು ಎಂಎಸ್‌ಪಿ ಎರಡನ್ನೂ ನಿಗದಿ ಮಾಡುವುದು ಕೇಂದ್ರದ ಬಿಜೆಪಿ ಸರಕಾರ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದರು.

ಭಾರತೀಯ ಪಾತಕಿ ಸೆರೆ

ದೆಹಲಿ: ಹರಿಯಾಣ ಪೊಲೀಸರಿಗೆ ಹಲವು ಅಪರಾಧ ಪ್ರಕರಣಗಳಲ್ಲಿ ಬೇಕಾಗಿದ್ದ ಭಾರತ ಮೂಲದ ಇಬ್ಬರು ಕುಖ್ಯಾತ ಪಾತಕಿಗಳನ್ನು ಅಮೆರಿಕ ಮತ್ತು ಜಾರ್ಜಿಯಾದಲ್ಲಿ ಬಂಧಿಸಲಾಗಿದೆ. ಭಾನು ರಾಣಾ ಮತ್ತು ವೆಂಕಟೇಶ್ ಗರ್ಗ್ ಬಂಧಿತರು. ಹರಿಯಾಣ ಪೊಲೀಸ್ ಮತ್ತು ಕೇಂದ್ರ ತನಿಖಾ ದಳ ಅಧಿಕಾರಿಗಳ ತಂಡ ಇಂಟರ್‌ಪೋಲ್ ಪೊಲೀಸರ ನೆರವಿನೊಂದಿಗೆ ಕುಖ್ಯಾತರಿಬ್ಬರನ್ನು ಬಂಧಿಸಲಾಗಿದೆ. ಈ ಇಬ್ಬರು ಶೀಘ್ರವೇ ಭಾರತಕ್ಕೆ ಗಡಿಪಾರಾಗಲಿದ್ದಾರೆ.

2024ರಲ್ಲಿ ಕೆಜಿಗೆ 400 ರು., ಈಗ 1200 ರು.ಗೆ ಹೆಚ್ಚಳ

ಕಾಫಿ ಪುಡಿ ಬೆಲೆ 800 ರು. ಏರಿಕೆ

ಬೆಂಗಳೂರು: ಕಾಫಿ ಬೀಜದ ಇಳುವರಿ ಕುಸಿತದಿಂದಾಗಿ ಕಾಫಿ ಪುಡಿ ದರದಲ್ಲಿ ಗಣನೀಯ ಏರಿಕೆಯಾಗಿದ್ದು, ವರ್ಷದ ಅಂತರದಲ್ಲಿ ಕಾಫಿ ಪುಡಿಯ ದರದಲ್ಲಿ 800ರಿಂದ 1200 ರು. ಏರಿಕೆಯಾಗಿದೆ. ಇಳುವರಿಯ ಕುಸಿತದ ನೆಪದಲ್ಲಿ ಕಳೆದೊಂದು ವರ್ಷದಿಂದ ನಿರಂತರವಾಗಿ ಕಾಫಿ ಪುಡಿಯ ದರ ಮಾರುಕಟ್ಟೆಯಲ್ಲಿ ಏರುಗತಿಯಲ್ಲಿಯೇ ಸಾಗುತ್ತಿದೆ. ಆದರೆ ಇದರ ಲಾಭ ಕಾಫಿ ಬೆಳೆಗಾರರ ಬದಲಿಗೆ ಕಂಪನಿಗಳಿಗೆ ಸಿಗುತ್ತಿದೆ ಎನ್ನುವುದು ಕಾಫಿ ಬೆಳೆಗಾರರ ಅಳಲಾಗಿದೆ.

ಕಾಫಿ ಪುಡಿ ತಯಾರಿಕೆಯಲ್ಲಿ ಬಳಸುವ ಚಿಕೋರಿಯ ಬಳಕೆಯ ಆಧಾರದಲ್ಲಿ ಕಳೆದೊಂದು ವರ್ಷದಿಂದ ಪ್ರತಿ ಕೆಜಿಗೆ 800ರಿಂದ 1200 ರು. ದರ ಏರಿದೆ. ಆದರೆ ಕಂಪನಿಗಳ ಲಾಬಿಯಿಂದಾಗಿ ಈ ದರ ಏರಿಕೆಯ ಲಾಭ ಬೆಳೆಗಾರರಿಗೆ ಸಿಗುತ್ತಿಲ್ಲ.

ಆದರೆ ಕಾಫಿ ಪುಡಿ ದರ ಏರಿಕೆಯ ಬಿಸಿ ಮಾತ್ರ ಗ್ರಾಹಕರಿಗೆ ತಟ್ಟಿದೆ. ಕಾಫಿ ಪುಡಿ ತಯಾರಿಕಾ ಕಂಪನಿಗಳ ಪ್ರಕಾರ, ಕಾಫಿ ಬೀಜದ ಇಳುವರಿಯಲ್ಲಿ ಕುಸಿತವಾಗಿದೆ. ಇದರಿಂದಾಗಿ ಕಾಫಿ ಬೀಜದ ಬೆಲೆಯು ಏರಿಕೆಯಾಗಿದೆ. ಆದ್ದರಿಂದ ಕಾಫಿ ಪುಡಿಯ ಬೆಲೆಯೂ ಏರಿಕೆಯಾಗಿದೆ ಎನ್ನುವುದಾಗಿದೆ. → 11

ಚಾಮುಂಡಿ ದರ್ಶನ ಪಡೆದ ಉಪರಾಷ್ಟ್ರಪತಿ

ಉಪರಾಷ್ಟ್ರ ಪತಿ ಸಿ.ಪಿ.ರಾಧಾಕೃಷ್ಣನ್ ಹಾಗೂ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋತ್ ಅವರು ಭಾನುವಾರ ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ತೆರಳಿ ಚಾಮುಂಡೇಶ್ವರಿ ದೇವಿಯ ದರ್ಶನ ಪಡೆದು, ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಚಾಮುಂಡಿ ಬೆಟ್ಟ ಪ್ರಾಧಿಕಾರದ ವತಿಯಿಂದ ಇಬ್ಬರೂ ಗಣ್ಯರನ್ನು ಸನ್ಮಾನಿಸಲಾಯಿತು.

ಮತದಾನಕ್ಕೆ ಸಿದ್ಧತೆ, ನೇಪಾಳ ಗಡಿ 3 ದಿನ ಬಂದ್

ಬಿಹಾರ: ಬಹಿರಂಗ ಪ್ರಚಾರ ಅಂತ್ಯ

ಪಟನಾ: ಬಿಹಾರ ವಿಧಾನಸಭೆ ಚುನಾವಣೆಯ ಬಹಿರಂಗ ಪ್ರಚಾರ ಭಾನುವಾರ ಅಂತ್ಯವಾಗಿದೆ. 2ನೇ ಹಂತದ ಮತದಾನ ಮಂಗಳವಾರ ನಡೆಯಲಿದೆ. 20 ಜಿಲ್ಲೆಗಳ 122 ಕ್ಷೇತ್ರಗಳಲ್ಲಿ ಜನ ಮತ ಚಲಾಯಿಸಲಿದ್ದಾರೆ. ನ.6ಕ್ಕೆ ನಡೆದಿದ್ದ ಮೊದಲನೇ ಹಂತದ ಚುನಾವಣೆಯಲ್ಲಿ 18 ಜಿಲ್ಲೆಗಳ 121 ಕ್ಷೇತ್ರಗಳಿಗೆ ಮತ ಚಲಾವಣೆ ನಡೆದಿತ್ತು. ಆಗ ಐತಿಹಾಸಿಕ ಶೇ.65.08 ಮತದಾನವಾಗಿತ್ತು.



ಬಹಿರಂಗ ಪ್ರಚಾರ ಮುಕ್ತಾಯದ ಹಿನ್ನೆಲೆಯಲ್ಲಿ ಎನ್‌ಡಿಎ, ಮಹಾಘಟಬಂಧನ್ ನಾಯಕರು ತೀವ್ರ ಶ್ರಮ ಹಾಕಿದರು. ಎನ್‌ಡಿಎ ಪರ ಕೇಂದ್ರ ಗೃಹಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್, ಮಹಾ ಘಟಬಂಧನ್ ಪರ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಮುಖ್ಯಮಂತ್ರಿ ಅಭ್ಯರ್ಥಿ ತೇಜಸ್ವಿ ಯಾದವ್ ಗರಿಷ್ಠ ಮತದಾರರನ್ನು ಮುಟ್ಟಲು ಯತ್ನ ನಡೆಸಿದರು. ಬಹುತೇಕ ಇಡೀ ರಾಜ್ಯದಲ್ಲಿ ರ‍್ಯಾಲಿಗಳು, ರೋಡ್ ಶೋಗಳ ಅಬ್ಬರ ಕಂಡುಬಂತು.

ನೇಪಾಳ ಗಡಿಯಲ್ಲಿ ಕಟ್ಟೆಚ್ಚರ: ಬಿಹಾರ 2ನೇ ಹಂತದ ಚುನಾವಣೆಯ ಕಾರಣ ರಾಜ್ಯಕ್ಕೆ ಅಂಟಿಕೊಂಡಿರುವ ಭಾರತ-ನೇಪಾಳ ಗಡಿಯನ್ನು 72 ಗಂಟೆಗಳ ಕಾಲ ಮುಚ್ಚಲು ಆದೇಶಿಸಲಾಗಿದೆ. ಈ ಭಾಗದಲ್ಲಿ ಕಟ್ಟೆಚ್ಚರ ವಹಿಸಲಾಗಿದೆ. ಶನಿವಾರದಿಂದಲೇ ಈ ಆದೇಶ ಜಾರಿಯಾಗಿದೆ.

ಬೇಲೂರು ತಾಲೂಕಿನ ಜಗಬೋರನಹಳ್ಳಿಯಲ್ಲಿ ಕ್ಯಾಪ್ಟನ್-ಭೀಮ ಆನೆಗಳ ಭೀಕರ ಕಾಳಗ

ಕಾದಾಟದಲ್ಲಿ ದಂತ ಕಳೆದುಕೊಂಡ ಕಾಡಾನೆ ಭೀಮ

ಬೇಲೂರು: ಆನೆಗಳಿಗೆ ಮದವೇರಿದರೆ ಎದುರಿದ್ದವರು ಬದುಕುವುದೇ ಕಷ್ಟ. ಎದುರಿಗೆ ಏನೇ ಸಿಕ್ಕರೂ ಪುಡಿಪುಡಿ ಮಾಡಿ ಬಿಡುತ್ತವೆ. ಹಾಗಿರುವಾಗ ಎರಡು ಮದವೇರಿದ ಆನೆಗಳು ಕಾಳಗಕ್ಕೆ ಇಳಿದರೆ ಹೇಗಿರುತ್ತದೆ? ಬೇಲೂರು ತಾಲೂಕಿನ ಬಿಕ್ಕೋಡು ಹೋಬಳಿಯ ಜಗಬೋರನಹಳ್ಳಿಯಲ್ಲಿ ಭಾನುವಾರ ಕಾಡಾನೆಗಳಾದ ಭೀಮ ಹಾಗೂ ಕ್ಯಾಪ್ಟನ್‌ಗಳ ನಡುವೆ ಭೀಕರ ಕಾಳಗ ನಡೆದಿದೆ. ಸಿಟ್ಟಿನಲ್ಲಿ ಭೀಮ ಹೋಗಿ ಮರಕ್ಕೆ ಗುದ್ದಿದ ಪರಿಣಾಮ ಅದರ ಒಂದು ದಂತವೇ ಮುರಿದು, ಅದು ನೋವಿನಿಂದ ಘೀಳಿಟ್ಟಿದೆ. ಅದರ ಸಂಕಟ ಕಂಡು ಸ್ಥಳೀಯರೂ ನೊಂದುಕೊಂಡಿದ್ದಾರೆ.

ಜಗಬೋರನಹಳ್ಳಿಯಲ್ಲಿ ಎದುರುಬದುರಾದ ಸಲಗಗಳು ಪರಸ್ಪರ ಕಾಳಗಕ್ಕಿಳಿದವು. ಮದವೇರಿದ ಆನೆಗಳು ಊರಿನೊಳಗೆ ನುಗ್ಗಿ ಮುಖ್ಯ ರಸ್ತೆಯಲ್ಲೇ ಮನಬಂದಂತೆ ಓಡಿದವು. ಊರಿನಲ್ಲಿ ಇದ್ದಕ್ಕಿದ್ದಂತೆ ಉಂಟಾದ ಈ ಕಾಳಗ ಕಂಡು ಜನರು ಸಿಕ್ಕೆಡೆಗೆ ಓಡಿ ಜೀವ ಉಳಿಸಿಕೊಂಡರು. ಆನೆ ಕ್ಷಿಪ್ರ ಕಾರ್ಯಪಡೆಯವರು ಆನೆಗಳನ್ನು ಹಿಂಬಾಲಿಸಿಕೊಂಡು ಬಂದರೂ ಎರಡೂ ಆನೆಗಳ ರೌದ್ರಾವತಾರದೆದುರು ಅಸಹಾಯಕರಾಗಬೇಕಾಯಿತು.

ಅಲ್ಲಿನ ಮನೆಯೊಂದರ ಆವರಣಕ್ಕೆ ನುಗ್ಗಿದ ಕ್ಯಾಪ್ಟನ್, ಭೀಮನೊಂದಿಗೆ ಬಡಿದಾಟಕ್ಕೆ ನಿಂತಿತು. ಇದರಿಂದ ಮನೆಯ ಜನರು ಕಕ್ಕಾಬಿಕ್ಕಿಯಾದರು. ರೊಚ್ಚಿಗೆದ್ದ ಕ್ಯಾಪ್ಟನ್ ಆನೆಯಲ್ಲಿ ದೇವರನ್ನು ಕಂಡ ಮನೆ ಮಾಲಕಿ ಅಪ್ಪ ನನ್ನ ದೇವರೆ ಎಂದು ಕೈಮುಗಿದರು. ಪ್ರಾರಂಭದಲ್ಲಿ ಕ್ಯಾಪ್ಟನ್ ಆನೆಯೊಂದಿಗೆ ಕಾದಾಡಲು ಕೊಂಚ ಹಿಂಜರಿದ ಭೀಮ ಮನೆ ಎದುರಿನ ಬೇಲಿ ಕಡೆಗೆ ನುಗ್ಗಿದಾಗ, ಅಲ್ಲಿ ಕಟ್ಟಿದ್ದ ಹಸುಗಳು ಪ್ರಾಣಾಪಾಯಕ್ಕೆ ಸಿಲುಕಿದವು. ಒಂದೆರಡು ಹಸುಗಳು ಹಗ್ಗ ಕಿತ್ತುಕೊಂಡು ಓಡಿ ಪ್ರಾಣ ಉಳಿಸಿಕೊಂಡವು. → 11

ಮುಳುಗಿ 2 ಕಾಡಾನೆ ಸಾವು

ರಾಮನಗರ: ಅರ್ಕಾವತಿ ನದಿ ನೀರಿನಲ್ಲಿ ಮುಳುಗಿ ಎರಡು ಕಾಡಾನೆಗಳು ಮೃತಪಟ್ಟ ಘಟನೆ ಕನಕಪುರ ತಾಲೂಕಿನ ಸಾತನೂರು ಅರಣ್ಯ ವಲಯದ ವ್ಯಾಪ್ತಿಯ ಕುನ್ನೂರು ಗ್ರಾಮದ ಬಳಿ ನಡೆದಿದೆ. ಕಾಡಾನೆಗಳು ನದಿ ದಾಟಲು ಮುಂದಾದಾಗ, ನೀರಿನಲ್ಲಿ ಆವರಿಸಿರುವ ಜೊಂಡಿನಲ್ಲಿ (ನೀರಿನ ಕಳೆ) ಸಿಲುಕಿವೆ. ಮುಂದಕ್ಕೆ ಮತ್ತು ಹಿಂದಕ್ಕೆ ಹೋಗಲಾಗದೆ ಅಲ್ಲೇ ಒದ್ದಾಡಿ ಕಾಡಾನೆಗಳು ಮೃತಪಟ್ಟಿವೆ ಎನ್ನಲಾಗಿದೆ. ಹಿನ್ನೀರಿನಲ್ಲಿ ಕಾಡಾನೆಗಳು ಇರುವುದನ್ನು ಗಮನಿಸಿದ ಸ್ಥಳೀಯರು ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ. ಡಿಸಿಎಫ್ ರಾಮಕೃಷ್ಣಪ್ಪ, ಎಸಿಎಫ್ ಸೇರಿ ಇಲಾಖೆಯ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಆನೆಗಳ ಕಳೇಬರವನ್ನು ಹಿನ್ನೀರಿನಿಂದ ಮೇಲಕ್ಕೆತ್ತುವ ಕಾರ್ಯಾಚರಣೆ ನಡೆಯುತ್ತಿದ್ದು, ಬಳಿಕ ಮರಣೋತ್ತರ ಪರೀಕ್ಷೆ ನಡೆಸಲು ಅರಣ್ಯ ಇಲಾಖೆ ಸಿದ್ಧತೆ ನಡೆಸಿದೆ.



ರೈತನ ಬಲಿ ಪಡೆದ ಹುಲಿ ಸೆರೆ

ಮೈಸೂರು: ಮೈಸೂರು ಜಿಲ್ಲೆಯ ಸರಗೂರು ತಾಲೂಕಿನಲ್ಲಿ ಪದೇಪದೇ ಜನರ ಮೇಲೆ ದಾಳಿ ಮಾಡಿ ಸಾವಿಗೆ ಕಾರಣವಾಗಿದ್ದ ಗಂಡು ಹುಲಿಯನ್ನು ಸೆರೆ ಹಿಡಿಯಲಾಗಿದೆ ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ತಿಳಿಸಿದ್ದಾರೆ. ಈ ಬಗ್ಗೆ ಅರಣ್ಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ, ಹುಲಿಯ ಡಿಎನ್‌ಎ ಪರೀಕ್ಷೆಗೂ ಆದೇಶ ನೀಡಲಾಗಿದೆ ಎಂದು ಸಚಿವರು ಹೇಳಿದ್ದಾರೆ.

ಮೈಸೂರು ಜಿಲ್ಲೆಯ ಸರಗೂರು ತಾಲೂಕಿನ ಕಂದಲಿಕೆ ಹೋಬಳಿ ಹೊಸಕೋಟೆ ಗ್ರಾಮದ ಟ್ರೆಂಚ್ ಬಳಿ ಶನಿವಾರ ರಾತ್ರಿ 11ರಿಂದ 12 ವರ್ಷ ವಯಸ್ಸಿನ ಗಂಡು ಹುಲಿ ಸೆರೆಯಾಗಿದೆ. ಹುಲಿ ಕಾರ್ಯಾಚರಣೆ ನಡೆಸುವಾಗ ಡ್ರೋನ್ ಕ್ಯಾಮೆರಾದಲ್ಲಿ ಚಲನವಲನ ಪತ್ತೆಯಾಗಿತ್ತು. ಅದನ್ನು ಆಧರಿಸಿ ಸೆರೆ ಹಿಡಿಯಲಾಗಿದೆ. ಅದಕ್ಕೆ ಕತ್ತು ಮತ್ತು ಕಾಲಿನ ಭಾಗದಲ್ಲಿ ಗಾಯವಾಗಿದೆ ಎನ್ನಲಾಗಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಸೆರೆಯಾಗಿರುವ ಹುಲಿಗೆ ಅಂದಾಜು 12 ವರ್ಷ ವಯಸ್ಸಾಗಿದ್ದು, ಹಲ್ಲುಗಳು ಬಲಹೀನವಾಗಿವೆ. ಹೀಗಾಗಿ ಅರಣ್ಯದಲ್ಲಿ ಸಸ್ಯಹಾರಿ ವನ್ಯಜೀವಿಗಳ ಬೇಟೆ ಆಡಲು ಅಶಕ್ತವಾಗಿದ್ದ ಈ ಗಂಡು ಹುಲಿ, ಪಕ್ಕದ ಗ್ರಾಮಗಳಿಗೆ ನುಗ್ಗಿ ಜನ, ಜಾನುವಾರುಗಳ ಮೇಲೆ ದಾಳಿ ಮಾಡುತ್ತಿತ್ತು ಎಂದು ಸಚಿವರು ಹೇಳಿದ್ದಾರೆ.

ಸಮಾಚಾರ ಸಣ್ಣದಲ್ಲ

ವೈಜ್ಞಾನಿಕ ಕುರಿ ಸಾಕಾಣಿಕೆ ತರಬೇತಿ

ಚಿತ್ರದುರ್ಗ : ಚಿತ್ರದುರ್ಗ ಪಶುಪಾಲನ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ವತಿಯಿಂದ ನ.12 ಹಾಗೂ 13 ರಂದು ಎರಡು ದಿನಗಳ ''ವೈಜ್ಞಾನಿಕ ಕುರಿ ಸಾಕಾಣಿಕೆ'' ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ನಗರದ ಪಾಲಿಕ್ಲಿನಿಕ್ ಆವರಣದಲ್ಲಿರುವ ಪಶುಪಾಲನ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ತರಬೇತಿ ನಡೆಯಲಿದ್ದು, 25 ಜನರಿಗೆ ತರಬೇತಿ ನೀಡಲಾಗುವುದು. ಆಸಕ್ತ ರೈತರು ಆಧಾರ್‌ಕಾರ್ಡ್ ಪ್ರತಿ, 3 ಪಾಸ್ ಪೋರ್ಟ್‌ಸೈಜ್ ಪೋಟೋ, ಬ್ಯಾಂಕ್ ಪಾಸ್ಬುಕ್ ಪ್ರತಿ, ಪ.ಜಾತಿ ಮತ್ತು ಪ.ಪಂಗಡದವರು ಜಾತಿ ಪ್ರಮಾಣ ಪತ್ರದ ಪ್ರತಿದೊಂದಿಗೆ ನೊಂದಾಯಿಸಿಕೊಳ್ಳಬಹುದು. ತರಬೇತಿ ವೇಳೆ ಯಾವುದೇ ಪ್ರೋತ್ಸಾಹಧನ ನೀಡುವುದಿಲ್ಲ. ಹೆಚ್ಚಿನ ವಿವರಗಳಿಗಾಗಿ ಮೊಬೈಲ್ ಸಂಖ್ಯೆ 9482943111, 9886002248 ಸಂಪರ್ಕಿಸಬಹುದು. ವಾಟ್ಸ್ಪ್ ಮೂಲಕವು ನೊಂದಣಿ ಮಾಡಿಕೊಳ್ಳಬಹದು ಪ್ರಕಟಣೆಯಲ್ಲಿ ತಿಳಿಸಿದೆ.

ಪತ್ರಕರ್ತರ ಸಂಘಕ್ಕೆ ವಿಶ್ವನಾಥ್ ಆಯ್ಕೆ

ಹೊಸದುರ್ಗ: ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಚಿತ್ರದುರ್ಗ ಜಿಲ್ಲಾ ಘಟಕಕ್ಕೆ ಭಾನುವಾರ ನಗರದ ಜಿಲ್ಲಾಧಿಕಾರಿಗಳ ಕಚೇರಿ ಆವರಣದ ಪತ್ರಕರ್ತರ ಭವನದಲ್ಲಿ ಭಾನುವಾರ ನಡೆದ ಚುನಾವಣೆಯಲ್ಲಿ ಜಿಲ್ಲಾ ನಿರ್ದೇಶಕರಾಗಿ ಶ್ರೀರಾಂಪುರ ವಿಶ್ವನಾಥ್ 82 ಮತಗಳನ್ನು ಪಡೆಯುವ ಮೂಲಕ ಜಯಶೀಲಾರಾಗಿದ್ದಾರೆ. ಕಳೆದ 30 ವರ್ಷಗಳಿಂದ ಪತ್ರಿಕೋದ್ಯಮದಲ್ಲಿ ವಿಶ್ವನಾಥ್ ಸೇವೆ ಸಲ್ಲಿಸುತ್ತಿದ್ದು, ಕಳೆದ ಅವಧಿಯಲ್ಲಿ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಹೊಸದುರ್ಗ ತಾಲೂಕು ಘಟಕದ ಅಧ್ಯಕ್ಷರಾಗಿ ಕೆಲಸ ಮಾಡಿದ್ದರು. ಜಿಲ್ಲಾ ಘಟಕದ ಚುನಾವಣೆಯಲ್ಲಿ ಸ್ಪರ್ಧಿಸಿ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

ಒನಕೆ ಓಬವ್ವ ಜಯಂತಿ ನಾಳೆ

ಚಿತ್ರದುರ್ಗ: ವೀರ ವನಿತೆ ಒನಕೆ ಓಬವ್ವ ಅವರ ಜಯಂತಿ ಕಾರ್ಯಕ್ರಮ ನ. 11 ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ವಾಲ್ಮೀಕಿ ಭವನದಲ್ಲಿ ನಡೆಯಲಿದೆ. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಛಲವಾದಿ ಮಹಾ ಸಂಸ್ಥಾನ ಗುರುಪೀಠದ ಶ್ರೀ ಬಸವ ನಾಗಿದೇವ ಸ್ವಾಮೀಜಿ ಅವರು ವಹಿಸುವರು. ಯೋಜನಾ ಮತ್ತು ಸಾಂಖ್ಯಿಕ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಿ. ಸುಧಾಕರ್‌ಅವರು ಕಾರ್ಯಕ್ರಮದ ಉದ್ಘಾಟನೆ ನೆರವೇರಿಸುವರು. ಶಾಸಕ ಕೆ.ಸಿ. ವೀರೇಂದ್ರ ಪಪ್ಪಿ ಅವರು ಸಮಾರಂಭದ ಅಧ್ಯಕ್ಷತೆ ವಹಿಸುವರು. ಸಂಸದ ಗೋವಿಂದ ಎಂ ಕಾರಜೋಳ, ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ಅಧ್ಯಕ್ಷರು ಹಾಗೂ ಹೊಸದುರ್ಗ ಶಾಸಕ ಬಿ.ಜಿ. ಗೋವಿಂದಪ್ಪ, ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ಅಧ್ಯಕ್ಷ ಹಾಗೂ ಚಳ್ಳಕೆರೆ ಶಾಸಕ ಟಿ. ರಘುಮೂರ್ತಿ,ಮೊಳಕಾಲ್ಮೂರು ಶಾಸಕ ಎನ್.ವೈ. ಗೋಪಾಲಕೃಷ್ಣ, ಹೊಳಲ್ಕೆರೆ ಶಾಸಕ ಡಾ. ಎಂ. ಚಂದ್ರಪ್ಪ, ವಿಧಾನಪರಿಷತ್ ಸದಸ್ಯರುಗಳಾದ ಚಿದಾನಂದ ಗೌಡ, ಕೆ.ಎಸ್. ನವೀನ್, ಡಿ.ಟಿ. ಶ್ರೀನಿವಾಸ್, ಕರ್ನಾಟಕ ದ್ರಾಕ್ಷಾರಸ ಮಂಡಳಿ ಅಧ್ಯಕ್ಷ ಡಾ. ಬಿ. ಯೋಗೇಶ್ ಬಾಬು, ಕರ್ನಾಟಕ ಆದಿ ಜಾಂಬವ ಅಭಿವೃದ್ಧಿ ನಿಗಮ ಅಧ್ಯಕ್ಷ ಜಿ.ಎಸ್. ಮಂಜುನಾಥ್, ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಪಿ. ರಘು, ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ತಾಜ್ಪೀರ್,ನಗರಸಭೆ ಅಧ್ಯಕ್ಷೆ ಎಂ.ಪಿ. ಅನಿತಾ ರಮೇಶ್, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ಆರ್. ಶಿವಣ್ಣ, ನಗರಸಭೆ ಮಾಜಿ ಅಧ್ಯಕ್ಷ ಹೆಚ್. ಸಿ. ನಿರಂಜನಮೂರ್ತಿ,ಛಲವಾದಿ ಮುಖಂಡರುಗಳಾದ ಎಸ್.ವಿ. ಗುರುಮೂರ್ತಿ,ಹೆಚ್. ಶೇಷಪ್ಪ, ಎಸ್.ಎನ್. ರವಿಕುಮಾರ್,ಎನ್.ಬಿ. ಭಾರ್ಗವಿ ದ್ರಾವಿಡ್, ಅಣ್ಣಪ್ಪ ಸ್ವಾಮಿ ಹೆಚ್. ಹಾಗೂ ಜಿಲ್ಲೆಯ ಉನ್ನತ ಅಧಿಕಾರಿಗಳು, ಜನಪ್ರತಿನಿಧಿಗಳು ಪಾಲ್ಗೊಳ್ಳುವರು. ಪ್ರೊ. ನಟರಾಜ ಡಿ.ಹೆಚ್. ಅವರು ವಿಶೇಷ ಉಪನ್ಯಾಸ ನೀಡುವರು. ಗಂಜಿಗಟ್ಟೆ ಕೃಷ್ಣಮೂರ್ತಿ ಮತ್ತು ಸಂಗಡಿಗರಿಂದ ಗೀತಗಾಯನ ನಡೆಯಲಿದೆ. ಒನಕೆ ಓಬವ್ವ ಜಯಂತಿ ಅಂಗವಾಗಿ ನ. 11 ರಂದು ಬೆಳಿಗ್ಗೆ 09 ಗಂಟೆಗೆ ಕೋಟೆಯ ಮುಂಭಾಗದಿಂದ ಆನೆ ಬಾಗಿಲು, ಗಾಂಧಿ ವೃತ್ತ, ಅಂಬೇಡ್ಕರ್‌ವೃತ್ತ, ಒನಕೆ ಓಬವ್ವ ವೃತ್ತ, ಮದಕರಿ ವೃತ್ತ ಮೂಲಕ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಭವ್ಯ ಮೆರವಣಿಗೆ ಜರುಗಲಿದೆ.

ಕುಂದು ಕೊರತೆಗಳಿಗೆ ಸಹಾಯವಾಣಿ ಕೇಂದ್ರ

ಚಿತ್ರದುರ್ಗ: ಚಿತ್ರದುರ್ಗ ನಗರಸಭೆ ವ್ಯಾಪ್ತಿಯಲ್ಲಿನ ಕುಡಿಯುವ ನೀರಿನ ಸಮಸ್ಯೆ, ಚರಂಡಿ, ಸ್ವಚ್ಛತೆ, ಯುಜಿಡಿ ಸಮಸ್ಯೆ, ಇ-ಖಾತಾ ವಿಳಂಬ ಹಾಗೂ ಇತರೆ ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಸಹಾಯವಾಣಿ ಕೇಂದ್ರ ದೂರವಾಣಿ ಸಂಖ್ಯೆ 08194-222401 ಗೆ ಕರೆ ಮಾಡಿ ದೂರುಗಳನ್ನು ನೋಂದಾಯಿಸುವಂತೆ ನಗರಸಭೆ ಪೌರಾಯುಕ್ತೆ ಲಕ್ಷ್ಮೀ ತಿಳಿಸಿದ್ದಾರೆ.

{ಮಧು ಬಂಗಾರಪ್ಪ } ಸಚಿವ

ರಾಜ್ಯದಲ್ಲಿ ಸರಕಾರಿ ಶಾಲೆಗಳಿಗೆ 12,000 ಹಾಗೂ ಅನುದಾನಿತ ಶಾಲೆಗಳಿಗೆ 6,000 ಸೇರಿ ಒಟ್ಟು 18 ಸಾವಿರ ಶಿಕ್ಷಕರ ನೇಮಕಾತಿ ಶೀಘ್ರದಲ್ಲೇ ನಡೆಯಲಿದೆ. ಸರಕಾರಿ ಶಾಲೆಯನ್ನು ಬಲಪಡಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರಕಾರ ಹಲವು ಕಾರ್ಯಕ್ರಮ ರೂಪಿಸಿದೆ.

ನನ್ನಿವಾಳ ಕೆರೆ ಹಿನ್ನಿರಿನ ಸಮೀಪ ರಸ್ತೆ ಸಂಪೂರ್ಣ ಮುಳುಗಡೆ | ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಕುತ್ತು | ಬುಡಕಟ್ಟು ಜನರ ರಕ್ಷಣೆಗೆ ಜಿಲ್ಲಾಡಳಿತ ಮುಂದಾಗುವುದಾ..!

ನನ್ನಿವಾಳ ಗ್ರಾಮದ ರಸ್ತೆ ಅಭಿವೃದ್ಧಿಗೆ ಒತ್ತಾಯ

ರಾಮಾಂಜನೇಯ ಕೆ.ಚನ್ನಗಾನಹಳ್ಳಿ

ಚಳ್ಳಕೆರೆ : ಕೊಂಚ ಯಾಮಾರಿದರೆ ಜೀವಕ್ಕೆ ಕಂಟಕ. ಹೌದು ಇದು ಚಳ್ಳಕೆರೆ ತಾಲೂಕಿನ ಬುಡಕಟ್ಟು ಸಮುದಾಯವೇ ಹೆಚ್ಚು ವಾಸಿಸುವ ನನ್ನಿವಾಳ ಗ್ರಾಮದ ಜನರ ನೋವಿನ ಮಾತಾಗಿದೆ.

ನನ್ನಿವಾಳ ಕೆರೆ ಹಿನ್ನಿರಿನ ಸಮೀಪ ಹಾದುಹೊದ ರಸ್ತೆ ಸಂಪೂರ್ಣವಾಗಿ ನೀರಿನಿಂದ ಮುಳುಗಿ ಹೋಗಿದೆ, ನನ್ನಿವಾಳ ಮಾರ್ಗದಿಂದ ಚಿತ್ರದುರ್ಗ ಜಿಲ್ಲಾ ಕೇಂದ್ರಕ್ಕೆ ಸಂಪರ್ಕಿಸುವ ರಸ್ತೆ ಇದಾಗಿದ್ದು, ಗ್ರಾಮದ ಸುತ್ತಲಿನ ಹತ್ತು ಹಳ್ಳಿಗಳಿಗೆ ಸಂಪರ್ಕಿಸುವ ಪ್ರಮುಖ ರಸ್ತೆ ಇದಾಗಿದೆ, ಇನ್ನೂ ರಾಮಜೋಗಿಹಳ್ಳಿ, ಕುರುಡಿಹಳ್ಳಿಗೆ ಈದೇ ರಸ್ತೆಯಲ್ಲಿ ಗ್ರಾಮದ ಜನರು ಅವಂಲಬಿಸಿದ್ದಾರೆ, ಕೇವಲ ಐದು ಕಿ.ಮೀ ದೂರ ಕ್ರಮಿಸಿದರೆ ಜಿಲ್ಲಾ ಕೇಂದ್ರದ ಪ್ರಮುಖ ರಸ್ತೆ ಸಿಗಲಿದೆ, ಇದರಿಂದ ಈ ಭಾಗದ ನೂರಾರು ಕೃಷಿ ಕುಟುಂಬಗಳಿಗೆ ರಸ್ತೆ ಅವಶ್ಯಕತೆ ಇದ್ದು, ರಾತ್ರಿವೇಳೆಯಂತು ಈ ಭಾಗದ ಕೃಷಿ ಅವಲಂಬಿತ ಕುಟುಂಬಗಳ ಗೋಳು ಕೇಳಬಾರದಾಗಿದೆ,

ಇನ್ನೂ ಇದೇ ರಸ್ತೆ ಮಾರ್ಗವಾಗಿ ಎರಡು ಕುಟುಂಬಗಳು ಜೀವನ ಕಟ್ಟಿಕೊಂಡಿದ್ದಾರೆ, ನೀರಿನಲ್ಲಿ ಮುಳುಗಿದ ರಸ್ತೆಯಲ್ಲಿ ಶಾಲೆಗೆ ಮಕ್ಕಳು ಆಗಮಿಸಬೇಕಿದೆ, ಇನ್ನೂ ಆಂಬ್ಯೂಲೆನ್ಸ್ ಕೂಡ ಇದೆ ಮಾರ್ಗವಾಗಿ ಸಂಚರಿಸಬೇಕಿದೆ, ಆದ್ದರಿಂದ ಈ ಭಾಗದ ಕೃಷಿ ಕುಟುಂಬಗಳ ರಕ್ಷಣೆಗೆ, ಹಾಗೂ ಶಾಲಾ ಮಕ್ಕಳ ಹಿತ ದೃಷ್ಟಿಯಿಂದ ಸ್ಥಳೀಯ ಶಾಸಕರು, ಅಧಿಕಾರಿ ವರ್ಗದವರು ಇತ್ತ ಕಡೆ ದಾವಿಸಿ ರಸ್ತೆ ಅಭಿವೃದ್ಧಿ ಪಡಿಸಬೇಕು ಎಂಬುದು ಇಲ್ಲಿನ ಜನರ ಆಂಕ್ರದನದ ಮಾತಾಗಿದೆ.

ಕಾಲುಜಾರಿ ಜೀವ ಕಳೆದುಕೊಂಡ ಮಹಿಳೆ : ಕಳೆದ ಜನವರಿ ಮಾಸದಲ್ಲಿ ಕೃಷಿ ಕೆಲಸಕ್ಕೆಂದು ಈದೇ ಮಾರ್ಗದಲ್ಲಿ ನಡೆದುಕೊಂಡು ಹೋಗುವಾಗ ಆಯಾತಪ್ಪಿ ನೀರಿನಲ್ಲಿ ಬಿದ್ದು ಜೀವ ಕಳೆದುಕೊಂಡಿರುವ ಪಾರ್ವತಮ್ಮ(55) ವರ್ಷದ ಮಹಿಳೆಯ ನಿದರ್ಶನಗಳಿವೆ.

ಈಗೆ ಈ ಭಾಗದ ಜನರ ರಕ್ಷಣೆಗೆ ಸ್ಥಳೀಯ ಶಾಸಕರು ದಾವಿಸಬೇಕು ಎಂಬುದು ಈ ಭಾಗದ ಜನರ ಒತ್ತಾಸೆಯಾಗಿದೆ.

ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣಕ್ಕೆ ಒತ್ತಾಯ

ಈ ಭಾಗದಲ್ಲಿ ಕೃಷಿ ಭೂಮಿಯನ್ನೆ ಹೆಚ್ಚಾಗಿ ಅವಲಂಬಿಸಿದ ಇಲ್ಲಿನ ಬುಡಕಟ್ಟು ಸಮುದಾಯಗಳಿಗೆ ನೀರಿನ ಆಶ್ರಯ ಮೂಲ ಪ್ರಮುಖವಾಗಿದೆ, ಆದ್ದರಿಂದ ಈ ಭಾಗದಲ್ಲಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಮಾಡಿದರೆ ಕೃಷಿ ಪ್ರದೇಶದ ರೈತರಿಗೆ ಹಾಗೂ ರಸ್ತೆ ಸಂಚಾರಕ್ಕೆ ಅನುಕೂಲವಾಗಲಿದೆ.

ಈ ರಸ್ತೆ ಮಾರ್ಗದ ಒಂದು ಕಿ.ಮಿ. ದೂರದಲ್ಲಿರುವ ನಮ್ಮ ಕುಟುಂಬಗಳಲ್ಲಿ ವ್ಯಾಸಂಗ ಮಾಡುವ ಮಕ್ಕಳು ಇದ್ದಾರೆ, ಆರೋಗ್ಯ ಸಮಸ್ಯೆ ಆದರೆ ಇದೇ ಮಾರ್ಗದಲ್ಲಿ ಆಂಬ್ಯೂಲೇನ್ಸ್ ಸಂಚರಿಸಬೇಕಿದೆ, ಈಗೆ ಕತ್ತಲಲ್ಲಿ ಜೀವಿ ಸವಿಸುತ್ತಿದ್ದೆವೆ, ಸರಕಾರ ಇತ್ತ ಕಡೆ ದಾವಿಸಬೇಕು, ಜಿಲ್ಲಾಡಳಿತ, ತಾಲೂಕು ಆಡಳಿತ ನಮ್ಮ ಬುಡಕಟ್ಟು ಜನರ ರಕ್ಷಣೆಗೆ ದಾವಿಸಬೇಕು ರಸ್ತೆ ನಿರ್ಮಿಸಿಕೊಂಡಬೇಕು.

-ಕೊಲ್ಲಣ್ಣ ರೈತ

ಕಳೆದ ಮೂವತ್ತರಿಂದ ನಲವತ್ತು ವರ್ಷಗಳಿಂದ ಈದೇ ರಸ್ತೆ ಮಾರ್ಗದಲ್ಲಿ ಕೃಷಿಯನ್ನೆ ಜೀವಳವಾನ್ನಿಗಿಸಿಕೊಂಡು ರಾತ್ರಿ, ಹಗಲು ಎನ್ನದೆ ಓಡಾಡುತ್ತಿದ್ದೆವೆ, ಆದರೆ ಮಳೆಗಾಲದಲ್ಲಿ ನೀರು ರಸ್ತೆ ಮೇಲೆ ನಿಂತಿರುವುದರಿಂದ ಈ ಮಾರ್ಗದಲ್ಲಿ ಸಂಚರಿಸುವುದು ಕಷ್ಟಸಾಧ್ಯ, ಆದ್ದರಿಂದ ಶಾಸಕರು ಈ ಭಾಗದ ಜನರ ರಕ್ಷಣೆಗೆ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಿಸಿದರೆ ಅನುಕೂಲವಾಗಲಿದೆ.

- ದ್ಯಾಮಣ್ಣ ಸ್ಥಳೀಯ ನಿವಾಸಿ

ಕನಕದಾಸರ ಚಿಂತನೆ ಅಳವಡಿಸಿಕೊಳ್ಳಿ

ಹೊಳಲ್ಕೆರೆ ಪಟ್ಟಣದ ಸಂವಿಧಾನಸೌಧದಲ್ಲಿ ಸಂತ ಕವಿ ಕನಕದಾಸರ 538ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು.

ಹೊಳಲ್ಕೆರೆ: ಕನಕದಾಸರ ಮಾನವೀಯ ಮೌಲ್ಯಗಳು ಎಂದಿಗೂ ಪ್ರಸ್ತುತ ಬದುಕಿಗೆ ಕನಕರ ದಾಸರ ಚಿಂತನೆಗಳನ್ನು ಅಳವಡಿಸಿಕೊಳ್ಳಬೇಕು ಎಂದು ಶಾಸಕ ಎಂ ಚಂದ್ರಪ್ಪ ತಿಳಿಸಿದರು.

ಹೊಳಲ್ಕೆರೆ ಪಟ್ಟಣದ ಸಂವಿಧಾನಸೌಧದಲ್ಲಿ ಸಂತ ಕವಿ ಕನಕದಾಸರ 538ನೇ ಜಯಂತ್ಯುತ್ಸವ ಅಂಗವಾಗಿ ಶ್ರೀ ಕನಕದಾಸರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಗೌರವ ನಮನ ಸಲ್ಲಿಸಿ, ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಲಾಯಿತು.

ಕುಲ ಕುಲವೆಂದು ಹೊಡೆದಾಡದಿರಿ ಕುಲದ ನೆಲೆಯನ್ನಾದರೂ ಬಲ್ಲಿರಾ ಎನ್ನುವ ಮಹಾನ್ ಚಿಂತನೆಯನ್ನು ಅನಾವರಣಗೊಳಿಸಿ ಮನುಕುಲವೆಲ್ಲ ಒಂದೇ ಎನ್ನುವ ಮಹಾನ್ ಸಂದೇಶವನ್ನು ತಿಳಿಸಿದ್ದು ಕನಕದಾಸರು. ಹಾಗಾಗಿ ನಾವೆಲ್ಲ ಕನಕದಾಸರ ಜಾತ್ಯತೀತ ಚಿಂತನೆಗಳನ್ನು ಬದುಕಿ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಈ ಸಂದರ್ಭ ತಹಸೀಲ್ದಾರ್‌ವಿಜಯ ಕುಮಾರ್,ತಾ.ಪಂ. ಕಾರ್ಯನಿರ್ವಹಣಾಧಿಕಾರಿ ಶಿವಪ್ರಕಾಶ್, ಪುರಸಭೆಯ ಮಾಜಿ ಅಧ್ಯಕ್ಷರಾದ ಆರ್. ಎ. ಅಶೋಕ್, ಹೊಳಲ್ಕೆರೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ತಿಪ್ಪೇಶಪ್ಪ, ಖಜಾಂಚಿ ಗರೀಶ್, ಮಲ್ಲಾಡಿಹಳ್ಳಿ ಸಂತೋಷ್,ದುಮ್ಮಿ ಚಿಕ್ಕಪ್ಪ, ಹಳ್ಳಪ್ಪ, ವೀರೇಶ್, ಡಾ. ಉಮಾಪತಿ, ನುಲೆನೂರು ಶೇಖರ್,ಶ್ರೀನಿವಾಸ್, ಶ್ರೀಮತಿ ಗಾಯತ್ರಿ ಪ್ರಭಾಕರ್,ಶ್ರೀ ಪರಮೇಶ್ವರಪ್ಪ, ಪ್ರದೀಪ್ ಕುಮಾರ್ ,ಹನುಮಂತಪ್ಪ, ನಾಗಪ್ಪ, ಚಂದ್ರಮೌಳಿ, ಕೃಷ್ಣಮೂರ್ತಿ,ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಸಾಮಾಜಿಕ ಪರಿವರ್ತನೆಗೆ ಶ್ರಮಿಸಿ

ಹೊಳೆದ್ರೆ ತಾಲೂಕು ಕುರುಬರ ಸಂಘದ ಗೌರವಾಧ್ಯಕ್ಷರು ಹಾಗೂ ಪುರಸಭೆ ಮಾಜಿ ಅಧ್ಯಕ್ಷರಾದ ಬಿ ಎಸ್ ರುದ್ರಪ್ಪ ಮಾತನಾಡಿ, ಕನಕದಾಸರು ನಾಡಿನ ಮಹಾನ್ ಶಕ್ತಿಯಾಗಿ ನಿಸ್ವಾರ್ಥ ಸೇವೆ ಸಲ್ಲಿಸಿ ಮನುಕುಲದ ಉದ್ಧಾರಕ್ಕೆ ಮಹತ್ವ ಸಂದೇಶವನ್ನು ನೀಡಿದ್ದಾರೆ. ಕನಕದಾಸರ ದಾಸವಾಣಿಗಳು ಬದುಕಿನ ಮೌಲ್ಯಗಳನ್ನು ಅನಾವರಣಗೊಳಿಸುತ್ತವೆ ಹಾಗಾಗಿ ನಾವೆಲ್ಲರೂ ಕನಕದಾಸರ ದಾಸವಾಣಿಯನ್ನ ಬದುಕಿಗೆ ಅಳವಡಿಸಿಕೊಂಡು ಸಾಮಾಜಿಕ ಪರಿವರ್ತನೆಗೆ ಶ್ರಮಿಸಬೇಕು ಎಂದು ತಿಳಿಸಿದರು.

ವಿದ್ಯುತ್ ಶಾರ್ಟ್ ಸರ್ಕ್ಯೂಟ್ ನಿಂದ ಹಾನಿಗೊಳಗಾದ ಮನೆಗೆ ಮಾಜಿ ಜಿಲ್ಲಾಧ್ಯಕ್ಷರಾದ ಯಶವಂತ್ ರಾವ್ ಜಾಧವ್ ಭೇಟಿ ನೀಡಿ ಸಾಂತ್ವನ ಹೇಳಿದರು. ದಾವಣಗೆರೆಯ ದುರ್ಗಾಂಬಿಕಾ ದೇವಸ್ಥಾನದ ಹಿಂಭಾಗ ಬೆಂಕಿ ತಗುಲಿ ಸಂಪೂರ್ಣ ಎರಡು ಮನೆ ಸುಟ್ಟು ಹೋಗಿದ್ದವರ ಇಂದ್ರಮ್ಮ ಮತ್ತು ಚಂದ್ರಮ್ಮ ಎಂಬ ಇಬ್ಬರ ಮನೆಗೆ ಭೇಟಿ ನೀಡಿ ಆರ್ಥಿಕ ಸಹಾಯ ಮತ್ತು ಆಹಾರದ ಕಿಟ್ ಕೊಟ್ಟು ಜಿಲ್ಲಾ ಆಡಳಿತದ ಜತೆ ಮಾತನಾಡಿ ಹೆಚ್ಚಿನ ಪರಿಹಾರ ಕೂಡಿಸುವುದಾಗಿ ಯಶವಂತರಾವ್ ಜಾಧವ್ ಅವರು ಭರವಸೆ ನೀಡಿದರು. ಈ ಸಂದರ್ಭದಲ್ಲಿ ಮಾಜಿ ಮಹಾನಗರ ಪಾಲಿಕೆ ಸದಸ್ಯರಾದ ಬಿ ರಮೇಶ್ ನಾಯಕ್, ಗೋವಿಂದ್ ರಾಜ್, ಟಿಂಕರ್‌ಮಂಜಣ್ಣ,ಎಚ್ ಓ ದುಗಪ್ಪ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಆಸ್ಪತ್ರೆ ದುರಸ್ಥಿ ಕಾಮಗಾರಿ ಶೀಘ್ರ ಆರಂಭ: ಸಚಿವ ಡಿ. ಸುಧಾಕರ್ ಹೇಳಿಕೆ

ಸಾರ್ವಜನಿಕ ಆಸ್ಪತ್ರೆಗೆ ಸಚಿವರ ಭೇಟಿ ಪರಿಶೀಲನೆ

ಸಾರ್ವಜನಿಕ ಆಸ್ಪತ್ರೆಗೆ ಸಚಿವ ಡಿ. ಸುಧಾಕರ್‌ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಹಿರಿಯೂರು: ಸಾರ್ವಜನಿಕ ಆಸ್ಪತ್ರೆಗೆ ಸಚಿವ ಡಿ. ಸುಧಾಕರ್‌ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸಾವ9ಜನಿಕ ಆಸ್ಪತ್ರೆ ರೋಗಿಗಳ ಮೇಲೆ ಮೇಲ್ಛಾವಣಿ ಕುಸಿದು ಬಿದ್ದ ಪರಿಣಾಮವಾಗಿ ಹಲವು ರೋಗಿಗಳಿಗೆ ಗಾಯಗಳಾಗಿದ್ದು ಸುದ್ದಿ ತಿಳಿದ ತಕ್ಷಣವೇ ಸಚಿವರು ಭೇಟಿ ನೀಡಿ ರೋಗಿಗಳಿಗೆ ಸಾಂತ್ವನ ಹೇಳಿದರು.

ಈ ವೇಳೆ ಮಾತನಾಡಿದ ಸಚಿವರು ಸಾರ್ವಜನಿಕ ಆಸ್ಪತ್ರೆ ನಿರ್ಮಾಣವಾಗಿ ಸುಮಾರು 50-60 ವರ್ಷಗಳಾಗಿದ್ದು. ಶಿಥಿಲಾವಸ್ಥೆ ತಲುಪಿದ್ದು.ಶೀಘ್ರದಲ್ಲೆ ಆಸ್ಪತ್ರೆ ದುರಸ್ಥಿಗೆ ಕ್ರಮ ವಹಿಸಲಾಗುವುದೆಂದು ತಿಳಿಸಿದರು. ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡಲು ಅಗತ್ಯ ವೈದ್ಯೋಪಕರಣಗಳ ಕೊರತೆ ಎದುರಾಗಿದ್ದು ಮಂಜೂರು ಮಾಡಲಾಗುವುದೆಂದು ಭರವಸೆ ನೀಡಿದರು.

ಈಗಾಗಲೇ ಆದಿವಾಲ ದಿಂಡಾವರ ಮುಖ್ಯರಸ್ತೆಯ ಬಳಿ ಹೊಸ ಆಸ್ಪತ್ರೆ ನಿರ್ಮಾಣ ಮಾಡಲಾಗಿದ್ದು, ಉದ್ಘಾಟನೆಗೆ ಬಾಕಿ ಇರುವ ಕಾರಣದಿಂದ ಪ್ರಸ್ತುತ ಇರುವ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿಯುತ್ತಿದೆ ಎಂದರು.

ತುರ್ತು ದುರಸ್ತಿಗಾಗಿ ಸುಮಾರು 50 ಲಕ್ಷ ಅನುದಾನವನ್ನು ಮಂಜೂರು ಮಾಡಲಾಗಿದ್ದು, ದುರಸ್ತಿ ಕಾಮಗಾರಿಯನ್ನು ಶೀಘ್ರ ಪ್ರಾರಂಭಿಸಲು ಸಂಬಂಧಿತ ನಿರ್ಮಿತಿ ಕೇಂದ್ರ ಏಜೆನ್ಸಿಗೆ ಸೂಚನೆ ನೀಡಿದರು.

ಹೆಚ್ಚುವರಿ ಅನುದಾನದ ಅವಶ್ಯಕತೆ ಇದ್ದರೆ ಅದರ ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸಲು ನಿರ್ಮಿತಿ ಕೇಂದ್ರ ಹಾಗೂ ನಗರಸಭೆ ಆಯುಕ್ತರಿಗೆ ಸೂಚನೆ ನೀಡಿದರು . ಇದೆ ಸಂದರ್ಭದಲ್ಲಿ ವೈದ್ಯಾಧಿಕಾರಿ ವಿಜಯ್ ಕುಮಾರ್,ಟಿಎಚ್.ಓ ಒ ವೆಂಕಟೇಶ್, ಮಾಜಿ ಅಧ್ಯಕ್ಷ ಬಾಲಕೃಷ್ಣ, ಮಂಜುಳಾ, ವಿಠಲ್, ಸೇರಿದಂತೆ ಇತರರಿದ್ದರು.

ಸಿರಿಧಾನ್ಯಕ್ಕೆ 5 ಸಾವಿರ ಬೆಂಬಲ ಬೆಲೆ ನಿಗದಿ

ಸಿರಿಧಾನಗಳ ಸಂಸ್ಕರಣೆ, ಮೌಲ್ಯವರ್ಧನೆ ಸರಪಳಿ, ಉತ್ಪಾದಕರು, ಮಾರುಕಟ್ಟೆದಾರರ ಸಿರಿಧಾನ್ಯ ಕೃಷಿ ಸಂಕಿರಣ ಕಾರ್ಯಕ್ರಮವನ್ನು ಶಾಸಕರಾದ ಬಿ.ಜಿ.ಗೋವಿಂದಪ್ಪ ಉದ್ಘಾಟಿಸಿದರು.

ಹೊಸದುರ್ಗ: ಸಿರಿಧಾನ್ಯ ಬೆಳೆಗಾರರಿಗೆ ಆರ್ಥಿಕ ಸದೃಢತೆ ಕಾಪಾಡಿಕೊಳ್ಳಲು ಸರಕಾರ 5000 ಕನಿಷ್ಠ ಬೆಂಬಲ ಬೆಲೆ ನಿಗದಿ ಮಾಡಿದೆ ಎಂದು ಶಾಸಕರಾದ ಬಿ.ಜಿ.ಗೋವಿಂದಪ್ಪ ಹೇಳಿದರು.

ತಾಲೂಕಿನ ಕನಕ ಗುರುಪೀಠದ ಆವರಣದಲ್ಲಿ ಕನಕ ಜಯಂತೋತ್ಸವ ಹಾಗೂ 8ನೇ ವರ್ಷದ ಲಕ್ಷದೀಪೋತ್ಸವ ಅಂಗವಾಗಿ ಕೃಷಿ ಇಲಾಖೆ ವತಿಯಿಂದ ನಡೆದ ಸಿರಿಧಾನಗಳ ಸಂಸ್ಕರಣೆ, ಮೌಲ್ಯವರ್ಧನೆ ಸರಪಳಿ, ಉತ್ಪಾದಕರು, ಮಾರುಕಟ್ಟೆದಾರರ ಸಿರಿಧಾನ್ಯ ಕೃಷಿ ಸಂಕಿರಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸಾವೆ ಬೆಳೆಗೆ ಮಾರುಕಟ್ಟೆ ಕುಸಿತ ಆಗಿತ್ತು. 2024ರಲ್ಲಿ ರೈತರೊಂದಿಗೆ ಸಭೆ ನಡೆಸಿ ಸಾವೆಗೆ 5000 ಸಾವಿರ ಬೆಂಬಲ ಬೆಲೆ ನೀಡುವಂತೆ ಸರಕಾರಕ್ಕೆ ಒತ್ತಾಯ ಮಾಡಿದ್ದೆವು. ಸರಕಾರ ನಮ್ಮ ಮನವಿಗೆ ಸ್ಪಂದಿಸಿ ಸಾವೆ ಬೆಳೆಗೆ 5000 ರೂಪಾಯಿ ಕನಿಷ್ಠ ಬೆಂಬಲ ಬೆಲೆ ನೀಡಿದೆ. 1976ರಿಂದ 1986ರ ವರೆಗೆ ನಾನು ಒಬ್ಬ ಅಪ್ಪಟ ರೈತನಾಗಿ ಸಾವೆ, ನವಣೆ, ರಾಗಿ ಬೆಳೆಯುತ್ತಿದೆ. ಸಾವಯವ ಕೃಷಿ ಪದ್ಧತಿಯಲ್ಲಿ ಉತ್ತಮ ಇಳುವರಿ ಪಡೆದಿದ್ದೇನೆ ಎಂದರು.

ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ.ಬಿ.ಮಂಜುನಾಥ್ ಮಾತನಾಡಿ, ಹಿಂದಿನ ತಲೆಮಾರಿನವರು ಆರೋಗ್ಯ ಪೂರ್ಣವಾಗಿ ಬದುಕುತ್ತಿದ್ದರು. ಬದಲಾದ ಜೀವನಶೈಲಿ, ಆಹಾರ ಪದ್ಧತಿಯಿಂದ 40 ವರ್ಷಗಳಿಗೆ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ತಲೆ ಮಾತಿನಿಂದ ತಲೆಮಾರಿಗೆ ಸಾಂಪ್ರದಾಯಿಕ ಆರೋಗ್ಯ ಪದ್ಧತಿಗಳು ವರ್ಗಾವಣೆ ಆಗಬೇಕು. ಆಗ ರೋಗಗಳಿಂದ ದೂರ ಇರಬಹುದು ಎಂದರು.

ಕನಕ ಗುರುಪೀಠದ ಶ್ರೀ ಈಶ್ವರಾನಂದಪುರಿ ಸ್ವಾಮೀಜಿ, ಚಿಕ್ಕಮಗಳೂರು ಬಸವತತ್ವ ಗುರುಪೀಠ ಶ್ರೀ ಮರುಳಸಿದ್ಧ ಸ್ವಾಮೀಜಿ, ವಿರಕ್ತ ಮಠದ ಚನ್ನಬಸಪ್ಪ ಸ್ವಾಮೀಜಿ ಮಾತನಾಡಿದರು. ಬಬ್ಬೂರು ಫಾರಂ ಗ್ರಾ.ಪಂ. ಅಧ್ಯಕ್ಷೆ ಕರಿಯಮ್ಮ, ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ ರಾಗಿಶಿವಮೂರ್ತಿ,ನಿರ್ದೇಶಕ ಧರಣೇಶಪ್ಪ, ಆಗ್ರೋಶಿವಣ್ಣ, ಕಾರೇಹಳ್ಳಿ ಬಸವರಾಜ್, ಕೃಷಿ ಇಲಾಖೆ ಉಪ ಜಂಟಿ ನಿರ್ದೇಶಕ ಶಿವಕುಮಾರ್ ,ಸಹಾಯಕ ಕೃಷಿ ನಿರ್ದೇಶಕ ಸಿ.ಎಸ್.ಈಶ, ನರೇಶ್ ಜೆಂಕರ್,ಚೇತನ್, ಅರುಣ್ ಗೋವಿಂದಪ್ಪ, ಅನಂತ್ ಮತ್ತಿತರರಿದ್ದರು.

ಕೃಷಿ ಇಲಾಖೆ ಸಿರಿಧಾನ್ಯ ಬೆಳೆಗಳ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದೆ. ಕನಕದಾಸರು 600 ವರ್ಷಗಳ ಹಿಂದೆ ರಾಗಿ ಮತ್ತು ಅಕ್ಕಿಯ ಉದಾಹರಣೆ ಮೂಲಕ ಸಿರಿಧಾನ್ಯಗಳ ಮಹತ್ವ ಸಾರಿದ್ದಾರೆ. ರೈತ ಮಹಿಳೆಯರು ಸಿರಿಧಾನ್ಯಗಳ ಉತ್ಪನ್ನ ತಯಾರು ಮಾಡಿದ್ದಾರೆ. ಅವುಗಳನ್ನು ಪ್ಯಾಕೆಟ್ ಮಾಡಿ ಪ್ರಚಾರ ಮಾಡಿದರೆ ಉತ್ತಮ ದರ ಸಿಗಲಿದೆ. ಈ ಹಿನ್ನೆಲೆಯಲ್ಲಿ ಮಾರುಕಟ್ಟೆ ಕಲ್ಪಿಸಲು ಕಾರ್ಯಗಾರ ನಡೆಸುತ್ತೇವೆ.

-ಶ್ರೀ ಈಶ್ವರಾನಂದಪುರಿ ಸ್ವಾಮೀಜಿ, ಕನಕ ಗುರುಪೀಠ

ಇನ್ ಸೈಟ್ಸ್ ಸಂಸ್ಥೆ ಸಂಸ್ಥಾಪಕ ನಿರ್ದೇಶಕ ಜಿ. ಬಿ. ವಿನಯ್ ಕುಮಾರ್‌ಬೇಸರ

ಹಿಂದುಳಿದವರ ಮುಖ್ಯವಾಹಿನಿಗೆ ತರುವ ಮನಸು ಕ್ಷೀಣ

ದಾವಣಗೆರೆ: ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶೋಷಿತರು, ಹಿಂದುಳಿದ ಮತ್ತು ಆರ್ಥಿಕವಾಗಿ ಹಿಂದುಳಿದವರ ಸಮಾಜದ ಮುಖ್ಯವಾಹಿನಿಗೆ ತರುವ ಮನಸುಗಳು ಕ್ಷೀಣವಾಗುತ್ತಿದೆ. ಎಸ್ಸಿ, ಎಸ್ಟಿ, ಒಬಿಸಿ ಸಮುದಾಯದವರು ಐಎಎಸ್, ಐಪಿಎಸ್ ನಲ್ಲಿ ಗಮನಾರ್ಹ ಸಾಧನೆ ಮಾಡುತ್ತಿಲ್ಲ. ಇದಕ್ಕೆ ಉತ್ಕೃಷ್ಟ ಗುಣಮಟ್ಟದ ಶಿಕ್ಷಣ ಸಿಗದೇ ಇರುವುದೇ ಕಾರಣ ಎಂದು ಇನ್ ಸೈಟ್ಸ್ ಸಂಸ್ಥೆ ಸಂಸ್ಥಾಪಕ ನಿರ್ದೇಶಕ ಜಿ. ಬಿ. ವಿನಯ್ ಕುಮಾರ್‌ಬೇಸರ ವ್ಯಕ್ತಪಡಿಸಿದರು.

ನಗರದ ಜಯದೇವ ಸರ್ಕಲ್ ಸಮೀಪದ ಪ್ರವಾಸಿ ಮಂದಿರದ ಎದುರಿನ ಟಿ. ಎಂ. ಚಿನ್ನಮ್ಮ ಮಹೇಶ್ವರಯ್ಯ ಮೆಮೋರಿಯಲ್ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಮಹಿಳಾ ಸೇವಾ ಸಮಾಜದ ವತಿಯಿಂದ ಏರ್ಪಡಿಸಲಾಗಿದ್ದ ಐಎಎಸ್, ಕೆಎಎಸ್ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಮಾರ್ಗದರ್ಶನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಅಧಿಕಾರ, ಅಂತಸ್ತು, ಶ್ರೀಮಂತಿಕೆ, ಮುಂದೆ ಹೋಗುವವರಿಗೆ ಹೆಚ್ಚಿನ ಅವಕಾಶಗಳು ಸಿಗುತ್ತಿವೆ. ಇಂಥವರಿಗೆ ಹೆಚ್ಚು ಬೆಂಬಲ ಸಿಗುತ್ತಿದೆ. ಸಮಾಜದ ಮುಖ್ಯವಾಹಿನಿಗೆ ಬಾರದವರನ್ನು ಮೇಲಕ್ಕೆತ್ತುವ ಕೆಲಸ ಆಗುತ್ತಿಲ್ಲ ಎಂದು ಹೇಳಿದರು

ಎಸ್ಸಿ, ಎಸ್ಟಿ, ಒಬಿಸಿ ಸಮುದಾಯದವರು ಐಎಎಸ್, ಐಪಿಎಸ್ ಆಗುವುದು ತುಂಬಾನೇ ಕಡಿಮೆ. 600ರಿಂದ 1000 ರ್ಯಾಂಕ್ ನೊಳಗೆ ಇರುತ್ತಾರೆ. ಮುಂದುವರಿದ ವರ್ಗದವರೇ ಹೆಚ್ಚು ಐಎಎಸ್, ಐಪಿಎಸ್ ಆಗುತ್ತಾರೆ. ಇದಕ್ಕೆ ಕಾರಣ ನೂರಾರು ವರ್ಷಗಳಿಂದ ಅವರು ಪಡೆದುಕೊಂಡ ಶಿಕ್ಷಣವೇ ಕಾರಣ. ಗುಣಮಟ್ಟದ ಶಿಕ್ಷಣ ಸಿಕ್ಕ ಕಾರಣ ಸಂಘಟಿತರಾಗುತ್ತಾರೆ, ವಿದ್ಯಾವಂತರಾಗಿರುತ್ತಾರೆ. ಹಾಗಾಗಿ, ಮಕ್ಕಳ ಭವಿಷ್ಯದ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ ಅತ್ಯುನ್ನತ ಶಾಲಾ ಕಾಲೇಜುಗಳಲ್ಲಿ ಶಿಕ್ಷಣ ಕೊಡಿಸುವುದರಿಂದ ಹೆಚ್ಚು ಬುದ್ಧಿವಂತರಾಗುತ್ತಾರೆ. ಮುಂದುವರಿದ ಸಮುದಾಯದವರಲ್ಲಿ ಅರಿವಿನ ಕೊರತೆಯಿಂದ ಉನ್ನತ ಹುದ್ದೆಗೆ ಹೋಗಲು ಸಾಧ್ಯವಾಗದಿರುವುದಕ್ಕೆ ಸೂಕ್ತ ಶಿಕ್ಷಣ ಸಿಗದೇ ಇರುವುದೇ ಕಾರಣ ಎಂದು ವಿಶ್ಲೇಷಿಸಿದರು.

ಐಎಎಸ್, ಕೆಎಎಸ್ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಮಾರ್ಗದರ್ಶನ ಕಾರ್ಯಕ್ರಮವನ್ನು ಇನ್ ಸೈಟ್ಸ್ ಸಂಸ್ಥೆ ಸಂಸ್ಥಾಪಕ ನಿರ್ದೇಶಕ ಜಿ. ಬಿ. ವಿನಯ್ ಕುಮಾರ್‌ಉದ್ಘಾಟಿಸಿದರು.

ಒಂದು ಮತಕ್ಕೆ ಒಂದು ಮೌಲ್ಯ. ಇದು ರಾಜಕೀಯ ಸಮಾನತೆ. ಸಾವಿರಾರು ಕೋಟಿ ರೂಪಾಯಿ ಆಸ್ತಿ ಹೊಂದಿದ ಉದ್ಯಮಿ, ಪ್ರಧಾನಿ ನರೇಂದ್ರ ಮೋದಿ, ಸಿಎಂ ಸಿದ್ದರಾಮಯ್ಯರಿಗೂ ಒಂದೇ ಮತ. ನಮಗೂ ಒಂದೇ ಮತ. ರಾಜಕೀಯ ಕ್ಷೇತ್ರದಂತೆ ಬೇರೆ ಕ್ಷೇತ್ರಗಳಲ್ಲಿಯೂ ಸೂಕ್ತ ಸಮಾನತೆ ಸಿಗಬೇಕಿತ್ತು. ಆದರೆ ಆಗಿಲ್ಲ. ಚುನಾವಣೆಯಲ್ಲಿ ಗೆದ್ದು ಶಾಸಕರಾಗುತ್ತಾರೆ. ಆದರೆ ಸಂವಿಧಾನದ ಮೂಲ ಆಶಯ ಈಡೇರಿಸಬೇಕೆಂದು ಜನರು ನೀಡಿದ ಅಧಿಕಾರ ಹೇಗೆ ಬಳಕೆಯಾಗುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿದೆ.

-ಜಿ. ಬಿ. ವಿನಯ್ ಕುಮಾರ್, ಇನ್ ಸೈಟ್ಸ್ ಸಂಸ್ಥೆ ಸಂಸ್ಥಾಪಕ

ಬೆಳ್ಳಿ ಮೂರ್ತಿ ಪಲ್ಲಕ್ಕಿ ಉತ್ಸವ, ಲಕ್ಷದೀಪೋತ್ಸವ

ದಾವಣಗೆರೆ: ಇಲ್ಲಿನ ಹಳೇಕುಂದುವಾಡ ಶ್ರೀ ಸದ್ಗುರು ಕರಿಬಸವೇಶ್ವರ ಸ್ವಾಮಿ ದೇವಸ್ಥಾನದಲ್ಲಿ ನ.10 ರಂದು ಬೆಳಿಗ್ಗೆ 5ರಿಂದ ಅಭಿಷೇಕ, ಹೋಮ ಹವನ ಮತ್ತು ಸಂಜೆ 7 ಗಂಟೆಗೆ ಬೆಳ್ಳಿ ಮೂರ್ತಿ ಪಲ್ಲಕ್ಕಿ ಉತ್ಸವ ಹಾಗೂ ಲಕ್ಷದೀಪೋತ್ಸವ ಕಾರ್ಯಕ್ರಮದ ಉದ್ಘಾಟನೆ ನಡೆಯಲಿದೆ. ದೇವಸ್ಥಾನದ ಧರ್ಮಾಧಿಕಾರಿ ಜೆ. ರಾಜಣ್ಣನವರ ಸಾನಿಧ್ಯದಲ್ಲಿ ನಡೆಯುವ ಕಾರ್ಯಕ್ರಮವನ್ನು ಸಂಸದೆ ಡಾ. ಪ್ರಭಾಮಲ್ಲಿಕಾರ್ಜುನ್ ಉದ್ಘಾಟಿಸಲಿದ್ದಾರೆ.

ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದು, ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ, ಜಿಲ್ಲಾ ರಕ್ಷಣಾಧಿಕಾರಿಗಳಾದ ಉಮಾಪ್ರಶಾಂತ್, ಮಹಾನಗರಪಾಲಿಕೆ ಆಯುಕ್ತೆ ರೇಣುಕಾ, ದೂಡಾ ಆಯುಕ್ತ ಹುಲ್ಲುಮನಿ ತಿಮ್ಮಣ್ಣ, ತಹಶೀಲ್ದಾರ್‌ಅಶ್ವಥ್, ಟ್ರಸ್ಟ್ ಕಾರ್ಯಾಧ್ಯಕ್ಷ ಹೆಚ್.ಬಿ.ಅರವಿಂದ್, ಕನ್ನಡ ಮತ್ತು ಸಂಸ್ಕೃತಿ ಇ ಲ ಾ ಖ ೆ ಯ ಸ ಹ ಾ ಯ ಕ ನಿರ್ದೇಶಕ ರವಿಚಂದ್ರನ್, ದಾವಣಗೆರೆ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಕೋಗುಂಡಿ ಬಕ್ಕೇಶಪ್ಪ, ಮಹಾನಗರಪಾಲಿಕೆ ಮಾಜಿ ಸದಸ್ಯರುಗಳಾದ ಗಣೇಶ್ ಹುಲ್ಲುಮನಿ, ಸವಿತಾ ಗಣೇಶ್ ಹುಲ್ಲುಮನಿ, ಉದ್ಯಮಿಗಳಾದ ಮೆಕಾ ಸತ್ಯನಾರಾಯಣ್ ಭಾಗವಹಿಸಲಿರುವರು.

ಸಮಾಚಾರ ಸಣ್ಣದಲ್ಲ

ಭದ್ರಾವತಿಗೆ ಪ್ರಕಾಶ ನೂತನ ಡಿವೈಎಸ್‌ಪಿ

ಭದ್ರಾವತಿ: ಪೊಲೀಸ್ ಉಪವಿಭಾಗದ ಡಿವೈಎಸ್ ಪಿ ಹುದ್ದೆಗೆ ಬೆಂಗಳೂರಿನ ಕೆಜೆ ಹಳ್ಳಿ ಉಪವಿಭಾಗದ ಎಸಿಪಿ ಪ್ರಕಾಶ ರಾಥೋಡ್ ಅವರನ್ನು ವರ್ಗಾವಣೆಗೊಳಿಸಿ



ಆದೇಶಿಸಲಾಗಿದೆ. ಈ ಹಿಂದೆ ಡಿವೈಎಸ್ ಪಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಕೆ.ಆರ್ ನಾಗರಾಜು ಅವರನ್ನು ಅ.6ರಂದು ವರ್ಗಾವಣೆ ಗೊಳಿಸಲಾಗಿತ್ತು. ಪ್ರಕಾಶ ರಾಥೋಡ್ ಅವರನ್ನು ಅಧಿಕೃತವಾಗಿ ನೇಮಕಗೊಳಿಸಿ ಪೊಲೀಸ್ ಮಹಾ ನಿರ್ದೇಶಕರು ಆದೇಶ ಹೊರಡಿಸಿ ದ್ದಾರೆ. ತನಿಖಾ ವಿಭಾಗದಲ್ಲಿ ಪ್ರಕಾಶ ರಾಥೋಡ್ ಉತ್ತಮ ಸಾಧನೆ ಮಾಡಿದ್ದಾರೆ. ಇತ್ತೀಚೆಗೆ ಇವರಿಗೆ ಕೇಂದ್ರ ಗೃಹ ಸಚಿವರ ದಕ್ಷತಾ ಪದಕ ಲಭಿಸಿದೆ. ಈಚೆಗೆ ರಾಜ್ಯದ ಗಮನ ಸೆಳೆದಿದ್ದ ಈಚೆಗೆ ಬಿಕ್ಲು ಶಿವು ಕೊಲೆ ಪ್ರಕರಣದಲ್ಲಿ ಮಾಜಿ ಸಚಿವ ಭೈರತಿ ಬಸವರಾಜ್ ಅವರನ್ನು ಎಸಿಪಿ ಪ್ರಕಾಶ ರಾಥೋಡ್ ವಿಚಾರಣೆ ಮಾಡಿ ದ್ದರು. ದಿವ್ಯ ಹಾಗರಗಿ ಪ್ರಕರಣದಲ್ಲಿ ಸಹ ಖಡಕ್ ಕಾರ್ಯಾಚರಣೆ ನಡೆಸಿದ್ದರು. ಇವರಿಗೆ ಕಳೆದ 4 ದಿನಗಳ ಹಿಂದೆಯೇ ವರ್ಗಾವಣೆ ಆದೇಶ ಹೊರಡಿಸ ಲಾಗಿತ್ತು.

ವಿರಾಮ
ಪ್ರತಿ ಭಾನುವಾರ

ಕಾಂಗ್ರೆಸ್ ನಾಯಕರ ವಿರುದ್ಧ ಕಿಡಿ

ತಮ್ಮ ತಪ್ಪು ಮುಚ್ಚಿಕೊಳ್ಳಲು ಮತದಾರರ ಪಟ್ಟಿ ಪರಿಷ್ಕರಣೆ: ಸಂಸದ ಬಿ.ವೈ.ರಾಘವೇಂದ್ರ

ಶಿವಮೊಗ್ಗ: ಮತದಾರರ ಪಟ್ಟಿ ಪರಿಷ್ಕರಣೆಯಿಂದ ಕಾಂಗ್ರೆಸ್ ತಬ್ಬಿಬ್ಬಾಗಿದ್ದು, ತಮ್ಮ ತಪ್ಪು ಮುಚ್ಚಿಕೊಳ್ಳಲು ಜನರಲ್ಲಿ ತಪ್ಪು ಕಲ್ಪನೆ ಹರಡಲು ಕಾಂಗ್ರೆಸ್ ನಾಯಕರು ಮುಂದಾಗಿದ್ದಾರೆಂದು ಸಂಸದ ಬಿ.ವೈ.ರಾಘವೇಂದ್ರ ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ನಗರ ಘಟಕದಿಂದ ಭಾನುವಾರ ನಗರದ ಮೈಲಾರೇಶ್ವರ ದೇವಸ್ಥಾನ ಸಭಾಂಗಣದಲ್ಲಿಆಯೋಜಿಸಿದ್ದ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ ಬಿಎಲ್‌ಎ-2 ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಮತದಾರರ ಪಟ್ಟಿಯಲ್ಲಿ ಲೋಪವಿದ್ದರೂ ಕೂಡ ಆಡಳಿತ ನಡೆಸಿದ್ದ ಎನ್‌ಡಿಎಯೇತರ ಪಕ್ಷಗಳು ಪರಿಷ್ಕರಣೆಗೆ ಮುಂದಾಗಿರಲಿಲ್ಲ. ಈಗ ಎನ್‌ಡಿಎ ಪರಿಷ್ಕರಣೆಗೆ ಮುಂದಾಗಿದೆ. ಇದನ್ನು ಸಹಿಸಿಕೊಳ್ಳು ಆಗುತ್ತಿಲ್ಲ ಎಂದರು. ಮತದಾರರ ಪಟ್ಟಿ ಪರಿಷ್ಕರಣೆ ವಿಶೇಷವಾದ ಕೆಲಸ. ಎನ್‌ಡಿಎ ಇದಕ್ಕೆ ಶಕ್ತಿ ತುಂಬುವ ಕೆಲಸ ಮಾಡುತ್ತಿದೆ. ಈ ಹಿಂದೆಲ್ಲಾ 5 ವರ್ಷದ ಆಡಳಿತಾವಧಿ ಮುಗಿಸಲು ಸೀಮಿತವಾಗಿ ಆಡಳಿತ ನಡೆಸಲಾಗುತ್ತಿತ್ತು. ಆದರೆ ಮೋದಿ ನೇತೃತ್ವದ ಎನ್‌ಡಿಎ ಸರಕಾರ 100 ವರ್ಷಗಳ ಮುಂದಾಲೋಚನೆಯಲ್ಲಿ ಕೆಲಸ ಮಾಡುತ್ತಿದೆ. ಇದನ್ನು ಪ್ರತಿಪಕ್ಷಗಳಿಗೆ ಸಹಿಸಿಕೊಳ್ಳಲು ಆಗುತ್ತಿಲ್ಲ ಎಂದರು.

ಪ್ರಸ್ತುತ ಬಿಹಾರ ಚುನಾವಣೆಯಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಮಾಡಲಾಗಿದೆ. ಮತದಾನದ ಪ್ರಮಾಣವೂ ಜಾಸ್ತಿಯಾಗಿದೆ. ಹೀಗಾಗಿಯೇ ರಾಹುಲ್ ಗಾಂಧಿ ಬ್ರೆಜಿಲ್ನ ರೂಪದರ್ಶಿಯೊಬ್ಬರು ಅನೇಕ ಕಡೆಗಳಲ್ಲಿ ನಕಲಿ ಮತದಾನ ಮಾಡಿದ್ದಾರೆಂದು ದೂರಿದ್ದಾರೆ. ಆದರೆ ಆ ಮಹಿಳೆಯೇ ಸ್ಪಷ್ಟನೆ ನೀಡಿದ್ದಾರೆ. ವಿವಿಧ ಕಡೆಗಳಲ್ಲಿ ಮತದಾನ ಮಾಡಿದ ಮಹಿಳೆಯರೂ ಕೂಡ ಸ್ಪಷ್ಟನೆ ನೀಡಿದ್ದಾರೆ. ಇದಕ್ಕಿಂತ ಹಿನ್ನಡೆ ಕಾಂಗ್ರೆಸ್ ನಾಯಕರಿಗೆ ಬೇರೆ ಇಲ್ಲ ಎಂದರು.

ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ ಬಿಎಲ್‌ಎ-2 ಕಾರ್ಯಾಗಾರವನ್ನು ಸಂಸದ ಬಿ.ವೈ.ರಾಘವೇಂದ್ರ ಉದ್ಘಾಟಿಸಿದರು.

> ಬಡತನ, ನಿರುದ್ಯೋಗ ನಿವಾರಣೆಗೆ ಒತ್ತು ನೀಡಲಾಗಿದೆ. ಗ್ರಾಮಗಳಿಂದ ಹಿಡಿದು ಬೃಹತ್ ನಗರಗಳವರೆಗೆ ಮೂಲ ಸೌಕರ್ಯ ಕಲ್ಪಿಸಲು ಕೇಂದ್ರ ಸರಕಾರ ಕೆಲಸ ಮಾಡುತ್ತಿದೆ. ಇವನ್ನು ಸಹಿಸಿಕೊಳ್ಳಲು ಸಾಧ್ಯವಾಗದ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಮತದಾರರ ಪಟ್ಟಿಯಲ್ಲಿ ಲೋಪವಿದೆ ಎಂದು ತಡಬಡಾಯಿಸುತ್ತಿದ್ದಾರೆ.
> - ಬಿ.ವೈ.ರಾಘವೇಂದ್ರ, ಸಂಸದ

ತಮ್ಮ ಪಕ್ಷದಲ್ಲಿನ ಗುಂಡಿ, ರಸ್ತೆಯಲ್ಲಿನ ಗುಂಡಿಗಳನ್ನು ಮುಚ್ಚಿಸಲು ಕಾಂಗೆಸ್‌ಗೆ ಆಗುತ್ತಿಲ್ಲ. ಕೆಲಸವಿಲ್ಲದೆ ಬಸ್ನಿಲ್ದಾಣಗಳಲ್ಲಿ ಸಹಿ ಸಂಗ್ರಹ ಮಾಡಿ ರಾಷ್ಟ್ರಪತಿಗಳಿಗೆ ಸಲ್ಲಿಸಲು ಮುಂದಾಗಿದ್ದಾರೆ. ಹಿಂದಿನ ಅವಧಿಯಲ್ಲಿ ಕಾಂಗ್ರೆಸ್‌ಗೆ ವಿರೋಧ ಪಕ್ಷದ ಸ್ಥಾನಮಾನವೇ ಇರಲಿಲ್ಲ. ಈ ಅವಧಿಯಲ್ಲಿ ಲಾಟರಿ ಹೊಡೆದಂತೆ ವಿರೋಧ ಪಕ್ಷದ ಸ್ಥಾನ ಸಿಕ್ಕಿದೆ. ಇದೇ ರೀತಿ ಮಾಡಿದರೆ ಮುಂದಿನ ಬಾರಿ ಆ ಸ್ಥಾನವೂ ಉಳಿಯುವುದಿಲ್ಲವೆಂದು ಹರಿಹಾಯ್ದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಮತದಾರರ ಪಟ್ಟಿ ಪರಿಷ್ಕರಣೆಯ ಸಂಚಾಲಕ, ಮತದಾರರ ಪಟ್ಟಿ ಪರಿಷ್ಕರಣೆ ಸಂಬಂಧ ಮಂಡಲ ಮಟ್ಟದಲ್ಲಿ ಸಭೆ ನಡೆಸಿ ಮಾಹಿತಿ ನೀಡಲಾಗಿದೆ. ಪಟ್ಟಿ ಪರಿಷ್ಕಣೆಯಲ್ಲಿ ಜವಾಬ್ದಾರಿಗಳನ್ನು ತಿಳಿಸಲಾಗಿದೆ ಎಂದರು. ನಗರ ಬಿಜೆಪಿ ಅಧ್ಯಕ್ಷ ಮೋಹನ ರೆಡ್ಡಿ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾಧ್ಯಕ್ಷ ಎನ್.ಕೆ. ಜಗದೀಶ್, ಪಟ್ಟಿ ಪರಿಷ್ಕರಣೆಯ ರಾಜ್ಯ ಸಂಚಾಲಕ ಜಗದೀಶ್ ಹಿರೇಮನೆ, ಶಾಸಕ ಎಸ್.ಎನ್. ಚನ್ನಬಸಪ್ಪ, ಪ್ರಮುಖರಾದ ಜ್ಞಾನೇಶ್ವರ್ ,ದೀನದಯಾಳ್, ಶಿವಶಂಕರ್‌ಇದ್ದರು.

ಸರಕಾರಿ ಬಸ್ ಸಂಚಾರಕ್ಕೆ ಚಾಲನೆ

ಚಂದ್ರಗುತ್ತಿ: ಸಮೀಪದ ಹೊರಬೈಲು ಗ್ರಾಮದಲ್ಲಿ ನೂತನವಾಗಿ ಆರಂಭವಾದ ಸರಕಾರಿ ಬಸ್ ಸಂಚಾರಕ್ಕೆ ತಾಪಂ ಮಾಜಿ ಸದಸ್ಯ ಸುನೀಲ್ಗೌಡ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದಅವರು, ಶಿಕ್ಷಣ ಸಚಿವರು ಹಾಗೂ ಕ್ಷೇತ್ರದ ಶಾಸಕ ಎಸ್. ಮಧುಬಂಗಾರಪ್ಪಅವರ ಆದೇಶ ಮತ್ತು ಮುತುವರ್ಜಿಯಿಂದ ಬಸ್ ಸೌಲಭ್ಯ ದೊರೆತಿದೆ. ಇದರಿಂದ ವಿದ್ಯಾರ್ಥಿಗಳು ಮತ್ತು ಕೂಲಿ ಕಾರ್ಮಿಕರಿಗೆ ಅನುಕೂಲವಾಗಿದೆ. ಈ ಭಾಗದಿಂದ ಶಿರಸಿ ಭಾಗಕ್ಕೆ ವಿದ್ಯಾಭ್ಯಾಸಕ್ಕಾಗಿ ನೂರಾರು ವಿದ್ಯಾರ್ಥಿಗಳು ತೆರಳುತ್ತಾರೆ. ಇದಕ್ಕೆ ಸಹಕರಿಸಿದ ಶಿರಸಿ ಶಾಸಕರಾದ ಭೀಮಣ್ಣ ನಾಯ್ಕ್‌ಅವರಿಗೂ ಧನ್ಯವಾದಗಳನ್ನು ಸಲ್ಲಿಸುತ್ತೇನೆ ಎಂದರು.

ಹೊರಬೈಲು ಗ್ರಾಮದಿಂದ ವಿದ್ಯಾನಗರ, ಹರೀಶಿ, ಶಿರಸಿ ಭಾಗಕ್ಕೆ ಬಸ್ ಸೌಲಭ್ಯಕ್ಕಾಗಿ ಸಾರ್ವಜನಿಕರಿಂದ ಒತ್ತಾಯವಿತ್ತು. ಬಸ್ ಗ್ರಾಮಕ್ಕೆಆಗಮಿಸುತ್ತಿ ದ್ದಂತೆ ಸ್ಥಳೀಯರು ಪಟಾಕಿ ಸಿಡಿಸಿ, ಸಿಹಿ ವಿತರಿಸುವಜೊತೆಗೆ ಬಸ್‌ಗೆ ಪೂಜೆ ಸಲ್ಲಿಸಿ ಸಂಭ್ರಮಿಸಿದರು. ಈ ಸಂದರ್ಭದಲ್ಲಿರವಿ ಹೊರಬೈಲು, ಅಶೋಕ್‌ಗೌಡ, ಹಾಲಮ್ಮ, ದರ್ಶ ನ್ಗೌಡ, ಸುನೀಲ್, ಹರೀಶ್, ಪುಟ್ಟಪ್ಪ ಸ್ಥಳೀಯ ಗ್ರಾಮಸ್ಥರು ಉಪಸ್ಥಿತರಿದ್ದರು.

> **ಬಸ್ ಸೌಲಭ್ಯ ಕಲ್ಪಿಸುವುದು ಸಂತಸ**
> ವಿದ್ಯಾರ್ಥಿಗಳು ಮತ್ತು ಕೂಲಿ ಕಾರ್ಮಿಕರ ಅನುಕೂಲಕ್ಕಾಗಿ ಬಸ್ ಸೌಲಭ್ಯ ಕಲ್ಪಿಸುವಂತೆ ತಾಪಂ ಮಾಜಿ ಸದಸ್ಯ ಸುನೀಲ್‌ಗೌಡ ಅವರು ಸಚಿವ ಎಸ್. ಮಧು ಬಂಗಾರಪ್ಪಅವರ ಗಮನಕ್ಕೆ ತಂದು ಬಸ್ ಸೌಲಭ್ಯ ಕಲ್ಪಿಸಿರುವುದು ಸಂತಸದ ವಿಷಯವಾಗಿದೆ ಎಂದು ಗ್ರಾಮಸ್ಥರು ಮೆಚ್ಚುಗೆ ವ್ಯಕ್ತಪಡಿಸಿದರು.

ಹೊರಬೈಲುಗ್ರಾಮದಲ್ಲಿ ನೂತನವಾಗಿ ಆರಂಭವಾದ ಸರಕಾರಿ ಬಸ್ ಸಂಚಾರಕ್ಕೆ ತಾಪಂ ಮಾಜಿ ಸದಸ್ಯ ಸುನೀಲ್ ಗೌಡ ಗ್ರಾಮಸ್ಥರ ಸಮ್ಮುಖದಲ್ಲಿ ಚಾಲನೆ ನೀಡಿದರು.

ಕೊಲ್ಲೂರು ಬೈಂದೂರು ಟ್ರಾಫಿಕ್ ತಪ್ಪಿಸಿ

ಹೊಸನಗರ: ನಗರದಿಂದ ಕೊಲ್ಲೂರು ಬೈಂದೂರು ಮಾರ್ಗವಾಗಿ ಹೋಗುವ ರಸ್ತೆಗಳಲ್ಲಿ ಭಾರೀ ಗಾತ್ರದ ಅಂದರೆ 10ಚಕ್ರ, 16ಚಕ್ರದ ಲಾರಿಗಳು ಓಡಾಟ ನಡೆಸುತ್ತಿದ್ದು ಬಾರೀಗಾತ್ರದ ವಾಹನಗಳು ರಸ್ತೆಯ ಮಧ್ಯೆಕೆಟ್ಟು ನಿಲ್ಲುತ್ತಿರುವುದರಿಂದ ಬಸ್ಗಳಿಗೆ ಹಾಗೂ ಸಣ್ಣ-ಸಣ್ಣ ವಾಹನಗಳ ಓಡಾಟಕ್ಕೆ ತುಂಬಾ ತೊಂದರೆಯಾಗುತ್ತಿದೆ ಎಂದು ಆ ಭಾಗದ ಗ್ರಾಮಸ್ಥರು ತಮ್ಮ ಅಳಲನ್ನು ತೋಡಿಕೊಳ್ಳುತ್ತಿದ್ದಾರೆ.

ಕೊಲ್ಲೂರು ಘಾಟಿಯಲ್ಲಿಇತ್ತೀಚಿಗೆ ಸಿಮೇಂಟ್ ತುಂಬಿದ ಲಾರಿಕೆಟ್ಟುಅಡ್ಡ ನಿಂತುರಸ್ತೆ ಬಂದ್‌ಆಗಿದ್ದುಇದರಿಂದ ಟ್ರಾಫಿಕ್ಜಾಮ್ ಆಗಿದೆ. ಇದರಿಂದ ಕೊಲ್ಲೂರು ಮಾರ್ಗವಾಗಿ ಹೋಗಿ ಬರುತ್ತಿದ್ದ ಪ್ರಯಾಣಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಭಕ್ತಾರಿಗೆ ತೊಂದರೆಯಾಗಿದೆ.

ಈ ಸಮಯದಲ್ಲಿ ಮಾತನಾಡಿದ ನಿಟ್ಟೂರು ಅಡಗೋಡಿ, ಮತ್ತಿಮನೆ ಕೆ.ಬಿ ಸರ್ಕಲ್ಗ್ರಾ ಮಸ್ತರು ಈ ರೀತಿಯ ವಾಹನಗಳು ಓಡಾಟ ನಡೆಸುತ್ತಿರುವುದರಿಂದಇತ್ತೀಚ್ಚಿನ ದಿನಗಳಲ್ಲಿ ನಮಗೆ ತುಂಬಾ ತೊಂದರೆಯಾಗುತ್ತಿದೆ.

ಈ ಬಗ್ಗೆ ಆಗಾಗ ಅಧಿಕಾರಿಗಳ ಗಮನಕ್ಕೆ ತಂದರೂ ಏನು ಪ್ರಯೋಜನವಾಗಿಲ್ಲಅದು ಅಲ್ಲದೇ ಈ ಮಾರ್ಗದಲ್ಲಿ ವಾರಕ್ಕೊಮ್ಮೆಒಂದೇರಡು ವಾಹನಗಳ ಮಧ್ಯೆ ಆಕಸ್ಮಿಕ ಆಕ್ಸಿಡೆಂಟ್ಗಳು ನಡೆಯುತ್ತಿದ್ದು ಸಾಕಷ್ಟು ಜನರು ಪ್ರಾಣ ಕಳೆದುಕೊಂಡಿದ್ದಾರೆ ಸಾಕಷ್ಟು ಪ್ರಯಾಣಿಕರು ಕೈ ಕಾಲು ಮುರಿದುಕೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಈ ಬಾಗದಲ್ಲಿ ಹೆಚ್ಚಾಗಿ ದುಗಾಂಬಾ ಬಸ್ ಸಂಚಾರಿಸುತ್ತಿರುವುದರಿಂದ ನಮಗೆಲ್ಲರಿಗೂ ಅನುಕೂಲವಾಗಿದ್ದು ಸರಕಾರಿ ಸಾರಿಗೆ ಭಟ್ಕಳ ಬೆಂಗಳೂರು ಬಸ್ ಸರಿಯಾದ ಸಮಯಕ್ಕೆ ಬರುತ್ತಿಲ್ಲ. ದು ಅಲ್ಲದೇ ಬಂದರೂ ಕೆಲವು ಕಡೇ ಬಸ್ ನಿಲ್ಲಿಸದೇ ಎಕ್ಸ್‌ಪ್ರೆಸ್ ಹೋಗುತ್ತಿದೆ ಸಂಬಂಧ ಪಟ್ಟ ಅಧಿಕಾರಿಗಳು ಹಾಗೂ ಶಾಸಕರುಗಳು ಕೊಲ್ಲೂರು ಮಾರ್ಗಕೆ ಭಾರೀ ಗಾತ್ರದ ವಾಹನಕ್ಕೆ ಕಡಿವಾಣ ಹಾಕಿ ಎಂದು ಆ ಭಾಗದ ನೂರಾರು ಜನಗ್ರಾಮಸ್ತರು ಈ ಮೂಲಕ ಕೇಳಿಕೊಂಡಿದ್ದಾರೆ.

ಹೊಸನಗರ ಕೊಲ್ಲೂರು ಮಾಗದ ಮಧ್ಯೆ ಸಿಮೇಂಟ್ ತುಂಬಿದ ಲಾರಿಕೆಟ್ಟು ನಿಂತಿದ್ದು ದಿನಗಟ್ಟಲೇ ಟ್ರಾಫಿಕ್ ಜಾಮ್ ಆಗಿರುವುದು.

ಕನಕದಾಸರ ಸಂದೇಶ ಇಂದಿಗೂ ಪ್ರಸ್ತುತ: ಸಂಸದ ರಾಘವೇಂದ್ರ

ಶಿಕಾರಿಪುರ: ಭಕ್ತ ಕನಕದಾಸರ ಜೀವನ, ಸಾಹಿತ್ಯ ಮತ್ತು ಸಂದೇಶಗಳು ಇಂದು ಅತ್ಯಂತ ಪ್ರಸ್ತುತವಾಗಿದ್ದು, ಸದುದ್ದೇಶದ ಪ್ರತಿಯೊಂದು ಕರ್ತನೆಗಳು ಸಮಾನತೆ ಮತ್ತು ಭಕ್ತಿಯ ದಾರಿಯನ್ನು ತೋರಿಸುತ್ತವೆ.ಅವರ ಬದುಕು ಮತ್ತು ಸಾಹಿತ್ಯ ಇಂದು ಕನ್ನಡ ಸಂಸ್ಕೃತಿಯ ಭಾಗವಾಗಿದೆ ಎಂದು ಸಂಸದ ಬಿ.ವೈ ರಾಘವೇಂದ್ರ ತಿಳಿಸಿದರು.

ಶನಿವಾರ ಪಟ್ಟಣದ ಕನಕ ಉದ್ಯಾನವನದಲ್ಲಿ ತಾಲೂಕು ಆಡಳಿತ,ತಾ.ಪಂ,ಕುರುಬ ಸಮಾಜದ ಸಹಯೋಗದಲ್ಲಿ ನಡೆದ ಕನಕದಾಸರ 538 ನೇ ಜಯಂತಿ ಕರ್ಯಕ್ರಮಕ್ಕೆ ಕನಕ ಶಿಲಾಮೂರ್ತಿಗೆ ಮಾಲಾರ್ಪಣೆ ಮೂಲಕ ಚಾಲನೆ ನೀಡಿದರು.

ಮಾನವೀಯತೆ ಮತ್ತು ಜಾತಿ ವ್ಯತ್ಯಾಸಗಳ ವಿರುದ್ಧ ನಿಂತ ಸನ್ಯಾಸಿಗಳಲ್ಲಿ ಪ್ರಮುಖರಾದ ಅವರ ಪ್ರತಿಯೊಬ್ಬರೂ ಹರಿದಾಸರೇ ಎಂಬ ಸಂದೇಶ ದಾಸ ಪಂಥದ ಮೂಲಾಧಾರಗಳಲ್ಲಿ ಒಂದಾಗಿದೆ ಎಂದು ತಿಳಿಸಿದರು. ಪಟ್ಟಣದ ಕೆ ಎಸ್ ಆರ್‌ಟಿ ಸಿ ಬಸ್ ನಿಲ್ದಾಣದ ಸಮೀಪದ ಸಂಗೊಳ್ಳಿ ರಾಯಣ್ಣ ಮೂರ್ತಿಯನ್ನು ಪುರಸಭೆ ವತಿಯಿಂದ ಅಭಿವೃದ್ಧಿಪಡಿಸಲಾಗುವುದು ಎಂದು ತಿಳಿಸಿದರು.

ಭದ್ರಕಾಡ ಮಾಜಿ ಅಧ್ಯಕ್ಷ ನಗರದ ಮಹಾದೇವಪ್ಪ ಮಾತನಾಡಿ, ಶಿಕ್ಷಣದಿಂದ ಮಾತ್ರ ಸಮಾಜದ ಪ್ರಗತಿ ಸಾಧ್ಯ, ಬಸವಣ್ಣನವರ ಕ್ರಾಂತಿಕಾರಿ ನರ್ಧಾರಗಳು ಪ್ರಪಂಚದಲ್ಲಿ ನಡೆದಿಲ್ಲ,ಶೋಷಿತ ಸಮುದಾಯದ ಎಲ್ಲ ಜಾತಿಗಳಿಗೂ ಶಕ್ತಿ ತುಂಬಿದವರು ಬಸವಣ್ಣ, ಹುಟ್ಟಿನಿಂದ ಯಾರು ಮೇಲು ಅಲ್ಲ ಕೀಳು ಅಲ್ಲ ಜ್ಞಾನ ಯಾರ ಸಂಪತ್ತು ಅಲ್ಲ ಅದು ಸಾಧಕನ ಸ್ವತ್ತು ಹೊರತು ಸೋಮಾರಿಯದ್ದಲ್ಲ ಎಂದರು.

ಕೆಪಿಸಿಸಿ ಸದಸ್ಯ ಗೋಣಿ ಮಾಲತೇಶ್ ಮಾತನಾಡಿ, ಕನಕದಾಸ ಜಯಂತಿಯನ್ನು ಸರಕಾರಿ ಆಚರಣೆಯಾಗಿಸಿ ರಜಾ ಘೋಷಿಸಿದ್ದು ವೀರಶೈವ ಸಮಾಜದ ಯಡಿಯೂರಪ್ಪನವರು ಮುಖ್ಯಮಂತ್ರಿಯಾದ ಅವಧಿಯಲ್ಲಿ ಎಂದರು.

ತಾಲೂಕು ದಂಡಾಧಿಕಾರಿ ಮಂಜುಳಾ ಭಜಂತ್ರಿ ಪುರಸಭಾ ಅಧ್ಯಕ್ಷೆ ಸುನಂದ ಮಂಜುನಾಥ್ ,ಉಪಾಧ್ಯಕ್ಷೆ ರೂಪ ಮಂಜುನಾಥ್, ತಾ.ಕುರುಬ ಸಮಾಜದ ಅಧ್ಯಕ್ಷ ಕಬಾಡಿ ರಾಜಣ್ಣ, ಕನಕ ಮಂಟಪ ಹಾಗೂ ಕನಕ ಶಿಲಾಮೂರ್ತಿ ದಾನಿ ಹಾಲಪ್ಪ, ತಾ.ಬಿಜೆಪಿ ಅಧ್ಯಕ್ಷ ಸಂಕ್ಲಾಪುರ ಹನುಮಂತಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವರಾಂ ಪಾರಿವಾಳದ, ಬಡಗಿ ಪಾಲಾಕ್ಷಪ್ಪ, ಭಂಡಾರಿ ಮಾಲತೇಶ್,ಹಳ್ಳೂರು ಪರಮೇಶ್ವರಪ್ಪ, ಪುರಸಭಾ ಸದಸ್ಯ ಪಾಲಾಕ್ಷಪ್ಪ, ಪ್ರಶಾಂತ್ ಜೀನಳ್ಳಿ, ಲಕ್ಷ್ಮಿ ಮಹಾಲಿಂಗಪ್ಪ,ನಗರದ ರವಿ ಕಿರಣ್,ಕನಕ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ನಗರದ ಮಾಲತೇಶ್, ಕಸಬ ಸೊಸೈಟಿ ಅಧ್ಯಕ್ಷ ಚಿಕ್ಕಣ್ಣ ಹೊಲಗಾಗಲು ಉಪಸ್ಥಿತರಿದ್ದರು.

ಶಿಕಾರಿಪುರದ ಕನಕ ಉದ್ಯಾನವನದಲ್ಲಿ ನಡೆದ ಕನಕ ಜಯಂತಿ ಕಾರ್ಯಕ್ರಮಕ್ಕೆ ಸಂಸದ ರಾಘವೇಂದ್ರ ಚಾಲನೆ ನೀಡಿದರು.

> 16ನೇ ಶತಮಾನದಲ್ಲಿ ಎರಡು ನೂರ ಐವತ್ತಕ್ಕೂ ಅಧಿಕ ಹರಿದಾಸರಲ್ಲಿ ಕನಕದಾಸರು ಮಾತ್ರ ಶೋಷಿತ ಸಮುದಾಯದವರಾಗಿದ್ದು,ಕನಕದಾಸರು ಕೇವಲ ಭಕ್ತಿಯ ಕವಿಯಷ್ಟೇ ಅಲ್ಲದೆ ಕಿರ್ತನೆಗಳ ಮೂಲಕ ಸಮಾಜ ಸುಧಾರಣೆ ಮಾಡಿದ ದಾಸ ಪರಂಪರೆಯ ಧ್ರುವತಾರೆ.
> - ಬಿ.ವೈ ರಾಘವೇಂದ್ರ, ಸಂಸದ

MOFPI
MINISTRY OF FOOD PROCESSING INDUSTRIES
GOVERNMENT OF INDIA
ಕರ್ನಾಟಕ ಸರ್ಕಾರ
PMFME
सूक्ष्म उद्यमों का संबल
KAPPEC

ಕಿರು ಆಹಾರ ಉದ್ಯಮ ಆಸಕ್ತರಿಗೆ PMFME ಯೋಜನೆಯಡಿ 15 ಲಕ್ಷ ರೂಗಳವರೆಗೆ ಸಹಾಯಧನ (Subsidy) ಸೌಲಭ್ಯ

PMFME ಯೋಜನೆ ಕುರಿತು ಪ್ರಶ್ನೋತ್ತರಗಳು:

1. PMFME ಯೋಜನೆ ಎಂದರೇನು ಮತ್ತು ಇದರ ಪ್ರಮುಖ ಉದ್ದೇಶಗಳೇನು?
PMFME ಯು ಪ್ರಧಾನ ಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮ ಬದ್ಧಗೊಳಿಸುವಿಕೆ ಯೋಜನೆಯಾಗಿದೆ (Prime Minister's Formalization of Micro Food Processing Enterprise).
ಇದರ ಪ್ರಮುಖ ಉದ್ದೇಶಗಳೆಂದರೆ;
- ಹೊಸ ಕಿರು ಆಹಾರ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಸಹಾಯಧನ/ಪ್ರೋತ್ಸಾಹ
- ಹಾಲಿ ಇರುವ ಕಿರು ಆಹಾರ ಸಂಸ್ಕರಣಾ ಘಟಕಗಳ ಉನ್ನತೀಕರಣ/ವಿಸ್ತರಣೆಗೆ ಸಹಾಯಧನ/ಪ್ರೋತ್ಸಾಹ ಈ ಮೂಲಕ ಆಹಾರ ಸಂಸ್ಕರಣೆಯ ಅಸಂಘಟಿತ ವಲಯದಲ್ಲಿರುವ ಕಿರು ಉದ್ದಿಮೆಗಳ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವುದು ಹಾಗೂ ವಲಯದ ನಿಯಮಬದ್ಧಗೊಳಿಸುವಿಕೆಯನ್ನು ಪ್ರೋತ್ಸಾಹಿಸುವುದು.

2. PMFME ಯೋಜನೆಯಡಿ ಏನೆಲ್ಲಾ ಕಾರ್ಯಕ್ರಮಗಳಿವೆ?
- ವೈಯಕ್ತಿಕ ಉದ್ದಿಮೆದಾರರಿಗೆ ಮತ್ತು ಗುಂಪುಗಳಿಗೆ ಸಾಲ ಸಂಪರ್ಕಿತ ಸಹಾಯಧನ
- ಸ್ವಸಹಾಯ ಸಂಘಗಳ (SHGs) ಸದಸ್ಯರಿಗೆ ಬೀಜ ಬಂಡವಾಳ ಒದಗಿಸುವಿಕೆ
- ರೈತ ಉತ್ಪಾದಕ ಸಂಸ್ಥೆಗಳು (FPOs), ಸ್ವಸಹಾಯ ಸಂಘಗಳು (SHGs), ಮತ್ತು ಉತ್ಪಾದಕರ ಸಹಕಾರ ಸಂಘಗಳಿಗೆ; ಸಾಮಾನ್ಯ ಮೂಲ ಸೌಕರ್ಯ ಸ್ಥಾಪಿಸಲು ಸಹಾಯಧನ
- ಮಾರ್ಕೆಟಿಂಗ್ ಮತ್ತು ಬ್ರ್ಯಾಂಡಿಂಗ್‌ಗೆ ಸಹಾಯಧನ
- ಯೋಜನೆಯ ಫಲಾನುಭವಿಗಳಿಗೆ ಕೌಶಲ್ಯ ತರಬೇತಿ

3. ಯೋಜನೆಯಡಿ ಅರ್ಜಿ ಸಲ್ಲಿಸಲು ಯಾರು ಅರ್ಹರಿರುತ್ತಾರೆ?
- 18 ವರ್ಷ ಮೇಲ್ಪಟ್ಟವರಾಗಿರಬೇಕು.
- ಕನಿಷ್ಟ ವಿದ್ಯಾರ್ಹತೆಯ ಅವಶ್ಯಕತೆ ಇಲ್ಲ.
- ಅರ್ಜಿದಾರರು ಉದ್ದಿಮೆಯ ಮಾಲೀಕತ್ವದ ಹಕ್ಕನ್ನು ಹೊಂದಿರಬೇಕು.
- ಹಾಲಿ ವೈಯಕ್ತಿಕ ಆಹಾರ ಉದ್ದಿಮೆದಾರರು, ನವೋದ್ಯಮಿಗಳು, ರೈತ ಉತ್ಪಾದಕರ ಸಂಘಗಳು (FPOs), ಸ್ವಸಹಾಯ ಸಂಘಗಳು (SHGs), ಮತ್ತು ಉತ್ಪಾದಕರ ಸಹಕಾರ ಸಂಘಗಳು.

4. ಅರ್ಜಿ ಸಲ್ಲಿಸಲು ಬೇಕಾಗಿರುವ ದಾಖಲಾತಿಗಳೇನು?
- ಪ್ಯಾನ್ ಕಾರ್ಡ್
- ಆಧಾರ್ ಕಾರ್ಡ್
- ವಿಳಾಸದ ಪುರಾವೆ: (ವಿದ್ಯುತ್/ದೂರವಾಣಿ/ಪೋಸ್ಟ್-ಪೇಯ್ಡ್ ಮೊಬೈಲ್ ಫೋನ್/ಪೈಪ್ಡ್ ಗ್ಯಾಸ್/ವಾಟರ್ ಬಿಲ್/ಆಸ್ತಿ ಅಥವಾ ಮುನ್ಸಿಪಲ್ ತೆರಿಗೆ ಪಾವತಿಸಿದ ರಸೀದಿ/ಪಡಿತರ ಚೀಟಿ)
- ಘಟಕವನ್ನು ಸ್ಥಾಪಿಸಬೇಕಾದ ಸ್ಥಳದ ವಿವರಗಳು. (ಮಾಲೀಕತ್ವದ ಪತ್ರ/ ಬಾಡಿಗೆ/ ಗುತ್ತಿಗೆ ವಿವರಗಳು)
- ಕಳೆದ 6 ತಿಂಗಳಿನ ಬ್ಯಾಂಕ್ ಸ್ಟೇಟ್ಮೆಂಟ್ / ಬ್ಯಾಂಕ್ ಪಾಸ್ ಬುಕ್‌ನ ಜೆರಾಕ್ಸ್ ಪ್ರತಿ
- ಅಳವಡಿಸಬೇಕಾದ ಯಂತ್ರೋಪಕರಣಗಳ ಅಂದಾಜು ದರಪಟ್ಟಿ (Quotation)

5. ಯೋಜನೆಯಲ್ಲಿ ದೊರಕುವ ಸಹಾಯಧನ ಎಷ್ಟು?
ವೈಯಕ್ತಿಕ/ ಗುಂಪು ಉದ್ದಿಮೆಗಳಿಗೆ ಯೋಜನೆಯ ವೆಚ್ಚದ 50% ರಷ್ಟು ಹಾಗೂ ಗರಿಷ್ಠ ₹15 ಲಕ್ಷ ಸಹಾಯಧನ. ಇದರಲ್ಲಿ ರಾಜ್ಯ ಸರ್ಕಾರದ ಸಹಾಯಧನ ₹9 ಲಕ್ಷ ಹಾಗೂ ಕೇಂದ್ರ ಸರ್ಕಾರದ ಸಹಾಯಧನ ₹6 ಲಕ್ಷ.

6. ಆರಂಭಿಕ ಹೂಡಿಕೆ ಬೇಕೆ?
ಹೌದು, ಅರ್ಜಿದಾರರು ಯೋಜನೆಯ ವೆಚ್ಚದ ಕನಿಷ್ಠ 10% ಹೂಡಿಕೆ ಮಾಡಬೇಕು.

7. ಯೋಜನೆಯು ಎಲ್ಲಿಯವರೆಗೆ ಚಾಲ್ತಿಯಲ್ಲಿರುತ್ತದೆ?
ಈ ಆರ್ಥಿಕ ವರ್ಷ ಅಂದರೆ 2025-26 ನೇ ಸಾಲಿನ ಮಾರ್ಚ್‌ಅಂತ್ಯದರೆಗೆ.

8. ಸಹಾಯಧನವನ್ನು ಯಾವಾಗ ಜಮೆ ಮಾಡಲಾಗುತ್ತದೆ?
ಬ್ಯಾಂಕ್ ಸಾಲ ಮಂಜೂರಾದ ನಂತರ, ಅನುದಾನವನ್ನು ಫಲಾನುಭವಿಯ ಬ್ಯಾಂಕ್ ಮಿರರ್ ಅಕೌಂಟ್‌ಗೆ ವರ್ಗಾಯಿಸಲಾಗುತ್ತದೆ. 3 ವರ್ಷಗಳ ನಂತರ ಸಹಾಯಧನವನ್ನು ಫಲಾನುಭವಿಯ ಖಾತೆಗೆ ಜಮೆ ಮಾಡಲಾಗುತ್ತದೆ.

9. ಭೂಮಿ ಖರೀದಿಯ ವೆಚ್ಚವನ್ನು ಯೋಜನೆಯ ವೆಚ್ಚದಲ್ಲಿ ಸೇರಿಸಲಾಗುತ್ತದೆಯೆ?
ಇಲ್ಲ. ಭೂಮಿ ಖರೀದಿ ವೆಚ್ಚ, ಬಾಡಿಗೆ ವೆಚ್ಚ, ಲೀಸ್ ವೆಚ್ಚ ಗಳನ್ನು ಈ ಯೋಜನೆಯಡಿ ಸಹಾಯಧನಕ್ಕೆ ಪರಿಗಣಿಸುವುದಿಲ್ಲ.

10. ಸರ್ಕಾರದ ಇತರೆ ಯೋಜನೆಯ ಸವಲತ್ತುಗಳನ್ನು ಈ ಯೋಜನೆಯ ಸವಲತ್ತುಗಳ ಜೊತೆಯಲ್ಲಿ ಪಡೆಯಬಹುದೇ?
ಹೌದು, ಪಡೆಯಬಹುದಾಗಿದೆ.

11. ಯೋಜನೆಯಡಿ ತರಬೇತಿಗಳನ್ನು ನೀಡಲಾಗುತ್ತದೆಯೇ? ತರಬೇತಿ ಪಡೆಯಲು ಯಾರೆಲ್ಲಾ ಅರ್ಹರಿರುತ್ತಾರೆ?
ಹೌದು, ನೀಡಲಾಗುತ್ತದೆ. ಜಿಲ್ಲಾ ಮಟ್ಟದ ಸಮಿತಿ (DLC) ಅನುಮೋದಿತ ಅರ್ಜಿದಾರರು 3 ದಿನಗಳ ಉಚಿತ ತರಬೇತಿಯನ್ನು ಪಡೆಯಲು ಅರ್ಹರಾಗಿರುತ್ತಾರೆ. ಪ್ರಾಥಮಿಕ ಬಂಡವಾಳ (Seed capital) ಪಡೆದ ಸ್ವಸಹಾಯ ಸಂಘದ ಸದಸ್ಯರು 1 ದಿನದ ಉಚಿತ ತರಬೇತಿಯನ್ನು ಪಡೆಯಲು ಅರ್ಹರಾಗಿರುತ್ತಾರೆ.

12. ODOP ಎಂದರೇನು?
ಆಯಾ ಜಿಲ್ಲೆಯ ಪರಂಪರೆ/ವೈಶಿಷ್ಟ್ಯತೆಯನ್ನು ಪ್ರತಿಬಿಂಬಿಸುವ ಆಹಾರ ಉತ್ಪನ್ನ (One District One Product)
ಉದಾಹರಣೆಗೆ : ಮಂಡ್ಯ ಬೆಲ್ಲ, ಬೆಂಗಳೂರು ಬೇಕರಿ ಪದಾರ್ಥಗಳು ಇತ್ಯಾದಿ.

13. ಯೋಜನೆಯ ಸವಲತ್ತು ಪಡೆಯಲು ODOP ಉತ್ಪನ್ನವನ್ನೇ ಆಯ್ಕೆ ಮಾಡಿಕೊಳ್ಳಬೇಕಾಗುವುದೇ?
ಹಾಗೇನಿಲ್ಲ. ಆದರೆ ODOP ಉತ್ಪನ್ನ ಆಧಾರಿತ ಘಟಕಗಳಿಗೆ ಆದ್ಯತೆ ನೀಡಲಾಗುತ್ತದೆ.

14. ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳೆಂದರೆ (DRP) ಯಾರು? ಅವರ ಪಾತ್ರವೇನು?
PMFME ಫಲಾನುಭವಿಗಳಿಗೆ ಸಹಾಯವಾಗಲೆಂದೇ ನೇಮಿಸಿಕೊಂಡಿರುವ ವ್ಯಕ್ತಿಗಳು. ಇವರು ಫಲಾನುಭವಿಗಳಿಗೆ ಅರ್ಜಿ ಸಲ್ಲಿಕೆಯಲ್ಲಿ ಹಾಗೂ ವಿಸ್ತ್ರತ ಯೋಜನಾ ವರದಿ (DPR) ತಯಾರಿಕೆಯಲ್ಲಿ ಸಹಾಯ ಮಾಡುತ್ತಾರೆ. ಜೊತೆಗೆ, ಘಟಕದ ಸ್ಥಾಪನೆಗೆ ಅಗತ್ಯವಿರುವ ನೋಂದಣಿ, ಪರವಾನಗಿ, FSSAI, udyam, GST ಇತ್ಯಾದಿ ಪ್ರಮಾಣ ಪತ್ರಗಳನ್ನು ಪಡೆಯಲು ಸಹಾಯ ಮಾಡುತ್ತಾರೆ. ಇವರುಗಳಿಗೆ ಫಲಾನುಭವಿಗಳು ಯಾವುದೇ ಶುಲ್ಕ ನೀಡಬೇಕಾಗಿಲ್ಲ. ಬದಲಾಗಿ ಯೋಜನೆಯಡಿಯಲ್ಲಿಯೇ ಪ್ರತಿ ಸಾಲ ಮಂಜೂರಾತಿಗೆ ₹ 20000 ಗೌರವ ಧನವನ್ನು DRP (District Resource Person) ಗಳಿಗೆ ಎರಡು ಕಂತುಗಳಲ್ಲಿ ನೀಡಲಾಗುತ್ತದೆ.

15. ಅರ್ಜಿಗೆ ಶುಲ್ಕವಿದೆಯೆ?
ಇಲ್ಲ, ಸಂಪೂರ್ಣ ಉಚಿತ.

16. ಒಂದು ಕುಟುಂಬದಿಂದ ಒಂದಕ್ಕಿಂತ ಹೆಚ್ಚು ಸದಸ್ಯರು ಅರ್ಜಿ ಹಾಕಬಹುದೆ?
ಇಲ್ಲ, ಒಂದು ಕುಟುಂಬದಿಂದ ಒಬ್ಬರು ಮಾತ್ರ ಅರ್ಹರು. ಕುಟುಂಬವೆಂದರೆ ಗಂಡ-ಹೆಂಡತಿ-ಮಕ್ಕಳು.

17. ಅರ್ಜಿಯ ಪ್ರಸ್ತುತ ಸ್ಥಿತಿ-ಗತಿಯನ್ನು ಹೇಗೆ ತಿಳಿದುಕೊಳ್ಳಬಹುದು?
PMFME ಪೋರ್ಟಲ್ ಅಥವಾ DRP ಗಳ ಮೂಲಕ ತಿಳಿದುಕೊಳ್ಳಬಹುದು.

18. ಬ್ರ್ಯಾಂಡಿಂಗ್ ಹಾಗೂ ಮಾರುಕಟ್ಟೆಗೆ ಯೋಜನೆಯು ಸಹಾಯಧನ ಒದಗಿಸುತ್ತದೆಯೇ?
ರೈತ ಉತ್ಪಾದಕ ಸಂಸ್ಥೆಗಳು/ಕಂಪನಿಗಳು, ಸ್ವ-ಸಹಾಯ ಸಂಘಗಳು, ಸಹಕಾರಿ ಸಂಘಗಳು, ಸರ್ಕಾರಿ ಸಂಸ್ಥೆಗಳು ಮತ್ತು ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ವಿಶೇಷ ಉದ್ದೇಶ ಸಂಸ್ಥೆ (SPV) ಗಳಿಗೆ ಬ್ರ್ಯಾಂಡಿಂಗ್ ಮತ್ತು ಮಾರುಕಟ್ಟೆ ಚಟುವಟಿಕೆಗಳಾದ ಪ್ಯಾಕೇಜಿಂಗ್, ಜಾಹೀರಾತು, ಸಾಮಾನ್ಯ ಬ್ರ್ಯಾಂಡ್‌ಅಭಿವೃದ್ಧಿ, ಚಿಲ್ಲರೆ ಮಾರಾಟ ಸಂಸ್ಥೆಗಳೊಂದಿಗೆ ಒಡಂಬಡಿಕೆ ಇತ್ಯಾದಿಗಳಿಗಾಗಿ ಶೇ 50 ರಷ್ಟು ಸಹಾಯಧನವನ್ನು ಯೋಜನೆ ಒದಗಿಸುತ್ತದೆ.

19. ಯೋಜನೆಯಲ್ಲಿ ಯಾವ ಯಾವ ಚಟುವಟಿಕೆಗಳಿಗೆ ಸಹಾಯಧನ ಸಿಗುವುದಿಲ್ಲ?
- ಸಂಸ್ಕರಣೆ ಮಾಡದ ರಾಗಿ/ಧಾನ್ಯಗಳು/ಸಾಂಬಾರು ಪದಾರ್ಥಗಳ ವ್ಯಾಪಾರ
- ಉತ್ಪನ್ನಗಳ ಸಡಿಲ (Loose pack) ಮಾರಾಟ
- ಸಂಸ್ಕರಣೆ ಮಾಡದ ಅಥವಾ ಸಡಿಲವಾದ ಹಾಲು/ಮೊಸರು ಮಾರಾಟ
- ಹಣ್ಣು ಮತ್ತು ತರಕಾರಿಗಳ ವ್ಯಾಪಾರ ಮತ್ತು ಮಾರಾಟ
- ಸಂಸ್ಕರಣೆ ಮಾಡದ ಕಿರು ಅರಣ್ಯ ಉತ್ಪನ್ನಗಳ ವ್ಯಾಪಾರ ಮತ್ತು ಮಾರಾಟ.
- ಜೇನು/ಕೋಳಿ/ಹಂದಿ/ಮೇಕೆ ಅಥವಾ ಯಾವುದೇ ಪ್ರಾಣಿಗಳ ಯಾವುದೇ ಸಾಕಾಣಿಕೆ/ ಪಾಲನೆ ಚಟುವಟಿಕೆ
- ತಾಜಾ ಮೀನು/ಮಾಂಸ/ಕೋಳಿ ಇತ್ಯಾದಿಗಳ ವ್ಯಾಪಾರ ಮತ್ತು ಮಾರಾಟ
- ಕ್ಯಾಂಟೀನ್, ದಿನಸಿ, ಹೋಟೆಲ್, ಊಟ-ಉಪಹಾರ ಸೇವೆಗಳು, ರೆಸ್ಟೋರೆಂಟ್‌ಗಳ ಅಥವಾ ಯಾವುದೇ ಇತರೆ ಆಹಾರ ಸೇವೆಗಳ ಉದ್ಯಮಗಳು ಈ ಯೋಜನೆಯಡಿ ಸಹಾಯಧನ ಪಡೆಯಲು ಅರ್ಹವಿರುವುದಿಲ್ಲ.

20. ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆಯಿಂದ ಏನು ಪ್ರಯೋಜನಗಳಿವೆ?
ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆಯಿಂದ ಉತ್ಪನ್ನಗಳ ಮಾರುಕಟ್ಟೆ ಮೌಲ್ಯವು ಹೆಚ್ಚಾಗುತ್ತದೆ ಮತ್ತು ಉತ್ಪನ್ನಗಳ ಬಳಕೆಯ ಅವಧಿಯನ್ನು (Shelf life) ಹೆಚ್ಚಿಸುವುದರ ಜೊತೆಗೆ ಕೊಯ್ಲೋತ್ತರ ನಷ್ಟವು ತಗ್ಗುವುದು. ಈ ಮೂಲಕ ರೈತರ ಆದಾಯವನ್ನು ಹೆಚ್ಚಿಸಲು ಹೇರಳ ಅವಕಾಶಗಳು ಸೃಷ್ಟಿಯಾಗುತ್ತವೆ.

21. ಸಣ್ಣ ಮತ್ತು ಅತೀ ಸಣ್ಣ ಆಹಾರ ಸಂಸ್ಕರಣೆದಾರರು ಎದುರಿಸುತ್ತಿರುವ ಸವಾಲುಗಳೇನು?
- ಆಧುನಿಕ ಯಂತ್ರೋಪಕರಣಗಳು ಮತ್ತು ಪ್ಯಾಕೇಜಿಂಗ್ ಕೊರತೆ
- ಆಹಾರ ತಂತ್ರಜ್ಞಾನದ ಅರಿವಿನ ಕೊರತೆ
- ಬಂಡವಾಳ ಹಾಗೂ ಬ್ಯಾಂಕ್ ಸಾಲದ ಕೊರತೆ
- ನೈರ್ಮಲ್ಯ ಮತ್ತು ಉತ್ತಮ ತಯಾರಿಕಾ ವಿಧಾನಗಳ ಅರಿವಿನ ಕೊರತೆ
- ಗುಣಮಟ್ಟ ಹಾಗೂ ಆಹಾರ ಸುರಕ್ಷತಾ ನಿಯಂತ್ರಣ ವ್ಯವಸ್ಥೆಗಳ ಅರಿವಿನ ಕೊರತೆ
- ಬ್ರ್ಯಾಂಡಿಂಗ್ ಮತ್ತು ಮಾರುಕಟ್ಟೆ ಕೌಶಲ್ಯಗಳ ಕೊರತೆ
- ಬಹುರಾಷ್ಟ್ರೀಯ ಕಂಪನಿಗಳ ಉತ್ಪನ್ನಗಳೊಂದಿಗೆ ಕಠಿಣ ಸ್ಪರ್ಧಾತ್ಮಕತೆ.

22. ಸ್ವಸಹಾಯ ಗುಂಪಿನ ಮಹಿಳೆಯರಿಗೆ ಯೋಜನೆಯು ಯಾವ ರೀತಿ ಸಹಾಯ ನೀಡುತ್ತದೆ?
ಆಹಾರ ಸಂಸ್ಕರಣಾ ಚಟುವಟಿಕೆಗಳಲ್ಲಿ ತೊಡಗಿರುವ ಸ್ವಸಹಾಯ ಸಂಘದ ಮಹಿಳೆಯರಿಗೆ ದುಡಿಯುವ ಬಂಡವಾಳ (Working Capital) ಮತ್ತು ಸಣ್ಣ ಉಪಕರಣಗಳ ಖರೀದಿಗಾಗಿ ₹ 40,000 (ಪ್ರತಿ SHG ಗುಂಪಿಗೆ ಗರಿಷ್ಠ ₹ 4 ಲಕ್ಷ) ಗಳನ್ನು ನೀಡಲಾಗುತ್ತದೆ.

23. ಯೋಜನೆಯಡಿಯಲ್ಲಿ ಮೂಲ ಸೌಕರ್ಯ ಸ್ಥಾಪನೆಯ ಅವಕಾಶಗಳ ಬಗ್ಗೆ ಮಾಹಿತಿ ಒದಗಿಸಿ
- ಯೋಜನೆಯಡಿಯಲ್ಲಿ ಗುಂಪುಗಳಿಗೆ (FPO/SHG/ಸರ್ಕಾರಿ ಏಜೆನ್ಸಿ) ಅರ್ಹ ಯೋಜನಾ ವೆಚ್ಚದ ಶೇ 35ರಂತೆ ಸಹಾಯಧನವನ್ನು ಸಾಮಾನ್ಯ ಮೂಲ ಸೌಕರ್ಯ ಸ್ಥಾಪನೆಗೆ ಒದಗಿಸಲಾಗುತ್ತದೆ.
- ವಿಂಗಡಣೆ, ಶ್ರೇಣೀಕರಣ, ವಿಶ್ಲೇಷಣೆ, ಸಂಗ್ರಹಣೆ, ಸಾಮಾನ್ಯ ಸಂಸ್ಕರಣೆ, ಪ್ಯಾಕೇಜಿಂಗ್, ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ಪ್ರಯೋಗಾಲಯಗಳನ್ನು ಈ ಯೋಜನೆಯ ಸಹಾಯದಿಂದ ಸ್ಥಾಪಿಸಬಹುದಾಗಿದೆ.
- ಗರಿಷ್ಟ ಸಹಾಯಧನವು ₹ 3 ಕೋಟಿಯಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ: 080 - 22271192 / 93 / 96 / 97

ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ (KAPPEC) PMFME - State Nodal Agency, ಕೃಷಿ ಇಲಾಖೆ, ಕರ್ನಾಟಕ ಸರ್ಕಾರ
ನಂ.17, ಜನರಲ್ ಕೆ.ಎಸ್. ತಿಮ್ಮಯ್ಯ ರಸ್ತೆ (ರಿಚ್ಮಂಡ್ ರಸ್ತೆ), ಬೆಂಗಳೂರು-560 025

ಸಮಾಚಾರ ಸಣ್ಣದಲ್ಲ

ಮಧುಗಿರಿ: ಎರಡು ವರ್ಷದ ಚಿರತೆ ಸೆರೆ

ಮಧುಗಿರಿ: ತಾಲೂಕು ದೊಡ್ಡೇರಿ ಹೋಬಳಿಯ ಕೃಷ್ಣಸಾಗರ ಗ್ರಾಮದ ಸಣ್ಣ ರಂಗಪ್ಪ ಎಂಬುವರ ಜಮೀನಿನ ಪೊದೆಯಲ್ಲಿ ಅಡಗಿ ಕುಳಿತಿದ್ದ ಎರಡು ವರ್ಷದ ಚಿರತೆಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ಸೆರೆ ಹಿಡಿದಿದ್ದು, ಗ್ರಾಮಸ್ಥರು ನಿಟ್ಟುಸಿರು ಬಿಟ್ಟಿದ್ದಾರೆ. ಎರಡು ದಿನಗಳಿಂದ ಗ್ರಾಮದ ಸುತ್ತಮುತ್ತಲಿನ ಜಮೀನಿನಲ್ಲಿ ಚಿರತೆ ಆಗಾಗ್ಗೆ ಕಾಣಿಸಿಕೊಂಡು ರೈತರಲ್ಲಿ ಆತಂಕವನ್ನುಂಟು ಮಾಡಿತ್ತು. ಪೊದೆಯಲ್ಲಿ ಅಡಗಿ ಕುಳಿತ ಚಿರತೆ ಯನ್ನು ಬಲೆ ಬೀಸಿ ಸೆರೆ ಹಿಡಿಯಲಾಯಿತು. ಅರಣ್ಯ ಅಧಿಕಾರಿ ಸುರೇಶ್, ಮುತ್ತುರಾಜ್ ಹಾಜರಿದ್ದರು.



ಕೆಯುಡಬ್ಲ್ಯುಜೆಗೆ ಅವಿರೋಧ ಆಯ್ಕೆ

ಬೆಂಗಳೂರು: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷರಾಗಿ ಶಿವಾನಂದ ತಗಡೂರು ಸೇರಿದಂತೆ ಪದಾಧಿಕಾರಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಪತ್ರಕರ್ತರ ಸಂಘದ ರಾಜ್ಯ ಮುಖ್ಯ ಚುನಾವಣಾಧಿಕಾರಿ ಎನ್. ರವಿಕುಮಾರ್ ಟೆಲೆಕ್ಸ್ ಅಧಿಕೃತವಾಗಿ ಘೋಷಣೆ ಮಾಡಿದ್ದಾರೆ. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷರಾಗಿ ಶಿವಾನಂದ ತಗಡೂರು, ಉಪಾಧ್ಯಕ್ಷರಾಗಿ ಎಚ್.ಬಿ.ಮದನ ಗೌಡ, ಅಜ್ಜಮಾಡ ರಮೇಶ್ ಕುಟ್ಟಪ್ಪ, ಮತ್ತಿಕೆರೆ ಜಯರಾಮ ಆಯ್ಕೆಯಾಗಿದ್ದು, ಪ್ರಧಾನ ಕಾರ್ಯದರ್ಶಿಯಾಗಿ ಲೋಕೇಶ್ ಜಿ.ಸಿ. ಕಾರ್ಯದರ್ಶಿಯಾಗಿ ನಿಂಗಪ್ಪ ಚಾವಡಿ, ಪುಂಡಲೀಕ ಬಾಲೋಜಿ, ಸೋಮಶೇಖರ ಕೆರೆಗೋಡು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಖಜಾಂಚಿಯಾಗಿ ವಾಸುದೇವ ಹೊಳ್ಳ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ತಿಳಿಸಿದ್ದಾರೆ.



ವಾಚರ್ ಮೇಲೆ ಚಿರತೆ ದಾಳಿ

ಗುಂಡ್ಲುಪೇಟೆ: ತಾಲೂಕಿನ ಯಡವನಹಳ್ಳಿ ಬಳಿ ಕಾರ್ಯಾಚರಣೆ ನಡೆಸುತ್ತಿದ್ದಾಗ ಓಂಕಾರ್ ವಲಯ ಅರಣ್ಯ ಇಲಾಖೆ ವಾಚರ್ ಬಂಗಾರು ಎಂಬುವವರ ಮೇಲೆ ಚಿರತೆ ದಾಳಿ ನಡೆಸಿದ್ದು, ತಲೆಗೆ ಗಂಭೀರ ಗಾಯಗಳಾಗಿವೆ. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಯಡಿಯಾಳ ಉಪವಿಭಾಗದ ಓಂಕಾರ್ ವಲಯಕ್ಕೆ ಸೇರಿದ ಹೊರೆಯಾಲ ಗ್ರಾಮದ ಕುರಿಗಾಹಿ ಜೋಗಯ್ಯ ಅವರು ಯಡವನಹಳ್ಳಿ ಸುತ್ತಮುತ್ತ ಮೇಕೆ ಮೇಯಿಸುತ್ತಿದ್ದಾಗ, ಚಿರತೆ ದಾಳಿ ನಡೆಸಿ ಮೇಕೆಗಳನ್ನು ಕೊಂದಿತ್ತು. ಮಾಹಿತಿ ಪಡೆದ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಸ್ಥಳಕ್ಕೆ ತೆರಳಿ ಕಾರ್ಯಾಚರಣೆ ನಡೆಸಿದ್ದರು. ಪಟಾಕಿ ಸಿಡಿಸಿದ್ದರು. ಪೊದೆಯಲ್ಲಿ ಅಡಗಿದ್ದ ಚಿರತೆಯು ಪಟಾಕಿ ಸದ್ದಿಗೆ ಬೆಚ್ಚಿ ಬಿದ್ದು ವಾಚರ್ ಮೇಳೆ ದಾಳಿ ನಡೆಸಿದೆ.

ಕಾಫಿ ಪುಡಿ ಬೆಲೆ 800 ರು. ಏರಿಕೆ

← ಮೊದಲಪುಟದಿಂದ

ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಮುಂದಿನ ತಿಂಗಳು ಕಾಫಿ ಪುಡಿಯ ಬೆಲೆ 200 ರು. ಮತ್ತೆ ಹೆಚ್ಚಾಗುವ ಸಾಧ್ಯತೆಯಿದೆ. 2024ರಲ್ಲಿ ಪ್ರತಿ ಕೆಜಿಗೆ 300-400 ರು. ಇದ್ದ ಕಾಫಿಪುಡಿ ಬೆಲೆ ಇದೀಗ 1200 ರು.ವರೆಗೂ ಏರಿಕೆಯಾಗಿದೆ. ಕಳೆದ ಒಂದೇ ವರ್ಷದಲ್ಲಿ ಕೆಜಿ ಕಾಫಿ ಪುಡಿ ಬೆಲೆ 200 ರು. ಹೆಚ್ಚಳವಾಗಿದೆ. ಇದರಿಂದ ಹೋಟೆಲ್ ಉದ್ಯಮಕ್ಕೆ ದೊಡ್ಡ ಹೊಡೆತ ಬೀಳಲಿದ್ದು, ಪುಡಿಯ ಬೆಲೆ ಹೆಚ್ಚಳವಾಗುತ್ತಿದ್ದಂತೆಯೇ ಕಾಫಿ ಬೆಲೆ ಹೆಚ್ಚಳ ಮಾಡಲು ಸಾಧ್ಯವಿಲ್ಲ ಎಂದು ಹೋಟೆಲ್ ಅಸೋಸಿಯೇಷನ್ ಅಭಿಪ್ರಾಯಪಟ್ಟಿದೆ. ಮಧ್ಯ ಕೇರಳದ ವ್ಯಾಪಾರಿಗಳು ಮುಖ್ಯವಾಗಿ ವಯನಾಡ್, ಇಡುಕ್ಕಿ ಮತ್ತು ಕೊಡಗು ಜಿಲ್ಲೆಯಿಂದ ಕಾಫಿ ಬೀಜಗಳನ್ನು ಖರೀದಿಸುತ್ತಾರೆ. ಉತ್ಪಾದನೆ ಕುಸಿತದ ಕಾರಣ ಹೇಳಿ ಮಧ್ಯವರ್ತಿಗಳು ಬೆಲೆ ಏರಿಕೆ ಮಾಡಿರುವುದು ಕಾಫಿ ಪುಡಿ ಬೆಲೆ ಏರಿಕೆಗೆ ಕಾರಣವಾಗಿದೆ. ಬೆಂಗಳೂರು ಸೇರಿದಂತೆ ಕರ್ನಾಟಕದ ಬಹುತೇಕ ಜನ ಕಾಫಿಯನ್ನು ಹೆಚ್ಚು ಇಷ್ಟಪಡುತ್ತಾರೆ. ಆದರೆ ಕಾಫಿ ಪ್ರಿಯರಿಗೆ ಬೆಲೆ ಏರಿಕೆಯ ಬಿಸಿ ತಟ್ಟಿದೆ.

ನಮ್ಮದು ಅಭಿವೃದ್ಧಿ ಪರವಾದ, ನುಡಿದಂತೆ ನಡೆಯುತ್ತಿರುವ ಸರಕಾರ: ಮುಖ್ಯಮಂತ್ರಿ ಸಿದ್ದರಾಮಯ್ಯ

ಕಬ್ಬು ಬೆಳೆಗಾರರಿಗೆ ದ್ರೋಹ ಬಗೆದದ್ದು ಜೋಶಿ

ಕೂಡ್ಲಿಗಿ: ಕಬ್ಬಿಗೆ ಎಫ್‌ಆರ್‌ಪಿ ಮತ್ತು ಎಂಎಸ್‌ಪಿ ಎರಡನ್ನೂ ನಿಗದಿ ಮಾಡುವುದು ಕೇಂದ್ರದ ಬಿಜೆಪಿ ಸರಕಾರ. ಕಬ್ಬು ಬೆಳೆಗಾರರಿಗೆ ದ್ರೋಹ ಬಗೆದದ್ದು ಪ್ರಲ್ಹಾದ್ ಜೋಶಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದರು.

ಭಾನುವಾರ ಇಲ್ಲಿ 74 ಕೆರೆ ತುಂಬಿಸುವ ಯೋಜನೆಗೆ ಚಾಲನೆ ಹಾಗೂ ₹1,250 ಕೋಟಿಗೂ ಅಧಿಕ ವೆಚ್ಚದ ವಿವಿಧ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ವಿಜಯೇಂದ್ರ ತಮ್ಮದೇ ಕೇಂದ್ರ ಸರಕಾರ ಕಬ್ಬು ಬೆಳೆಗಾರರಿಗೆ ಮಾಡಿದ ದ್ರೋಹವನ್ನು ಮರೆಮಾಚಿ ಬೆಳಗಾವಿಗೆ ಹೋಗಿ ಪ್ರತಿಭಟನೆಯ ನಾಟಕ ಮಾಡಿದರು. ಅವರು ಕಬ್ಬು ಬೆಳೆದ ರೈತರ ಜತೆಗಲ್ಲ, ಪ್ರಧಾನಿ, ಗೃಹ ಸಚಿವ, ಪ್ರಲ್ಹಾದ ಜೋಶಿ ಮನೆಯಲ್ಲಿ ಮಲಗಬೇಕಿತ್ತು. ಕೇಂದ್ರ ಸರಕಾರ ಕಬ್ಬು ಬೆಳೆಗಾರರಿಗೆ ದ್ರೋಹ ಬಗೆದರೂ ರಾಜ್ಯ ಸರಕಾರ ಹೆಚ್ಚುವರಿ ಹಣ ನೀಡಿ ನಮ್ಮ ಕಬ್ಬು ಬೆಳೆಗಾರರನ್ನು ಕಾಪಾಡುವ ಕೆಲಸ ಮಾಡಿದೆ ಎಂದು ತಿಳಿಸಿದರು.

ನಮ್ಮದು ಅಭಿವೃದ್ಧಿ ಪರವಾದ, ನುಡಿದಂತೆ ನಡೆಯುತ್ತಿರುವ ಸರಕಾರ. ಕಳೆದ ಎರಡು ವರ್ಷಗಳಲ್ಲಿ ಕೂಡ್ಲಿಗಿ ಕ್ಷೇತ್ರಕ್ಕೆ ₹1,750 ಕೋಟಿಗೂ ಅಧಿಕ ಮೊತ್ತದ ಹಣದಲ್ಲಿ ಬೇರೆ ಬೇರೆ ಅಭಿವೃದ್ಧಿ ಕಾರ್ಯಗಳು ನಡೆದಿವೆ. ಜತೆಗೆ ಚುನಾವಣೆ ವೇಳೆ ಐದು ಗ್ಯಾರಂಟಿಗಳನ್ನು ಘೋಷಿಸಿ, ಐದಕ್ಕೆ ಐದನ್ನೂ ಜಾರಿ ಮಾಡಿದ್ದೇವೆ. ರಾಜ್ಯದ ಜನರ ಮನೆ ಬಾಗಿಲಿಗೆ ಪ್ರತಿ ತಿಂಗಳು ಸರಕಾರದ ಗ್ಯಾರಂಟಿಗಳು ತಲುಪುತ್ತಿವೆ. 1.20 ಕೋಟಿ ಕುಟುಂಬಗಳ ಮನೆ ಯಜಮಾನಿಯರಿಗೆ ಗೃಹಲಕ್ಷ್ಮಿ ಹಣ ಮತ್ತು ಗೃಹಜ್ಯೋತಿಯ ಸವಲತ್ತು ತಲುಪುತ್ತಿದೆ. ಎರಡು ವರ್ಷದಲ್ಲಿ ನಮ್ಮ ಸರಕಾರ ₹1 ಲಕ್ಷ ಕೋಟಿಯನ್ನು ನೇರವಾಗಿ ರಾಜ್ಯದ ಜನರ ಜೇಬಿಗೆ ಹಾಕಿದೆ ಎಂದು ಹೇಳಿದರು.

ಅಣೆಕಟ್ಟು ಮುಖ್ಯನೋ, ಬೆಳೆ ಮುಖ್ಯನೊ ವಿಚಾರ ಮಾಡಿ: ಡಿಸಿಎಂ ಡಿ.ಕೆ.ಶಿವಕುಮಾರ್ ಮಾತನಾಡಿ, ತುಂಗಭದ್ರಾ ನೀರನ್ನು ಆಶ್ರಯಿಸಿರುವ ರೈತರು ಎರಡನೇ ಬೆಳೆ ವಿಚಾರದಲ್ಲಿ ರಾಜಕೀಯ ಮಾಡಬಾರದು. ಅಣೆಕಟ್ಟೆ ಮುಖ್ಯನೋ, ಬೆಳೆ ಮುಖ್ಯನೋ ವಿಚಾರ ಮಾಡಬೇಕು. ತುಂಗಭದ್ರಾ ಅಣೆಕಟ್ಟೆಗೆ ರೈತರ ಹಿತದೃಷ್ಟಿಯಿಂದ ಹೊಸ ಗೇಟ್ ಅಳವಡಿಸಲಾಗುತ್ತದೆ, ಇದಕ್ಕೆ ಸಹಕಾರ ನೀಡಬೇಕು ಎಂದರು. ₹800 ಕೋಟಿಗೂ ಹೆಚ್ಚು ಹಣ ಕೆರೆ ತುಂಬಿಸುವ ಯೋಜನೆಗೆ ಬಂದಿದೆ. ಎಲ್ಲ ಕೆರೆಗಳು ಹರಾಜು ಹಾಕಬೇಕು. ಮೀನು ಮರಿಗಳನ್ನು ಬಿಟ್ಟು ಆ ಹಣದಿಂದ ವಿದ್ಯುತ್ ಬಿಲ್ ತುಂಬಲು ಬಳಸಬೇಕು ಎಂದು ಸಲಹೆ ನೀಡಿದರು.

74 ಕೆರೆ ತುಂಬಿಸುವ ಯೋಜನೆಗೆ ಕೂಡ್ಲಿಗಿಯಲ್ಲಿ ಸಿಎಂ ಸಿದ್ದರಾಮಯ್ಯ ಚಾಲನೆ ನೀಡಿದರು. ಈ ವೇಳೆ ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವರಾದ ಸಂತೋಷ್ ಲಾಡ್, ಜಮೀರ್ ಅಹಮದ್ , ಸುಧಾಕರ್, ಬೋಸರಾಜು ಇದ್ದರು.

ಸಿಎಂ ಹೇಳಿದ್ದೇನು?

- ನೋಂದಣಿ ಆಗದ ಎಲ್ಲ ಸಂಘಟನೆ ನಿಷೇಧಿಸಲು ನಾವು ಹೇಳಿದ್ದೇವೆ ಹೊರತು ಬರೀ ಆರ್‌ಎಸ್‌ಎಸ್ ಎಂದು ಹೇಳಿಲ್ಲ. ಆದರೆ ಅವರು ಈ ರೀತಿ ಅರ್ಥಮಾಡಿಕೊಂಡರೋ ಹೇಗೆ ಹೇಳೋದು
- ಜಿಲ್ಲಾ ಮತ್ತು ತಾಲೂಕು ಪಂಚಾಯಿತಿ ಚುನಾವಣೆ ಸಂಬಂಧ ಪ್ರಕರಣ ಹೈಕೋರ್ಟ್‌ನಲ್ಲಿದೆ, ತೀರ್ಪಿನಂತೆ ಕ್ರಮ ವಹಿಸಲಾಗುವುದು.
- ಮೆಕ್ಕೆಜೋಳಕ್ಕೆ ಕೇಂದ್ರ ಸರಕಾರ ಬೆಂಬಲ ಬೆಲೆ ಕೊಡಬೇಕು. ರಾಜ್ಯದಲ್ಲಿ 11 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಹಾನಿಯಾಗಿದ್ದು ರಾಜ್ಯ ಸರಕಾರ ಪರಿಹಾರ ಕೊಡುತ್ತದೆ.
- ಕಬ್ಬು ಬೆಳೆಗೆ ಕನಿಷ್ಠ ಬೆಂಬಲ ಬೆಲೆ ಕಾರ್ಖಾನೆ ಮಾಲೀಕರು ಕೊಡುತ್ತಾರೆ ಎನ್ನುವ ವಿಶ್ವಾಸವಿದೆ. ವಿರೋಧಿಸುವ ಮಾಲೀಕರಾಗಲಿ, ಯತ್ನಾಳ್ ಆಗಲಿ ಅವರ ವಿರುದ್ಧ ಕ್ರಮ ಜರುಗಿಸಲಾಗುವುದು.

ಕೈದಿಗಳಿಗೆ ರಾಜಾತಿಥ್ಯ: ಕ್ರಮಕ್ಕೆ ಸಿಎಂ ಸೂಚನೆ

ಹರಪನಹಳ್ಳಿ: ಪರಪ್ಪನ ಅಗ್ರಹಾರದಲ್ಲಿ ಕೈದಿಗಳಿಗೆ ರಾಜಾತಿಥ್ಯ ಕೊಟ್ಟಿರುವ ಪ್ರಕರಣ ಸಂಬಂಧ ಸೋಮವಾರ ಸಚಿವರು ಅಧಿಕಾರಿಗಳ ಸಭೆ ಕರೆದಿದ್ದು, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲು ಸೂಚಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಮಾಜಿ ಸಚಿವ ಪಿ.ಟಿ.ಪರಮೇಶ್ವರ ನಾಯ್ಕ ಪುತ್ರ ಪಿ.ಟಿ.ಭರತ್ ಮದುವೆಗೆ ಭಾನುವಾರ ಇಲ್ಲಿಗೆ ಆಗಮಿ ಸಿದ್ದಾಗ ಸುದ್ದಿಗಾರರೊಂದಿಗೆ ಮಾತನಾಡಿ, ಜೈಲಿನಲ್ಲಿ ಕಾನೂನುಬಾಹಿರ ಚಟುವಟಿಕೆಗೆ ಅವಕಾಶ ಕೊಟ್ಟವರ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದರು.

ಕೈ ಅಧಿಕಾರದಲ್ಲಿದ್ದರೆ ಚೆಂದ

ಕಮಲ ಕೆರೆಯಲ್ಲಿದ್ದರೆ ಚೆಂದ, ತೆನೆ ಹೊಲದಲ್ಲಿ ಇದ್ದರೆ ಚೆಂದ. ದಾನ ಧರ್ಮ ಮಾಡುವ ಕೈ ಅಧಿಕಾರದಲ್ಲಿದ್ದರೆ ಚೆಂದ. ಹಸ್ತ ವಿರೋಧ ಪಕ್ಷದವರ ಬಾಯನ್ನು ಮುಚ್ಚಿದೆ, ಬೆಲೆ ಏರಿಕೆ ನಿಯಂತ್ರಣ ಮಾಡಿದೆ. ಈ ಹಸ್ತ ಐದು ಗ್ಯಾರಂಟಿ ಕೊಟ್ಟಿದೆ. ಈ ಹಸ್ತ ಗ್ಯಾರಂಟಿ ಮೂಲಕ ಕೈ ಗಟ್ಟಿ ಮಾಡಿದೆ. ಗ್ಯಾರಂಟಿ ಮೂಲಕ ಒಂದು ಲಕ್ಷ ಕೋಟಿ ಮನೆಗೆ ಕೊಟ್ಟಿದ್ದೇವೆ. ಬಿಜೆಪಿಯವರು ಇಂತಹ ಕಾರ್ಯವನ್ನು ಯಾವ ಕಾಲಕ್ಕೂ ಮಾಡಕ್ಕೆ ಆಗಲ್ಲ ಎಂದು ಡಿಕೆಶಿ ಹೇಳಿದರು.

ನಾವು ನುಡಿದಂತೆ ನಡೆದು ಜನರ ಜೇಬಿಗೆ ಹಣ ಹಂಚುತ್ತಿದ್ದರೆ, ಸುಳ್ಳನ್ನೇ ಮನೆ ದೇವರು ಮಾಡಿಕೊಂಡಿರುವ ಬಿಜೆಪಿಯವರು ಮಾನ ಮರ್ಯಾದೆ ಬಿಟ್ಟು ರಾಜ್ಯದ ಜನರಿಗೆ ಸುಳ್ಳುಗಳನ್ನು ಹಂಚುತ್ತಿದ್ದಾರೆ. ಸುಳ್ಳಿನ ಸರದಾರ ಬಿಜೆಪಿಯವರು ಈಗ ಸಾರ್ವಜನಿಕವಾಗಿ ಹರಾಜಾಗಿದ್ದಾರೆ. ಇವರು ಲಜ್ಜೆಗೆಟ್ಟು ಮತಗಳ್ಳತನಕ್ಕೆ ಇಳಿದು ಸಿಕ್ಕಿ ಬಿದ್ದಿದ್ದಾರೆ.

- ಸಿದ್ದರಾಮಯ್ಯ, ಸಿಎಂ

ಗಾಂಧಿ ಭಾರತದ ನೆನಪಿನಲ್ಲಿ 100 ಕಾಂಗ್ರೆಸ್ ಕಚೇರಿಗಳನ್ನು ಸ್ಥಾಪಿಸಲು ಕೆಲವರು ಸೈಟ್ ನೀಡಿಲ್ಲ. ಯಾರು ಸೈಟ್ ನೀಡಿಲ್ಲ ಅವರ ವರದಿಯನ್ನು ದೆಹಲಿಯಿಂದ ಕೇಳಿದ್ದಾರೆ. ವರದಿಯನ್ನು ಕೊಟ್ಟಿದ್ದೇನೆ. ವಿಜಯನಗರ, ಬಳ್ಳಾರಿ ಜಿಲ್ಲೆಯ ಹಲವು ಶಾಸಕರು ಕಾಂಗ್ರೆಸ್ ಕಚೇರಿಗೆ ನಿವೇಶನ ನೀಡಿದ್ದಾರೆ. ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

- ಡಿ.ಕೆ.ಶಿವಕುಮಾರ್ ಡಿಸಿಎಂ

ನಮ್ಮ ಪಕ್ಷದಲ್ಲಿ ಯಾವ ಕ್ರಾಂತಿಯೂ ಇಲ್ಲ

ಸಚಿವ ಸ್ಥಾನ ಹೈಕಮಾಂಡ್‌ಗೆ ಬಿಟ್ಟ ವಿಚಾರ: ಸಂಸದ ತುಕಾರಾಮ್

ಹರಪನಹಳ್ಳಿ: ರಾಜ್ಯ ಸಚಿವ ಸಂಪುಟ ವಿಸ್ತರಣೆಯನ್ನು ಎಲ್ಲರೂ ತಿರುಗಿ ನೋಡುವಂತೆ ಮಾಡುತ್ತೇವೆ. ಶಾಸಕಿ ಅನ್ನಪೂರ್ಣರವರಿಗೆ ಸಚಿವ ಸ್ಥಾನ ನೀಡುವುದು ಕಾಂಗ್ರೆಸ್ ಹೈಕಾಮಂಡ್‌ಗೆ ಬಿಟ್ಟಿದ್ದು ಎಂದು ಬಳ್ಳಾರಿ ಸಂಸದ ಇ.ತುಕಾರಾಮ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು,.ಕಾಂಗ್ರೆಸ್ ಪಕ್ಷದಲ್ಲಿ ಹಿರಿಯರು ಇದ್ದಾರೆ. ಅವರು ಎಲ್ಲವನ್ನು ತೀರ್ಮಾನ ಮಾಡುತ್ತಾರೆ. ಎಲ್ಲಾ ನಿರ್ಧಾರ ಹೈಕಮಾಂಡ್‌ಗೆ ಬಿಟ್ಟ ವಿಚಾರವಾಗಿದ್ದು, ಗಲಾಟೆ ಎನ್ನುವಂತಹದ್ದು ಬಿಜೆಪಿಗೆ ಬಿಟ್ಟಿದ್ದು, ನಮ್ಮಲ್ಲಿ ಯಾವುದೇ ಗಲಾಟೆಗಳಿಲ್ಲ. ಎಲ್ಲವನ್ನು ಹೈಕಮಾಂಡ್ ನಿರ್ಧಾರ ಮಾಡುತ್ತದೆ. ಕಾಂಗ್ರೆಸ್‌ನಲ್ಲಿ ಯಾವುದೇ ನವೆಂಬರ್ ಕ್ರಾಂತಿ ಅನ್ನೋದೇ ಇಲ್ಲ. ಐದು ವರ್ಷ ಆಡಳಿತ ಮಾಡುತ್ತೇವೆ. ಮತ್ತೆ 2028ಕ್ಕೆ ನಮ್ಮ ಸರಕಾರವೇ ಅಧಿಕಾರಕ್ಕೆ ಬರಲಿದೆ ಎಂದರು.

ನವೆಂಬರ್ 16ರಂದು ದೆಹಲಿಯಲ್ಲಿ ಡಿನ್ನರ್ ಪಾರ್ಟಿ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ಎಲ್ಲಾರೂ ಸೇರಿ ಊಟ ಮಾಡೋದು ತಪ್ಪಾ, ರಾಜಕೀಯ ಬೇರೆ, ಮನೆ ಬೇರೆ ಎಲ್ಲಾರೂ ಸೇರಿ ಊಟ ಮಾಡುತ್ತೇವೆ ಎಂದು ಹೇಳಿದರು.

ವಾಲ್ಮೀಕಿ ಸಮಾಜ ತುಳಿಯುವ ಕೆಲಸವನ್ನು ಕಾಂಗ್ರೆಸ್ ಪಕ್ಷ ಮಾಡುತ್ತಾ ಇಲ್ಲ, ನಮ್ಮ ಸಮಾಜದ ಪರವಾಗಿ ಕಾಂಗ್ರೆಸ್ ಪಕ್ಷ ಇದೆ, ನಾನು ಸಹ ಕಾಂಗ್ರೆಸ್‌ನಿಂದ ಸಂಸದನಾಗಿ ಗೆದ್ದು ಜನರ ಪರವಾಗಿ ಕೆಲಸ ಮಾಡುತ್ತಿದ್ದೇನೆ. ಪಕ್ಷ ನಿಷ್ಟೆ ಕುರಿತು ಹೈಕಮಾಂಡಗೆ ಎಲ್ಲಾ ಗೊತ್ತಿದೆ ಯಾರನ್ನು ಸಚಿವರನ್ನಾಗಿ ಮಾಡಬೇಕು ಬಿಡಬೇಕು ಎಂದು ಹೈಕಮಾಂಡ ತೀರ್ಮಾನಿಸಲಿದೆ ಎಂದು ಉತ್ತರಿಸಿದರು.

ಫ್ಲೈಓವರ್‌ಗೆ ಯದುವೀರ್ ವಿರೋಧ ಸಲ್ಲ: ಎಂ.ಲಕ್ಷ್ಮಣ

ಮೈಸೂರು: ವಾಹನಗಳ ದಟ್ಟಣೆ ತಡೆಯುವ ಉದ್ದೇಶದಿಂದ ನಗರದ ಜೆಎಲ್‌ಬಿ ರಸ್ತೆ ಹಾಗೂ ವಿನೋಬಾ ರಸ್ತೆಯಲ್ಲಿ ಫ್ಲೈಓವರ್ ನಿರ್ಮಾಣಕ್ಕೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ವಿರೋಧ ವ್ಯಕ್ತಪಡಿಸಿರುವುದು ಸರಿಯಲ್ಲ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಹೇಳಿದರು.

ಇಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಯೋಜನೆಯಿಂದ ಪರಂಪರೆಗೆ ಧಕ್ಕೆ ಆಗುವುದಿಲ್ಲ. ಆದರೂ ಸಂಸದರು ವಿರೋಧ ವ್ಯಕ್ತಪಡಿಸುತ್ತಿರುವುದೇಕೆ ಎಂಬುದಕ್ಕೆ ಸ್ಪಷ್ಟನೆ ಕೊಡಬೇಕು. ನಾವು ಅಂಬಾವಿಲಾಸ ಅರಮನೆ ಕಟ್ಟಡದ ಮೇಲಾಗಲಿ ಅಥವಾ ಸಮೀಪದಲ್ಲಾಗಲಿ ಫ್ಲೈಓವರ್ ನಿರ್ಮಿಸುತ್ತಿದ್ದೇವೆಯೇ? ಎಂದು ಕೇಳಿದರು. ಯಾವುದೇ ಕಾರಣಕ್ಕೂ ಫ್ಲೈಓವರ್ ಯೋಜನೆಯಿಂದ ಸರಕಾರ ಹಿಂದೆ ಸರಿಯಬಾರದು. ಜನರು ನಮ್ಮೊಂದಿಗಿದ್ದಾರೆ. ಯಾರೋ ಕೆಲವರ ಆಕ್ಷೇಪಗಳಿಗೆ ಮುಖ್ಯಮಂತ್ರಿಯವರು ಮಣೆ ಹಾಕಬಾರದು ಎಂದು ಒತ್ತಾಯಿಸಿದರು. ವಿನೋಬಾ ರಸ್ತೆಯಲ್ಲಿ ಮೆಟ್ರೋಪೋಲ್ ಹೋಟೆಲ್ ಬಳಿಯ ಜಂಕ್ಷನ್‌ನಿಂದ ಹಿನಕಲ್‌ವರೆಗೆ (12 ಕಿ.ಮೀ.) ಫ್ಲೈಓವರ್ ನಿರ್ಮಾಣವಾದರೆ ಬಹಳ ಅನುಕೂಲ ಆಗುತ್ತದೆ ಎಂದರು. ಮೆಟ್ರೋಪೋಲ್‌ನಿಂದ ಹಿನಕಲ್ ಜಂಕ್ಷನ್‌ವರೆಗೆ ಪ್ರಸ್ತುತ ದಿನಕ್ಕೆ ಸರಾಸರಿ 60ಸಾವಿರ ವಾಹನಗಳು ಸಂಚರಿಸುತ್ತಿವೆ. ಇದು ಮುಂದಿನ 10 ವರ್ಷಗಳಲ್ಲಿ 1.90 ಲಕ್ಷಕ್ಕೆ ಏರಿಕೆಯಾಗಲಿದೆ ಎಂದು ನಿರೀಕ್ಷಿಸಲಾಗಿದೆ. ಹೀಗಾಗಿ, ಪರ್ಯಾಯ ವ್ಯವಸ್ಥೆಗೆ ನಮ್ಮ ಸರಕಾರ ಈಗಿನಿಂದಲೇ ಕ್ರಮ ಕೈಗೊಳ್ಳುತ್ತಿದೆ ಎಂದು ಹೇಳಿದರು.

ರ್‍ಯಾಗಿಂಗ್ ಹೆಸರಲ್ಲಿ ಮೂವರು ಬಾಲಕರ ಕಿರುಕುಳ

ಸಹಪಾಠಿಗಳ ಹಲ್ಲೆ: ಬಾಲಕನ ಗುಪ್ತಾಂಗಕ್ಕೆ ಗಂಭೀರ ಗಾಯ

ಮೈಸೂರು: ಶಿಕ್ಷಣ ಹಾಗೂ ಸಂಸ್ಕೃತಿಗೆ ಹೆಸರಾಗಿರುವ ಮೈಸೂರಿನಲ್ಲಿ ಸದ್ದಿಲ್ಲದೆ ನಡೆದ ರ್‍ಯಾಗಿಂಗ್ ಪ್ರಕರಣವೊಂದು ಸಾಂಸ್ಕೃತಿಕ ನಗರಿಯನ್ನು ಬೆಚ್ಚಿ ಬೀಳಿಸಿದೆ.

ಮೈಸೂರಿನ ಪ್ರತಿಷ್ಠಿತ ವಿದ್ಯಾಸಂಸ್ಥೆಯಲ್ಲಿ ಈ ದುರ್ಘಟನೆ ನಡೆದಿದ್ದರೂ, ಈವರೆಗೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದಿರುವುದು ಅನುಮಾನ ಮೂಡಿಸಿದೆ. ಶಾಲೆಯಲ್ಲಿ ಬಾಲಕರಿಂದ ರ್‍ಯಾಗಿಂಗ್ ನಡೆದಿದ್ದು, ಇದನ್ನು ಪ್ರಶ್ನೆ ಮಾಡಿದ 13 ವರ್ಷದ ಬಾಲಕನ ಮೇಲೆ ಹಲ್ಲೆ ಮಾಡಿರುವ ಮೂವರು ಬಾಲಕರು, ಗುಪ್ತಾಂಗಕ್ಕೆ ಒದ್ದು ಗಂಭೀರ ಗಾಯಗೊಳಿಸಿದ್ದಾರೆ.

ಅಕ್ಟೋಬರ್ 25 ರಂದು ಬಾಲಕನನ್ನು ಶೌಚಾಲಯಕ್ಕೆ ಕರೆದುಕೊಂಡು ಹೋಗಿ ಮೂವರು ಸೇರಿ ಗುಪ್ತಾಂಗಕ್ಕೆ ಒದ್ದ ಪರಿಣಾಮ ಒಂದು ವೃಷಣ ಭಾಗಶಃ ಹೋಗಿದೆ. ಹಲ್ಲೆಗೊಳಗಾದ ಬಾಲಕನ ವೃಷಣದ ಆಪರೇಷನ್ ಮಾಡಲಾಗಿದ್ದು, ಈವರೆಗೆ ಲಕ್ಷಾಂತರ ರು. ವೆಚ್ಚವಾಗಿದೆ. ಪ್ರಕರಣ ಗಂಭೀರ ಸ್ವರೂಪದ್ದಾದರೂ ವಿದ್ಯಾಸಂಸ್ಥೆ ಆಡಳಿತ ಮಂಡಳಿಯಾಗಲಿ ಅಥವಾ ಪೋಲಿಸರಾಗಲಿ ಕ್ರಮ ತೆಗೆದುಕೊಳ್ಳದೆ ಮೌನ ವಹಿಸಿರುವುದು ಹಲವು ಹತ್ತು ಅನುಮಾನಗಳಿಗೆ ಕಾರಣವಾಗಿದೆ. ಘಟನೆ ಕುರಿತು ಪ್ರತಿಷ್ಠಿತ ವಿದ್ಯಾಸಂಸ್ಥೆ ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳದ ಹಿನ್ನೆಲೆಯಲ್ಲಿ ನೊಂದ ಬಾಲಕನ ಪೋಷಕರು ನೆರವಿಗಾಗಿ ಮಕ್ಕಳ ಹಕ್ಕುಗಳ ರಕ್ಷಣೆ ಆಯೋಗದ ಕದ ತಟ್ಟಿದ್ದಾರೆ.

ಕ್ಲಾಸ್ ಲೀಡರ್‌ಗೆ ನಿತ್ಯ ಕಿರುಕುಳ

8ನೇ ತರಗತಿಗೆ ಕ್ಲಾಸ್ ಲೀಡರ್ ಆಗಿದ್ದ ಬಾಲಕನಿಗೆ ಮೂವರು ಸಹಪಾಠಿಗಳು ನಾನಾ ಬಗೆಯಾಗಿ ಪೀಡಿಸುತ್ತಿದ್ದರಲ್ಲದೆ, ಪ್ರತಿನಿತ್ಯ ಹಣ ಕೊಡು, ಮೊಬೈಲ್ ತೆಗೆದುಕೊಂಡು ಬಾ, ನಾವು ಹೇಳಿದ ಹಾಗೇ ಮಾಡು ಎಂದು ರ್‍ಯಾಗಿಂಗ್ ಮಾಡುತ್ತಿದ್ದರು ಎಂದು ನೊಂದ ಬಾಲಕ ಸುದ್ದಿಗಾರರಿಗೆ ತಿಳಿಸಿದ್ದಾನೆ.

ನವೆಂಬರ್ 18ಕ್ಕೆ ಸರ್ವಧರ್ಮ ಸಮ್ಮೇಳನ

ಧರ್ಮಸ್ಥಳದಲ್ಲಿ ಲಕ್ಷದೀಪ ವೈಭವ

ಉಜಿರೆ: ನಾಡಿನ ಪವಿತ್ರಕ್ಷೇತ್ರ ಧರ್ಮಸ್ಥಳ ದಲ್ಲಿ ಕಾರ್ತಿಕಮಾಸದಲ್ಲಿ ನಡೆಯುವ ಲಕ್ಷದೀಪೋತ್ಸವ ಕಾರ್ಯಕ್ರಮಗಳು ನ.15 ರಿಂದ 19ರ ವರೆಗೆ ನಡೆಯಲಿವೆ. ನ.18 ರಂದು ಮಂಗಳವಾರ ಸಂಜೆ ಗಂಟೆ ಐದರಿಂದ ಸರ್ವಧರ್ಮ ಸಮ್ಮೇಳನದ 93ನೇ ಅಧಿ ವೇಶನ ನಡೆಯಲಿದೆ. ಸಚಿವ ಡಾ.ಬಿ.ಎಂ.ಪಾಟೀಲ್ ಸರ್ವಧರ್ಮ ಸಮ್ಮೇಳನದ 93ನೇ ಅಧೀವೇಶನ ಉದ್ಘಾಟಿಸುವರು. ಹರಿಹರಪುರದ ಪೂಜ್ಯ ಸ್ವಯಂಪ್ರಕಾಶ್ ಸಚ್ಚಿದಾನಂದ ಸರಸ್ವತೀ ಸ್ವಾಮೀಜಿ ಅಧ್ಯಕ್ಷತೆ, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅತಿಥಿಯಾಗಿ ಪಾಲ್ಗೊಳುವರು. ಪ್ರಜಾವಾಣಿ ಮುಖ್ಯ ಉಪಸಂಪಾದಕ ಎ.ಸೂರ್ಯ ಪ್ರಕಾಶ್ ಪಂಡಿತ್, ಖ್ಯಾತ ಅಂಕಣಕಾರ ತನ್ವೀರ್ ಅಹಮ್ಮದ್ ಉಲ್ಲಾ ಉಪನ್ಯಾಸ ನೀಡುವರು. ನ. 19 ರಂದು ಬುಧವಾರ ಸಂಜೆ 5 ಗಂಟೆಗೆ ಸಾಹಿತ್ಯ ಸಮ್ಮೇ ಳನದ 93ನೇ ಅಧೀವೇಶನವನ್ನು ಹಿರಿಯ ಸಾಹಿತಿ ಮತ್ತು ಅಂಕಣಕಾರ ಪ್ರೊ. ಪ್ರೇಮ ಶೇಖರ ಉದ್ಘಾಟಿಸುವರು. ಖ್ಯಾತ ಲೇಖಕಿ ಶಾಂತಾ ನಾಗಮಂಗಲ, ವಿವೇಕಹಂಸ ಮಾಸಪತ್ರಿಕೆಯ ಸಂಪಾದಕ ಡಾ.ರಘು ವಿ, ಧಾರವಾಡದ ಖ್ಯಾತ ಸಾಹಿತಿ ಡಾ.ಬಿ.ಎಂ.ಶರಭೇಂದ್ರ ಸ್ವಾಮಿ ಉಪನ್ಯಾಸ ನೀಡುವರು. ರಾತ್ರಿ 12 ಗಂಟೆ ಬಳಿಕ ಗೌರಿಮಾರುಕಟ್ಟೆ ಉತ್ಸವದೊಂದಿಗೆ ಲಕ್ಷದೀಪೋತ್ಸವ ನಡೆಯಲಿದೆ. ನಾಡಿನೆಲ್ಲೆಡೆಯಿಂದ ಲಕ್ಷಕ್ಕೂ ಮಿಕ್ಕಿ ಭಕ್ತಾದಿ ಗಳು ಆಗಮಿಸಲಿದ್ದು, ನ. 20 ರ ಗುರುವಾರ ಬೆಳಗ್ಗಿನ ಜಾವ ಲಕ್ಷದೀಪೋತ್ಸವ ಸಂಪನ್ನ ಆಗಲಿದೆ.

ತಿದ್ದುಪಡಿ ತರಲು ಸಚಿವ ಎಚ್.ಕೆ. ಪಾಟೀಲ್‌ಗೆ ಎಂಎಲ್‌ಸಿ ರಮೇಶ್‌ಬಾಬು ಆಗ್ರಹ

‘ಲೋಕಾ’ ಸಿಬ್ಬಂದಿಯೂ ಆಸ್ತಿ ಘೋಷಣೆ ಮಾಡಲಿ

ಬೆಂಗಳೂರು: ಶಾಸಕರು, ಸಚಿವರು ತಮ್ಮ ಆಸ್ತಿ ಘೋಷಿಸಿಕೊಳ್ಳುವ ರೀತಿಯಲ್ಲಿಯೇ ಲೋಕಾಯುಕ್ತ ಸಂಸ್ಥೆಯಲ್ಲಿರುವವರು ಆಸ್ತಿ ಘೋಷಿಸಿಕೊಳ್ಳುವ ರೀತಿಯಲ್ಲಿ ಕಾಯಿದೆಗೆ ತಿದ್ದುಪಡಿಗೆ ತರಬೇಕು ಎಂದು ವಿಧಾನಪರಿಷತ್ ಸದಸ್ಯ ರಮೇಶ್‌ಬಾಬು ಕಾನೂನು ಸಚಿವ ಎಚ್.ಕೆ. ಪಾಟೀಲ್ ಅವರಿಗೆ ಆಗ್ರಹಿಸಿದ್ದಾರೆ.





ಈ ಸಂಬಂಧ ಪತ್ರ ಬರೆದಿರುವ ಅವರು, ಮುಂಬರುವ ಅಧಿವೇಶನದಲ್ಲಿ ರಾಜ್ಯ ಸರಕಾರ ಕಾಯಿದೆಗೆ ತಿದ್ದುಪಡಿ ತಂದು ಕರ್ನಾಟಕ ಲೋಕಾ ಯುಕ್ತ ಸಂಸ್ಥೆಯಲ್ಲಿ ಇರುವ ಲೋಕಾಯುಕ್ತರು, ಉಪ ಲೋಕಾಯುಕ್ತರು ಮತ್ತು ನೌಕರರು ಪ್ರತಿ ವರ್ಷ ತಮ್ಮ ಆಸ್ತಿಗಳನ್ನು ಬಹಿರಂಗಗೊಳಿಸಲು ಕಾಯಿದೆಗೆ ತಿದ್ದುಪಡಿ ತರಬೇಕೆಂದು ಆಗ್ರಹಿಸಿದ್ದಾರೆ.

ತಮ್ಮ ಆಸ್ತಿ ವಿವರಗಳನ್ನು ಜೂನ್ 30ರ ಒಳಗೆ ಸಲ್ಲಿಸದ ಶಾಸಕರ ಪಟ್ಟಿಯನ್ನು ಲೋಕಾಯುಕ್ತ ಕಾಯಿದೆ ಪ್ರಕಾರ ಬಿಡುಗಡೆ ಮಾಡಿರುತ್ತದೆ. ಸಾರ್ವಜನಿಕ ಹಿತದೃಷ್ಟಿಯಿಂದ ಇದು ಅವಶ್ಯಕತೆ ಇರುತ್ತದೆ. ಅದೇ ರೀತಿ ಲೋಕಾಯುಕ್ತ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುವ ಲೋಕಾಯುಕ್ತರು/ಉಪ ಲೋಕಾಯುಕ್ತರು ತಮ್ಮ ಆಸ್ತಿ ಪಟ್ಟಿಯನ್ನು ಪ್ರಕಟಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯಕವಾಗಿರುತ್ತದೆ ಎಂದು ಉಲ್ಲೇಖಿಸಿದ್ದಾರೆ.

ಲೋಕಾಯುಕ್ತರು ಮತ್ತು ಉಪ ಲೋಕಾಯುಕ್ತರು ಸಾರ್ವಜನಿಕ ಹಿತದೃಷ್ಟಿಯಿಂದ ತಮ್ಮ ಆಸ್ತಿಯನ್ನು ಸಾರ್ವಜನಿಕವಾಗಿ ಪ್ರಕಟಿಸಲು ಕಾಯಿದೆ ತರಬೇಕಾಗಿ ಮನವಿ ಮಾಡಿದ್ದೆ. ನನ್ನ ಮನವಿಗೆ ಅನುಗುಣವಾಗಿ ತಿದ್ದುಪಡಿಗೆ ಮುಂದಿನ ಕ್ರಮ ಕೈಗೊಳ್ಳಲು ಸೂಚನೆ ನೀಡಿತ್ತು. ಆದರೆ ಲೋಕಾಯುಕ್ತ ನಿಬಂಧಕರಿಂದ ಆ ಪತ್ರಕ್ಕೆ ಉತ್ತರವಾಗಲಿ ಅಥವಾ ಮಾಹಿತಿಯಾಗಲಿ ನೀಡಿರುವ ಬಗ್ಗೆ ಇದುವರೆಗೆ ಯಾವುದೇ ಮಾಹಿತಿಯನ್ನು ಸಾರ್ವಜನಿಕವಾಗಿ ನೀಡಿಲ್ಲ ಎಂದು ವಿವರಿಸಿದ್ದಾರೆ.

ಆಸ್ತಿ ವಿವರ ಬಹಿರಂಗ ಅನಿವಾರ್ಯ

ಲೋಕಾಯುಕ್ತ ಸಂಸ್ಥೆ ಪಾರದರ್ಶಕವಾಗಿ ನಡೆದುಕೊಳ್ಳಬೇಕಾಗಿರುವುದು ಸಾರ್ವಜನಿಕರ ಹಿತದೃಷ್ಟಿಯಿಂದ ಪ್ರಮುಖವಾಗಿದೆ. ಕರ್ನಾಟಕದಲ್ಲಿ ಹೈಕೋರ್ಟ್ ನ್ಯಾಯಾಧೀಶರು ಸ್ವಯಂಪ್ರೇರಿತವಾಗಿ ತಮ್ಮ ಆಸ್ತಿ ವಿವರಗಳನ್ನು ಪ್ರಕಟಿಸುತ್ತಿದ್ದಾರೆ. ಅದಕ್ಕೆ ಪೂರಕವಾಗಿ ಲೋಕಾಯುಕ್ತ ಕಾಯ್ದೆಗೆ ತಿದ್ದುಪಡಿ ತಂದು ಲೋಕಾಯುಕ್ತರು/ಉಪಲೋಕಾಯುಕ್ತರು ತಮ್ಮ ಆಸ್ತಿಯ ವಿವರಗಳನ್ನು ಬಹಿರಂಗಗೊಳಿಸುವಂತೆ ತಿದ್ದುಪಡಿ ಮಾಡುವುದು ಅನಿವಾರ್ಯವಾಗಿದೆ. ಇದರೊಂದಿಗೆ ಕರ್ನಾಟಕ ಲೋಕಾಯುಕ್ತ ಸಂಸ್ಥೆಯು 2017-18ನೇ ಸಾಲಿನಿಂದ 2021-22ರ ವರೆಗೆ ವಾರ್ಷಿಕ ವರದಿಗಳನ್ನು ವಿಧಾನಮಂಡಲದಲ್ಲಿ ಮಂಡಿಸಿಲ್ಲ ಎಂದಿದ್ದಾರೆ.

ಜೈಲಿನಲ್ಲಿ ಮಜಾ: ತಲೆದಂಡ ಸಂಭವ

← ಮೊದಲಪುಟದಿಂದ

ಆದ್ದರಿಂದ ಸೋಮವಾರ ಗೃಹ ಸಚಿವ ಪರಮೇಶ್ವರ್ ನೇತೃತ್ವದಲ್ಲಿ ಸಭೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮಕೈಗೊಳ್ಳಲು ತೀರ್ಮಾನಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ಪ್ರಕರಣವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗಂಭೀರವಾಗಿ ಪರಿಗಣಿಸಿದ್ದು, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮವಹಿಸುವಂತೆ ಸೂಚನೆ ನೀಡಿದ್ದಾರೆ. ಗೃಹಸಚಿವ ಪರಮೇಶ್ವರ್ ಹಾಗೂ ಎಡಿಜಿಪಿ ದಯಾನಂದ್ ಅವರೊಂದಿಗೆ ಈ ಸಂಬಂಧ ಚರ್ಚಿಸಿರುವ ಅವರು, ಈ ರೀತಿ ಪದೇಪದೇ ಆಗುತ್ತಿರುವುದಕ್ಕೆ ಕಾರಣವೇನು ಎನ್ನುವ ಬಗ್ಗೆ ತನಿಖೆ ನಡೆಸಿ. ಆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಿ ಎಂದು ಸೂಚನೆ ನೀಡಿದ್ದಾರೆ ಎಂದು ತಿಳಿದುಬಂದಿದೆ.

ಪರಪ್ಪನ ಅಗ್ರಹಾರದಲ್ಲಿ ಶೋಧ

ಮೊಬೈಲ್ ಬಳಸುತ್ತಿರುವ ವಿಡಿಯೋಗಳು ವೈರಲ್ ಆಗುತ್ತಿದ್ದಂತೆ ಪರಪ್ಪನ ಅಗ್ರಹಾರ ಜೈಲಿನ ಬ್ಯಾರಕ್‌ಗಳ ಜೈಲಧಿಕಾರಿಗಳು ದಿಢೀರ್ ದಾಳಿ ನಡೆಸಿ 100ಕ್ಕೂ ಹೆಚ್ಚು ಬ್ಯಾರಕ್‌ಗಳು ಪರಿಶೀಲನೆ ಮಾಡಿದ್ದಾರೆ. ಭಾನುವಾರ ಬೆಳಗ್ಗೆಯಿಂದ ಪರಿಶೀಲನೆ ನಡೆಸಲಾಗಿದೆ. ಆದರೆ ಈ ವೇಳೆ ಯಾವುದೇ ಮೊಬೈಲ್‌ಗಳು ಪತ್ತೆಯಾಗಿಲ್ಲ ಎಂದು ತಿಳಿದುಬಂದಿದೆ. ಈ ನಡುವೆ ವಿಕೃತಕಾಮಿ ಉಮೇಶ್ ರೆಡ್ಡಿ ಮೊಬೈಲ್ ಬಳಸುತ್ತಾ ಟಿವಿ ನೋಡುತ್ತಿರುವ, ಲಷ್ಕರ್ ಉಗ್ರ ಮೊಬೈಲ್ ಬಳಸುತ್ತಿರುವ ವಿಡಿಯೋಗಳನ್ನು ಪರಿಶೀಲಿಸಿದಾಗ ಎರಡು ವರ್ಷ ಹಿಂದೆ ಚಿತ್ರೀಕರಿಸಿರುವುದು ಪತ್ತೆಯಾಗಿದೆ. ಜೈಲಿನ ಕೆಲ ಸಿಬ್ಬಂದಿಯಿಂದಲೇ ಪಿತೂರಿ ನಡೆದಿರುವ ಶಂಕೆ ವ್ಯಕ್ತವಾಗಿದ್ದು, ಈ ಬಗ್ಗೆ ಡಿಐಜಿ ಆನಂದ್ ರೆಡ್ಡಿ ಮತ್ತು ಜೈಲಧಿಕಾರಿಗಳಿಂದ ಎಡಿಜಿಪಿ ದಯಾನಂದ್ ಅವರಿಗೆ ಮಾಹಿತಿ ನೀಡಲಾಗಿದೆ ಎಂದು ತಿಳಿದುಬಂದಿದೆ.

ಸಂವಿಧಾನಕ್ಕೆ ಆರ್‌ಎಸ್‌ಎಸ್ ಬದ್ಧ: ಭಾಗವತ್

← ಮೊದಲಪುಟದಿಂದ

ಮಹಾತ್ಮಾ ಗಾಂಧಿ ಹತ್ಯೆ ಪ್ರಕರಣ, ತುರ್ತು ಪರಿಸ್ಥಿತಿ ಮತ್ತು ಅಯೋಧ್ಯೆಯಲ್ಲಿ ಬಾಬರಿ ಮಸೀದಿ ಧ್ವಂಸ ಮಾಡಿದಾಗ ನಿಷೇಧ ಹೇರಲಾಗಿತ್ತು. ಆದರೆ ಈ ಮೂರು ಪ್ರಕರಣಗಳಲ್ಲಿ ಆರ್‌ಎಸ್‌ಎಸ್ ಕೈವಾಡ ಇಲ್ಲದಿ ರುವುದು ಸಾಬೀತಾಗಿದ್ದರಿಂದ ನ್ಯಾಯಾಲಯ ಕೂಡ ಮಧ್ಯಪ್ರವೇಶ ಮಾಡಲಿಲ್ಲ. ನಮ್ಮದು ಸಾಂವಿಧಾನಿಕ ಸಂಸ್ಥೆಯಾಗಿದ್ದು, ನಾವು ಕಾಲಕಾಲಕ್ಕೆ ತೆರಿಗೆ ಕಟ್ಟುತ್ತೇವೆ. ಗುರುದಕ್ಷಿಣೆ ಹೊರತಾಗಿ ಆದಾಯ ತೆರಿಗೆ ಇಲಾಖೆಗೆ ತೆರಿಗೆ ಕಟ್ಟಲು ಸೂಚಿಸಿದೆ. ಎಲ್ಲವೂ ದಾಖಲೆಯಲ್ಲಿವೆ ಎಂದು ಸ್ಪಷ್ಟಪಡಿಸಿದರು.

ಪ್ರಿಯಾಂಕ್ ಭಾಗವತ್‌ಗೆ ಕೇಳಿದ 11 ಪ್ರಶ್ನೆಗಳೇನು?

ಸಂಘ ಪರಿವಾರದ ಚಟುವಟಿಕೆಗಳನ್ನು ಸ್ವಯಂಸೇವಕರು ನೀಡುವ ‘ಗುರುದಕ್ಷಿಣೆ’ ದೇಣಿಗೆಯಲ್ಲಿ ನಿರ್ವಹಿಸಲಾಗುತ್ತದೆ ಎನ್ನುವ ಮೋಹನ್ ಭಾಗವತ್ ಅವರ ಮಾತಿಗೆ ಸಚಿವ ಪ್ರಿಯಾಂಕ್ ಖರ್ಗೆ 11 ಮರು ಪ್ರಶ್ನೆ ಹಾಕಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಈ ಸ್ವಯಂಸೇವಕರು ಯಾರು, ಹೇಗೆ ಗುರುತಿಸಲಾಗುತ್ತದೆ?, ನೀಡಲಾದ ದೇಣಿಗೆಗಳ ಪ್ರಮಾಣ ಮತ್ತು ಸ್ವರೂಪ ಏನು?, ಈ ಕೊಡುಗೆಗಳನ್ನು ಯಾವ ಕಾರ್ಯವಿಧಾನಗಳು ಅಥವಾ ಯಾವ ಮಾರ್ಗಗಳ ಮೂಲಕ ಕೊಡುಗೆ ಸ್ವೀಕರಿಸಲಾಗುತ್ತೆ?, ಆರ್‌ಎಸ್‌ಎಸ್ ಪಾರದರ್ಶಕವಾಗಿ ಕಾರ್ಯನಿರ್ವಹಿಸುತ್ತಿದ್ದರೆ ತನ್ನದೇ ಆದ ನೋಂದಾಯಿತ ಗುರುತಿನಡಿಯಲ್ಲಿ ಸಂಸ್ಥೆಗೆ ನೇರವಾಗಿ ದೇಣಿಗೆಗಳನ್ನು ಏಕೆ ನೀಡಲಾಗುವುದಿಲ್ಲ?, ನೋಂದಾಯಿತ ಘಟಕವಾಗದೆ ಆರ್‌ಎಸ್‌ಎಸ್ ಸಂಘಟನೆ ತನ್ನ ಹಣಕಾಸು, ಸಾಂಸ್ಥಿಕ ರಚನೆ ಹೇಗೆ ಉಳಿಸಿಕೊಳ್ಳುತ್ತೆ?, ಪೂರ್ಣ ಸಮಯದ ಪ್ರಚಾರಕರಿಗೆ ಯಾರು ವೇತನ ನೀಡುತ್ತಾರೆ, ಸಂಸ್ಥೆಯ ದಿನನಿತ್ಯದ ಕಾರ್ಯಾಚರಣೆಯ ವೆಚ್ಚ ಪೂರೈಸುತ್ತಾರೆ? ದೊಡ್ಡ ಪ್ರಮಾಣದ ಕಾರ್ಯಕ್ರಮಗಳು, ಅಭಿಯಾನಗಳು, ಪ್ರಚಾರ ಚಟುವಟಿಕೆಗಳಿಗೆ ಹೇಗೆ ಹಣಕಾಸು ಒದಗಿಸಲಾಗುತ್ತದೆ?, ಸ್ವಯಂಸೇವಕರು ಸ್ಥಳೀಯ ಕಚೇರಿಗಳಿಂದ ಸಮವಸ್ತ್ರ ಅಥವಾ ವಸ್ತುಗಳನ್ನು ಖರೀದಿಸಿದಾಗ, ಈ ಹಣ ಎಲ್ಲಿ ಲೆಕ್ಕಹಾಕಲಾಗುತ್ತೆ?, ಸ್ಥಳೀಯ ಕಚೇರಿಗಳು ಮತ್ತು ಇತರ ಮೂಲಸೌಕರ್ಯಗಳನ್ನು ನಿರ್ವಹಿಸುವ ವೆಚ್ಚವನ್ನು ಯಾರು ಭರಿಸುತ್ತಾರೆ?, ರಾಷ್ಟ್ರೀಯ ಮಟ್ಟದಲ್ಲಿ ವ್ಯಾಪಕವಾದ ಪ್ರಭಾವ ಮತ್ತು ಉಪಸ್ಥಿತಿಯ ಹೊರತಾಗಿಯೂ ನೋಂದಣಿಯಾಗಿಲ್ಲ ಯಾಕೆ?, ಭಾರತದಲ್ಲಿರುವ ಪ್ರತಿಯೊಂದು ಧಾರ್ಮಿಕ ಅಥವಾ ದತ್ತಿ ಸಂಸ್ಥೆಯು ಆರ್ಥಿಕ ಪಾರದರ್ಶಕತೆಯನ್ನು ಕಾಯ್ದುಕೊಳ್ಳಬೇಕಾದಾಗ ಆರ್‌ಎಸ್‌ಎಸ್‌ಗೆ ಇದೇ ರೀತಿಯ ಹೊಣೆಗಾರಿಕೆ ಕಾರ್ಯವಿಧಾನಗಳ ಅನುಪಸ್ಥಿತಿ ಸಮರ್ಥಿಸುವುದು ಏನು? ಎಂದು ಸರಣಿ ಪ್ರಶ್ನೆಗಳನ್ನು ಕೇಳಿದ್ದಾರೆ.

ಕಾದಾಟದಲ್ಲಿ ದಂತ ಕಳೆದುಕೊಂಡ ಕಾಡಾನೆ ಭೀಮ

← ಮೊದಲಪುಟದಿಂದ

ಮುರಿದು ಬಿದ್ದ ಭೀಮನ ದಂತ: ಕ್ಯಾಪ್ಟನ್ ಆಕ್ರೋಶದಿಂದ ಮನೆ ಎದುರು ಇರಿಸಿದ್ದ ನೀರು ತುಂಬಿದ್ದ ಸಿಂಟೆಕ್ಸ್ ಟ್ಯಾಂಕನ್ನು ತನ್ನ ದಂತಗಳಿಂದ ಒಡೆದು ಛಿದ್ರಗೊಳಿಸಿತು. ನಂತರ ಪಕ್ಕದಲ್ಲಿದ್ದ ಎತ್ತಿನ ಗಾಡಿಯತ್ತ ನುಗ್ಗಿದ ಆನೆ ಸೊಂಡಿಲಿನಿಂದ ಗಾಡಿಯನ್ನು ಎತ್ತಿ ಕುಕ್ಕಿತು. ಇದರಿಂದ ಗಾಡಿ ಜಖಂಗೊಂಡಿತು. ನಂತರ ಜರುಗಿದ ಆನೆಗಳ ಭೀಕರ ಕಾಳಗದಲ್ಲಿ ಭಾರಿ ದೈತ್ಯನಾದ ಭೀಮನ ಒಂದು ದಂತವೇ ಮುರಿದು ಬಿದ್ದಿತು. ತನ್ನ ಎರಡೂ ಬೃಹತ್ ದಂತಗಳಿಂದ ತನ್ನ ಗಾಂಭೀರ್ಯದಿಂದ ನಡೆದು ಬರುವ ಕಾರಣಕ್ಕೆ ಅಭಿಮಾನಿಗಳನ್ನು ಸಂಪಾದಿಸಿರುವ ಭೀಮ ಈಗ ಒಂಟಿ ಕೊಂಬನಾಗುವಂತಾಗಿದೆ. ಘರ್ಷಣೆಯಲ್ಲಿ ಕ್ಯಾಪ್ಟನ್ ಕೂಡ ಗಾಯಗೊಂಡಿದ್ದು, ರಕ್ತ ಸುರಿಸುತ್ತಾ ಓಡಾಡಿತು. ಸದ್ಯ ಅರಣ್ಯ ಇಲಾಖೆ ಸಿಬ್ಬಂದಿ ಎರಡೂ ಆನೆಗಳನ್ನು ಪ್ರತ್ಯೇಕಿಸಿ ದೂರ ಅಟ್ಟುವಲ್ಲಿ ಯಶಸ್ವಿಯಾಗಿದ್ದು, ಮದಿಸಿದ ಆನೆಗಳ ಯುದ್ಧದಿಂದ ಗ್ರಾಮದಲ್ಲಿ ಭೀತಿಯ ವಾತಾವರಣ ನಿರ್ಮಾಣವಾಗಿದೆ.

ಭೀಮನಿಗೆ ಅಪಾರ ಅಭಿಮಾನಿಗಳು: ಕಳೆದ ಐದಾರು ವರ್ಷಗಳಿಂದ ಮಲೆನಾಡು ಭಾಗವಾದ ಸಕಲೇಶಪುರ, ಬೇಲೂರು ಹಾಗೂ ಆಲೂರು ತಾಲೂಕಿನಲ್ಲೇ ಬೀಡು ಬಿಟ್ಟಿರುವ ಕಾಡಾನೆ ಭೀಮಾ ಹೆಚ್ಚು ಜನವಸತಿ ಪ್ರದೇಶದಲ್ಲೇ ಸಂಚರಿಸುತ್ತದೆ. ತನ್ನ ಬೃಹತ್ ದಂತ, ಗಾಂಭೀರ್ಯ ನಡಿಗೆಯಿಂದಲೇ ಮಲೆನಾಡುವ ಭಾಗದಲ್ಲಿ ಭೀಮಾ ಅಪಾರ ಅಭಿಮಾನಿಗಳನ್ನು ಸಂಪಾದಿಸಿದೆ. ಸದಾ ಸೌಮ್ಯಸ್ವಭಾವದಿಂದಲೇ ವರ್ತಿಸುವ ಭೀಮಾ ಆನೆ ರಸ್ತೆಯಲ್ಲಿ ನಡೆದುಕೊಂಡು ಬರುತ್ತಿದ್ದರೆ, ಜನ ಆನೆ ಮುಂದೆಯೇ ಹೋಗಿ ಸೆಲ್ಫಿ ಕ್ಲಿಕ್ಕಿಸಿಕೊಳ್ಳುತ್ತಿದ್ದರು.

ಈ ಹಿಂದೆ ಭೀಮ ಆನೆ ಕಾಲಿಗೆ ಗಾಯವಾಗಿ ನಡೆಯಲು ಸಾಧ್ಯವಾಗದ ಸ್ಥಿತಿಯಲ್ಲಿದ್ದ ಇದೇ ಭೀಮನಿಗೆ ಚಿಕಿತ್ಸೆ ನೀಡುವ ಸಲುವಾಗಿ ಕಾರ್ಯಾಚರಣೆ ನಡೆಸುವ ವೇಳೆ ಶಾರ್ಪ್ ಶೂಟರ್ ವೆಂಕಟೇಶ್ ಅವರ ಮೇಲೆ ದಾಳಿ ನಡೆಸಿ ಕೊಂದು ಹಾಕಿತ್ತು. ಈ ಘಟನೆ ಬಳಿಕ ಜನ ಭೀಮನ ಹತ್ತಿರ ಹೋಗಲು ಕೊಂಚ ಹಿಂದೇಟು ಹಾಕುತ್ತಿದ್ದರು.

ಕರಡಿಯೊಂದಿಗೂ ಕಾದಾಡಿದ್ದ ಕ್ಯಾಪ್ಟನ್: ಕ್ಯಾಪ್ಟನ್ ಆನೆ ಈ ಹಿಂದೆ ಕೂಡ ಕರಡಿ ಅಲಿಯಾಸ್ ಬಬ್ರುವಾಹನ ಆನೆಯ ಜೊತೆಗೆ ಸುಮಾರು ಎರಡು ಗಂಟೆಗೂ ಹೆಚ್ಚು ಕಾಲ ಕಾದಾಡಿತ್ತು. ಎರಡು ಆನೆಗಳ ಕಾದಾಟದ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು. ಬಳಿಕ ಅರಣ್ಯ ಇಲಾಖೆ ಕಾರ್ಯಾಚರಣೆ ನಡೆಸಿ ಕರಡಿ ಆನೆಯನ್ನು ಸೆರೆ ಹಿಡಿದು ದುಬಾರೆ ಕ್ಯಾಂಪ್‌ನಲ್ಲಿ ಇರಿಸಿ ತರಬೇತಿ ನೀಡಲಾಗುತ್ತಿದೆ.

ಸಮಾಚಾರ ಸಣ್ಣದಲ್ಲ

ಶೀಘ್ರ 18 ಸಾವಿರ ಶಿಕ್ಷಕರ ನೇಮಕ

ಮಡಿಕೇರಿ: ರಾಜ್ಯದಲ್ಲಿ ಸರಕಾರಿ ಶಾಲೆಗಳಿಗೆ 12,000 ಹಾಗೂ ಅನುದಾನಿತ ಶಾಲೆಗಳಿಗೆ 6,000 ಸೇರಿ ಒಟ್ಟು 18 ಸಾವಿರ ಶಿಕ್ಷಕರ ನೇಮಕಾತಿ ಶೀಘ್ರದಲ್ಲೇ ನಡೆಯಲಿದೆ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದರು. ಕೊಡಗಿನ ಸೋಮವಾರ ಪೇಟೆ ಬಳಿಯ ಬೇಳೂರು ಕುಸುಬೂರು ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಾತನಾಡಿದ ಅವರು, ಸರಕಾರಿ ಶಾಲೆಯನ್ನು ಬಲಪಡಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರಕಾರ ಹಲವು ಕಾರ್ಯಕ್ರಮ ರೂಪಿಸಿದೆ. ಆ ನಿಟ್ಟಿನಲ್ಲಿ ಎಲ್‌ಕೆಜಿ, ಯುಕೆಜಿ ಆರಂಭಿಸಲಾಗಿದೆ ಎಂದರು. ರಾಜ್ಯದ ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ತಲಾ ಒಂದರಂತೆ ಸುಮಾರು 900 ಕೆಪಿಎಸ್ ಶಾಲೆ ಆರಂಭಿಸಲು ಸರಕಾರ ಮಂಜೂರಾತಿ ನೀಡಿದ್ದು, ಸಾರಿಗೆಯನ್ನು ಉಚಿತವಾಗಿ ಕಲ್ಪಿಸಲಾಗುತ್ತದೆ. ಸರಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣಕ್ಕೆ ಒತ್ತು ನೀಡಲಾಗಿದೆ. ಅಗತ್ಯ ಇರುವ ಕಡೆಗಳಲ್ಲಿ ಹೊಸ ಕಟ್ಟಡ ನಿರ್ಮಾಣಕ್ಕೂ ಗಮನ ಹರಿಸಲಾಗಿದೆ. ಸರಕಾರಿ ಶಾಲೆಗಳಿಗೆ ಉಚಿತ ವಿದ್ಯುತ್ ಪೂರೈಸಲಾಗುತ್ತಿದೆ. ಸಂಜೆ ವೇಳೆಯಲ್ಲಿ ವಿಶೇಷ ತರಗತಿ ನಡೆಸಿ ಗುಣಮಟ್ಟ ಹಾಗೂ ಫಲಿತಾಂಶ ಹೆಚ್ಚಳಕ್ಕೆ ಗಮನ ಹರಿಸಲಾಗಿದೆ. ಒಟ್ಟಾರೆ ಸರಕಾರಿ ಶಾಲೆಗಳ ಸುಧಾರಣೆ ಮತ್ತು ಬೆಳವಣಿಗೆಗೆ ಹೆಚ್ಚಿನ ಕಾಳಜಿ ವಹಿಸಲಾಗಿದೆ ಎಂದು ಹೇಳಿದರು.

ಬೈಕ್ ಅಪಘಾತ: ಇಬ್ಬರ ಸಾವು

ನೆಲಮಂಗಲ: ಬೈಕ್ ಅಪಘಾತದಿಂದ ಇಬ್ಬರು ಯುವಕರು ಸ್ಥಳದಲ್ಲೇ ಸಾವ ನ್ನಪ್ಪಿದ ಘಟನೆ ಮಾಗಡಿ ತಾಲೂಕಿನ ರಸ್ತೆ ಪಾಳ್ಯದ ಗಾಂಧಿ ಫಾರಂ ಬಳಿ ನಡೆದಿದೆ. ಬೆಂಗಳೂರು ಮಾರ್ಗವಾಗಿ ಹಾಸನ ಕಡೆ ಸಾಗುವ ವೇಳೆ ಅಪಘಾತ ನಡೆದಿದೆ. ಬೆಳಗ್ಗೆ ಬೈಕಿನಲ್ಲಿ ಹಾಸನದ ಕಡೆ ಬೈಕ್ ರೈಡ್ ಹೊರಟಿದ್ದ ಬೆಂಗಳೂರು ನಗರದ ನಿವಾಸಿಗಳಾದ ಕೇಶವ ಪ್ರಸಾದ್(21) ಮಯೂರ್(20) ಮೃತರು. ಅತೀ ವೇಗದಲ್ಲಿ ಬಂದು ರಸ್ತೆಯ ಡಿವೈಡರ್‌ಗೆ ಬೈಕ್ ಡಿಕ್ಕಿ ಹೊಡೆದು ಅಪಘಾತ ಸಂಭವಿಸುರುವ ಸಾಧ್ಯತೆಯಿದೆ. ಮೃತದೇಹಗಳನ್ನು ಈಗ ನೆಲಮಂಗಲ ಸರಕಾರಿ ಆಸ್ಪತ್ರೆಗೆ ಸಾಗಿಸಲಾ ಗಿದೆ. ಸ್ಥಳಕ್ಕೆ ಕುದೂರು ಪೊಲೀಸರು ಭೇಟಿ ಪರಿಶೀಲನೆ ನಡೆಸಿದ್ದಾರೆ.

ಗೇಟ್ ಬಿದ್ದು ಕೈಗಾ ಯೋಧ ಸಾವು

ಕಾರವಾರ: ತಾಲೂಕಿನ ಕೈಗಾ ಅಣು ವಿದ್ಯುತ್ ಸ್ಥಾವರದ ಒಳ ಆವರಣದಲ್ಲಿ ಕಾವಲಿಗೆ ನಿಂತಿದ್ದ ಕೇಂದ್ರೀಯ ಕೈಗಾರಿಕೆ ಭದ್ರತಾ ಪಡೆಯ (ಸಿಐಎಸ್ಎಫ್) ಹೆಡ್ ಕಾನ್‌ಸ್ಟೆಬಲ್ ಮೈಮೇಲೆ ಗೇಟ್ ಬಿದ್ದು ಅವರು ಮೃತಪಟ್ಟಿದ್ದಾರೆ. ಮಹಾರಾಷ್ಟ್ರದ ಮಹಿಮಾನಗಡ್‌ನವರಾಗಿದ್ದ ಶೇಖರ ಭೀಮರಾವ್ ಜಗದಾಲೆ (48) ಮೃತ. ಅತಿ ಭಾರದ ಗೇಟ್ ಮೈಮೇಲೆ ಬಿದ್ದಿದ್ದರಿಂದ ಗಂಭೀರ ಗಾಯಗೊಂಡಿದ್ದ ಅವರನ್ನು ಕೈಗಾದ ಕೆಜಿಎಸ್ ಆಸ್ಪತ್ರೆಗೆ ಕರೆತರುವಷ್ಟರಲ್ಲಿಯೇ ಮೃತಪಟ್ಟಿದ್ದರು ಎಂದು ಮಲ್ಲಾಪುರ ಠಾಣೆ ಪೊಲೀಸರು ತಿಳಿಸಿದ್ದಾರೆ. ಅಣು ತ್ಯಾಜ್ಯ ವಿಲೇವಾರಿ ಘಟಕದ ಗೇಟ್ ಎದುರು ಶನಿವಾರ ರಾತ್ರಿ ಪಾಳಿಯಲ್ಲಿ ಕರ್ತವ್ಯದಲ್ಲಿದ್ದ ಶೇಖರ ಅವರ ಮೇಲೆ ಗೇಟ್ ಕುಸಿದು ಬಿದ್ದು ತಲೆಗೆ ಬಲವಾದ ಏಟು ಬಿದ್ದಿತ್ತು. ಅವರ ಕಿರುಚಾಟ ಕೇಳಿದ ಎಸ್‌ಟಿಎಫ್ ಸಿಬ್ಬಂದಿ ಪ್ರಾಥಮಿಕ ಚಿಕಿತ್ಸೆ ಕೇಂದ್ರಕ್ಕೆ ಕರೆದೊಯ್ದರು. ಅಲ್ಲಿಂದ ಹೆಚ್ಚಿನ ಚಿಕಿತ್ಸೆಗೆ ಕರೆದೊಯ್ಯುವಷ್ಟರಲ್ಲಿ ಶೇಖರ ಮೃತಪಟ್ಟಿದ್ದರು ಎಂದು ಅಣು ಸ್ಥಾವರದ ಮೂಲಗಳು ತಿಳಿಸಿವೆ.

ನಟ ಕೆ.ಎಸ್.ಅಶ್ವತ್ಥ್ ಪತ್ನಿ ವಿಧಿವಶ

ಮೈಸೂರು: ಖ್ಯಾತ ಚಲನಚಿತ್ರ ನಟ ದಿವಂಗತ ಕೆ.ಎಸ್.ಅಶ್ವತ್ಥ್ ಅವರ ಧರ್ಮಪತ್ನಿ ಶಾರದಾ ಅವರು ಭಾನುವಾರ ಮೈಸೂರಿನಲ್ಲಿ ವಿಧಿವಶರಾದರು. ಅವರಿಗೆ 97 ವರ್ಷ ವಯಸ್ಸಾಗಿತ್ತು. ಕಳೆದ ಕೆಲ ದಿನಗಳಿಂದ ವಯೋಸಹಜ ಅನಾರೋಗ್ಯಕ್ಕೆ ಈಡಾಗಿದ್ದ ಅವರು ಭಾನುವಾರ ಸಂಜೆ ಮೈಸೂರಿನ ಸರಸ್ವತಿಪುರಂ ಬಡಾವಣೆಯ ಲ್ಲಿರುವ ನಿವಾಸದಲ್ಲಿ ಅಸುನೀಗಿ ದರು. ಅವರಿಗೆ ನಟ ಶಂಕರ್ ಅಶ್ವತ್ಥ್ , ಸೊಸೆ, ಮೊಮ್ಮಕ್ಕಳು ಇದ್ದಾರೆ. ಮೃತರ ಅಂತ್ಯಕ್ರಿಯೆ ಸೋಮವಾರ ಬೆಳಗ್ಗೆ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ವಿಶ್ವವಾಣಿ ಕ್ಲಬ್ ಹೌಸ್
10.11.2025
ಸಂಜೆ: 06.55 ರಿಂದ 08.05 ರವರೆಗೆ

ಸೋಮವಾರದ ಅತಿಥಿ
ಶ್ರೀ ನಾ. ನಾಗರಾಜ್
ವಿಷಯ
"ವಂದೇ ಮಾತರಂ" 150 ವರ್ಷ
vishwavani.news

ಯಾವುದೇ ಧರ್ಮದ ಭಾರತ ಮಾತೆಯ ಪುತ್ರರಿಗೆ ಆರ್‌ಎಸ್‌ಎಸ್‌ನಲ್ಲಿ ಅವಕಾಶವಿದೆ: ಮೋಹನ್ ಭಾಗವತ್

ರಾಷ್ಟ್ರನೀತಿಗೆ ಬೆಂಬಲವೇ ವಿನಃ ರಾಜನೀತಿಗಲ್ಲ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ದೇಶದ ಕೆಲಸಕ್ಕೆ ಇಡೀ ದೇಶದ ಮನಸ್ಸುಗಳು ಮುಂದಾದರೆ ನಾಳೆ ಬೆಳಗ್ಗೆಯೇ ಹಿಂದೂ ರಾಷ್ಟ್ರದ ಪರಿಕಲ್ಪನೆ ಸಾಕಾರವಾಗುತ್ತದೆ ಎಂದು ಆರ್‌ಎಸ್‌ಎಸ್ ಸರಸಂಘಚಾಲಕ ಡಾ.ಮೋಹನ್ ಭಾಗವತ್ ಅಭಿಪ್ರಾಯಪಟ್ಟಿದ್ದಾರೆ.

ಪಿಇಎಸ್ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ 'ಸಂಘದ 100 ವರ್ಷದ ಪಯಣ: ನವ ಕ್ಷಿತಿಜ' ಉಪನ್ಯಾಸ ಮಾಲೆಯ ಎರಡನೇ ದಿನ ನಡೆದ ಸಂವಾದ ಕಾರ್ಯಕ್ರಮದಲ್ಲಿ 'ಭಾರತದ ಯುವಕರ ಮನವೊಲಿಸಿ ಶೀಘ್ರದಲ್ಲಿ ಹಿಂದೂ ರಾಷ್ಟ್ರವಾಗಿಸಲು ಯಾವ ಪ್ರಯತ್ನ ಮಾಡಬೇಕು?' ಎನ್ನುವ ಪ್ರಶ್ನೆಗೆ ಉತ್ತರಿಸಿದ ಅವರು, ಭೂಮಿಯಿಂದ ಚಂದ್ರನನ್ನು ಸಂಪರ್ಕಿಸಲು ಎಷ್ಟು ಮೀನುಗಳು ಬೇಕು ಎಂದು ವಿಜ್ಞಾನಿಯೊಬ್ಬರನ್ನು ಪ್ರಶ್ನಿಸಿದಾಗ, ಸಾಕಷ್ಟು ಉದ್ದವಿದ್ದರೆ ಒಂದೇ ಮೀನು ಸಾಕು ಎಂದು ಉತ್ತರಿಸಿದರಂತೆ. ಹಾಗೆಯೇ, 142 ಕೋಟಿ ಜನರು ಮನಸ್ಸಿಟ್ಟು ದೇಶದ ಕೆಲಸವನ್ನು ಮಾಡಲು ಮುಂದಾದರೆ ನಾಳೆ ಬೆಳಗ್ಗೆಯೇ ಹಿಂದೂ ರಾಷ್ಟ್ರ ಸಾಕಾರವಾಗುತ್ತದೆ. ಹಾಗೆ ಮಾಡದೇ ಇದ್ದರೆ, ಎಷ್ಟು ಸಮಯ ಬೇಕಾಗುತ್ತದೆ ಎಂದು ಯಾರೂ ಹೇಳಲು ಸಾಧ್ಯವಿಲ್ಲ. ಅದು ಸಾಧ್ಯವಾಗುತ್ತದೆ ಎಂಬ ನಂಬಿಕೆ ನಮಗಿದೆ, ಅದು ಪೂರ್ಣವಾಗುವವರೆಗೂ ಮುಂದು ವರಿಸುತ್ತೇವೆ ಎಂದರು.

- **ಮುಸ್ಲಿಮರಲ್ಲಿಯೂ ಒಳ್ಳೆಯವರು, ಕೆಟ್ಟವರಿದ್ದಾರೆ; ಒಳ್ಳೆಯವರಿಗೆ ಸಂಘದಲ್ಲಿ ಅವಕಾಶವಿದೆ**
- **142 ಕೋಟಿ ಜನರು ಮನಸ್ಸು ಮಾಡಿದರೆ ನಾಳೆ ಬೆಳಗ್ಗೆಯೇ ಹಿಂದೂ ರಾಷ್ಟ್ರ ಸಾಕಾರ**
- **ಹಿಂದೂ ಎನ್ನುವುದು ಎಲ್ಲರನ್ನೂ ಒಳಗೊಳ್ಳುವ ಒಂದು ನಡವಳಿಕೆ. ಬಲಿಷ್ಠ ಭಾರತವೇ ಸಂಘದ ಗುರಿ**

'ಜಾತ್ಯತೀತ ಹಿಂದೂಗಳನ್ನು ಸರಿಪಡಿಸುವುದು ಹೇಗೆ?' ಎನ್ನುವ ಪ್ರಶ್ನೆಗೆ ಉತ್ತರಿಸಿದ ಅವರು, ಪಶ್ಚಿಮದಲ್ಲಿ ರಾಜ ಹಾಗೂ ಪೋಪ್ ನಡುವೆ ಉಂಟಾದ ಸಂಘರ್ಷಕ್ಕೆ ಪರಿಹಾರವಾಗಿ ಜಾತ್ಯತೀತ ಹುಟ್ಟುಕೊಂಡಿತು.

ಹಿಂದೂ ಎನ್ನುವುದು ಎಲ್ಲರನ್ನೂ ಒಳಗೊಳ್ಳುವ ಒಂದು ನಡವಳಿಕೆ. ಆ ನಡವಳಿಕೆಯಿಂದ ಯಾರೇ ಸರಕಾರ ನಡೆಸಿದರೂ ಆ ಸರಕಾರವೂ ಜಾತ್ಯತೀತವಾಗಿರುತ್ತದೆ. ಪಾಕಿಸ್ತಾನ, ಬಾಂಗ್ಲಾದೇಶಗಳು ಜಾತ್ಯತೀಯ ಆಗಿವೆಯೇ? ಭಾರತ ಮಾತ್ರ ಏಕೆ ಜಾತ್ಯತೀತ ಆಯಿತು ಎಂದರೆ, ನಮ್ಮ ಸಂವಿಧಾನವನ್ನು ರಚಿಸಿದವರು, ಹಿಂದೂಗಳೇ ಆಗಿದ್ದರು. ನೈಜ ಹಿಂದೂಗಳನ್ನು ಸರಿಪಡಿಸಬೇಕಾದ ಅಗತ್ಯವಿಲ್ಲ. ಹಿಂದೂಗಳು ಎಂದಿಗೂ ಜಾತ್ಯತೀತ ಆಡಳಿತಕ್ಕೇ ಮುಂದಾಗುತ್ತಾರೆ ಎಂದು ಅಭಿಪ್ರಾಯಪಟ್ಟರು.

ರಾಜಕೀಯೇತರ ಸಂಘಟನೆ: 'ಸಂಘ ಪರಿವಾರ ಯಾವ ರಾಜಕೀಯ ಪಕ್ಷವನ್ನೂ ಏಕೆ ಬೆಂಬಲಿಸುವುದಿಲ್ಲವೇ?' ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಸಂಘವು ಸಮಾಜವನ್ನು ಒಗ್ಗೂಡಿಸಲು ಕೆಲಸ ಮಾಡುತ್ತದೆ. ಹಾಗೆ ನೋಡಿದರೆ ರಾಜಕೀಯ ಕ್ಷೇತ್ರ ಎನ್ನುವುದು ಅದರ ಮೂಲ ಸ್ವಭಾವದಲ್ಲೇ ಸಮಾಜ ದಲ್ಲಿ ಭಿನ್ನತೆಯನ್ನು ಹೆಚ್ಚಿಸುತ್ತದೆ. ಹಾಗಾಗಿ ನಾವು ರಾಜಕೀಯದಿಂದ ದೂರವಿದ್ದೇವೆ. ನಾವು ನೀತಿ ಯನ್ನು ಬೆಂಬಲಿಸುತ್ತೇವೆ. ಈಗಂತೂ ನಾವೊಂದು ಶಕ್ತಿಯಾಗಿದ್ದೇವೆ, ಹಾಗಾಗಿ ಉತ್ತಮ ನೀತಿಗಳನ್ನು ಬೆಂಬಲಿಸಲು ಈ ಶಕ್ತಿಯನ್ನು ಬಳಸುತ್ತೇವೆ. ವ್ಯಕ್ತಿ, ಪಕ್ಷವನ್ನಲ್ಲ, ನೀತಿಗೆ ನಮ್ಮ ಬೆಂಬಲ. ಉದಾಹರಣೆಗೆ, ರಾಮಮಂದಿರ ಬೇಕೆಂದು ಬಯಸಿದೆವು. ಯಾರು ಈ ನಿರ್ಮಾಣಕ್ಕೆ ಬೆಂಬಲಿಸಿದರೋ ಆ ಪಕ್ಷ ಬಿಜೆಪಿಯನ್ನು ಸ್ವಯಂಸೇವಕರು ಬೆಂಬಲಿಸಿದರು. ಕಾಂಗ್ರೆಸ್ ಇದಕ್ಕೆ ಮುಂದಾಗಿದ್ದರೆ ಬಹುಶಃ ಸ್ವಯಂ ಸೇವಕರು ಆ ಪಕ್ಷವನ್ನೂ ಬೆಂಬಲಿಸುತ್ತಿದ್ದರು. ನಮಗೆ ಒಂದು ಪಕ್ಷದ ಮೇಲೆ ವಿಶೇಷ ಪ್ರೀತಿ ಇಲ್ಲ. ಸಂಘದ ಪಕ್ಷ ಎನ್ನುವುದು ಯಾವುದೂ ಇಲ್ಲ, ಎಲ್ಲ ಪಕ್ಷಗಳೂ ನಮ್ಮವೇ. ನಾವು ರಾಷ್ಟ್ರನೀತಿಯನ್ನು ಬೆಂಬಲಿಸುತ್ತೇವೆಯೇ ವಿನಃ ರಾಜನೀತಿಯನ್ನಲ್ಲ ಎಂದು ಸ್ಪಷ್ಟಪಡಿಸಿದರು.

ಹಿಂದೂ ರಾಷ್ಟ್ರಕ್ಕೆ ಪ್ರಚಾರ ಬೇಕೆನ್ನಿಸುವುದಿಲ್ಲ. ತಮಿಳುನಾಡಿನಲ್ಲಿಯೂ ಬೇಕಿಲ್ಲ. ದ್ರಾವಿಡಿಯನ್ ಪಕ್ಷಗಳೇನೋ ಇವೆ, ಆದರೆ ಅವರು ದೇವಸ್ಥಾನಕ್ಕೆ ಹೋಗುವುದಿಲ್ಲವೇ? ಪೂಜೆಯನ್ನು ಹೊರತು ಪಡಿಸಿದರೂ ಪೊಂಗಲ್ ಆಚರಣೆ ಮಾಡುವುದಿಲ್ಲವೇ? ಬಾಯಿಮಾತಿಗಾದರೂ, ನಮಗೆ ಎಲ್ಲ ಮತಗಳೂ ಒಂದೇ ಎನ್ನುವುದಿಲ್ಲವೇ? ದ್ರಾವಿಡ ರಾಜಕಾರಣಿಗಳನ್ನೂ ಹಿಂದೂಗಳಾಗಿಯೇ ಕಾಣಿ, ಅವರೂ ಹಿಂದೂಗಳು ಎಂದು ತಿಳಿದೇ ವ್ಯವಹರಿಸಿ, ಅವರನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುತ್ತೀರಿ, ಚೆನ್ನಾಗಿ ನಿರ್ವಹಣೆ ಮಾಡಬಲ್ಲೆವು. ಅವರು ಸಹಜವಾಗಿ ಹಿಂದೂಗಳಾಗಿಯೇ ರೂಪಿತರಾಗಿದ್ದಾರೆ, ಎಲ್ಲಿಯೂ ಹೋಗುವುದಿಲ್ಲ, ಆತಂಕ ಬೇಡ ಎಂದರು.

ನಗರದ ಪಿಇಎಸ್ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ 'ಸಂಘದ 100 ವರ್ಷದ ಪಯಣ: ನವ ಕ್ಷಿತಿಜ' ಉಪನ್ಯಾಸ ಮಾಲೆಯ ಎರಡನೇ ದಿನ ನಡೆದ ಸಂವಾದ ಕಾರ್ಯಕ್ರಮದಲ್ಲಿ 'ಭಾರತದ ಯುವಕರ ಮನವೊಲಿಸಿ ಶೀಘ್ರದಲ್ಲಿ ಹಿಂದೂ ರಾಷ್ಟ್ರವಾಗಿಸಲು ಯಾವ ಪ್ರಯತ್ನ ಮಾಡಬೇಕು ಎನ್ನುವ ವಿಷಯದ ಮೇಲೆ ಆರ್‌ಎಸ್‌ಎಸ್ ಸರಸಂಘಚಾಲಕ ಡಾ.ಮೋಹನ್ ಭಾಗವತ್ ಸಂವಾದ ನಡೆಸಿದರು. ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಹಾಜರಿದ್ದರು.

ಎಲ್ಲರೂ ಒಂದೇ ಅಲ್ಲ

ಎಲ್ಲ ಮುಸ್ಲಿಮರನ್ನೂ ಒಂದೇ ಚೌಕಟ್ಟಿಗೆ ತರ ಬಾರದು. ಜಿಹಾದಿ, ಗಜ್ವಾ, ಲವ್ ಜಿಹಾದ್. ಮುಸ್ಲಿಮರಲ್ಲಿಯೂ ದೊಡ್ಡ ವರ್ಗವು ಇವು ಎನ್ನಬಹುದು. ಆದರೆ ಇದೆಲ್ಲವನ್ನೂ ತಿರಸ್ಕರಿಸುವ ಮುಸ್ಲಿಮರೂ ಇದ್ದಾರೆ, ಅವರನ್ನು ಅರಿಯ ಬೇಕು, ಸಂಪರ್ಕಿಸಬೇಕು. ಮೂಲ ಭೂತವಾದಿಗಳ ಸಂಖ್ಯೆಯೂ ಗಣನೀಯ ವಾಗಿದೆ. ಹಾಗಾಗಿ ಇಡೀ ಮುಸ್ಲಿಂ ಸಮುದಾಯವನ್ನು ಒಂದು ಚೌಕಟ್ಟಿನಲ್ಲಿ ತರ ಬಾರದು. ತಂತ್ರವಾಗಿಯೂ ಇದು ಸರಿಯಲ್ಲ. ಹೀಗೆ ಮಾಡುವುದರ ಮೂಲಕ ನೀವಾಗಿಯೇ ಮೂಲಭೂತವಾದಿಗಳ ಸಂಖ್ಯೆಯನ್ನು ಹೆಚ್ಚಿಸುತ್ತಿದ್ದೀರಿ ಭಾಗವತ್ ಹೇಳಿದರು.

ತ್ರಿವರ್ಣ ಧ್ವಜದ ಬಗ್ಗೆ ಹೆಚ್ಚಿನ ಗೌರವವಿದೆ

'ಆರ್‌ಎಸ್‌ಎಸ್ ಕೇಸರಿ ಧ್ವಜಗಳನ್ನು ಮಾತ್ರ ಗೌರವಿಸುತ್ತದೆ ಮತ್ತು ಭಾರತದ ತ್ರಿವರ್ಣ ಧ್ವಜವನ್ನು ಗೌರವಿಸುವುದಿಲ್ಲ' ಎಂಬ ವಿಷಯದ ಕುರಿತು ಪ್ರತಿಕ್ರಿಯಿಸಿದ ಭಾಗವತ್, ಆರ್‌ಎಸ್‌ಎಸ್‌ನಲ್ಲಿ ಕೇಸರಿಯನ್ನು ಗುರು ಎಂದು ಪರಿಗಣಿಸಲಾಗುತ್ತದೆ. ಆದರೆ ಭಾರತೀಯ ತ್ರಿವರ್ಣ ಧ್ವಜದ ಬಗ್ಗೆ ಹೆಚ್ಚಿನ ಗೌರವವನ್ನು ಹೊಂದಿದೆ. ನಾವು ಯಾವಾಗಲೂ ನಮ್ಮ ತ್ರಿವರ್ಣ ಧ್ವಜವನ್ನು ಗೌರವಿಸುತ್ತೇವೆ, ಗೌರವ ಸಲ್ಲಿಸುತ್ತೇವೆ ಮತ್ತು ರಕ್ಷಿಸುತ್ತೇವೆ ಎಂದು ಸ್ಪಷ್ಟಪಡಿಸಿದರು. ಸಂಘದಲ್ಲಿ ಜಾತಿ, ಲಿಂಗ, ಮುಸ್ಲಿಂ, ಕ್ರೈಸ್ತ, ಬ್ರಾಹ್ಮಣ, ಶೈವ ಎಂಬ ಪಂಥಗಳಿಗೆ ಅವಕಾಶ ಇಲ್ಲ. ಯಾವುದೇ ಧರ್ಮದವರು ಶಾಖೆಗೆ ಬರಬಹುದು. ಆದರೆ ಶಾಖೆಗೆ ಬರುವವರು ತಮ್ಮ ಧರ್ಮವನ್ನು ಹೊರಗಿಟ್ಟು, ಭಾರತ ಮಾತೆಯ ಮಕ್ಕಳಾಗಿ ಬರಬೇಕು. 'ಮೆಂಬರ್ ಆಫ್ ದಿ ಹಿಂದೂ ಸೊಸೈಟಿ' ಅಡಿಯಲ್ಲಿ ಮುಸ್ಲಿಂ, ಕ್ರೈಸ್ತ ಯಾರು ಬೇಕಾದರೂ ಶಾಖೆಗೆ ಬರಬಹುದು. ನೀವು ಹಿಂದೂ ಸಮಾಜವನ್ನು ಒಪ್ಪಿಕೊಂಡು ಬಂದರೆ ನೀವು ಯಾವ ಧರ್ಮದವರೆಂದು ನಾವು ಕೇಳುವುದಿಲ್ಲ ಎಂದರು.

> ಭಾರತದಿಂದ ರಫ್ತು ಮಾಡುವ ಬೀಫ್‌ನಲ್ಲಿ ಗೋಮಾಂಸವನ್ನು ನಿಷೇಧಿಸಲಾಗಿದೆ ಎಂದು ಕೇಂದ್ರ ಸರಕಾರ ತಿಳಿಸುತ್ತದೆ. ಆದರೆ ಮಾಂಸವನ್ನಾದರೂ ಏಕೆ ರಫ್ತು ಮಾಡಬೇಕು ಎಂಬ ಪ್ರಶ್ನೆಯಿದೆ. ಸರಕಾರಿ ವ್ಯವಸ್ಥೆಯಲ್ಲಿ ಸಸ್ಯಾಹಾರವನ್ನು ಪ್ರೋತ್ಸಾಹಿಸಬೇಕು ಎಂದರೆ ಬಹಳಷ್ಟು ಪ್ರಕ್ರಿಯೆ ನಡೆಯಬೇಕಾಗುತ್ತದೆ. ಏಕೆಂದರೆ ನಮ್ಮ ಹಿಂದೂ ಸಮಾಜದಲ್ಲಿ ಶೇ.72 ಜನರು ಮಾಂಸಾಹಾರ ಸೇವಿಸುತ್ತಾರೆ.
>
> **- ಡಾ.ಮೋಹನ್ ಭಾಗವತ್**
> ಆರ್‌ಎಸ್‌ಎಸ್ ಸರಸಂಘಚಾಲಕ

ಲವ್ ಜಿಹಾದಿಗೆ ಬೀಳದಂತೆ ಬೆಳೆಸೋದು ನಮ್ಮ ಕೈಲಿದೆ

ಲವ್ ಜಿಹಾದ್‌ಗೆ ಸಂಬಂಧಿಸಿದಂತೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಮೋಹನ್ ಭಾಗವತ್ ಅವರು, ಈ ವಿಷಯದಲ್ಲಿ ಬೇರೆ ಧರ್ಮೀಯರು ಏನು ಮಾಡುತ್ತಾರೆ ಎಂದು ಚಿಂತಿಸಬೇಡಿ. ನಾವು ಏನು ಮಾಡಬೇಕು ಎನ್ನುವುದರ ಬಗ್ಗೆ ಆಲೋಚನೆ ಮಾಡಿ. ಜಿಹಾದ್ ಬೇರೆಯವರು ಇವತ್ತಿನಿಂದ ಮಾಡುತ್ತಿಲ್ಲ. ತುಂಬಾ ವರ್ಷಗಳಿಂದ ಮಾಡುತ್ತಿದ್ದಾರೆ. ಲವ್ ಜಿಹಾದ್ ಆಗುವಾಗ ನಾವು ಏನು ಮಾಡಬೇಕು? ಹಿಂದೂ ಹೆಣ್ಣು ಮಕ್ಕಳು ಕೆಲವು ಆಕರ್ಷಣೆಗೆ ಒಳಗಾಗಿ ಮೂರ್ಖರಾಗುತ್ತಿದ್ದಾರೆ. ನಮ್ಮ ಮನೆಯಲ್ಲೇ ಅವರಿಗೆ ಸಂಸ್ಕಾರ ಕಲಿಸಬೇಕು. ಲವ್ ಜಿಹಾದ್‌ಗೆ ಒಳಗಾಗದಂತೆ ಹೆಣ್ಣು ಮಕ್ಕಳನ್ನು ಬೆಳೆಸಬೇಕು. ಇದರಿಂದ ಲವ್ ಜಿಹಾದ್ ಕೊನೆಯಾಗಲಿದೆ ಎಂದರು.

ಪ್ರಶಸ್ತಿಗಳಿಗೆ ತಲಾ ₹50 ಸಾವಿರ ನಗದು ಬಹುಮಾನ

ಬೆಟಗೇರಿ ಕೃಷ್ಣಶರ್ಮ ಸ್ಮಾರಕ ಪ್ರಶಸ್ತಿ ಪ್ರಕಟ

ಬೆಳಗಾವಿ: ಬೆಟಗೇರಿ ಕೃಷ್ಣಶರ್ಮ ಸ್ಮಾರಕ ಟ್ರಸ್ಟ್ ನಾಡಿನ ಹಿರಿಯ ಸಾಹಿತಿಗಳು ಮತ್ತು ಯುವ ಸಾಹಿತಿಗಳಿಗೆ 2023, 2024 ಮತ್ತು 2025ನೇ ಸಾಲಿನ ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಿಸಿದೆ.

ಬೆಂಗಳೂರಿನ ಕವಿ ಎಚ್.ಎಸ್. ಶಿವಪ್ರಕಾಶ ಅವರನ್ನು 2023ನೇ ಸಾಲಿನ ಕಾವ್ಯ ಪ್ರಶಸ್ತಿ, ಬೆಂಗಳೂರಿನ ಚಿಂತಕ ಮತ್ತು ಪತ್ರಕರ್ತ ಜಿ.ರಾಮಕೃಷ್ಣ ಅವರನ್ನು 2024ನೇ ಸಾಲಿನ ವೈಚಾರಿಕ ಮತ್ತು ಪತ್ರಿಕೋದ್ಯಮ ಪ್ರಶಸ್ತಿ ಹಾಗೂ ದಾವಣಗೆರೆಯ ಕಥೆಗಾರ್ತಿ ಬಿ.ಟಿ.ಜಾಹ್ನವಿ ಅವರನ್ನು 2025ನೇ ಸಾಲಿನ ಕಥಾ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಮೂರು ಪ್ರಶಸ್ತಿಗಳಿಗೆ ತಲಾ ₹50 ಸಾವಿರ ನಗದು ಬಹುಮಾನವಿದೆ ಎಂದು ಟ್ರಸ್ಟ್ ಅಧ್ಯಕ್ಷೆ ವಿನಯಾ ಒಕ್ಕುಂದ ತಿಳಿಸಿದರು.

ಯುವ ಸಾಹಿತ್ಯ ಪುರಸ್ಕಾರಕ್ಕೆ ಮೂವರನ್ನು ಆಯ್ಕೆ ಮಾಡಿದ್ದೇವೆ. 2023ನೇ ಸಾಲಿನ ಪುರಸ್ಕಾರ ಶಿವಮೊಗ್ಗದ ಕೆ.ಅಕ್ಷತಾ ಅವರಿಗೆ, 2024ನೇ ಸಾಲಿನ ಪುರಸ್ಕಾರ ಮಂಗಳೂರಿನ ವಿಲ್ಸನ್ ಕಟೀಲ್ ಅವರಿಗೆ ಮತ್ತು 2025ನೇ ಸಾಲಿನ ಪುರಸ್ಕಾರ ರಾಯಚೂರಿನ ಆರಿಫ್ ರಾಜಾ ಅವರಿಗೆ ಲಭಿಸಿದೆ. ಈ ಪುರಸ್ಕಾರಗಳು ತಲಾ ₹10 ಸಾವಿರ ನಗದು ಬಹುಮಾನ ಒಳಗೊಂಡಿವೆ ಎಂದು ವಿವರಿಸಿದರು. ಈ ವೇಳೆ ಟ್ರಸ್ಟ್ ಸದಸ್ಯ ಕಾರ್ಯದರ್ಶಿ ವಿದ್ಯಾವತಿ ಭಜಂತ್ರಿ, ಸದಸ್ಯರಾದ ಎಚ್.ಬಿ.ಕೋಲಕಾರ, ಗೀತಾಂಜಲಿ ಕುರುಡಗಿ ಇದ್ದರು.

ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಾಳೆ

ರಾಜ್ಯಮಟ್ಟದ ಯುವ ಕಥೆ ಸ್ಪರ್ಧೆಯಲ್ಲಿ ಮಣಿಕಂಠ ಗೊದಮನಿ ಪ್ರಥಮ, ಸಂತೋಷ ನಾಯಕ ದ್ವಿತೀಯ, ಪ್ರಹ್ಲಾದ ಡಿ.ಎಂ. ತೃತೀಯ, ರಾಜ್ಯಮಟ್ಟದ ಯುವ ಕಾವ್ಯ ಸ್ಪರ್ಧೆಯಲ್ಲಿ ವಿದ್ಯಾ ಪ್ರಥಮ, ಮಂಜುಳಾ ಜಿ.ಎಚ್.ದ್ವಿತೀಯ, ಶಿವರಾಜ ಅರಳಿ ತೃತೀಯ ಮತ್ತು ಮುದ್ರಾಡಿ ನಾಲ್ಕನೇ ಸ್ಥಾನ ಗಳಿಸಿದ್ದಾರೆ. ನಗರದ ಕುಮಾರ ಗಂಧರ್ವ ರಂಗಮಂದಿರದಲ್ಲಿ ನ.11ರಂದು ಬೆಳಗ್ಗೆ 11ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಖಾಸಗಿ ಫೋಟೊ ಶೇರ್: ಧರ್ಮದೇಟು

ಚಿಕ್ಕಬಳ್ಳಾಪುರ: ಹಳೆಯ ಪ್ರೇಯಸಿಯ ಜತೆ ತೆಗೆಸಿಕೊಂಡಿದ್ದ ಫೋಟೋಗಳನ್ನು ಊರಿಗೆಲ್ಲ ಹಂಚಿದ ಭಗ್ನ ಪ್ರೇಮಿಗೆ ಹಿಗ್ಗಾಮುಗ್ಗಾ ಥಳಿಸಿರುವ ಘಟನೆ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲೂಕಿನ ಕಟಮಾಚನಹಳ್ಳಿ ಗ್ರಾಮದಲ್ಲಿ ನಡೆದಿದೆ. ನಲ್ಲಗುಟ್ಟಪಲ್ಲಿ ಗ್ರಾಮದ ಆನಂದ್ ಎಂಬಾತನ ಮೇಲೆ ಹಲ್ಲೆ ಮಾಡಲಾಗಿದೆ. ಆನಂದ್ ವಿವಾಹಿತನಾಗಿದ್ದೂ, ವಿವಾಹಿತವಾಗಿರದ ಶ್ರಾವಣಿ ಎಂಬ ಯುವತಿ ಜತೆ ಲಿವ್ ಇನ್ ರಿಲೇಷನ್‌ಶಿಪ್‌ನಲ್ಲಿದ್ದನು. ಕಳೆದ 6 ತಿಂಗಳ ಹಿಂದೆ ಬೇರೆಯಾಗಿದ್ದರು ಎನ್ನಲಾಗಿದೆ. ಶ್ರಾವಣಿ ಬೇರೊಬ್ಬ ಯುವಕನೊಂದಿಗೆ 2 ತಿಂಗಳ ಹಿಂದೆ ವಿವಾಹಿತಳಾಗಿದ್ದಳು. ಇದರಿಂದ ಕುಪಿತಗೊಂಡಿರೋ ಆನಂದ್ ಇಬ್ಬರು ಜತೆಯಲ್ಲಿದ್ದ ಫೋಟೋಗಳನ್ನು ಊರಿಗೆಲ್ಲ ಹಂಚಿ ವೈರಲ್ ಮಾಡಿದ್ದಾನೆ. ಹೀಗಾಗಿ ಶ್ರಾವಣಿ ಸಂಬಂಧಿಕರು ಹಾಗೂ ಸ್ಥಳೀಯರು ಆನಂದ್‌ನನ್ನ ಹಿಡಿದು ಹಿಗ್ಗಾಮುಗ್ಗಾ ಥಳಿಸಿದ್ದಾರೆ. ಈ ಸಂಬಂಧ ಚಿಂತಾಮಣಿ ಗ್ರಾಮಾಂತರ ಠಾಣೆಯಲ್ಲಿ ದೂರು, ಪ್ರತಿ ದೂರು ದಾಖಲಾಗಿವೆ.

ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್‌ಗೆ ಸುರ್ಜೇವಾಲಾ ಅಭಿನಂದನೆ

ಮತಗಳವಿನ ಹೋರಾಟ: ರಾಜ್ಯ ಫಸ್ಟ್

ಬೆಂಗಳೂರು: ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಅವರ ನೇತೃತ್ವದಲ್ಲಿ ದೇಶಾದ್ಯಂತ ನಡೆದ ಮತಗಳ್ಳತನದ ವಿರುದ್ಧದ ಸಹಿ ಸಂಗ್ರಹ ಅಭಿಯಾನದಲ್ಲಿ ಅತಿ ಹೆಚ್ಚು ಸಹಿ ಸಂಗ್ರಹಿಸಿ ಕರ್ನಾಟಕವು ಇಡೀ ರಾಷ್ಟ್ರದಲ್ಲೇ ಪ್ರಥಮ ಸ್ಥಾನ ಗಳಿಸಿದೆ. ಈ ಐತಿಹಾಸಿಕ ಯಶಸ್ಸಿಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅಭಿನಂದನೆ ಸಲ್ಲಿಸಿದ್ದಾರೆ.

ಮಹಾದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಮತಗಳ ಅಕ್ರಮ ನಡೆದಿತ್ತು. ಹರಿಯಾಣದಲ್ಲಿ 25 ಲಕ್ಷ ಮತ ಅಕ್ರಮವಾಗಿದೆ. ಈ ಎಲ್ಲ ವಿಚಾರಗಳ ಕುರಿತು ರಾಹುಲ್ ಗಾಂಧಿಯವರು ಸಹಿ ಸಂಗ್ರಹ ಅಭಿಯಾನ ಮಾಡಲು ಕೆಪಿಸಿಸಿಯ ಎಲ್ಲ ಸಮಿತಿಗಳಿಗೆ ಕರೆ ಕೊಟ್ಟಿದ್ದರು. ರಾಹುಲ್ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರು ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ಸಾರ್ವಜನಿಕ ಕಾರ್ಯಕ್ರಮ ಆಯೋಜಿಸಿ ಈ ಕುರಿತು ಜಾಗೃತಿ ಮೂಡಿಸಿದ್ದರು.

ರಾಹುಲ್ ಗಾಂಧಿ ಅವರ ಕರೆಗೆ ಓಗೊಟ್ಟು ಕರ್ನಾಟಕ ಕಾಂಗ್ರೆಸ್ ಸಮಿತಿಯ ವಿವಿಧ ವಿಭಾಗಗಳು ಅತಿ ಹೆಚ್ಚು ಸಹಿ ಸಂಗ್ರಹಿಸಿ, ಅಭಿಯಾನವನ್ನು ಯಶಸ್ವಿಗೊಳಿ ಸಿವೆ. ಅನ್ಯಾಯದ ವಿಚಾರಗಳು ಬಂದಾಗ ಧ್ವನಿ ಎತ್ತಲು ಕರ್ನಾಟಕ ಸದಾ ಮೊದಲಿರುತ್ತದೆ ಎಂಬುದಕ್ಕೆ ಇದು ಮತ್ತೊಂದು ಉದಾಹರಣೆ ಎಂದು ಹೇಳಿದ್ದಾರೆ.

ಮತಪತ್ರದ ಮೂಲಕ ಚುನಾವಣೆ ನಡೆಸಿ

ಕರ್ನಾಟಕದಿಂದ ದಾಖಲೆಯ 1,12,40,000 ಸಹಿಗಳನ್ನು ಸಂಗ್ರಹಿಸಲಾಗಿದೆ. ಸಹಿ ಅರ್ಜಿಗಳನ್ನು ಸೋಮವಾರ ದೆಹಲಿಗೆ ರವಾನಿಸಲಾಗುವುದು. ನ.25ರಂದು ದೆಹಲಿಯ ರಾಮಲೀಲಾ ಮೈದಾನದಲ್ಲಿ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಚುನಾವಣಾ ಆಯೋಗವು ಮತ ಅಕ್ರಮಗಳಲ್ಲಿ ಭಾಗಿಯಾಗಿದೆ. ಆಯೋಗದ ನಿಷ್ಕ್ರಿಯತೆ ನೋಡಿದಾಗ, ಮುಂಬರುವ ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ಮತ್ತು ಇತರ ಸ್ಥಳೀಯ ಸಂಸ್ಥೆ ಚುನಾವಣೆಗಳನ್ನು ಮತಪತ್ರದ ಮೂಲಕ ನಡೆಸಬೇಕು ಎಂದು ಸುರ್ಜೇವಾಲಾ ರಾಜ್ಯ ಸರಕಾರಕ್ಕೆ ಸಲಹೆ ನೀಡಿದ್ದಾರೆ.

- **ಅಭಿಯಾನದಲ್ಲಿ ರಾಜ್ಯದಿಂದ 1.12 ಕೋಟಿ ಸಹಿ ಸಂಗ್ರಹ**
- **ಚು.ಆಯೋಗ ವಿರುದ್ಧ ರಾಜ್ಯದ ಜನರ ಆಕ್ರೋಶ ಬಯಲು**

ಟನ್ ಕಬ್ಬಿಗೆ 3500 ಬೆಲೆ ನಿಗದಿಗಾಗಿ ಮುಧೋಳದಲ್ಲಿ ಮುಂದುವರಿದ ರೈತರ ಪ್ರತಿಭಟನೆ

ತಿಮ್ಮಾಪುರ ನೇತೃತ್ವದಲ್ಲಿ ನಡೆದ ಸಭೆ ವಿಫಲ

ಬಾಗಲಕೋಟೆ: ಟನ್ ಕಬ್ಬಿಗೆ 3500 ಬೆಲೆ ಹಾಗೂ ಬಾಕಿ ಪಾವತಿಸಿಗೆ ಆಗ್ರಹಿಸಿ ಮುಧೋಳ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ರೈತರ ಪ್ರತಿಭಟನೆ ಮುಂದಿವರೆದಿದೆ. ಭಾನು ವಾರ ರಸ್ತೆಯಲ್ಲಿ ಅಡುಗೆ ಮಾಡಿ, ಊಟ ಮಾಡುವ ಮೂಲಕ ರೈತರು ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ರೈತರ ಪ್ರತಿಭಟನೆ ಹಿನ್ನೆಲೆಯಲ್ಲಿ ಸಂಜೆ ಮುಧೋಳದ ಲೋಕೋಪಯೋಗಿ ಇಲಾಖೆಯ ಪ್ರವಾಸ ಮಂದಿರದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ನೇತೃತ್ವದಲ್ಲಿ ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿಗಳ ಸಮ್ಮುಖದಲ್ಲಿ ರೈತ ಮುಖಂಡರ ಸಭೆ ಸಹ ಜರುಗಿತು. ಈ ಸಂದರ್ಭದಲ್ಲಿ ರೈತರು ಸಿಎಂ ಘೋಷಿ ಸಿದ ಬೆಲೆಗೆ ನಾವು ಒಪ್ಪುವುದಿಲ್ಲ. ಯಾವುದೇ ರಿಕವರಿ ನೋಡದೆ ಪ್ರತಿ ಟನ್ ಕಬ್ಬಿಗೆ 3,500 ಘೋಷಿಸುವವರೆಗೆ ನಾವು ಹೋರಾಟ ಮುಂದುವರೆಸುತ್ತೇವೆ ಎಂದು ತಿಳಿಸಿದರು. ಸಭೆ ಪೂರ್ವದಲ್ಲಿ ಜಿಲ್ಲಾಧಿಕಾರಿ ಸಂಗಪ್ಪ ಅಧ್ಯಕ್ಷತೆಯಲ್ಲಿ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳ ಮಾಲೀಕರ ಸಭೆ ನಡೆಸಿದರು. ಪ್ರಸಕ್ತ ಸಾಲಿನ ಹಂಗಾಮಿಗೆ ಸರಕಾರ ಹೊರಡಿಸಿದ ಆದೇಶ ದನ್ವಯ ಪ್ರತಿ ಮೆಟ್ರಿಕ್ಟನ್ ಕಬ್ಬಿಗೆ ನಿಗದಿಪಡಿಸಿದ ದರ ನೀಡಲು ಬದ್ಧ ವಿರುವುದಾಗಿ ತಿಳಿಸಿ, ಜಿಲ್ಲೆಯ ಎಲ್ಲ ಸಕ್ಕರೆ ಕಾರ್ಖಾನೆಗಳಿಂದ ರವಿವಾರ ಜಿಲ್ಲಾಧಿಕಾರಿ ಗಳಿಗೆ ಪತ್ರವನ್ನು ಸಲ್ಲಿಸಿದ್ದಾರೆ.

ಮುಧೋಳ ಐಬಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಅಧ್ಯಕ್ಷತೆಯಲ್ಲಿ ರೈತರ ಹಾಗೂ ಅಧಿಕಾರಿಗಳ ಸಭೆ ಜರುಗಿತು.

3500 ಬೆಲೆಗೆ ಪಟ್ಟು ಹಿಡಿದ ರೈತರು

ಜಿಲ್ಲಾಧಿಕಾರಿಗಳ ಸಭೆ ಬಳಿಕ ಮಾತನಾಡಿದ ಮಾಜಿ ಸಚಿವ ಎಸ್.ಆರ್.ಪಾಟೀಲ ಮಾತನಾಡಿ, ಸಿಎಂ ಸಿದ್ದರಾಮಯ್ಯ ಅವರು ಕಾರ್ಖಾನೆ ಮಾಲೀಕರ ಹಾಗೂ ರೈತರ ಸಭೆ ಕರೆದು ಎಂಟು ಗಂಟೆ ಸಭೆ ಮಾಡಿ ರೈತರ ಪರವಾಗಿ ನೀವು ಬಿಲ್ ಕೊಡಬೇಕೆಂದು ಹೇಳಿ, ಆದೇಶ ಹೊರಡಿಸಿದ್ದಾರೆ. ಕಳೆದ ಸಾರಿ ಬೆಲೆಗಿಂತ ಈಗಿನ ಬೆಲೆ 317 ರು. ಹೆಚ್ಚಾಗಿದೆ. ಟನ್ ಕಬ್ಬಿಗೆ 3,217 ಕೊಡುತ್ತಿದ್ದೇವೆ. ರಿಕವರಿ ಆಧಾರದ ಮೇಲೆ ಸರಕಾರ ದರ ಫಿಕ್ಸ್ ಮಾಡಿದೆ. ಆ ಪ್ರಕಾರ ನಾವು ಬಿಲ್ ಕೊಡಲು ಒಪ್ಪಿದ್ದೇವೆ. ಸರಕಾರದ ಆದೇಶವನ್ನು ಅಕ್ಷರಷಃ ಒಪ್ಪುತ್ತೇವೆ. ನಾವೆಲ್ಲ ಒಪ್ಪಿದ್ದೇವೆ ಎಂದು ಲಿಖಿತವಾಗಿ ಮನವಿ ಕೊಟ್ಟಿದ್ದೇವೆ. ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಹಾಗೂ ಜಿಲ್ಲಾಧಿಕಾರಿಗಳು ರೈತರ ಪ್ರತಿಭಟನೆ ಹಿನ್ನೆಲೆಯಲ್ಲಿ ಪ್ರತ್ಯೇಕ ಸಭೆಗಳನ್ನು ನಡೆಸಿದರೂ, ಯಾವುದಕ್ಕೂ ಒಪ್ಪದ ರೈತರು ಪ್ರತಿ ಟನ್ ಕಬ್ಬಿಗೆ 3,500 ನೀಡಬೇಕು ಎಂದು ಒತ್ತಾಯಿಸಿ ಪ್ರತಿಭಟನೆ ಮುಂದುವರೆಸಿದ್ದಾರೆ.

ಪರ್ಯಾಯ ಶ್ರೀ ಪುತ್ತಿಗೆ ಮಠ ಶ್ರೀ ಕೃಷ್ಣಮಠದಲ್ಲಿ ಗೀತೋತ್ಸವ

ಗೀತಾ ಸಂದೇಶ ಎಲ್ಲ ಕಾಲಕ್ಕೂ ಅಗತ್ಯ

ಪರ್ಯಾಯ ಶ್ರೀ ಪುತ್ತಿಗೆ ಮಠ ಶ್ರೀ ಕೃಷ್ಣಮಠದಲ್ಲಿ ನಡೆದಿರುವ ಬೃಹತ್ ಗೀತೋತ್ಸವ ಉದ್ಘಾಟನೆ ವೇಳೆ ಪೇಜಾವರ ಮಠಾಧೀಶರಾದ ಶ್ರೀವಿಶ್ವಪ್ರಸನ್ನತೀರ್ಥ ಶ್ರೀಪಾದರಿಗೆ ಸನ್ಮಾನ ಮಾಡಲಾಯಿತು.

ಉಡುಪಿ: ಜಗತ್ತಿಗೆ ಗೀತಾ ಸಂದೇಶ ಎಲ್ಲ ಕಾಲಕ್ಕೂ ಅಗತ್ಯ ಎಂದು ಪೇಜಾವರ ಮಠಾಧೀಶರಾದ ಶ್ರೀವಿಶ್ವಪ್ರಸನ್ನತೀರ್ಥ ಶ್ರೀಪಾದರು ಹೇಳಿದರು. ಪರ್ಯಾಯ ಶ್ರೀ ಪುತ್ತಿಗೆ ಮಠ ಶ್ರೀ ಕೃಷ್ಣಮಠದಲ್ಲಿ ಡಿ.7ರವರೆಗೆ ಹಮ್ಮಿಕೊಂಡಿರುವ ಬೃಹತ್ ಗೀತೋತ್ಸವನ್ನು ರಾಜಾಂಗಣದಲ್ಲಿ ಉದ್ಘಾಟಿಸಿ ಬಳಿಕ ಶ್ರೀಪಾದರು ಅನುಗ್ರಹ ಸಂದೇಶ ನೀಡಿದರು.

ಪ್ರಸ್ತುತ ನಮ್ಮೆಲ್ಲರದ್ದು ಅರ್ಜುನನ ಪರಿಸ್ಥಿತಿ. ನಮ್ಮೊಳಗಿನ ಮೋಹ ದೂರಮಾಡಿಕೊಳ್ಳಲು ಕೃಷ್ಣಪದೇಶವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಕೃಷ್ಣಪದೇಶ ಅಳವಡಿಸಿಕೊಂಡರೆ ಮೋಹ ಬರುವುದೇ ಇಲ್ಲ. ಹೀಗಾಗಿ ಗೀತೋಪದೇಶವು ಎಲ್ಲರ ರೀತಿಯಲ್ಲೂ ಮಾರ್ಗದರ್ಶಕ ಎಂದು ಹೇಳಿದರು. ಸಂಕಷ್ಟವು ಯಾರನ್ನೂ ಬಿಟ್ಟಿಲ್ಲ. ನಾವು ಗೀತೆಯ ಸಾರವನ್ನು ಅಳವಡಿಸಿಕೊಂಡು ಮುನ್ನಡೆಯಬೇಕು. ಪುತ್ತಿಗೆ ಮಠದ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರ ಜೀವನ ಗೀತಾಪಾಠವಿದ್ದಂತೆ. ಗೀತಾಚಾರ್ಯನನ್ನು ಹೃದಯದಲ್ಲಿ ಹೊತ್ತು ಲೋಕಕ್ಕೆ ಮಾರ್ಗದರ್ಶನ ಮಾಡುತ್ತಿದ್ದಾರೆ ಎಂದರು.

ಪೇಜಾವರ ಶ್ರೀಪಾದರಿಗೆ ಪರ್ಯಾಯ ಮಠದಿಂದ ಶ್ರೀರಾಮ ಸೇವಾ ದುರಂಧರ ಪ್ರಶಸ್ತಿ ನೀಡಿ ಗೌರವಿಸಲಾಯಿತು. ವಿಶ್ವಕ್ಕೆ ಮಾರ್ಗದರ್ಶನ ಮಾಡುವ ಗ್ರಂಥ ಪರ್ಯಾಯ ಶ್ರೀಪುತ್ತಿಗೆ ಮಠಾಧೀಶರಾದ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು ಅನುಗ್ರಹಿಸಿ, ದೇಶಕ್ಕೆ ಸಂವಿಧಾನ, ಸಂಘಕ್ಕೆ ಬೈಲಾಗಳು ಇರುವಂತೆ ಜಗತ್ತಿಗೆ ಮಾರ್ಗದರ್ಶನ ಮಾಡುವ ಸಂವಿಧಾನಗ್ರಂಥ ಭಗವದ್ಗೀತೆ. ಇದನ್ನು ಪಾಲಿಸುವುದರಿಂದ ಜಗತ್ತು ಸುಸ್ಥಿತಿಯಲ್ಲಿರಲಿದೆ. ಭಗವದ್ಗೀತೆ ವಿಶ್ವಕ್ಕೆ ಮಾರ್ಗದರ್ಶನ ನೀಡುವ ವಿಶ್ವತೋಮುಖ ಗ್ರಂಥ ಎಂದರು. ಭಗವದ್ಗೀತೆಯ ಪರಿಚಯ, ಪರಿಜ್ಞಾನ ಪ್ರತಿಯೊಬ್ಬರಿಗೂ ಅವಶ್ಯಕ. ಹೀಗಾಗಿ ಕೃಷ್ಣನ ಆರಾಧನೆಯನ್ನು ಗೀತೆಯ ಮೂಲಕ ಮಾಡುತ್ತಿದ್ದೇವೆ ಎಂದರು. ಕಿರಿಯಯತಿ ಶ್ರೀ ಸುಶ್ರೀಂದ್ರತೀರ್ಥ ಶ್ರೀಪಾದರು ಅನುಗ್ರಹ ಸಂದೇಶ ನೀಡಿದರು.

ಹೇರಂಭ ಇಂಡಸ್ಟ್ರಿ ಚೇರ್ಮನ್ ಡಾ. ಸದಾಶಿವ ಶೆಟ್ಟಿ ಕನ್ಯಾನ, ಕಾರ್ಯಕ್ರಮ ಸಂಚಾಲಕ ಬೈಕಾಡಿ ಸುಪ್ರಸಾದ್ ಶೆಟ್ಟಿ, ಅಮೆರಿಕ ಹಾರ್ವರ್ಡ್ ವಿವಿಯ ಪ್ರೊ.ಫ್ರಾನ್ಸಿಸ್ ಕ್ಯೂನೀ, ಸೀಟನ್ ಹಾಲ್ ವಿವಿಯ ಪ್ರೊ. ಆ್ಯಲನ್ ಬ್ರಿಲ್, ವಿದ್ವಾನ ಕೇಶವ ತಾಡಪತ್ರೆ, ಶ್ರೀಮಠದ ಕಾರ್ಯದರ್ಶಿ ಪ್ರಸನ್ನ ಆಚಾರ್ಯ ಸಹಿತ ಶ್ರೀಮಠದ ಅಧಿಕಾರಿಗಳು ಉಪಸ್ಥಿತರಿದ್ದರು.

ಆನ್‌ಲೈನ್ ಜಾತಿ ಸಮೀಕ್ಷೆ ಇಂದು ಕೊನೆ

ಬೆಂಗಳೂರು: ರಾಜ್ಯಾದ್ಯಂತ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಯುತ್ತಿದ್ದು, ಆನ್‌ಲೈನ್ ಮೂಲಕ ಸಮೀಕ್ಷೆ ಯಲ್ಲಿ ಪಾಲ್ಗೊಳ್ಳಲು ಇಂದು(ನ. 10) ಕೊನೆಯ ದಿನ ವಾಗಿದ್ದು, ಇದುವರೆಗೆ 6.13 ಕೋಟಿ ಜನರ ಸಮೀಕ್ಷೆ ಪೂರ್ಣಗೊಂಡಿದೆ ಎಂದು ಹಿಂದುಳಿದ ವರ್ಗಗಳ ಆಯೋಗವು ಮಾಹಿತಿ ನೀಡಿದೆ.

ಸೆ.22ರಿಂದ ರಾಜ್ಯಾದ್ಯಂತ ಪರಿಶಿಷ್ಟ ಜಾತಿ, ಪಂಗಡ, ಇತರೆ ಹಿಂದುಳಿದ ವರ್ಗ ಸೇರಿ ಎಲ್ಲ ಜನರ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ಕೈಗೊಳ್ಳಲಾಗಿದ್ದು, ಅ.31ರ ವರಗೆ ಸಮೀಕ್ಷಾದಾರರನ್ನು ನೇಮಕ ಮಾಡಿ, ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಸಮೀಕ್ಷೆಯನ್ನು ಮಾಡಲಾಯಿತು. ನಿಗದಿತ ಜನರ ಸಮೀಕ್ಷೆಯನ್ನು ಪೂರ್ಣಗೊಳಿಸದ ಹಿನ್ನೆಲೆಯಲ್ಲಿ ನ. 10ವರೆಗೆ ಆನ್‌ಲೈನ್ ಸಮೀಕ್ಷೆಯನ್ನು ನಡೆಸಲಾಗುತ್ತಿದೆ. ಸಮೀಕ್ಷೆಯಿಂದ ದೂರ ಉಳಿದವರು.

https://kscbcselfdeclaration.karnataka.gov.in ವೆಬ್‌ಸೈಟ್‌ಗೆ ಭೇಟಿ ನೀಡಿ ಆನ್‌ಲೈನ್ ಮೂಲಕ ಸಮೀಕ್ಷೆಯಲ್ಲಿ ಭಾಗವಹಿಸಲು ಅವಕಾಶವನ್ನು ನೀಡಲಾಗಿತ್ತು. ಇದುವರೆಗೆ ರಾಜ್ಯದಲ್ಲಿ 6,85,38,000 ಜನರ ಪೈಕಿ 6,13,83,908 ಜನರ ಸಮೀಕ್ಷೆಯು ಪೂರ್ಣಗೊಂಡಿದೆ. ಮಂಡ್ಯದಲ್ಲಿ 18,99,244, ತುಮಕೂರು 28,10,455, ಹಾವೇರಿ 17,54,508, ಚಿತ್ರದುರ್ಗ 18,03,528, ಚಿಕ್ಕಮಗಳೂರು 11,01,358, ಉಡುಪಿ 11,60,247, ಗದಗ 11,18,183, ಕೊಪ್ಪಳ 16,04,704, ದಾವಣಗೆರೆ 17,05,682, ಚಾಮರಾಜನಗರ 10,17,424, ಬಾಗಲಕೋಟೆ ಜಿಲ್ಲೆಯಲ್ಲಿ 20,90,247 ಮಂದಿಯ ಸಮೀಕ್ಷೆ ಪೂರ್ಣಗೊಂಡಿದೆ.

ಬಳ್ಳಾರಿ 15,57,119, ಬೆಳಗಾವಿ 50,41,610, ಬೆಂಗಳೂರು ಗ್ರಾಮಾಂತರ 11,07,140, ಬೆಂಗಳೂರು ನಗರ 13,51,670, ಬೀದರ್ 17,27,984, ದಕ್ಷಿಣ ಕನ್ನಡ 20,83,284, ಉತ್ತರ ಕನ್ನಡ 14,27,819, ಹಾಸನ 17,04,564, ಶಿವಮೊಗ್ಗ 17,63,930, ರಾಯಚೂರು 21,67,126, ಕಲಬುರಗಿ 28,66,066, ಕೊಡಗು ಜಿಲ್ಲೆಯಲ್ಲಿ 5,11,119 ಮಂದಿಯ ಸಮೀಕ್ಷೆ ಪೂರ್ಣಗೊಂಡಿದೆ.

ವಿಶ್ವವಾಣಿ

ಸಂಪಾದಕೀಯ

ದಂಡಂ ದಶಗುಣಂ ಭವೇತ್...

ಕಾಶ್ಮೀರದ ಪಹಲ್ಗಾಮ್‌ನಲ್ಲಿ 26 ಮಂದಿ ಅಮಾಯಕರ ಮಾರಣಹೋಮ ನಡೆಸಿದ ಪಾಕ್-ಕೃಪಾಪೋಷಿತ ಉಗ್ರರು ಇನ್ನೂ ಬುದ್ಧಿ ಕಲಿತಂತಿಲ್ಲ. 'ಆಪರೇಷನ್ ಸಿಂದೂರ' ಕಾರ್ಯಾಚರಣೆ ನಡೆಸಿದ ಭಾರತವು ತಮ್ಮ ನೆಲೆಗಳಿಗೆ ಯಾವ ಮಟ್ಟಿಗಿನ ಬಿಸಿ ಮುಟ್ಟಿಸಿ ತರಿದುಹಾಕಿತು ಎಂಬುದನ್ನು ಪ್ರತ್ಯಕ್ಷ ಕಂಡಿದ್ದರೂ, ಉಗ್ರರು ತಮ್ಮ ಹಳೆಯ ಚಾಳಿಯನ್ನು ಬಿಟ್ಟಿಲ್ಲ. ಜಮ್ಮು-ಕಾಶ್ಮೀರದ ಕುಪ್ವಾರಾ ಜಿಲ್ಲೆಯ ಕೇರನ್ ಪ್ರದೇಶದಲ್ಲಿ ಇಬ್ಬರು ಉಗ್ರರು ಭಾರತದೊಳಗೆ ನುಸುಳಲು ಯತ್ನಿಸಿ ಭದ್ರತಾ ಪಡೆಗಳಿಂದ ಹತರಾದ ಸುದ್ದಿಯು ಇದಕ್ಕೆ ಪುಷ್ಟಿ ನೀಡುತ್ತದೆ. ಉಗ್ರವಾದವಾಗಲೀ, ಯುದ್ಧವಾಗಲೀ ಯಾವುದೇ ಸಮಸ್ಯೆಗೆ ಪರಿಹಾರ ಒದಗಿಸುವುದಿಲ್ಲ, ಅದರಿಂದ ಒದಗುವುದು ನಷ್ಟವಷ್ಟೇ ಎಂಬುದಕ್ಕೆ ಇಸ್ರೇಲ್-ಹಮಾಸ್ ನಡುವಿನ ಹಣಾಹಣಿ, ಉಕ್ರೇನ್-ರಷ್ಯಾ ನಡುವಿನ ಯುದ್ಧವೇ ಸಾಕ್ಷಿಯಾಗಿವೆ. ಇಷ್ಟಾಗಿಯೂ ಉಗ್ರರು ಭಾರತವನ್ನು ಕೆಣಕುತ್ತಿರುವುದಕ್ಕೆ ಮತ್ತು ಅವರಿಗೆ ಪಾಕಿಸ್ತಾನವು ಕುಮ್ಮಕ್ಕು ನೀಡುತ್ತಿರುವುದಕ್ಕೆ ಏನನ್ನುವುದು? ಈ ಕಾರಣದಿಂದಾಗಿಯೇ ಜಮ್ಮು ಮತ್ತು ಪಂಜಾಬ್ ವಲಯದ ಜಮ್ಮು, ಕಥುವಾ, ಸಾಂಬಾ, ಪಠಾಣ್‌ಕೋಟ್ ಪ್ರದೇಶಗಳಲ್ಲಿ ಭಾರತವು ತನ್ನ ಸೇನೆಯನ್ನು ಸನ್ನದ್ಧ ಸ್ಥಿತಿಯಲ್ಲಿ ಇರಿಸಬೇಕಾಗಿ ಬಂದಿದೆ. ಒಳ್ಳೆಯ ಮಾತಿಗೆ ಬುದ್ಧಿ ಕಲಿಯದವರಿಗೆ 'ದಂಡಂ ದಶಗುಣಂ ಭವೇತ್' ಎಂಬಂತೆ ಬಿಸಿ ಮುಟ್ಟಿಸುವುದು ಅನಿವಾರ್ಯವಾಗುತ್ತದೆ. ಇಲ್ಲವಾದಲ್ಲಿ, ಭಾರತದ ಸೌಜನ್ಯವನ್ನು ಪಾಕಿಸ್ತಾನಿ ಸೇನೆ ಮತ್ತು ಉಗ್ರಪಡೆಗಳು 'ದೌರ್ಬಲ್ಯ' ಎಂದು ಪರಿಗಣಿಸುವ ಸಾಧ್ಯತೆಯಿದೆ. ನಾಟಕೀಯವಾಗಿ ಶಾಂತಿಮಂತ್ರ ಜಪಿಸುತ್ತಲೇ ಬಗಲಲ್ಲಿನ ದೊಣ್ಣೆಯನ್ನು ಆಗಾಗ ಸವರುವ ಅಮೆರಿಕ ಅಧ್ಯಕ್ಷ ಟ್ರಂಪ್ ಅವರು ಪರೋಕ್ಷವಾಗಿ ನೀಡುತ್ತಿರುವ ಕುಮ್ಮಕ್ಕು ಕೂಡ ಪಾಕಿಸ್ತಾನದ ಈ ತೇಂಕಾರಕ್ಕೆ ಮತ್ತು ಕಿತಾಪತಿಗೆ ಕಾರಣ ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ. ಒಟ್ಟಿನಲ್ಲಿ, ಕಾಲವೇ ಎಲ್ಲದಕ್ಕೂ ಉತ್ತರವನ್ನು ಹೇಳುತ್ತದೆ, ಅಷ್ಟೇ!

ಸೊಂಪಾದಕೀಯ

ಮನೆಯನೆಂದು ಕಟ್ಟದಿರಿ, ಕೊಂಡುಕೊಳ್ಳಿ

'ಎಲ್ಲಿಯೂ ನಿಲ್ಲದಿರು, ಮನೆಯನೆಂದು ಕಟ್ಟದಿರು' ಅಂತ ಕವಿವಾಣಿಯೇ ಇದೆ. ಬೆಂಗಳೂರಿನ ಜನ ಅದನ್ನು ಈಗ ಪಾಲಿಸುತ್ತಿದ್ದಾರೆ. ಹಾಗಂತ ಮನೆ ಕಟ್ಟುವವರ ಸಂಖ್ಯೆ ಕಮ್ಮಿ ಆಗಿಲ್ಲ. ಹಾಗಾಗಿಯೇ ಕೊಳ್ಳುವವರ ಸಂಖ್ಯೆಯೂ ಕಮ್ಮಿ ಆಗಿಲ್ಲ. 'ಮನೆ ಕಟ್ಟಿ ನೋಡು' ಅನ್ನೋ ಗಾದೆಮಾತಿಗೆ ಹೆದರಿಕೊಂಡವರಂತೆ ಜನ ಮುಂದೆ ನಿಂತು ಮನೆ ಕಟ್ಟಿಸಲು ಹಿಂದೆ ಮುಂದೆ ನೋಡುತ್ತಿದ್ದಾರೆ. ಅವರದೇನಿದ್ದರೂ ಕಟ್ಟಿದ ಮನೆ ಕೊಂಡುಕೊಳ್ಳುವ ಉಮೇದು. ಬೆಂಗಳೂರಿನಲ್ಲಿ ಈಗ ಐಷಾರಾಮಿ ಮನೆಗಳಿಗೆ ಹೆಚ್ಚು ಡಿಮ್ಯಾಂಡ್ ಇದೆಯಂತೆ. 10 ಕೋಟಿ ಅಥವಾ ಅದಕ್ಕಿಂತ ಹೆಚ್ಚಿನ ಬೆಲೆಯ ಮನೆಗಳ ಮಾರಾಟದಲ್ಲಿ ಹೆಚ್ಚಳ ಆಗಿದೆಯಂತೆ. ಮನೆ ಕೊಳ್ಳುವವರು ಇದ್ದಾರೆ ಅಂದಮೇಲೆ ಕಟ್ಟುವವರೂ ಇದ್ದಾರೆ. ಆದರೆ ಅವರು ಕಟ್ಟುತ್ತಾ ಇರೋದೇ ಮಾರಾಟ ಮಾಡೋದಕ್ಕೆ. ಮನೆ ಕಟ್ಟಿ

ತಮ್ಮ ಭವಿಷ್ಯ ಕಟ್ಟಿಕೊಳ್ಳುವ ಉದ್ದೇಶ ಅವರಿಗಿಲ್ಲ. ಕೊಂಡುಕೊಳ್ಳುವವರಲ್ಲೂ, ನಮ್ಮ ಜೀವನದಲ್ಲೂ ಒಂದು ಸ್ವಂತ ಮನೆ ಇರಲಿ ಅನ್ನೋ ಆಸೆಗಿಂತ ಅದನ್ನು ಆಸ್ತಿ, ಹೂಡಿಕೆ ಅಂತಲೇ ಪರಿಗಣಿಸುವವರು ಹೆಚ್ಚಾಗಿದ್ದಾರಂತೆ. ಹಾಗಾಗಿ ರಿಯಲ್ ಎಸ್ಟೇಟ್ ಮೈಂಡ್‌ಸೆಟ್ ಇರೋರು 'ಕಟ್ಟುವೆವು ನಾವು' ಅಂತ ಮನೆಗಳನ್ನು ಕಟ್ಟುತ್ತಿದ್ದಾರೆ. ಇನ್ನು ಬರೀ ಉಂಡು ಮಲಗುವಷ್ಟು ದುಡ್ಡಿದ್ದರೂ ಸಾಲ ಮಾಡಿಯಾದರೂ ಮನೆ ಕೊಳ್ಳುವವರ ಸಂಖ್ಯೆ ಹೆಚ್ಚಾಗಿದೆ. ಹಾಗಾಗಿ 'ಕಟ್ಟಾ ಕಟ್ಟಾ ಯೋಗ' ಎನ್ನುವಂತೆ ಮನೆಗಳು ಇನ್ನೂ ನಿರ್ಮಾಣ ಹಂತದಲ್ಲಿ ಇರುವಾಗಲೇ ಮಾರಾಟ ಆಗುತ್ತಿವೆ. ಹಿಂದಿನಂತೆ 'ಮಕ್ಕಳಿರಲವ್ವಾ ಮನೆತುಂಬ' ಅನ್ನುವ ಪರಿಸ್ಥಿತಿ ಈಗ ಇಲ್ಲದಿದ್ದರೂ ಇರೋ ಒಂದೆರಡು ಮಕ್ಕಳಿಗೆ ಮನೆಗಳಿರಲವ್ವಾ ಊರ್ ತುಂಬಾ ಎನ್ನುವಂತೆ ಜನ ಮಕ್ಕಳಿಗೆ ಆಸ್ತಿ ಮಾಡಿ ಇಡುತ್ತಿದ್ದಾರೆ. ಇನ್ನು ಇದಕ್ಕೆ ಮನೆಕಟ್ಟುವ ಪ್ರೊಸೆಸ್‌ನ ಹಿಂದಿರುವ 'ಕಟ್ಟು' 'ಪಾಡು' ಯಾರಿಗೆ ಬೇಕು ಅನ್ನೋ ಧೋರಣೆಯೂ ಇರುತ್ತದೆ. ಹಾಗಾಗಿ ಮನೆ ಕಟ್ಟುವ ಯೋಚನೆಯನ್ನು ಕಟ್ ಮಾಡಿ, ಒಂದಷ್ಟು ಲಕ್ಷ ಹೆಚ್ಚಾದರೂ ಪರವಾಗಿಲ್ಲ, ರೆಡಿಮೇಡ್ ಮನೆಯೇ ಇರಲಿ ಅಂತಿದ್ದಾರೆ ಜನ. ಸಂಸಾರ ಕಟ್ಟಿಕೊಂಡು ಏಗೋದರ ಜತೆಗೆ ಮನೆ ಕಟ್ಟಿಕೊಂಡು ಇನ್ನಷ್ಟು ಕಷ್ಟ ಪಡೋದು ಯಾಕೆ ಅಂತ ಅವರ ಅಭಿಪ್ರಾಯ.

ಸಂಪಾದಕರ ಸದ್ಯಶೋಧನೆ

ಪಾವೆಂ ಪದಪ್ರೀತಿ

ನಾನು 'ಸಂಯುಕ್ತ ಕರ್ನಾಟಕ' ಪತ್ರಿಕೆಯನ್ನು ಸೇರುವ ಹೊತ್ತಿಗೆ, 'ಕಸ್ತೂರಿ' ಮಾಸಿಕದ ಸಂಪಾದಕರಾಗಿದ್ದ ಪಾ.ವೆಂ. ಆಚಾರ್ಯರು ನಿವೃತ್ತರಾಗಿದ್ದರು. ಆದರೆ 'ಕಸ್ತೂರಿ'ಯಲ್ಲಿ ಅವರು ಪದಗಳ ಬಗ್ಗೆ ಬರೆಯುತ್ತಿದ್ದ 'ಪದಾರ್ಥ ಚಿಂತಾಮಣಿ' ಅಂಕಣ ಪ್ರಕಟವಾಗುತ್ತಿತ್ತು. ಒಮ್ಮೆ 'ಸಂಯುಕ್ತ ಕರ್ನಾಟಕ' ಪತ್ರಿಕೆಯಲ್ಲಿ ಅಂದಿನ ವ್ಯವಸ್ಥಾಪಕ ಸಂಪಾದಕರಾಗಿದ್ದ ಕೆ.ಶಾಮರಾಯರು ಸಂಪಾದಕೀಯ ಸಿಬ್ಬಂದಿ ಸೇರಿದಂತೆ ನೂರಕ್ಕೂ ಹೆಚ್ಚು ಸಿಬ್ಬಂದಿಯನ್ನು ಒಂದೇ ದಿನ ಕೆಲಸದಿಂದ ತೆಗೆದು ಹಾಕಿದ್ದರಿಂದ ಬೆಂಗಳೂರು ಕಚೇರಿಯಿಂದ ಕೆಲವರನ್ನು ಕರೆಯಿಸಿಕೊಂಡಿದ್ದರು. ಹಾಗೆ ಕರೆಯಿಸಿಕೊಂಡವರಲ್ಲಿ ನಾನೂ ಇದ್ದೆ. ಹುಬ್ಬಳ್ಳಿ ಆಫೀಸಿನಲ್ಲಿ ಸುಮಾರು ಐದು ತಿಂಗಳು ಕೆಲಸ ಮಾಡುವ ಅವಕಾಶ ನನಗೆ ಲಭಿಸಿತ್ತು. ಆ ಅವಧಿಯಲ್ಲಿ ಪಾ.ವೆಂ.ಆಚಾರ್ಯರನ್ನು ಭೇಟಿ ಮಾಡುವ ಅವಕಾಶ ಸಿಕ್ಕಿತ್ತು. ಅವರು 'ಸಂಯುಕ್ತ ಕರ್ನಾಟಕ' ಪತ್ರಿಕೆಯ ಅಂದಿನ ಸಂಪಾದಕರಾಗಿದ್ದ ಆರ್.ಎ.ಉಪಾಧ್ಯರನ್ನು ಭೇಟಿ ಮಾಡಲು ಬರುತ್ತಿದ್ದರು. ನಾನು ಮತ್ತು ರವಿ ಬೆಳಗೆರೆ, ಆಚಾರ್ಯರನ್ನು ಮಾತಿಗೆ ಕರೆಯುತ್ತಿದ್ದೆವು. ಒಮ್ಮೆ ಮಾತಾಡುವಾಗ ಆಚಾರ್ಯರು ತಾವು ಒಂದು ಪದದ ಅರ್ಥವನ್ನು ಹುಡುಕಿಕೊಂಡು ಬಸ್ಸಿನಲ್ಲಿ ಹಿರಿಯೂರ ತನಕ ಪ್ರಯಾಣಿಸಿ, ನಂತರ ಆರು ಕಿ.ಮೀ. ಕಾಲ್ನಡಿಗೆಯಲ್ಲಿ ಕ್ರಮಿಸಿ ಆ ಕಾಲದ ಪ್ರಸಿದ್ಧ ಸಂಸ್ಕೃತ ಪಂಡಿತರೊಬ್ಬರನ್ನು ಭೇಟಿ ಮಾಡಿ, ಅವರಿಂದ ಒಂದು ಪದದ ಅರ್ಥ ತಿಳಿದುಕೊಂಡು ಬಂದ ಪ್ರಸಂಗವನ್ನು ವಿವರಿಸಿದ್ದರು. ಹುಬ್ಬಳ್ಳಿಯಿಂದ ಅಲ್ಲಿಗೆ ಹೋಗಿ ಬಂದಿದ್ದಕ್ಕೆ ಆಚಾರ್ಯರಿಗೆ 18 ರುಪಾಯಿ ಖರ್ಚಾಗಿತ್ತು. ಬಸ್ ಟಿಕೆಟ್ ಸಹಿತ ಆಫೀಸಿಗೆ ಖರ್ಚಿನ ಬಾಬತ್ತು (18 ರುಪಾಯಿ) ಬಿಲ್ ಕೊಟ್ಟರೆ, ಅದನ್ನು ಆಡಳಿತ ಮಂಡಳಿ ತಿರಸ್ಕರಿಸಿತ್ತು. ಆದರೆ ಆಚಾರ್ಯರು ಪದಶೋಧ ನೆಪ ಮಾಡಿಕೊಂಡು ಅಲೆಯುವುದನ್ನು ನಿಲ್ಲಿಸಲಿಲ್ಲ. ಒಮ್ಮೆ ಅವರು ಕನ್ನಡ-ತಮಿಳು ಭಾಷೆಗಳಲ್ಲಿನ ಹಲವು ಪದಗಳ ಸಾಮ್ಯವನ್ನು ಅರಿಯುವುದಕ್ಕಾಗಿ ವಿಶ್ವವಿದ್ಯಾಲಯವೊಂದರ ಪ್ರಾಧ್ಯಾಪಕರನ್ನು ಭೇಟಿ ಮಾಡಿ ಚರ್ಚಿಸಲು ಹುಬ್ಬಳ್ಳಿಯಿಂದ ಮದರಾಸಿಗೆ ಹೋದ ಪ್ರಸಂಗವನ್ನು ಹೇಳಿದ್ದರು. ಯಾರಾದರೂ ಒಂದು ಪದವನ್ನು ಹೇಳಿದರೆ, ಆಚಾರ್ಯರು ಅದರ ಹಿಂದೆ ಬೀಳುತ್ತಿದ್ದರು. ಆ ಪದದ ಮೂಲ, ವ್ಯುತ್ಪತ್ತಿ, ಬಳಕೆ, ವಿರೂಪ, ವಿಸ್ತಾರಗಳ ಬಗ್ಗೆ ತಲಸ್ಪರ್ಶಿ ಅಧ್ಯಯನ ಮಾಡುತ್ತಿದ್ದರು. ಅವರ ಜೇಬಿನಲ್ಲಿ ಸುರುಳಿಯಾಕಾರದ ಸಣ್ಣ ಸಣ್ಣ ಚೀಟಿಗಳಿರುತ್ತಿದ್ದವು. ಅವು ಅವರ ಯೋಚನೆಯಲ್ಲಿ ಬಂದಿಯಾದ ಪದಗಳ ಕುರಿತ ಪುಟ್ಟ ಪುಟ್ಟ ಟಿಪ್ಪಣಿಗಳಾಗಿರುತ್ತಿದ್ದವು. 'ಆಣೆ' ಎಂಬ ಪದವನ್ನೇ ತೆಗೆದುಕೊಳ್ಳಿ. ಆಚಾರ್ಯರು ಆ ಪದದ ಬಗ್ಗೆ ನೀಡಿದ ವಿವರಣೆಯನ್ನು ಗಮನಿಸಬೇಕು- ಅನೇಕ ವೇಳೆ ಸಂಸ್ಕೃತದಿಂದ ನೇರವಾಗಿ ತೆಗೆದುಕೊಳ್ಳದೆ ಪ್ರಾಕೃತ ಮೂಲಕ ಪದಗಳನ್ನು ಕನ್ನಡಕ್ಕೆ ತೆಗೆದುಕೊಂಡದ್ದು ಹಿಂದಿನ ಕಾಲದ ಸಾಹಿತ್ಯದಲ್ಲಿ ಕಾಣುತ್ತದೆ. ಹೀಗಾದಾಗ ಅರ್ಥಗಳು ಮೂಲಕ್ಕಿಂತ ಬಹುದೂರ ಹೋಗಿಬಿಟ್ಟಿವೆ. ನಮ್ಮ ಆಣೆಯನ್ನೇ ತೆಗೆದುಕೊಳ್ಳಿ. ಇದು ಆಜ್ಞೆಯ (ಆಜ್ಞಾ) ತದ್ಭವ ಎಂದು ವೈಯಾಕರಣಿಗಳು ಹೇಳಿದ್ದಾರೆ. ಆದರೆ ಅದು ಪ್ರಾಕೃತ ಮೂಲಕ ಆ ರೂಪದಲ್ಲಿ ಬಂದದ್ದು. ಆಜ್ಞೆಯೆಂದರೇನೆಂದು ಎಲ್ಲರಿಗೂ ಗೊತ್ತಿದೆ. ಆಣೆಯೆಂದರೇನೆಂಬುದೂ ಸರ್ವವಿದಿತ. ಆಣೆ ಹಾಕು ಅಂದರೆ ಯಾವುದಾದರೂ ದೇವತೆ, ಹಿರಿಯ ಅಥವಾ ಪ್ರೀತಿಪಾತ್ರ ವ್ಯಕ್ತಿಯ ಹೆಸರು ಹೇಳಿ ಏನನ್ನಾದರೂ ಸತ್ಯವೆಂದು ಪ್ರತಿಜ್ಞೆ ಮಾಡುವುದು ಅಥವಾ ಏನನ್ನಾದರೂ ಮಾಡದಿರುವಂತೆ ಯಾರನ್ನಾದರೂ ನಿರ್ಬಂಧಿಸುವುದು ಆಣೆ. ದೇವರಾಣೆ, ನನ್ನ ಮಗುವಿನಾಣೆ ಇತ್ಯಾದಿ. ಹಳೆಯ ಸಾಹಿತ್ಯದಲ್ಲಿ ಈ ಪದವನ್ನು ಆಜ್ಞೆ (ಅಪ್ಪಣೆ-ತಾಕೀತು) ಎಂಬರ್ಥದಲ್ಲಿಯೂ ಬಳಸಿದ್ದುಂಟು. ಆದರೆ ಈಗ ಅದು ಉಳಿದಿರುವುದು ಮೇಲೆ ಹೇಳಿದ ಅರ್ಥದಲ್ಲಿ ಮಾತ್ರ. ಗಮನಿಸಬೇಕಾದ್ದೆಂದರೆ ಸಂಸ್ಕೃತದಲ್ಲಿ 'ಆಜ್ಞಾ' ಶಬ್ದಕ್ಕೆ ಒಂದಕ್ಕಿಂತ ಹೆಚ್ಚು ಅರ್ಥಗಳಿದ್ದರೂ ಅವುಗಳಲ್ಲಿ 'ಆಣೆ'ಗೆ ಈಗ ಪ್ರಚಲಿತವಾಗಿರುವ ಅರ್ಥ ಸೇರಿಲ್ಲ. ಅಲ್ಲಿ 'ಆಣೆ'ಗೆ ಶಪಥ ಎಂಬ ಬೇರೆಯೇ ಶಬ್ದ ಇದೆ. ಆಣೆಗೆ ಆಜ್ಞೆಗಿಲ್ಲದ ಅರ್ಥ ಹೇಗೆ ಬಂತು? ದೇವತೆ ಅಥವಾ ಲೋಕೋತ್ತರ ವಸ್ತುವಿನ ಅಪ್ಪಣೆ ಇದು ಎಂದು ಭಾವಿಸಿ ನಡೆಸಬೇಕು ಎಂಬಭಿಪ್ರಾಯದಿಂದ ತೊಡಗಿ ಕಡೆಗೆ ಈಗಿರುವ ಶಪಥ ಎಂಬರ್ಥ ಮಾತ್ರ ಉಳಿದುಕೊಂಡಿರಬೇಕು.

ಬಿಜೆಪಿ ನಾಯಕರು ಭಾಗವತ ಓದಬೇಕು

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ
vveditoped@gmail.com

ಕಳೆದ ವಾರ ಬೆಂಗಳೂರಿಗೆ ಬಂದ ಆರೆಸ್ಸೆಸ್ ಮುಖ್ಯಸ್ಥ ಮೋಹನ್ ಭಾಗವತ್ ಅಸಮಾಧಾನಗೊಂಡಿದ್ದರು. ಇದಕ್ಕೆ ಬಿಜೆಪಿಯ ರಾಜ್ಯ ನಾಯಕರೇ ಕಾರಣ. ಅಂದ ಹಾಗೆ, ಸಿಎಂ ಹುದ್ದೆಯ ವಿಷಯದಲ್ಲಿ ಕರ್ನಾಟಕದ ಕಾಂಗ್ರೆಸ್ ನಾಯಕರು ಶೀತಲ ಸಮರ ನಡೆಸಿದ್ದಾರಲ್ಲ? ಈ ಸಮರವನ್ನು ಮೌನವಾಗಿ ಗಮನಿಸಬೇಕಿದ್ದ ರಾಜ್ಯ ಬಿಜೆಪಿಯ ನಾಯಕರು ಅನಗತ್ಯವಾಗಿ ಮಾತನಾಡುತ್ತಿರುವುದು ಮೋಹನ್ ಭಾಗವತ್ ಅವರಿಗೆ ಇಷ್ಟವಾಗಿಲ್ಲ.

ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ. ಶಿವಕುಮಾರ್ ಬಣಗಳು ಪರಸ್ಪರ ಕತ್ತಿ ಹಿಡಿದು ನಿಂತಿರುವಾಗ ಬಳ್ಳಾರಿಯ ಬಿಜೆಪಿ ನಾಯಕರೊಬ್ಬರು, ''ಸತೀಶ್ ಜಾರಕಿಹೊಳಿ ಮುಖ್ಯಮಂತ್ರಿಯಾದರೆ ನಾನು ಸ್ವಾಗತಿಸುತ್ತೇನೆ'' ಎಂದರು. ಅವರ ಹೇಳಿಕೆಯ ಅಸುಪಾಸಿನಲ್ಲೇ ಬೆಂಗಳೂರಿನ ನಾಯಕರೊಬ್ಬರು, ''ನವೆಂಬರ್‌ನಲ್ಲಿ ಸಿದ್ದರಾಮಯ್ಯ ಕೆಳಗಿಳಿದು ಶಿವಕುಮಾರ್ ಸಿಎಂ ಆಗುವುದು ಗ್ಯಾರಂಟಿ'' ಎಂದರು. ಇವತ್ತು ಕರ್ನಾಟಕದ ಜ್ವಲಂತ ಸಮಸ್ಯೆಗಳ ಬಗ್ಗೆ, ಸರಕಾರದ ಆಡಳಿತ ವೈಫಲ್ಯಗಳ ಬಗ್ಗೆ ಮಾತನಾಡಬೇಕಾದ ನಾಯಕರು ಹೀಗೆ ಕಾಂಗ್ರೆಸ್‌ನ ಆಂತರಿಕ ವಿಷಯವನ್ನು ಹಿಡಿದುಕೊಂಡು ಜಗ್ಗಾಡುತ್ತಿರುವುದು ಎಳ್ಳಷ್ಟೂ ಸರಿಯಲ್ಲ ಎಂಬುದು ಮೋಹನ್ ಭಾಗವತ್ ಅವರ ಅಸಮಾಧಾನ. ಹಾಗಂತಲೇ ಬೆಂಗಳೂರಿಗೆ ಬಂದಾಗ ಆರೆಸ್ಸೆಸ್ ಪ್ರಚಾರಕರು ಮತ್ತು ವಿಸ್ತಾರಕರ ಸಭೆಯಲ್ಲಿ ಸೂಚ್ಯವಾಗಿ ಮಾತನಾಡಿದ ಮೋಹನ್ ಭಾಗವತ್, ''ರಾಜ್ಯ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಕಚ್ಚಾಟದ ಬಗ್ಗೆ ನಮ್ಮವರೇಕೆ ಅನಗತ್ಯವಾಗಿ ಮಾತನಾಡುತ್ತಿದ್ದಾರೆ?ಕಚ್ಚಾಡುವುದಿದ್ದರೆ ಅವರು ಕಚ್ಚಾಡಲಿ ಬಿಡಿ. ಅದರಿಂದೇನಾಗುತ್ತದೆ? ಮುಂದಿನ ಚುನಾವಣೆಯ ನಂತರ ನಮ್ಮವರೇ ಅಧಿಕಾರದಲ್ಲಿರುತ್ತಾರೆ. ಇದನ್ನು ಗಮನದಲ್ಲಿಟ್ಟುಕೊಂಡು ನಮ್ಮವರು ಮೌನವಾಗಿರಬೇಕು. ಅದೇ ಕಾಲಕ್ಕೆ ಕಾಂಗ್ರೆಸ್ ಪಕ್ಷದ ಕಚ್ಚಾಟದ ಕಡೆ ಗಮನ ಕೊಡುವ ಬದಲು ಜನರಿಗಾಗಿ ಹೋರಾಡಬೇಕು. ಇವತ್ತು ಸಿದ್ದರಾಮಯ್ಯ ಸಿಎಂ ಆಗಿ ಉಳಿಯಲಿ, ಇಲ್ಲವೇ ಅವರ ಜಾಗಕ್ಕೆ ಡಿ.ಕೆ. ಶಿವಕುಮಾರ್ ಬರಲಿ ಅಥವಾ ದಲಿತರೊಬ್ಬರು ಸಿಎಂ ಆಗಲಿ. ಅದರಿಂದ ನಮಗೇನಾಗಬೇಕು?'' ಎಂದು ಗುಡುಗಿದ್ದಾರೆ.

ಹೀಗೆ ಮೋಹನ್ ಭಾಗವತ್ ಅವರು ಗುಡುಗಿ ಹೋದ ಮೇಲೆ ರಾಜ್ಯದ ಬಿಜೆಪಿ ನಾಯಕರು ತಣ್ಣಗಾಗಿದ್ದಾರೆ. ಅಷ್ಟೇ ಅಲ್ಲ, ದಿನ ಬೆಳಗಾದರೆ ಕಾಂಗ್ರೆಸ್ ಪಕ್ಷದ ಆಂತರಿಕ ಸಂಘರ್ಷದ ಬಗ್ಗೆ ಮಾತನಾಡುವುದನ್ನು ಕಡಿಮೆ ಮಾಡಿದ್ದಾರೆ.

ಸಂಪುಟ ಪುನಾರಚನೆ ಸದ್ಯಕ್ಕಿಲ್ಲ

ಈ ಮಧ್ಯೆ ರಾಜ್ಯ ಕಾಂಗ್ರೆಸ್‌ನ ಮಂತ್ರಿಗಿರಿ ಆಕಾಂಕ್ಷಿಗಳು ನಿರಾಶರಾಗಿದ್ದಾರೆ. ಕಾರಣ? ಅವರಂದುಕೊಂಡಂತೆ ಮಂತ್ರಿಮಂಡಲ ಪುನಾರಚನೆಗೆ ಕಾಲ ಕೂಡಿ ಬರುವಂತೆ ಕಾಣುತ್ತಿಲ್ಲ. ಯಾಕೆಂದರೆ ಈ ತಿಂಗಳ ಅಂತ್ಯದಲ್ಲಿ ಮಂತ್ರಿಮಂಡಲ ಪುನಾರಚನೆಯಾಗುತ್ತದಾ ಎಂದರೆ ರಾಹುಲ್ ನಡೆ ಅಡ್ಡವಾಗುವುದು ಸ್ಪಷ್ಟವಾಗಿದೆ. ಸದ್ಯಕ್ಕಿರುವ ಮಾಹಿತಿಗಳ ಪ್ರಕಾರ, ಬಿಹಾರ ವಿಧಾನಸಭಾ ಚುನಾವಣೆಯ ಫಲಿತಾಂಶ ಬಂದ ನಂತರ ರಾಹುಲ್ ಗಾಂಧಿ ವಿದೇಶ ಪ್ರವಾಸಕ್ಕೆ ಹೊರಡಲಿದ್ದಾರೆ. ಈ ತಿಂಗಳ ಅಂತ್ಯಕ್ಕೆ ಅವರು ವಾಪಸ್ಸಾಗುತ್ತಾರಾದರೂ ಅಷ್ಟೊತ್ತಿಗೆ ಬೆಳಗಾವಿಯ ವಿಧಾನಮಂಡಲ ಅಧಿವೇಶನಕ್ಕೆ ದಿನಗಣನೆ ಶುರುವಾಗಿರುತ್ತದೆ.

ಅಂದ ಹಾಗೆ, ಅಧಿವೇಶನ ಹತ್ತಿರವಾಗಿರುವ ಸಂದರ್ಭದಲ್ಲಿ ಮಂತ್ರಿಮಂಡಲ ಪುನಾರಚನೆಗೆ ಕೈ ಹಾಕುವುದು ಹೈರಿಸ್ಕು. ಯಾಕೆಂದರೆ ಇಂಥ ಕಸರತ್ತಿಗೆ ಕೈ ಹಾಕಿದಾಗ ಅತೃಪ್ತರ ದಂಡು ದೊಡ್ಡದಿರುತ್ತದೆ. ಈಗಿರುವ ಮಾಹಿತಿಯ ಪ್ರಕಾರ ಸಿದ್ದರಾಮಯ್ಯ ಸಂಪುಟದಲ್ಲಿರುವ ಬಹುತೇಕ ಸೀನಿಯರ್ ಮಂತ್ರಿಗಳನ್ನು ಸಂಪುಟದಿಂದ ಕೈ ಬಿಟ್ಟು ಪಕ್ಷದ ಕೆಲಸಕ್ಕೆ ನಿಯೋಜಿಸುವುದು ಹೈಕಮಾಂಡ್ ಲೆಕ್ಕಾಚಾರ.

ಆದರೆ ಈ ಲೆಕ್ಕಾಚಾರಕ್ಕೆ ಪೂರಕವಾಗಿ ಹೆಜ್ಜೆ ಇಟ್ಟರೆ ಮಂತ್ರಿಗಿರಿ ಕಳೆದುಕೊಳ್ಳುವ ಸೀನಿಯರುಗಳು ರೆಬೆಲ್ ಆಗುತ್ತಾರೆ. ಹೀಗೆ ಒಂದು ಕಡೆಯಿಂದ ಅವರು ತಲೆನೋವಾದರೆ, ಮತ್ತೊಂದು ಕಡೆಯಿಂದ ಮಂತ್ರಿಗಿರಿ ಸಿಗದವರು ಕನಲಿ ನಿಲ್ಲುತ್ತಾರೆ. ಹೀಗೆ ಎರಡು ಕಡೆಯಿಂದ ಅತೃಪ್ತರ ದಂಡು ತಿರುಗಿ ಬಿದ್ದಾಗ ಅಧಿವೇಶನ ನಡೆಯುತ್ತಿದ್ದರೆ ಉರಿಯುವ ಬೆಂಕಿಗೆ ತುಪ್ಪ ಹಾಕಿದಂತಾಗಿ ಧಗ-ಧಗ ಎನ್ನುತ್ತದೆ. ಹೀಗಾಗಿ ಅಧಿವೇಶನ ಮುಗಿಯುವವರೆಗೆ ಸಂಪುಟ ಪುನಾರಚನೆಗೆ ವರಿಷ್ಠರು ಕೈ ಹಾಕುವುದು ಕಷ್ಟ. ಇನ್ನು ಅಧಿವೇಶನ ಮುಕ್ತಾಯದ ಹಂತದಲ್ಲಿರುವಾಗ ಧನುರ್ಮಾಸ ಶುರುವಾಗುತ್ತದೆ. ಅಲ್ಲಿಗೆ ಜನವರಿ ಮಧ್ಯಭಾಗದವರೆಗೆ ಸಂಪುಟ ಪುನಾರಚನೆ ಎಂಬುದು ಮರೀಚಿಕೆ.

ಇದಾದ ನಂತರ ರಾಜ್ಯದ ನಿಗಮ-ಮಂಡಳಿಗಳಿಗೆ ಈ ಹಿಂದೆ ಅಧ್ಯಕ್ಷರಾದವರ ಕಾಲಾವಧಿ ಮುಕ್ತಾಯದ ಹಂತಕ್ಕೆ ಬಂದಿರುತ್ತದೆ.ಹೀಗಾಗಿ ಅವರ ಜಾಗಕ್ಕೆ ಯಾವ ಶಾಸಕರನ್ನು ತರಬೇಕು ಎಂಬ ಕಸರತ್ತು ಶುರುವಾಗುತ್ತದಲ್ಲದೇ, ಅದರ ಬೆನ್ನಿಗೇ ರಾಜ್ಯ ಬಜೆಟ್ ಮಂಡನೆಯ ಜ್ವರ

ಶುರುವಾಗುತ್ತದೆ. ಅಲ್ಲಿಗೆ ಸಂಪುಟ ಪುನಾರಚನೆ ಎಂಬುದು 'ತೋಳ ಬಂತು ತೋಳ' ಎಂಬ ಕತೆಯಂತಾಗುತ್ತದೆ ಎಂಬುದೇ ಮಂತ್ರಿ ಪದವಿ ಆಕಾಂಕ್ಷಿಗಳ ತಲೆನೋವು. ಮುಂದೇನಾಗುತ್ತದೋ?

ವಿಜಯೇಂದ್ರ ಬಾಯಿಗೆ ಕಬ್ಬು

ಈ ಮಧ್ಯೆ ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ವರ್ಚಸ್ಸು ಹೆಚ್ಚಾಗುವ ಘಟನೆ ನಡೆದಿದೆ. ಇದಕ್ಕೆ ಕಬ್ಬು ಬೆಳೆಗಾರರ ಜತೆ ಸೇರಿ ಅವರು ನಡೆಸಿದ ಬೀದಿ ಹೋರಾಟವೇ ಕಾರಣ. ಅಂದ ಹಾಗೆ, ಸಕ್ಕರೆ ಕಾರ್ಖಾನೆಗಳಿಗೆ ತಾವು ಪೂರೈಸುವ ಪ್ರತಿ ಟನ್ ಕಬ್ಬಿಗೆ 3500 ರು. ನೀಡಬೇಕು ಅಂತ ಆಗ್ರಹಿಸಿ ರಾಜ್ಯದ ಕಬ್ಬು ಬೆಳೆಗಾರರು ಹೋರಾಟ ನಡೆಸಿದ್ದರಲ್ಲ? ನವೆಂಬರ್ ನಾಲ್ಕರಂದು ಈ ಹೋರಾಟವನ್ನು ಬೆಂಬಲಿಸಿ ಗುರ್ಲಾಪುರದಲ್ಲಿ ಬೀದಿಗಿಳಿದ ಬಿ.ವೈ. ವಿಜಯೇಂದ್ರ ಅವರು, ''ರೈತರಿಗೆ ನ್ಯಾಯ ಸಿಗದಿದ್ದರೆ ನಾನಿಲ್ಲಿಂದ ಹೊರಡಯವುದಿಲ್ಲ'' ಅಂತ ಘೋಷಿಸಿಬಿಟ್ಟರು.

ಅಂದ ಹಾಗೆ, ಇದರ ಮರುದಿನವೇ ವಿಜಯೇಂದ್ರ ಅವರ ಹುಟ್ಟಿದ ಹಬ್ಬ. ಇದಕ್ಕಾಗಿ ಕೇಂದ್ರದ ಗೃಹ ಸಚಿವ ಅಮಿತ್ ಶಾ ಅವರು ಶುಭಾಶಯ ಹೇಳಲು ಫೋನ್ ಮಾಡಿದರೆ, ''ಸರ್, ಇಲ್ಲಿ ರೈತರ ಜತೆ ಇದ್ದೇನೆ. ಇವರಿಗೆ ನ್ಯಾಯ ಕೊಡಿಸುವವರೆಗೆ ನಾನಿಲ್ಲಿಂದ ಕದಲುವುದಿಲ್ಲ'' ಅಂತ ವಿವರಿಸಿದ ವಿಜಯೇಂದ್ರ, ಅವತ್ತು ಅಲ್ಲೇ ಉಳಿದುಕೊಂಡು ಮರುದಿನ ಅಲ್ಲೇ ತಮ್ಮ ಜನ್ಮದಿನದ ಶುಭಾಶಯಗಳನ್ನು ಸ್ವೀಕರಿಸಿದರು. ಅಷ್ಟೇ ಅಲ್ಲ, ಕಬ್ಬು ಬೆಳೆಗಾರರ ಅಹವಾಲು ಸ್ವೀಕರಿಸಲು ಸರಕಾರದ ಪ್ರತಿನಿಧಿ ಬರುವುದು ಸ್ಪಷ್ಟವಾದ ಮೇಲೆ ಅಲ್ಲಿಂದ ಹೊರಟರು. ಯಾವಾಗ ಈ ಬೆಳವಣಿಗೆ ನಡೆಯಿತೋ, ಆಗ ಸರಕಾರ ಕೂಡಾ ಗಡಬಡಿಸಿ ಮೇಲೆದ್ದಿದ್ದಲ್ಲದೆ ರೈತರ ಕಬ್ಬಿಗೆ ಹೆಚ್ಚುವರಿ ನೂರು ರುಪಾಯಿ ಕೊಡಿಸುವುದಾಗಿ ಘೋಷಿಸಿದೆ. ಈ ಬೆಳವಣಿಗೆಯಾದ ನಂತರ ರೈತ ಹೋರಾಟದ ಯಶಸ್ಸಿನಲ್ಲಿ ವಿಜಯೇಂದ್ರ ಪಾತ್ರ ದೊಡ್ಡದು ಎಂಬ ಮಾತು ಹರಡತೊಡಗಿದೆ. ಈ ಮಾತಿನಿಂದ ಮೊದಲು ಬೆಚ್ಚಿ ಬಿದ್ದವರು ವಿಜಯೇಂದ್ರ ವಿರೋಧಿಗಳು. ಹೀಗಾಗಿಯೇ ಹಲ ಮಾಧ್ಯಮ ಪ್ರತಿನಿಧಿಗಳನ್ನು ಸಂಪರ್ಕಿಸತೊಡಗಿದ ಈ ವಿರೋಧಿ ಪಾಳಯದ ನಾಯಕರು, ''ಯೇ, ರೈತರ ಹೋರಾಟದ ಯಶಸ್ಸಿಗೂ, ವಿಜಯೇಂದ್ರ ಅವರಿಗೂ ಸಂಬಂಧವಿಲ್ಲ. ಯಾವಾಗ ರೈತ ಹೋರಾಟಗಾರರ ಪ್ರತಿಭಟನೆ ಜೋರಾಗತೊಡಗಿತೋ? ಮಂತ್ರಿ ಶಿವಾನಂದ ಪಾಟೀಲರ ಮೇಲೆ ರೈತರು ಮುಗಿಬಿದ್ದರೋ? ಆಗ ರಾಜ್ಯ ಸರಕಾರ ಎಚ್ಚೆತ್ತುಕೊಂಡಿದೆ. ರೈತರಿಗೆ ನ್ಯಾಯ ದೊರಕಿಸಿಕೊಟ್ಟಿದೆ. ಇದರಲ್ಲಿ ವಿಜಯೇಂದ್ರ ಹೆಗ್ಗಳಿಕೆ ಏನು ಬಂತು?'' ಅನ್ನತೊಡಗಿದ್ದಾರೆ. ಆದರೆ ಯಾರೇನೇ ಹೇಳಲಿ, ಈ ಎಪಿಸೋಡಿನಲ್ಲಿ ವಿಜಯೇಂದ್ರರ ವರ್ಚಸ್ಸು ಹೆಚ್ಚಿದೆಯಲ್ಲದೆ, 90ರ ದಶಕದಲ್ಲಿ ಅವರ ತಂದೆ ಯಡಿಯೂರಪ್ಪ ಅವರು ನಡೆಸುತ್ತಿದ್ದ ಬೀದಿ ಹೋರಾಟದ ದಿನಗಳು ಪುನರಾವರ್ತನೆಗೊಂಡಂತೆ ಭಾಸವಾಗುತ್ತಿದೆ.

ಕೋರ್ ಕಮಿಟಿಗೆ ಕುಮಾರಣ್ಣ?

ಇನ್ನು ಜೆಡಿಎಸ್ ಪಕ್ಷದ ಕೋರ್ ಕಮಿಟಿಯ ಅಧ್ಯಕ್ಷ ಸ್ಥಾನದಿಂದ ಶಾಸಕ ಜಿ.ಟಿ.ದೇವೇಗೌಡರು ಕೆಳಗಿಳಿಯುವುದು ನಿಶ್ಚಿತವಾಗಿದೆಯಲ್ಲ? ಹೀಗೆ ಅವರು ಖಾಲಿ ಮಾಡುವ ಜಾಗಕ್ಕೆ ನೀವೇ ಬನ್ನಿ ಅಂತ ಪಕ್ಷದ ನಾಯಕರು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿಯವರನ್ನು ಆಗ್ರಹಿಸುತ್ತಿದ್ದಾರಂತೆ. ಕಾರಣ? ಈ ಸ್ಥಾನಕ್ಕೆ ಯಾರ ಹೆಸರನ್ನು ಪರಿಗಣಿಸಲು ಹೋದರೂ ಅವರು ಹಿಂಜರಿಯತೊಡಗಿದ್ದಾರೆ. ಅಷ್ಟೇ ಅಲ್ಲ, ರಾಜ್ಯ ರಾಜಕಾರಣ ನಿರ್ಣಾಯಕ ತಿರುವು ಪಡೆಯುತ್ತಿರುವ ಈ ಸಂದರ್ಭದಲ್ಲಿ ಕುಮಾರಣ್ಣ ಅವರೇ ಕೋರ್ ಕಮಿಟಿ ಅಧ್ಯಕ್ಷರಾದರೆ ಒಳ್ಳೆಯದು ಎಂದು ಹೇಳತೊಡಗಿದ್ದಾರೆ. ಪರಿಣಾಮ? ಕುಮಾರಸ್ವಾಮಿ ಅವರಿಗೀಗ ಧರ್ಮಸಂಕಟ. ಯಾಕೆಂದರೆ ಪಕ್ಷದ ರಾಜ್ಯಾಧ್ಯಕ್ಷ ಸ್ಥಾನದ ಜತೆ ಕೋರ್ ಕಮಿಟಿಯ ಅಧ್ಯಕ್ಷ ಸ್ಥಾನದ ಜವಾಬ್ದಾರಿಯನ್ನೂ ಹೊರುವುದು ಎಂದರೆ ಭಾರ ಭಾರ.

ಅಂದ ಹಾಗೆ, ಈಗಾಗಲೇ ಯೋಚಿಸಿದಂತೆ ನಿಖಿಲ್ ಕುಮಾರಸ್ವಾಮಿ ಅವರಿಗೆ ಪಕ್ಷದ ರಾಜ್ಯಾಧ್ಯಕ್ಷ ಸ್ಥಾನದ ಜವಾಬ್ದಾರಿ ವಹಿಸಿದ್ದರೆ ಈ ಕಡೆ ಕೋರ್ ಕಮಿಟಿಯ ಜವಾಬ್ದಾರಿ ಹೊರಬಹುದಿತ್ತು ಎಂಬುದು ಕುಮಾರಸ್ವಾಮಿ ಅವರ ಯೋಚನೆ. ಗಮನಿಸಬೇಕಾದ ಅಂಶವೆಂದರೆ ನಿಖಿಲ್ ಅವರಿಗೆ ರಾಜ್ಯಾಧ್ಯಕ್ಷ ಪಟ್ಟ ನೀಡಲು ಪಕ್ಷದಲ್ಲೀಗ ಯಾರ ತಕರಾರೂ ಇಲ್ಲ. ಆದರೆ ವಿಧಾನಸಭೆ ಚುನಾವಣೆ ಹತ್ತಿರ ಇಲ್ಲದಿರುವಾಗ ನಿಖಿಲ್ ಅವರಿಗೆ ತಕ್ಷಣ ಜವಾಬ್ದಾರಿ ವಹಿಸುವುದು ಕುಮಾರಸ್ವಾಮಿಯವರಿಗೆ ಇಷ್ಟವಿಲ್ಲ. ಪರಿಣಾಮ? ಈ ವಾರ ಬೆಂಗಳೂರಿನಲ್ಲಿರುವ ಪಕ್ಷದ ಕಚೇರಿಯಲ್ಲಿ ಪಕ್ಷದ ನಾಯಕರ ಜತೆ ಮಹತ್ವದ ಸಭೆ ನಡೆಸಲು, ಅಂತಿಮ ತೀರ್ಮಾನ ಕೈಗೊಳ್ಳಲು ಕುಮಾರಸ್ವಾಮಿ ನಿರ್ಧರಿಸಿದ್ದಾರೆ.

ಲಾಸ್ಟ್ ಸಿಪ್: ರಾಜ್ಯ ಕಾಂಗ್ರೆಸ್‌ನಲ್ಲಿ ಅಧಿಕಾರ ಹಂಚಿಕೆಯ ಕಚ್ಚಾಟಕ್ಕೆ ಬ್ರೇಕ್ ಬೀಳುವ ಲಕ್ಷಣ ದಟ್ಟವಾಗಿದೆಯಲ್ಲ? ಈ ಹಿನ್ನೆಲೆಯಲ್ಲಿಯೇ ದಿಲ್ಲಿಯ ಕೆಲ ಮಾಧ್ಯಮ ಪ್ರತಿನಿಧಿಗಳು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿದ್ದರಂತೆ. ಈ ಸಂದರ್ಭದಲ್ಲಿ ಖರ್ಗೆಯವರನ್ನು ಅವರು, ''ಈ ಸಂದರ್ಭದಲ್ಲಿ ನೀವು ಕರ್ನಾಟಕದ ಸಿಎಂ ಆಗಲು ಬಯಸುತ್ತೀರಾ?'' ಎಂದು ಕೇಳಿದ್ದಾರೆ. ಆಗ ಖರ್ಗೆಯವರು, ''ಈ ವಿಷಯದಲ್ಲಿ ವರಿಷ್ಠರ ಬಳಿ ನಾನು ಹೇಗ್ರೀ ಕೇಳೋಕಾಗುತ್ತೆ. ಚುನಾವಣೆಯಲ್ಲಿ ಸೋತರೂ ನನಗೆ ವರಿಷ್ಠರು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಸ್ಥಾನ, ವಿರೋಧ ಪಕ್ಷದ ನಾಯಕನ ಸ್ಥಾನಗಳನ್ನು ನೀಡಿದ್ದಾರೆ. ಇಷ್ಟೆಲ್ಲ ಆದ ಮೇಲೂ ನನಗೆ ಸಿಎಂ ಸ್ಥಾನ ಕೊಡಿ ಅಂತ ಹೇಗೆ ಕೇಳೋಕಾಗುತ್ತೀ?'' ಅಂತ ಮರುಪ್ರಶ್ನಿಸಿದರಂತೆ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಒಂದು ವಿನಂತಿ

ಕನ್ನಡದ ಸುದ್ದಿ ವಾಹಿನಿಗಳೇ, ಪರಪ್ಪನ ಅಗ್ರಹಾರ ಜೈಲಿನಲ್ಲಿ ನಡೆದ/ನಡೆಯುತ್ತಿರುವ ಅಕ್ರಮಗಳ ವಿಡಿಯೋವನ್ನು ದಯವಿಟ್ಟು ನೀವು ಪ್ರಸಾರ ಮಾಡದಿರಿ. ನಿಮ್ಮ ವಿಡಿಯೋಗಳಿಂದ ಈಗಾಗಲೇ ಜನರಿಗೆ ಜೈಲು ಎಂದರೆ 'ಸಾಮೂಹಿಕ ರೆಸಾರ್ಟ್' ಎಂಬ ಭಾವನೆ ಬಂದಿದೆ. ಅಲ್ಲಿ ನಡೆದಿವೆ ಎಂದು ತೋರಿಸಲಾಗುತ್ತಿರುವ ವಿಡಿಯೋಗಳು ನಿಜವೇ ಇರಬಹುದು. ಯಾರೇ ಜೈಲು ಇಲಾಖೆಯ ಮುಖ್ಯಸ್ಥರಾದರೂ ಈ ಅಕ್ರಮಗಳು ನಡೆಯುತ್ತಲೇ ಇರುತ್ತವೆ. ಇವಕ್ಕೆ ತಡೆಹಾಕುವುದು ಸರಕಾರದಿಂದ ಸಾಧ್ಯವೇ ಇಲ್ಲ, ಏಕೆಂದರೆ ಅವು ಮಾಮೂಲು. ಬಹುತೇಕ ಜೈಲುಗಳಲ್ಲಿ ಇಂಥ ಅಕ್ರಮಗಳಿಗೆ ಬರವಿಲ್ಲ, ಜನರು ಕೂಡ ಈ ಅಕ್ರಮಗಳಿಗೆ ಹೊಂದಿಕೊಂಡಿದ್ದಾರೆ!

ಸರಕಾರವು ಈ ಜೈಲು ಇಲಾಖೆಯಲ್ಲಿ ಇರುವ ಪೊಲೀಸರನ್ನು ಸಿವಿಲ್ ಪೊಲೀಸ್ ಇಲಾಖೆಯ ಜತೆಗೆ ವಿಲೀನಗೊಳಿಸಿ, ಸಿಆರ್‌ಪಿಎಫ್‌ಗೆ ಗುತ್ತಿಗೆ ಆಧಾರದ ಮೇಲೆ ಕೊಡುವುದು ಒಳ್ಳೆಯದು. ಆಗ ಜೈಲೆಂಬುದು ಜೈಲಾಗಿ ಬದಲಾವಣೆ ಆಗುತ್ತದೆ. ಜೈಲು ಪೊಲೀಸರು, ಸಿವಿಲ್ ಪೊಲೀಸರಾಗುವುದರಿಂದ ಬದಲಾವಣೆಗೆ ಒಡ್ಡಿಕೊಳ್ಳಲು ಸಾಧ್ಯವಾಗುತ್ತದೆ. ಪೊಲೀಸ್ ಇಲಾಖೆಯ ಬೇರೆ ಬೇರೆ ವಿಭಾಗಗಳಲ್ಲಿ ಸಿಬ್ಬಂದಿ ಹೆಚ್ಚಾಗಿ, ಜನಜೀವನದಲ್ಲೂ ಸುಧಾರಣೆಯಾಗಬಹುದು. ಆರೋಪಿಗಳು ಮತ್ತು ಕೈದಿಗಳನ್ನು ಬೇರೆ ರಾಜ್ಯಗಳ ಜೈಲುಗಳಿಗೆ (ಉದಾಹರಣೆಗೆ ಅಸ್ಸಾಂ ಇತ್ಯಾದಿ) ವರ್ಗಾವಣೆ ಮಾಡುವುದು ಒಳ್ಳೆಯದು. ಜೈಲುಗಳಿಗೆ ಜಾಮರ್ ಅಳವಡಿಸಿದ್ದಾರೆ; ಆದರೆ ಅವು ಹೊರಗೆ ಇರುವ ಜನಸಾಮಾನ್ಯರಿಗೆ ಮಾತ್ರ ತೊಂದರೆ ಕೊಡುತ್ತಿವೆ, ಜೈಲೊಳಗೆ ಇರುವವರಿಗೆ ತೊಂದರೆ ಯಿಲ್ಲ!

- ಕೆ.ಆರ್.ಗೋಪಿನಾಥ್, ಬೆಂಗಳೂರು

ಇವು ಕಹಿಸತ್ಯಗಳು

ಕಬ್ಬು ಬೆಳೆಯು ನೀಡುವ ಆರ್ಥಿಕ ಲಾಭದ ಪರಿಗಣನೆಯಲ್ಲಿ, ಪರಿಸರ ಮತ್ತು ಸಮಾಜದ ಮೇಲೆ ಉಂಟಾಗುತ್ತಿರುವ ಅನೇಕ ದುಷ್ಪರಿಣಾಮಗಳನ್ನು ಮರೆತೇಬಿಟ್ಟಿದ್ದೇವೆ. ಕಬ್ಬು ಬೆಳೆಯಿಂದ ವಾತಾವರಣದ ಮೇಲೆ ಉಂಟಾಗುತ್ತಿರುವ ಹಾನಿ ಅತೀವ ಗಂಭೀರವಾದುದು. ಈ ಬೆಳೆಗೆ ಅಪಾರ ನೀರಿನ ಬಳಕೆಯಾಗುವುದರಿಂದ ನೀರಿನ ಅಭಾವಕ್ಕೆ ಅದು ಪ್ರಮುಖ ಕಾರಣವಾಗಿದೆ. ಆಹಾರ ಬೆಳೆಗಳ ಪ್ರದೇಶ ಕ್ರಮೇಣ ಕುಂಠಿತವಾಗುತ್ತಿದ್ದು, ಆಹಾರ ಭದ್ರತೆಗೇ ಅದು ಸವಾಲನ್ನು ಒಡ್ಡುವಂತಾಗುತ್ತಿದೆ. ನಿರಂತರ ಏಕಬೆಳೆ ಪದ್ಧತಿಯ ಪರಿಣಾಮವಾಗಿ ಮಣ್ಣಿನ ಫಲವತ್ತತೆ ತೀವ್ರವಾಗಿ ಕುಸಿಯುತ್ತಿದೆ. ದೀರ್ಘಾವಧಿಯಲ್ಲಿ ಪರಿಸರ, ಆರ್ಥಿಕತೆ ಮತ್ತು ಸಾಮಾಜಿಕ ಸ್ಥಿರತೆಗೆ ಧಕ್ಕೆಯುಂಟುಮಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಸುಲಭ ಆದಾಯದ ನಿರೀಕ್ಷೆಯ ಪರಿಣಾಮವಾಗಿ ಕೃಷಿಯ ಸಾಂಪ್ರದಾಯಿಕ ಶ್ರಮಶೀಲ ಮನೋಭಾವ ಕುಗ್ಗಿ, ಆಲಸಿ ರೈತ ಸಮುದಾಯ ಸೃಷ್ಟಿಯಾಗಿದೆ- ಕಬ್ಬು ಬೆಳೆಯುವ ಪ್ರದೇಶಗಳಲ್ಲಿ ಅಪಾರ ಸಂಖ್ಯೆಯಲ್ಲಿರುವ ಬಾರುಗಳೇ ಇದಕ್ಕೆ ಸಾಕ್ಷಿ! ರೈತರ ಮಕ್ಕಳು ಹಳ್ಳಿಗಳನ್ನು ಬಿಟ್ಟು ಪಟ್ಟಣಗಳಿಗೆ ವಲಸೆ ಹೋಗುತ್ತಿರುವುದು ಹೊಸ ಸಾಮಾಜಿಕ ವ್ಯಥೆ.

ರಾಜ್ಯದಲ್ಲಿ ನಡೆಯುತ್ತಿರುವ ಕಬ್ಬು ಬೆಳೆಗಾರರ ಹೋರಾಟದ ಸಂದರ್ಭದಲ್ಲಿ, ಈ ಎಲ್ಲ ಅಂಶಗಳ ಬಗ್ಗೆ ಕೃಷಿ ವಿಜ್ಞಾನಿಗಳು, ಕೃಷಿ ವಿಶ್ವವಿದ್ಯಾಲಯಗಳು, ಕೃಷಿ ಇಲಾಖೆ, ಮತ್ತು ಕೃಷಿ ಮಂತ್ರಾಲಯ ಮೌನ ವಹಿಸಿರುವುದು ವಿಪರ್ಯಾಸಕರ ಸಂಗತಿ. ದಿನನಿತ್ಯ climate resilient agriculture ಎಂಬ ಹೆಸರಿನಲ್ಲಿ ನಡೆಯುವ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಮ್ಮೇಳನಗಳಲ್ಲಿ ಉಪದೇಶದ ಮಹಾಪೂರ ಹರಿಸುವ ಈ ತಜ್ಞರು, ಇಂದು ಕಬ್ಬು ಬೆಳೆಯ ಸಾಧಕ-ಬಾಧಕಗಳ ಬಗ್ಗೆ ಏಕೆ ಮಾತಾಡುತ್ತಿಲ್ಲ? ಇತ್ತ ಭರಪೂರ ಉತ್ಪಾದನೆಯಿಂದಾಗಿ ದಾಸ್ತಾನು ತುಂಬಿಹೋಗಿದೆ; ರಫ್ತು ಪರವಾನಗಿ ಸಿಗುತ್ತಿದ್ದರೂ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ನಮ್ಮ ಉತ್ಪಾದನಾ ವೆಚ್ಚಕ್ಕಿಂತ ಕಡಿಮೆ ದರದಲ್ಲೇ ಸಕ್ಕರೆ ದೊರೆಯುತ್ತಿರುವ ಕಾರಣ ಮಾರಾಟವೇ ಅಸಾಧ್ಯವಾಗಿದೆ. ಅಂತಾರಾಷ್ಟ್ರೀಯ ಎಥೆನಾಲ್ ದರಗಳೂ ಇಳಿಮುಖವಾಗಿವೆ. ಒಟ್ಟಿನಲ್ಲಿ, ಕಬ್ಬಿಗೆ ಅತಿಯಾದ ಕ್ಷೇತ್ರವನ್ನು ಮೀಸಲಿಡುವ ಪ್ರಕ್ರಿಯೆ ಮುಂದುವರಿದರೆ, ದೇಶ ಸಾಧಿಸಿರುವ ಆಹಾರ ಸ್ವಾವಲಂಬನೆಗೆ ಅಪಾಯ ಒದಗಬಹುದು.

- ಶರದ್ ದೇಶಪಾಂಡೆ, ಹುಬ್ಬಳ್ಳಿ

ಉಚಿತ ಭಾಗ್ಯಗಳ ಹಿಂದೆ ಅಡಗಿರುವ ಆರ್ಥಿಕ ಅಪಾಯ

ಜನರನ್ನು ಅವಲಂಬಿತರನ್ನಾಗಿ ಮಾಡಿ, ಉತ್ಪಾದನೆಯನ್ನು ಹಾಳುಮಾಡಿ, ರಾಜ್ಯಗಳನ್ನು ಸಾಲದಲ್ಲಿ ಮುಳುಗಿಸಿ, ಅಂತಿಮವಾಗಿ ಜಾಗತಿಕ ಹಣಕಾಸು ಶಕ್ತಿಗಳಿಗೆ ರಾಷ್ಟ್ರದ ಸಾರ್ವಭೌಮತ್ವವನ್ನು ಒಪ್ಪಿಸುವಂತೆ ಮಾಡುವುದು ಸಮಾಜವಾದದ ನಿಖರ ರಾಜಕೀಯ ಮಾದರಿ. ಸಮಾಜವಾದ ಕಲ್ಯಾಣವಲ್ಲ, ಪ್ರಗತಿಯಲ್ಲ; ಇದು ನಿಧಾನಗತಿಯ ನಾಗರಿಕತೆಯ ಹತ್ಯೆ.

ವಿಶ್ಲೇಷಣೆ

ಡಾ. ನಿರಂಜನ ಪೂಜಾರ
vveditoped@gmail.com

ಸಮಾಜವಾದವು ಒಂದು ಕಲ್ಯಾಣ ಚಿಂತನೆಯಲ್ಲ, ಅದು ಕರುಣೆ ಅಥವಾ ಉಚಿತ ಮುಖವಾಡದ ಹಿಂದೆ ಅಡಗಿರುವ ರಾಷ್ಟ್ರವಿರೋಧಿ ಅಸ್ತ್ರ. ಇದು ಒಂದು ರಾಷ್ಟ್ರವನ್ನು ಹೊರಗಿನ ದಾಳಿಗಳಿಂದಲ್ಲ, ಒಳಗೆ ಹುದುಗಿರುವ ಆರ್ಥಿಕ ಟೈಮ್-ಬಾಂಬ್‌ನಿಂದ ನಾಶಪಡಿಸುವ ವ್ಯವಸ್ಥೆ. ಈ ವ್ಯವಸ್ಥೆಯು ಪ್ರಾರಂಭವಾಗುವುದು ಸರ್ವಾಧಿಕಾರದಿಂದಲ್ಲ, ಬದಲಿಗೆ ಸಿಹಿಯಾದ ವಿಷದಂತೆ ನೀಡಲ್ಪಡುವ 'ಉಚಿತ ಯೋಜನೆ'ಗಳ ಮೂಲಕ.

ಸಾಮೂಹಿಕ ಮನೋದೌರ್ಬಲ್ಯವನ್ನು ಕಾರ್ಲ್‌ಮಾರ್ಕ್ಸ್ ಚೆನ್ನಾಗಿ ಅರಿತಿದ್ದ. ಜನರು ಭಯಕ್ಕೆ ಶರಣಾಗುವುದಿಲ್ಲ, ಆದರೆ ಆಸೆಗೆ ದಾಸರಾಗುತ್ತಾರೆ ಎಂಬ ಸತ್ಯವನ್ನು ಆತ ಜಗತ್ತಿಗೆ ತೋರಿಸಿದ. ಸಮಾಜವಾದವು ಕ್ರಾಂತಿಗಳ ಮೂಲಕ ದೇಶಗಳನ್ನು ಪ್ರವೇಶಿಸಲಿಲ್ಲ; ಬದಲಿಗೆ ಬಜೆಟ್, ತೆರಿಗೆ ಹಣದ ವಿತರಣೆ ಮತ್ತು ಆರ್ಥಿಕ ನಿಯಂತ್ರಣದ ಮೂಲಕ ದೇಶಗಳನ್ನು ಅದು ಕಬಳಿಸುತ್ತದೆ. ಆಲ್ಬರ್ಟ್ ಐನ್‌ಸ್ಟೈನ್ ಸೇರಿದಂತೆ ಅನೇಕ ಚಿಂತಕರು ಸಮಾಜವಾದವನ್ನು ಬೆಂಬಲಿಸಿದ್ದು ಅದು ಜನರಿಗೆ ಸ್ವಾತಂತ್ರ್ಯ ನೀಡುತ್ತದೆ ಎಂಬ ನಂಬಿಕೆಯಿಂದಲ್ಲ, ಬದಲಿಗೆ ಅದು ರಾಷ್ಟ್ರದ ನಿಯಂತ್ರಣವನ್ನು ವಿಶೇಷವಾಗಿ ಆರ್ಥಿಕ ನಿಯಂತ್ರಣವನ್ನು ಮೌನವಾಗಿ ಕೇಂದ್ರೀಕರಿಸುತ್ತದೆ ಎಂಬ ಕಾರಣದಿಂದ.

ಸಮಾಜವಾದದ ಮೂಲ ಉದ್ದೇಶವೇ ಪ್ರಜೆಗಳನ್ನು ಸರಕಾರದ ಮೇಲೆ ಅವಲಂಬಿತರನ್ನಾಗಿ ಮಾಡುವುದು. ಒಮ್ಮೆ ಸಾರ್ವಜನಿಕರು ಸೌಲಭ್ಯಗಳಿಗಾಗಿ ಸರಕಾರದತ್ತ ಕೈ ಚಾಚಿದರೆ, ಆ ಸರಕಾರವು ತನ್ನ ಖರ್ಚುಗಳನ್ನು ಭರಿಸಲು ಜಾಗತಿಕ ಹಣಕಾಸುದಾರರ ಮೇಲೆ ಅವಲಂಬಿತವಾಗುತ್ತದೆ. ಆಗ ಜಾಗತಿಕ ಬ್ಯಾಂಕಿಂಗ್ ವ್ಯವಸ್ಥೆಗಳು, ಅಂತಾರಾಷ್ಟ್ರೀಯ ಬಾಂಡ್ ಮಾರುಕಟ್ಟೆಗಳು ಮತ್ತು ವಿದೇಶಿ ಬಂಡವಾಳ ಜಾಲಗಳು ಸಾಲವನ್ನು ನಿಯಂತ್ರಿಸುತ್ತವೆ. ಹೀಗೆ ಸಾಲವೆಂಬುದು ಆಧುನಿಕ ಗುಲಾಮಗಿರಿಯ ಹೊಸ ಸರಪಳಿಯಾಗಿದೆ.

ಇಂದು ಜಗತ್ತಿನ ಪ್ರಮುಖ ಆರ್ಥಿಕತೆಗಳು ಸಾಲದ ಸುಳಿಯಲ್ಲಿ ನರಳುತ್ತಿವೆ. ಅಮೆರಿಕಾದ ಒಟ್ಟು ಜಿಡಿಪಿಯ ಸಾಲವು 34 ಟ್ರಿಲಿಯನ್ ದಾಟಿದೆ. ಜಪಾನ್‌ನ ಸಾಲ-ಜಿಡಿಪಿ ಅನುಪಾತವು ಜಗತ್ತಿನಲ್ಲಿ ಅತ್ಯಧಿಕ ಅಂದರೆ ಸುಮಾರು ಶೇ.260ರಷ್ಟು. ಚೀನಾ 14 ಟ್ರಿಲಿಯನ್ ಅಧಿಕೃತ ಮತ್ತು ಅಘೋಷಿತ ಸಾಲದಲ್ಲಿದೆ. ಜರ್ಮನಿ ಸುಮಾರು 3 ಟ್ರಿಲಿಯನ್ ಸಾಲದ ಹತ್ತಿರದಲ್ಲಿದೆ.

ಭಾರತದತ್ತ ಬಂದರೆ, ಕೇಂದ್ರ ಮತ್ತು ರಾಜ್ಯ ಸರಕಾರಗಳ ಒಟ್ಟು ಸಾಲವು ಈಗ 200 ಲಕ್ಷ ಕೋಟಿ ರು.ಗಳ ಗಡಿಯನ್ನು ದಾಟಿದೆ. ಪ್ರತಿ ವರ್ಷ ಭಾರತೀಯ ಸರಕಾರಗಳು ಸುಮಾರು 10-11 ಲಕ್ಷ ಕೋಟಿ ರು. ಹಣವನ್ನು ಕೇವಲ ಹಳೆಯ ಸಾಲಗಳ ಬಡ್ಡಿ ಪಾವತಿಗೆ ಮಾತ್ರ ಖರ್ಚು ಮಾಡುತ್ತಿವೆ. ಇದು ಪ್ರಗತಿಯಲ್ಲ, ಬದಲಿಗೆ ಕೇವಲ ಹಣಕಾಸಿನ ಉಸಿರುಗಟ್ಟುವಿಕೆ. ನಾವು ಸಂಪತ್ತನ್ನು ಸೃಷ್ಟಿಸುವ ಬದಲು, ಮುಂದಿನ ಪೀಳಿಗೆಯ ಭವಿಷ್ಯವನ್ನು ಕದಿಯುತ್ತಿದ್ದೇವೆ. ಆದರೆ ನಮ್ಮ ರಾಜಕಾರಣಿಗಳು ಈ ಉಚಿತ ವಿತರಣೆಯನ್ನು ಧರ್ಮಕಾರ್ಯವಾಗಿ ಚಿತ್ರಿಸುತ್ತಿದ್ದಾರೆ. ಆದರೆ ಇದು ಧರ್ಮವಲ್ಲ, ಬದಲಿಗೆ ಕರುಣೆಯ ಮುಖವಾಡದಲ್ಲಿರುವ ರಾಷ್ಟ್ರೀಯ ಹತ್ಯೆ.

ಆರ್ಥಿಕ ವಿಘಟನೆಗೆ ಕಾರಣವಾಗಿರುವ ಉಚಿತ ರಾಜಕಾರಣ

ಭಾರತವು ವಸಾಹತುಶಾಹಿಯನ್ನು ಮತ್ತು ಕ್ರೂರ ಸಾಮ್ರಾಜ್ಯಗಳನ್ನು ಎದುರಿಸಿ ತನ್ನ ಪರಂಪರೆಯನ್ನು ಉಳಿಸಿಕೊಂಡಿದೆ; ಕಾರಣ ನಾವು ಶ್ರಮ, ಶಿಸ್ತು ಮತ್ತು ಧರ್ಮದ ಬೇರುಗಳಲ್ಲಿ ಆಳವಾಗಿ ನೆಲೆಸಿದ್ದೆವು. ಆದರೆ ಇಂದು ನಾವು ಯುದ್ಧದಿಂದಲ್ಲ, ಬದಲಿಗೆ ಆಂತರಿಕ ಉಚಿತ ರಾಜಕಾರಣದಿಂದ ನರಳುತ್ತಿದ್ದೇವೆ. ನಮ್ಮ ಬಜೆಟ್‌ಗಳೇ ನಮ್ಮ ಬೆನ್ನಿಗೆ ಇರಿಯುತ್ತಿವೆ. 'ಉಚಿತಗಳ ವಿಕೃತಿ'ಯು ಆರ್ಥಿಕ ಚಿಂತನೆಯನ್ನು ಸಂಪೂರ್ಣವಾಗಿ ಕಬಳಿಸಿದೆ. ಈಗ ಚುನಾವಣೆಗಳು ಅಭಿವೃದ್ಧಿಯ ಕುರಿತಾಗಿ ನಡೆಯುತ್ತಿಲ್ಲ; ಎಷ್ಟು ಉಚಿತ ವಸ್ತುಗಳನ್ನು ವಿತರಿಸಬಹುದು ಎಂಬುದರ ಮೇಲೆ ನಡೆಯುತ್ತಿವೆ. ಇದು ಆಡಳಿತವಲ್ಲ, ಮತಗಳನ್ನು ಖರೀದಿಸುವ ತಂತ್ರ.

ಕರ್ನಾಟಕವು ಇದಕ್ಕೆ ಸ್ಪಷ್ಟ ನಿದರ್ಶನ. 2023ರ ಕಾಂಗ್ರೆಸ್ ಚುನಾವಣಾ ಪ್ರಚಾರವು ಅಭಿವೃದ್ಧಿಯ ಬದಲಿಗೆ ಸಂಪೂರ್ಣವಾಗಿ ಐದು ಗ್ಯಾರಂಟಿಗಳ ಮೇಲೆ ನಿಂತಿತ್ತು: ಗೃಹಲಕ್ಷ್ಮಿ, ಗೃಹಜ್ಯೋತಿ, ಶಕ್ತಿ, ಅನ್ನಭಾಗ್ಯ ಮತ್ತು ಯುವನಿಧಿ. ಈ ಯೋಜನೆಗಳಿಗೆ ವಾರ್ಷಿಕವಾಗಿ 50,000-60,000 ಕೋಟಿ ರು.ಗಳಷ್ಟು ಭಾರಿ ವೆಚ್ಚ ತಗುಲುತ್ತಿದೆ. ಒಂದು ಕಾಲದಲ್ಲಿ ಕಂದಾಯ ಹೆಚ್ಚುವರಿ (revenue surplus) ಹೊಂದಿದ್ದ ಕರ್ನಾಟಕವು ಈಗ ಉಚಿತ ಬಸ್ ಪ್ರಯಾಣ ಮತ್ತು ಮಾಸಿಕ ಭತ್ಯೆಗಳಿಗಾಗಿ ಸಾಲ ಮಾಡುತ್ತಿದೆ. ಮೂಲಸೌಕರ್ಯ, ರಸ್ತೆ, ಕೈಗಾರಿಕೆಗಳಂಥ ಬಂಡವಾಳ ವೆಚ್ಚದ ಹಣವು ಈ ಉಚಿತ ಯೋಜನೆಗಳಿಗೆ ಹರಿದುಹೋಗುತ್ತಿದೆ. ಇದು ರಾಜ್ಯದ ಆರ್ಥಿಕತೆಯನ್ನು ಸಂಪೂರ್ಣವಾಗಿ ಬುಡಮೇಲು ಮಾಡುತ್ತಿದೆ.

ದೆಹಲಿಯಲ್ಲೂ ಇದೇ ರೋಗ ಆವರಿಸಿ ಅರವಿಂದ ಕೇಜ್ರಿವಾಲ್ ಅವರ ಸಮಾಜವಾದ ಮತ್ತು ಜನಪ್ರಿಯತೆಯ ರಾಜಕಾರಣದ ಉಚಿತ ವಿದ್ಯುತ್, ಉಚಿತ ನೀರು, ಉಚಿತ ಬಸ್ ಪ್ರಯಾಣಗಳು ಯಾವುದೇ ಶಾಶ್ವತ ಸಂಪತ್ತನ್ನು ಸೃಷ್ಟಿಸದೇ ದೆಹಲಿಯ ಸಾಲವು 29,000 ಕೋಟಿಗಳಿಂದ 70,000 ಕೋಟಿ ರು.ಗಳವರೆಗೆ ಏರಿತ್ತು. ದೆಹಲಿ ಯಾವುದೇ ಕೃಷಿ ಅಥವಾ ಕೈಗಾರಿಕಾ ಸಂಪತ್ತನ್ನು ಉತ್ಪಾದಿಸುವುದಿಲ್ಲ, ಆದರೆ ವಿತರಣೆಯಲ್ಲಿ ಅಮೆರಿಕದಂತೆ ವರ್ತಿಸುತ್ತಿತ್ತು. ಹೀಗೆ ರಾಜಧಾನಿಯನ್ನು ನಿಧಾನಗತಿಯಲ್ಲಿ ದಿವಾಳಿ ಮಾಡಲಾಯಿತು.

ದುಃಖದ ಸಂಗತಿಯೆಂದರೆ, ಭಾರತೀಯ ಜನತಾ ಪಕ್ಷವೂ ಇದೇ ಮಾದರಿಯನ್ನು ಅನುಸರಿಸುತ್ತಿದೆ. ಮಧ್ಯಪ್ರದೇಶದಲ್ಲಿ 'ಲಾಡ್ಲಿ ಬೆಹನ್' ಯೋಜನೆಯು ವಾರ್ಷಿಕವಾಗಿ ಸುಮಾರು 15,000 ಕೋಟಿ ರು. ವೆಚ್ಚವನ್ನು ತರುತ್ತಿದೆ, ಕೇಂದ್ರದ ಅನೇಕ ಯೋಜನೆಗಳು ಸಮಾಜವಾದಿ ಚಿಂತನೆಯಿಂದ ಪ್ರೇರಣೆಗೊಂಡಿವೆ. ಇದು ಅಪಾಯಕಾರಿ ನಡೆ, ಏಕೆಂದರೆ ಬಿಜೆಪಿ ಮೂಲತಃ ಉದ್ಯಮಶೀಲತೆ ಮತ್ತು ಉತ್ಪಾದಕತೆಯನ್ನು ಉತ್ತೇಜಿಸುವ ಪಕ್ಷ ಎಂದು ನಂಬಲಾಗಿದೆ. ಆದರೆ ಈಗ ಅದು ಕೂಡ ನಗದು ವಿತರಣೆಯತ್ತ ಆಕರ್ಷಿತವಾಗುತ್ತಿದೆ. ಬಿಜೆಪಿ ನಗದು ಹಸ್ತಾಂತರದಲ್ಲಿ ಕಾಂಗ್ರೆಸ್ 2.0 ಆದರೆ, ವಿಕಸಿತ ಭಾರತದ ಸಂಕಲ್ಪಕ್ಕೆ ಅರ್ಥವೇ ಇರುವುದಿಲ್ಲ. ರಾಷ್ಟ್ರವು ತನ್ನ ಒಂದು ಆರ್ಥಿಕ ಸುಧಾರಣೆಯ ಬುನಾದಿಯನ್ನು ಕಳೆದುಕೊಳ್ಳುತ್ತದೆ.

ತೆಲಂಗಾಣವೂ ಅದೇ ಸಮಾಜವಾದಿ ವ್ಯಸನಕ್ಕೆ ಬಲಿಯಾಗುತ್ತಿದೆ. 'ರೈತ ಬಂಧು' ಯೋಜನೆ ಬೇಷರತ್ ನಗದು ವರ್ಗಾವಣೆಯಾಗಿ ಮಾರ್ಪಟ್ಟಿದೆ. ಕೃಷಿಗೆ ಉಚಿತ ವಿದ್ಯುತ್, ನಿರಂತರ ಸಾಲ ಮನ್ನಾದ ಪರಿಣಾಮವಾಗಿ ರಾಜ್ಯದ ಸಾಲವು 2018ರ ನಂತರ ಭಾರಿ ಏರಿಕೆ ಕಂಡಿದೆ. ರಾಜ್ಯದ ಸಾಲ-ಜಿಡಿಪಿ ಅನುಪಾತವು ಈಗ ಶೇ.40ರ ಗಡಿ ದಾಟಿದೆ.

ಕೇರಳವು ಭಾರತದ ಅತ್ಯಂತ ಸಮಾಜವಾದಿ ಹಾಗೂ ಉಚಿತ-ಆಶ್ರಿತ ರಾಜ್ಯ. ಕಮ್ಯುನಿಸ್ಟ್ ಪಕ್ಷವು ಸ್ಕ್ಯಾಂಡಿನೇವಿಯನ್ ಮಾದರಿಯನ್ನು ಅನುಸರಿಸಲು ಪ್ರಯತ್ನಿಸಿತು, ಆದರೆ ಉತ್ಪಾದನಾ ಶಕ್ತಿಯ ಬಗ್ಗೆ ಗಮನ ಹರಿಸಲಿಲ್ಲ. ಅಲ್ಲಿ ಅತ್ಯಧಿಕ ಪಿಂಚಣಿ ಮತ್ತು ಉಚಿತ ಪ್ರಯೋಜನಗಳಿವೆ, ಆದರೆ ಅತ್ಯಂತ ಕಡಿಮೆ ಉತ್ಪಾದಕ ನೆಲೆ ಇದೆ. ಕೇರಳೀಯರು ಗಲ್ಫ್ ರಾಷ್ಟ್ರಗಳಲ್ಲಿ ದುಡಿದು ಕಳುಹಿಸುವ ವಿದೇಶಿ ಹಣವೇ ರಾಜ್ಯದ ಆಮ್ಲಜನಕ. ಇದು ಆರ್ಥಿಕತೆಯಲ್ಲ ಕೇವಲ ಬಾಹ್ಯ ಜೀವಬೆಂಬಲ ವ್ಯವಸ್ಥೆ.

ಬಿಹಾರ: ಮುಂದಿನ ಆರ್ಥಿಕ ದುರಂತದ ಮುನ್ಸೂಚನೆ

ಬಿಹಾರ ರಾಜ್ಯವು ಈಗ ಅತ್ಯಂತ ಅಪಾಯದ ವಲಯದಲ್ಲಿದೆ. ಬಿಹಾರವು ಈಗಾಗಲೇ 4.06 ಲಕ್ಷ ಕೋಟಿ ರು. ಸಾಲದ ಹೊರೆಯಲ್ಲಿ ಕುಳಿತಿದೆ. ಆದರೂ, 2025ರ ವಿಧಾನಸಭಾ ಚುನಾವಣೆಯನ್ನು ಗುರಿಯಾಗಿಟ್ಟುಕೊಂಡು, ಆಡಳಿತಾರೂಢ ಎನ್‌ಡಿಎ ಮತ್ತು ಪ್ರತಿಪಕ್ಷದ 'ಇಂಡಿ' ಮೈತ್ರಿಕೂಟಗಳು ಒಟ್ಟಾಗಿ 33,000 ಕೋಟಿ ರು. ಮೌಲ್ಯದ ಉಚಿತ ಯೋಜನೆಗಳ ಭರವಸೆ ನೀಡುತ್ತಿವೆ. ಇದು ಸತ್ತುಹೋಗುತ್ತಿರುವ ರೋಗಿಗೆ ಮಾದಕವಸ್ತು ನೀಡಿದಂತೆ.

ಬಿಹಾರವು ದೇಶದ ಪ್ರಮುಖ ರಾಜ್ಯಗಳಲ್ಲಿ ಅತ್ಯಂತ ಕಡಿಮೆ ಬಂಡವಾಳ ವೆಚ್ಚದ ಅನುಪಾತವನ್ನು ಹೊಂದಿದೆ (ಕೇವಲ ಶೇ.13.7). ಇದನ್ನು ಒಡಿಶಾ (ಶೇ. 24.4), ಮಧ್ಯಪ್ರದೇಶ (ಶೇ.22) ಮತ್ತು ಉತ್ತರ ಪ್ರದೇಶ (ಶೇ.21.8) ಗಳೊಂದಿಗೆ ಹೋಲಿಸಿದರೆ, ಬಿಹಾರವು ಭವಿಷ್ಯದ ಸಂಪನ್ಮೂಲಗಳನ್ನು ನಿರ್ಮಿಸುತ್ತಿಲ್ಲ, ಕೇವಲ ವಿತರಿಸುತ್ತಿದೆ ಹೂಡಿಕೆ ಮಾಡುತ್ತಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಅತ್ಯಂತ ಚಿಂತಾಜನಕ ಅಂಶವೆಂದರೆ, ಬಿಹಾರವು ತನ್ನ ತೆರಿಗೆಯ ಮೂಲಕ ಕೇವಲ ಶೇ.23ರಷ್ಟು ಆದಾಯವನ್ನು ಸೃಷ್ಟಿಸುತ್ತದೆ; ಉಳಿದ ಶೇ.70ಕ್ಕಿಂತ ಹೆಚ್ಚು ಹಣವು ಕೇಂದ್ರದಿಂದ ತೆರಿಗೆ ಪಾಲು ಮತ್ತು ಅನುದಾನಗಳ ರೂಪದಲ್ಲಿ ಬರುತ್ತಿದೆ. ಬಿಹಾರವು ಸಂಪೂರ್ಣವಾಗಿ ಕೇಂದ್ರದ ಸಾಲದ ಮೇಲೆ ಅವಲಂಬಿತವಾಗಿದೆ. ಆದರೂ, ಎರಡೂ ಮೈತ್ರಿಕೂಟಗಳು ಕೇವಲ ಚುನಾವಣಾ ಗೆಲುವಿಗಾಗಿ ಬಿಹಾರವನ್ನು ಮತ್ತಷ್ಟು ಅವಲಂಬನೆಗೆ ತಳ್ಳುತ್ತಿವೆ. ಇದು ಕಲ್ಯಾಣ ಕಾರ್ಯಕ್ರಮವಲ್ಲ- ಇಂದಿನ ಚುನಾವಣಾ ಗೆಲುವಿಗಾಗಿ ಮುಂದಿನ ಪೀಳಿಗೆಯನ್ನು ಬಲಿ ಕೊಡಲಾಗುತ್ತಿರುವ ಹಣಕಾಸಿನ ಭಯೋತ್ಪಾದನೆ.

ಇದು ಸಮಾಜವಾದದ ನಿಖರ ರಾಜಕೀಯ ಮಾದರಿ: ಜನರನ್ನು ಅವಲಂಬಿತರನ್ನಾಗಿ ಮಾಡಿ, ಉತ್ಪಾದನೆಯನ್ನು ಹಾಳುಮಾಡಿ, ರಾಜ್ಯಗಳನ್ನು ಸಾಲದಲ್ಲಿ ಮುಳುಗಿಸಿ, ಅಂತಿಮವಾಗಿ ಜಾಗತಿಕ ಹಣಕಾಸು ಶಕ್ತಿಗಳಿಗೆ ರಾಷ್ಟ್ರದ ಸಾರ್ವಭೌಮತ್ವವನ್ನು ಒಪ್ಪಿಸುವಂತೆ ಮಾಡುತ್ತದೆ.

ಶ್ರಮ ಮತ್ತು ಯಜ್ಞಸಿದ್ಧಾಂತದ ಕೊಲೆ

ಸನಾತನ ಧರ್ಮದ ಮೂಲ ಸಿದ್ಧಾಂತ 'ಯಜ್ಞ', ಅಂದರೆ ಬಳಕೆಗೆ ಮೊದಲು ಶ್ರಮ. ಉತ್ಪಾದಕರು ಇರುವಲ್ಲಿ ಮಾತ್ರ ಲಕ್ಷ್ಮಿ ನೆಲೆಸುತ್ತಾಳೆ. ಆದರೆ ಸಮಾಜವಾದವು ಈ ಸಿದ್ಧಾಂತವನ್ನು ತಲೆಕೆಳಗು ಮಾಡುತ್ತದೆ. ಶ್ರಮ ಇಲ್ಲದ ಬಳಕೆ, ಪ್ರಯತ್ನವಿಲ್ಲದ ಹಕ್ಕು, ಉಚಿತ ಗ್ಯಾರಂಟಿಗಳು ಮೊದಲು ಶ್ರಮ ಸಂಸ್ಕೃತಿಯನ್ನು ನಾಶಮಾಡುತ್ತವೆ, ನಂತರ ಆರ್ಥಿಕತೆಯನ್ನು, ಕೊನೆಯಲ್ಲಿ ಸಾರ್ವಭೌಮತ್ವವನ್ನು ಹಾಳುಮಾಡುತ್ತವೆ. ಪ್ರಜೆಗಳಲ್ಲಿ ಪರಿಹಾರದ 'ಹಕ್ಕು' ಬೇಕು, 'ಶ್ರಮ' ಬೇಡ ಎಂಬ ಮನೋಭಾವವನ್ನು ಸೃಷ್ಟಿಸುತ್ತದೆ. ದೊಡ್ಡ ದೊಡ್ಡ ಸಂಸ್ಕೃತಿಗಳು ಹೀಗೆ ಗುಲಾಮರಾಗಿ ಸಾವನ್ನಪ್ಪಿದ ಉದಾರಣೆಗಳು ಅನೇಕ.

ಭಾರತವು ಈ ಅಪಾಯಕಾರಿ ಪ್ರವೃತ್ತಿಯನ್ನು ಹೀಗೇ ಮುಂದುವರಿಸಿದರೆ, ಸಾಲದ ಒತ್ತಡ ಸ್ಫೋಟಗೊಳ್ಳುತ್ತದೆ. ರುಪಾಯಿ ದುರ್ಬಲಗೊಳ್ಳುತ್ತದೆ. ಅಂತಾರಾಷ್ಟ್ರೀಯ ಸಾಲದಾತರು ನಮ್ಮ ನೀತಿಗಳನ್ನು ನಿರ್ದೇಶಿಸಲು ಆರಂಭಿಸುತ್ತಾರೆ. ರಾಜ್ಯಗಳು ಸಾಲ ಮರುಪಾವತಿಗೆ ವಿಫಲವಾಗಿ ದಿವಾಳಿಯಾಗಲೂಬಹುದು. ಆಗ ಯಾವ ಯುದ್ಧಗಳಿಲ್ಲದೆ ದೇಶ ಶರಣಾಗತಿಗೆ ಒಡ್ಡಿಕೊಳ್ಳಬೇಕಾಗುತ್ತದೆ.

ಅಂತಿಮ ಸಂದೇಶ

ಸಮಾಜವಾದ ಕಲ್ಯಾಣವಲ್ಲ, ಪ್ರಗತಿಯಲ್ಲ; ಇದು ನಿಧಾನಗತಿಯ ನಾಗರಿಕತೆಯ ಹತ್ಯೆ. ಸಾಲ ಸಹಾಯಕ ಹಸ್ತವಲ್ಲ; ಅದು ಟೈಮ್-ಬಾಂಬ್. ಇಂದು ಭಾರತವು ಸಮಾಜವಾದವನ್ನು ಕೊಲ್ಲದಿದ್ದರೆ ನಾಳೆ ಸಮಾಜವಾದವು ಭಾರತದ ಸಾರ್ವಭೌಮವನ್ನು ಕೊಲ್ಲುತ್ತದೆ.

(ಲೇಖಕರು ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರು)

ಭಟ್ಟರ್ ಸ್ಕಾಚ್

- **ಅಮಾಸೆ ಸುಬ್ಬು, ಮೈಸೂರು**
  ಭಟ್ರೇ, ಪರಿಚಿತ ಹುಡುಗಿ ನನಗೂ ಬೈಕ್ ಕಲಿಸು ಅಂತ ಬೆನ್ನ ಹಿಂದೆ ಬಿದ್ದಿದ್ದಾಳೆ. ಕಲಿಸುವ ಮುನ್ನ ಯಾತಕ್ಕೂ ನಿಮ್ಮ ಸಲಹೆ?
  – **ಕಲಿಸುವ ಕಳಕಳಿ ನಿನಗಿದ್ದರೆ ನೀನು ಅವಳ ಬೆನ್ನ ಹಿಂದೆ ಬೀಳಬೇಕು!**
- **ವೇಣುಗೋಪಾಲ ಕಂಚಿತೋಟ, ಕಡೂರು**
  ಭಟ್ರೇ, ಬಲ ಪಂಥದ ಪರವಾಗಿ ಬರೆದರೆ ಚಡ್ಡಿಪತ್ರಿಕೆ ಅಂತಾರೆ, ಸ್ವಲ್ಪ ಎಡ ಪರ ಬರೆದರೆ?
  – **ಚಡ್ಡಿ ಹಾಕದ ಪತ್ರಿಕೆ ಅಂತ ಯಾಕೆ ಕರೆಯೋದಿಲ್ವೋ?!**
- **ವಿ.ಹೇಮಂತಕುಮಾರ, ಬೆಂಗಳೂರು**
  ಭಟ್ರೇ, ಮಾಧ್ಯಮಕ್ಕೂ, ಉದ್ಯಮಕ್ಕೂ ವ್ಯತ್ಯಾಸವೇನು?
  – **ಅವೆರಡೂ ಒಂದರೊಳಗೊಂದು ಸೇರಿರುವ ಪದ!**
- **ಎಲ್.ವಿ.ಸತೀಶ್, ಮೈಸೂರು**
  ಭಟ್ರೇ, ನಿಮಗೆ ಒಂದು ದಿನ ಸಿಎಂ ಆಗುವ ಅವಕಾಶ ಸಿಕ್ಕರೆ?
  – **ಕುರ್ಚಿ ಬಿಟ್ಟು ಇಳಿಯುವುದಿಲ್ಲ!**
- **ಡಾ.ಆನಂದ ಕುಲಿಗೋಡ, ಧಾರವಾಡ**
  ಭಟ್ರೇ, ಮೊಯಿಲಿ ಮಹಾಕಾವ್ಯ ಇನ್ನೂ ತನಕ ಇಂಗ್ಲಿಷಿಗೇಕೆ ಅನುವಾದ ಆಗಿಲ್ಲ?
  – **ಕನ್ನಡದಲ್ಲಿ ಬರೆದಿದ್ದು ಅರ್ಥವಾದರೆ ತಾನೇ?!**
- **ವಾಣಿ ಹುಗ್ಗಿ, (ಇಮೇಲ್ ಮೂಲಕ)**
  ಭಟ್ರೇ, ಡ್ರೋನ್ ಹಾರಿಸುವ ನಿಮಗೆ ಇನ್ನೇನು ಹಾರಿಸಲು ಬರುತ್ತದೆ?
  – **ಕಾಗೆ ಹಾರಿಸಲು ಬರೊಲ್ಲಮ್ಮ!**
- **ಅಶೋಕಕುಮಾರ, ಚಿಕ್ಕಮಗಳೂರು**
  ಭಟ್ರೇ, ಗೆದ್ದೆತ್ತಿನ ಬಾಲಕ್ಕೂ, ಹನುಮಂತನ ಬಾಲಕ್ಕೂ ಸಂಬಂಧ ಇದೆಯಾ?
  – **ಹನುಮಂತನ ಬಾಲಕ್ಕೆ ಕೊನೆ ಇದೆ, ಆದರೆ ಗೆದ್ದೆತ್ತಿನ ಬಾಲಕ್ಕಿಲ್ಲ!**
- **ರೇಖಾ ವಸಂತ, ಬೆಂಗಳೂರು**
  ಭಟ್ರೇ, 'ಬಿಗ್ ಬಾಸ್' ಬಗ್ಗೆ ನಿಮ್ಮ ಅಭಿಪ್ರಾಯವನ್ನೇ ಹೇಳಲಿಲ್ಲವಲ್ಲ?
  – **ಬಿಗ್ ಬಾಸ್ ಅಂದ್ರೆ ಏನು ?**

ನಿಸರ್ಗ ಎಂದಾಕ್ಷಣ ಮನುಷ್ಯ ನೆನಪಾಗುತ್ತಾನಾ?

ತನ್ನ ಸ್ವಾರ್ಥಕ್ಕಾಗಿ ಪ್ರಕೃತಿಯ ಮೇಲೆ ನಿತ್ಯವೂ ಅತ್ಯಾಚಾರಗೈಯುತ್ತಿರುವ ಮನುಷ್ಯ, ಬದುಕಲು ಅತ್ಯವಶ್ಯವಾದ ಪ್ರಾಣವಾಯುವನ್ನು ನೀಡುವ ಮರವನ್ನು ಕಡಿಯುವುದರಲ್ಲೂ ದಾಕ್ಷಿಣ್ಯ ತೋರುತ್ತಿಲ್ಲ. ಮರವನ್ನು ಕಡಿಯುವುದೂ ಒಂದೇ, ತನ್ನ ಶ್ವಾಸಕೋಶವನ್ನು ಕತ್ತರಿಸಿಕೊಳ್ಳುವುದೂ ಒಂದೇ ಎಂಬ ಜ್ಞಾನವೂ ಈತನಿಗಿಲ್ಲ. ದೈವದತ್ತವಾಗಿ ಬಂದದ್ದನ್ನು ಉಳಿಸಿಕೊಳ್ಳಲು ಆಗದಿದ್ದಾಗ ಪರ್ಯಾಯ ವ್ಯವಸ್ಥೆಯೊಂದೇ ದಾರಿ.

ವಿದೇಶವಾಸಿ

ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ನಿಸರ್ಗವೆಂದರೆ ನಮಗೆ ನೆನಪಾಗುವುದು ಗಿಡ-ಮರಗಳು, ಹುಲ್ಲುಗಾವಲು, ಹೂವು-ಹಣ್ಣು, ನದಿ-ಸರೋವರಗಳು, ಗಿರಿಶಿಖರಗಳು. ಈ ಪಟ್ಟಿಯಿಂದ ಹೊರಗೆ ಉಳಿಯುವುದು ಮನುಷ್ಯ ಮಾತ್ರ. 'ನಿಸರ್ಗ' ಎಂದಾಕ್ಷಣ ಎಂದಾದರೂ ಮನುಷ್ಯ ನೆನಪಾಗುತ್ತಾನಾ? ಖಂಡಿತ ಇಲ್ಲ. ಒಂದೊಮ್ಮೆ ನೆನಪಾದರೂ ಖಳನಾಯಕನಾಗಿಯೇ ಹೊರತು ನಾಯಕನಾಗಿ ಅಲ್ಲ, ಸೇವಕನಾಗಿಯೂ ಅಲ್ಲ. ನಿಜ, ಪ್ರಕೃತಿಯಲ್ಲಿ ಸೇವಕನಿಗೂ ರಾಜಮರ್ಯಾದೆ, ಅಲ್ಲಿ ಕನಿಷ್ಠ ಎಂಬುದಿಲ್ಲ, ಪ್ರಕೃತಿಯೊಂದಿಗೆ ಕ್ಲಿಪ್ತವಾದ ಪ್ರತಿಯೊಂದು ವಸ್ತುವೂ, ಕಾರ್ಯವೂ ಪರಮಪವಿತ್ರ. ಆದರೆ ಆ ಪಾವಿತ್ರ್ಯದ ಕೀಲು ಕಳಚುತ್ತಿರುವುದು ಮನುಷ್ಯ.

ತನ್ನ ಸ್ವಾರ್ಥಕ್ಕಾಗಿ ಪ್ರಕೃತಿಯ ಮೇಲೆ ನಿತ್ಯವೂ ಅತ್ಯಾಚಾರಗೈಯುತ್ತಿರುವ ಮನುಷ್ಯ, ಬದುಕಲು ಅತ್ಯವಶ್ಯವಾದ ಪ್ರಾಣವಾಯುವನ್ನು ನೀಡುವ ಮರವನ್ನು ಕಡಿಯುವುದರಲ್ಲೂ ದಾಕ್ಷಿಣ್ಯ ತೋರುತ್ತಿಲ್ಲ. ಮರವನ್ನು ಕಡಿಯುವುದೂ ಒಂದೇ, ತನ್ನ ಶ್ವಾಸಕೋಶವನ್ನು ಕತ್ತರಿಸಿಕೊಳ್ಳುವುದೂ ಒಂದೇ ಎಂಬ ಜ್ಞಾನವೂ ಈತನಿಗಿಲ್ಲ. ದೈವದತ್ತವಾಗಿ ಬಂದದ್ದನ್ನು ಉಳಿಸಿಕೊಳ್ಳಲು ಆಗದಿದ್ದಾಗ ಪರ್ಯಾಯ ವ್ಯವಸ್ಥೆಯೊಂದೇ ದಾರಿ. ಅಂಥ ದಾರಿಗಳಲ್ಲೊಂದು ಕೃತಕ ಉದ್ಯಾನ ಅಥವಾ ಪಾರ್ಕ್.

ಸೌದಿ ಅರೇಬಿಯಾದ ನನ್ನ ಮನೆಯ ಹಿಂಭಾಗದಲ್ಲೊಂದು ಸುಂದರ ಉದ್ಯಾನವಿದೆ. ರಣ ಮರುಭೂಮಿಯ ದೇಶದ ಪ್ರಮುಖ ನಗರಗಳಲ್ಲೊಂದಾದ ದಮಾಮ್‌ನ ಮಧ್ಯಭಾಗದಲ್ಲಿರುವ ಇದು, ಉಳಿದ ಉದ್ಯಾನಗಳಿಗಿಂತ ಒಂದು ಸ್ತರ ಮೇಲೆ. ಉದ್ಯಾನದೊಳಗೆ ಕಬ್ಬಿಣದ ಬೇಲಿಗೆ ತಾಗಿಕೊಂಡಂತೆ, ಒಂದಕ್ಕೊಂದು ಹೊಂದಿಕೊಂಡ ಇಟ್ಟಿಗೆಗಳಿಂದ ನಿರ್ಮಿಸಿದ ನಡಿಗೆಯ ಮಾರ್ಗವಿದೆ. ಇಲ್ಲಿ ಒಂದು ಸುತ್ತುಹಾಕಿದರೆ, ಬರೋಬ್ಬರಿ ಎರಡೂವರೆ ಕಿ.ಮೀ. ಆಗುತ್ತದೆ. ಉದ್ಯಾನದೊಳಗೆ ಕಾರ್ ಪಾರ್ಕಿಂಗ್, ಮಕ್ಕಳಿಗೆ ಆಡಲು ಉಯ್ಯಾಲೆ-ಜಾರುಬಂಡಿಯಂಥ ಸೌಲಭ್ಯಗಳಿವೆ. ಜಾರುಬಂಡಿ ಇರುವೆಡೆ ಸ್ವಲ್ಪ ಮರಳು, ಡಾಂಬರ್ ಹಾಕಿದ ಕಾರ್ ಪಾರ್ಕಿಂಗ್ ಮತ್ತು ಒಳಗಿನ ರಸ್ತೆಯ ಭಾಗ ಬಿಟ್ಟರೆ, ಉಳಿದೆಲ್ಲೆಡೆ ಹಸಿರುಮಯ. ಇಲ್ಲಿ ಖರ್ಜೂರ, ತಾಳೆ ಸೇರಿದಂತೆ 500 ಮರಗಳಿವೆ. ಎಲ್ಲವೂ 25-30 ಅಡಿಗಿಂತಲೂ ಎತ್ತರ ಬೆಳೆದುನಿಂತು ಭೂಮಿಗೆ ತಂಪೆರೆಯುತ್ತಿವೆ. ನಡುನಡುವೆ ಅಲಂಕಾರಿಕ ಗಿಡಗಳು, ಒಂದು ಮಲ್ಲಿಗೆ ಬಳ್ಳಿ ಇತ್ಯಾದಿಗಳಿವೆ. ಇಷ್ಟೆಲ್ಲ ಇರುವ ಉದ್ಯಾನಕ್ಕೊಂದು ಹೆಸರಿಲ್ಲ. ಒಂದಿಷ್ಟು ಕೆಲಸಗಾರರು ಮುಂಜಾನೆ 5ಕ್ಕೆ ಬಂದು ಉದ್ಯಾನವನ್ನು ಗುಡಿಸಿ, ಹುಲ್ಲುಹಾಸು ಮತ್ತು ಗಿಡಗಳಿಗೆ ನೀರು ಹಾಯಿಸಿ ನಿರ್ಗಮಿಸುತ್ತಾರೆ.

ಸಾಕಷ್ಟು ವರ್ಷಗಳಿಂದ ಈ ಉದ್ಯಾನವನ್ನು ಹೊರಗಿನಿಂದಲೇ ನೋಡುತ್ತಿದ್ದೆ, ಒಮ್ಮೆಯೂ ಒಳಗೆ ಕಾಲಿಟ್ಟಿರಲಿಲ್ಲ. ಕೆಲ ತಿಂಗಳ ಹಿಂದೆ ಒಮ್ಮೆ ಉದ್ಯಾನದ ಒಳಗೆ ಹೋಗಿ ನೋಡೋಣವೆಂದು ಹೋದೆ. ಅಷ್ಟೇ, 'ಲವ್ ಅಟ್ ಫಸ್ಟ್ ಸೈಟ್' ಅಂತಾರಲ್ಲಾ, ಹಾಗಾಯಿತು! ಈ ಮೊದಲು ನಾನೆಂದೂ ಸತತ 3 ದಿನಕ್ಕಿಂತ ಹೆಚ್ಚು ವಾಕ್ ಮಾಡಿದ ದಾಖಲೆಯಿಲ್ಲ; ಈ ಉದ್ಯಾನ ಅದೆಷ್ಟು ಆಪ್ತವಾಯಿತೆಂದರೆ, ಪ್ರತಿನಿತ್ಯ ಬೆಳಗ್ಗೆ 2 ಸುತ್ತು ನಡಿಗೆ. ಆ ಸೆಳೆತವೇ ನನ್ನನ್ನು ಮುಂಜಾನೆ ಬೇಗ ಎಬ್ಬಿಸಿಬಿಡುತ್ತಿತ್ತು. ಒಮ್ಮೆ ಅದ್ಯಾಕೋ ಬೆಳಗ್ಗೆ ವಾಕಿಂಗ್ ಹೋಗಲು ಆಗಿರಲಿಲ್ಲ, ರಾತ್ರಿಯ ವಾತಾವರಣ ಹೇಗಿರುತ್ತದೆಂದು ನೋಡಲು ಹೋದೆ. ಅಂದು ಅಚ್ಚರಿಯೆಂಬಂತೆ ಒಂದು ಬಿಳಿ ಬಣ್ಣದ ಮೊಲ ಎದುರಾಯಿತು. ಸರಿಯಾಗೇ ಓದಿದ್ದೀರಿ- 'ಮೊಲ ಎದುರಾಯಿತು'. ಮರುಭೂಮಿಯ ಮಧ್ಯೆ ಉದ್ಯಾನವನ್ನು ಮಾಡುವುದೇ ಹರಸಾಹಸ, ಅದರಲ್ಲಿ ಮೊಲವೂ ಇದೆ ಎಂದರೆ ನಂಬಲಾಗಲಿಲ್ಲ. ಯಾರಾದರೂ ತಂದುಬಿಟ್ಟಿರಬಹುದಾ? ಅಷ್ಟು ಚೆಂದದ ಮೊಲವನ್ನು ನೋಡಿದರೆ, ವೈರಾಗ್ಯ ಬರಲು ಸಾಧ್ಯವೇ ಇಲ್ಲ. ಒಂದೊಮ್ಮೆ ಮೊಲ ಸಾಕಣೆ ಸಾಕೆನಿಸಿದರೂ, ಬಹುತೇಕವಾಗಿ ಅದರ ಅಂತ್ಯ ಊಟದ ತಟ್ಟೆಯಲ್ಲೇ ಹೊರತು ಉದ್ಯಾನದಲ್ಲಲ್ಲ. ಅದೂ ಅಲ್ಲದೆ, ಬೇಡ ಎಂದರೆ ಹಣಕ್ಕೆ ಖರೀದಿಸುವ ಪೆಟ್ ಶಾಪ್‌ಗಳೂ ಇಲ್ಲಿವೆ. ಅಂದರೆ ಅದು ಯಾರೂ ಬಿಟ್ಟು ಹೋಗಿರಲು ಸಾಧ್ಯವಿಲ್ಲ. ಮಿಕ್ಕ ಸಾಧ್ಯತೆಯೆಂದರೆ, ಅಕ್ಕ ಪಕ್ಕದಲ್ಲಿನ ಸಾಕಿದವರ ಮನೆಯಿಂದ ತಪ್ಪಿಸಿಕೊಂಡು ಬಂದಿರಬಹುದು. ಆ ಸಾಧ್ಯತೆಯೇ ಹೆಚ್ಚು. ಆದರೆ ತಪ್ಪಿಸಿಕೊಂಡ ಮೊಲಕ್ಕೆ ಹತ್ತಿರದಲ್ಲೇ ತಾನು ಬದುಕಬಲ್ಲ ಸ್ಥಳವೊಂದಿದೆ ಎಂದು ತಿಳಿದದ್ದಾದರೂ ಹೇಗೆ? ಅದಕ್ಕೆ ಮಾರ್ಗದರ್ಶನ ಮಾಡಿದ್ದು ಯಾರು? ಬಹುಶಃ ಅದೇ ಪ್ರಕೃತಿ ನಿಯಮ. ಏನೇ ಇರಲಿ, ಕಂಡ ಕ್ಷಣದಿಂದಲೇ ಅದು ಹೃದ್ಯವಾಯಿತು.

ಮರುದಿನ ವಾಕಿಂಗ್‌ಗೆ ಹೋಗುವಾಗ ಒಂದು ಗಜ್ಜರಿ ಒಯ್ದೆ. ತಿನ್ನದೆ ಎಷ್ಟು ದಿನವಾಗಿತ್ತೋ? ನಿಮಿಷಾರ್ಧದಲ್ಲಿ ತಿಂದು ಮುಗಿಸಿತು. ಅಂದಿನಿಂದ ಪ್ರತಿ ರಾತ್ರಿ 'ಕ್ಯಾರೆಟ್ ವಾಕ್' ಮುಂದುವರಿಯಿತು. 2 ವಾರದ ನಂತರ ಒಮ್ಮೆ ಬಿಳಿಯ ಮೊಲದೊಂದಿಗೆ ಬೂದು ಬಣ್ಣದ ಮೊಲ, ನಂತರ ಇನ್ನೊಂದು ಹೀಗೆ 3 ಮೊಲಗಳು ಕಾಣಿಸಿಕೊಂಡವು. ಆ ಮೂರರ ವಾಸ್ತವ್ಯವೂ ಒಂದೇ ಪೊದೆಯಲ್ಲಿ. ಅಲ್ಲಿಗೆ ರಾತ್ರಿ ವಾಕ್‌ನ ಬಜೆಟ್ 3 ಗಜ್ಜರಿಗೆ ಏರಿತು. ದಿನಗಳೆದಂತೆ, ವಾಕ್ ಮಾಡಲು ಮನಸ್ಸಿಲ್ಲದಿದ್ದರೂ ಮೊಲಕ್ಕೆ ಗಜ್ಜರಿ ಕೊಡಲಾದರೂ ಹೋಗಬೇಕು ಎನ್ನುವಷ್ಟು ಬಾಂಧವ್ಯ ಬೆಳೆಯಿತು. ಹೀಗಿರುವಾಗ ಒಂದು ದಿನ 5-6 ಪುಂಡು ಹುಡುಗರು ಅದನ್ನು ಹಿಡಿಯಲು ಯತ್ನಿಸುತ್ತಿದ್ದರು. ಅವರನ್ನೇನೋ ಗದರಿಸಿ ಕಳಿಸಿದರೆ, ಮರುದಿನ ಯುವಕರ ತಂಡವೊಂದು ಸಿದ್ಧವಾಗಿ ಬಂದಿತ್ತು.

ಅವರಲ್ಲಿ ವಾದಕ್ಕೇ ನಿಲ್ಲಬೇಕಾಯಿತು. ಈ ಬೇಸಗೆಯ ತಾಪದಿಂದ ಮೊಲವನ್ನು ಬಚಾವು ಮಾಡಲು ಬಂದಿದ್ದೇವೆ ಎಂದು ವಾದಿಸುತ್ತಿದ್ದ ಯುವಕರ ಕೈಯಲ್ಲಿ ದೊಡ್ಡ ಬಡಿಗೆಗಳಿದ್ದವು. ಸ್ಥಳೀಯ ಯುವಕರೊಂದಿಗೆ ತಲೆ ಚಚ್ಚಿಕೊಳ್ಳುವುದು ಬೇಡ ಎಂದುಕೊಂಡು, ಭಾರವಾದ ಮನಸ್ಸಿನಿಂದಲೇ ಅಲ್ಲಿಂದ ಹೊರಟೆ. ಆದರೆ, ಮೂರೂ ಮೊಲಗಳ ಆಯುಷ್ಯ ಗಟ್ಟಿಯಾಗಿದೆ ಎಂದು ಮರುದಿನ ಸಾಬೀತಾಗಿತ್ತು. ಅಂದಿನಿಂದ ಇಂದಿನವರೆಗೂ ಕ್ಯಾರೆಟ್ ವಾಕಿಂಗ್ ನಿರಂತರವಾಗಿದೆ.

ಮನುಷ್ಯ ಕೊಲ್ಲುವ ವಿದ್ಯೆ ಕಲಿತರೆ, ಪ್ರಾಣಿಗಳು ಬದುಕುವ ವಿದ್ಯೆಯನ್ನೂ ಕಲಿತಿವೆ! ಆ ವಿದ್ಯೆ ಅವನ್ನು ಇನ್ನೆಷ್ಟು ದಿನ ಬದುಕಿಸಬಲ್ಲದೋ ಗೊತ್ತಿಲ್ಲ!

ವಿಭಿನ್ನ ವ್ಯಕ್ತಿತ್ವಗಳು ನಮಗೆ ಕಾಣಸಿಗುವ ಸ್ಥಳಗಳಲ್ಲಿ ಉದ್ಯಾನವೂ ಒಂದು. ಆರೋಗ್ಯ ಸುಧಾರಿಸಿಕೊಳ್ಳಲು ಬರುವವರು, ಇದ್ದ ಆರೋಗ್ಯ ನಿಭಾಯಿಸಿಕೊಳ್ಳಲು ಬರುವವರು, ಬೇರೆಯವರ ಆರೋಗ್ಯ ಹಾಳುಗೆಡವಲು ಬರುವವರು, ಎಲ್ಲರನ್ನೂ ಒಟ್ಟಿಗೇ ನೋಡಬಹುದಾದ ಸ್ಥಳ ಅದು. ಒಂದಿಷ್ಟು ಜನ ಓಡುತ್ತಿರುತ್ತಾರೆ, ಒಂದಿಷ್ಟು ಜನ ಆಡುತ್ತಿರುತ್ತಾರೆ, ಒಂದಿಷ್ಟು ಮಂದಿ ಆಟ-ವಿಹಾರದ ನೆಪದಲ್ಲಿ ಅರಿವಿದ್ದೋ ಇಲ್ಲದೆಯೋ ವಾತಾವರಣ ಹಾಳುಗೆಡಹುವಲ್ಲಿ ನಿರತರಾಗಿರುತ್ತಾರೆ. ಈ ಉದ್ಯಾನದಲ್ಲಿ ಸಂಜೆ ಫ್ರಿಸ್ಬೀ, ಕ್ರಿಕೆಟ್, ಫುಟ್‌ಬಾಲ್ ಆಡಲು, ಮನೆಯವರೊಂದಿಗೆ, ಮಕ್ಕಳೊಂದಿಗೆ ವಿಹಾರಕ್ಕೆ ಬರುವವರಿದ್ದಾರೆ. ಯಾವ ತಕರಾರಿಲ್ಲ, ಉದ್ಯಾನವಿರುವುದೇ ಅದಕ್ಕೆ. ಆದರೆ ಯಾವುದೇ ಸ್ಥಳಕ್ಕೆ ಹೋದರೂ ಅಲ್ಲಿನ ಒಂದು ಶಿಷ್ಟಾಚಾರ ಇರುತ್ತದೆ. ಆಯಾ ಸ್ಥಳಕ್ಕೆ ಕೊಡಬೇಕಾದ ಮರ್ಯಾದೆಯನ್ನು ನಾವು ಕೊಡಲೇಬೇಕು. ಕೆಲವರು ಉದ್ಯಾನಕ್ಕೆ ಬಂದು ಊಟ-ಉಪಾಹಾರ ಸೇವಿಸುವುದು ಸಾಮಾನ್ಯ. ಒಂದು ವರ್ಗದವರು ತಾವು ಬೀರಿದ ಎಲ್ಲಾ ಕಸವನ್ನೂ ಎತ್ತಿ ಕಸದಬುಟ್ಟಿಗೆ ಹಾಕಿ ಹೋಗುತ್ತಾರೆ, ಒಳ್ಳೆಯದು. ಇನ್ನೊಂದು ವರ್ಗದವರಿದ್ದಾರೆ, ಉದ್ಯಾನಕ್ಕೆ ಬಂದಾಗ ಇದ್ದಕ್ಕಿದ್ದಂತೆ ಅವರೊಳಗೆ ಹುದುಗಿದ್ದ 'ಪರೋಪಕಾರಾರ್ಥಂ ಇದಂ ಶರೀರಂ' ಮಂತ್ರ ಜಾಗೃತಗೊಳ್ಳುತ್ತದೆ. ಅವರ ಔದಾರ್ಯ ತುಳುಕುವುದು ಇಲ್ಲಿ ಮಾತ್ರ. ತಾವು ತಿಂದು ಬಿಟ್ಟ, ಕೆಳಗೆ ಬೀರಿದ ಆಹಾರವನ್ನು ಹಕ್ಕಿಗಳು ತಿಂದು ಬದುಕಲಿ ಎಂಬ ಉದಾರ ಮನಸ್ಸು ಅವರದ್ದು. ಇಂಥವರು ಬಿಟ್ಟು ಹೋಗದಿದ್ದರೆ ಬಹುಶಃ ಹಕ್ಕಿಗಳು ಬದುಕುತ್ತಲೇ ಇರಲಿಲ್ಲವೇನೋ? ಅದಿರಲಿ, ಹಕ್ಕಿಗಳು ಪ್ಲಾಸ್ಟಿಕ್, ಚೂಯಿಂಗ್ ಗಮ್, ಕೋಳಿಯ ಕಾಲು, ಮೀನಿನ ಮೂಳೆಯನ್ನೂ ತಿನ್ನುತ್ತವಾ? ಅವರು ಕಲಿತದ್ದು ಹೆಚ್ಚಾಯಿತಾ ಅಥವಾ ನಾವು ಕಲಿತದ್ದೇ ಕಡಿಮೆ ಆಯಿತಾ!

ಒಮ್ಮೆ ಈ ಉದ್ಯಾನದ ಹುಲ್ಲುಹಾಸಿನ ಮೇಲೆ ಇಬ್ಬರು (ಭಾರತೀಯರೇ) ಸುಮ್ಮನೆ ವಾಲಿಬಾಲ್ ಆಡುತ್ತಿದ್ದುದನ್ನು ನೋಡಿದೆ. ಮಾರನೇ ದಿನ ನೆಟ್ ತಂದು ಎರಡು ಕರೆಂಟ್ ಕಂಬಕ್ಕೆ ಬಿಗಿದು, ಕೋರ್ಟ್ ಅಳತೆಯಂತೆ ಗಡಿ ಗುರುತಿಸಲು ಹಗ್ಗ ಇಟ್ಟರು. ಸರಿಹೋಗಲಿಲ್ಲವೇನೋ, ಮಾರನೇ ದಿನ ಹಗ್ಗದ ಬದಲು ಸುಣ್ಣದಲ್ಲಿ ಮಾರ್ಕ್ ಮಾಡಿದರು. ಅದೂ ಸರಿಯಾಗದಿದ್ದಾಗ ಗುದ್ದಲಿ, ಪಿಕಾಸಿ ತಂದು ಹುಲ್ಲನ್ನು ಕೆತ್ತಿ, ಎರಡು ಕಂಬ ಹುಗಿದು ನೆಟ್ ಕಟ್ಟಿ ಆಡತೊಡಗಿದರು. ಅವರ ತಯಾರಿ ನೋಡಿ ಬಹುಶಃ ದೊಡ್ಡ ತಂಡವೇ ಬರಬಹುದು ಅಂದುಕೊಂಡೆ. ಊಹೆ ಸರಿಯಾಗಿತ್ತು, ಈಗ ತಂಡ ಬೆಳೆದಿದೆ. ಅವರೊಂದಿಗೆ ಇಬ್ಬರು ಮಕ್ಕಳು ಸೇರಿಕೊಂಡಿದ್ದಾರೆ. ಈಗ ಒಂದೊಂದು ತಂಡದಲ್ಲಿ ಬರೋಬ್ಬರಿ ಇಬ್ಬರಿದ್ದಾರೆ, ಒಮ್ಮೆಯೂ ಬಾಲ್ ಹಿಂತಿರುಗಿ ಸರ್ವಿಸ್ ಮಾಡಿದ ಕೋರ್ಟಿಗೆ ಹೋದದ್ದು ಕಂಡಿಲ್ಲ. ಹೊಂಡ ಹೊಡೆದದ್ದೇ ಸಾಧನೆ! ಕೆಲವರಿಗೆ ಪಾರ್ಕ್ ಎಂದರೆ ಜೋಕ್!

ಕೊನೆಯದಾಗಿ ಒಬ್ಬ ಬಾಬಾನ ಕತೆ ಹೇಳುತ್ತೇನೆ. ಬಾಬಾ ಎಂದರೆ ಸನ್ಯಾಸಿಯಲ್ಲ. ಅದು ಇಲ್ಲಿ ಹಿರಿಯರನ್ನು ಗೌರವದಿಂದ ಕರೆಯಲು ಬಳಸುವ ಪದ. ಮುಂಜಾನೆಯ ಸೂರ್ಯಕಿರಣ ಸೇವಿಸಲು ಕಾರಿನಲ್ಲಿ ಬರುವ ಸುಮಾರು 80 ವರ್ಷದ ಬಾಬಾ, ಮಡಚಿಟ್ಟ ಕುರ್ಚಿಯನ್ನು ಡಿಕ್ಕಿಯಿಂದ ಹೊರತೆಗೆದು ಬಿಡಿಸಿ, ಸೂರ್ಯಾಭಿಮುಖವಾಗಿ ಹಾಕಿ ಕುಳಿತುಕೊಳ್ಳುತ್ತಾನೆ. ಅರ್ಧ ಗಂಟೆ ಕಳೆಯುತ್ತಿದ್ದಂತೆ ಅವನ ಮೊಮ್ಮಗ ಬರುತ್ತಾನೆ. ಉದ್ಯಾನದ ಒಳಗೆ ಬರಲು 3 ಪ್ರವೇಶ ದ್ವಾರಗಳಿದ್ದರೂ ಆತ ಕಬ್ಬಿಣದ ಬೇಲಿಯ ಮಧ್ಯೆ ನುಸುಳಿಯೇ ಬರುವುದು. 100 ಕಿಲೋ ತೂಗುವ 16 ವರ್ಷದ ಮೊಮ್ಮಗ ತೂರಿಕೊಂಡು ಬರಲು ವ್ಯವಸ್ಥೆ ಮಾಡಿಕೊಟ್ಟವರು ಯಾರೋ ಗೊತ್ತಿಲ್ಲ. ವಿಶೇಷವೆಂದರೆ ಉದ್ಯಾನದ ಕಬ್ಬಿಣದ ಬೇಲಿಯ ಅಲ್ಲಲ್ಲಿ 3-4 ಕಡೆ ಈ ವ್ಯವಸ್ಥೆಯಿದೆ! ಬರುವಾಗ ಮೊಮ್ಮಗನ ಕೈಯಲ್ಲಿ ಲೇಸ್ ಕಂಪನಿಯ ದೊಡ್ಡ ಚಿಪ್ಸ್ ಪ್ಯಾಕೆಟ್, ಒಂದೆರಡು ಸ್ಯಾಂಡ್‌ವಿಚ್, ಒಂದಿಷ್ಟು ಚಾಕಲೇಟ್, ಎರಡೂವರೆ ಲೀಟರ್‌ನ ಪೆಪ್ಸಿ ಬಾಟಲ್ ಇರುತ್ತವೆ. ಅಜ್ಜ-ಮೊಮ್ಮಗ ಕೂತು ಅರ್ಧ ಗಂಟೆಯಲ್ಲಿ ಅದನ್ನೆಲ್ಲ ಮುಗಿಸಿದ ನಂತರ ಮೊಮ್ಮಗ ಅಲ್ಲಿಂದ ಹೊರಡುತ್ತಾನೆ. ಮುಂದೇನು ಎಂದು ಕೇಳಬೇಡಿ, ಇನ್ನೊಂದು ಅರ್ಧ ಗಂಟೆ ಬಿಟ್ಟು ಬಾಬಾನೂ ಹೊರಡುತ್ತಾನೆ. ಚಾಕಲೇಟ್ ಕಾಗದ, ಖಾಲಿ ಚಿಪ್ಸ್ ಪ್ಯಾಕೆಟ್, ಖಾಲಿ ಪೆಪ್ಸಿ ಬಾಟಲ್, ಪ್ಲಾಸ್ಟಿಕ್ ಚೀಲಗಳೆಲ್ಲವೂ ಅಲ್ಲೇ ಬಾಕಿ! ಹೇಳೋಣವೆಂದರೆ ದೇಶ, ಭಾಷೆ, ವಯಸ್ಸು ಎಲ್ಲವೂ ಅಡ್ಡ ಬರುತ್ತವೆ! ಸುಮ್ಮನೆ ತಲೆ ಕೊಡವಿಕೊಂಡು ಮುನ್ನಡೆಯಬೇಕು ಅಷ್ಟೇ.

ಇದು ಬಹುತೇಕ ಎಲ್ಲೆಡೆ ಇದ್ದದ್ದೇ. ನಿತ್ಯ ನಿರಂತರ ಪ್ರಕೃತಿಯ ಮೇಲೆ ದೌರ್ಜನ್ಯ ಎಸಗುವವರ ನಡುವೆ ಕೆಲವರು ಬದಲಿ ವ್ಯವಸ್ಥೆ ಕಲ್ಪಿಸಿಕೊಡಲು ಮುಂದಾಗುತ್ತಾರೆ. ಪ್ರಕೃತಿಗೆ ಪರ್ಯಾಯವಾಗಿ ನಿರ್ಮಿಸಿದ ಕೃತಕ, ಉಚಿತ ಸೌಲಭ್ಯದ ಜವಾಬ್ದಾರಿಯನ್ನೂ ಬೇರೆಯವರೇ ಹೊರಬೇಕು ಎಂದರೆ, ಅದು ತೀರಾ ಅತಿಯಾಯಿತು!

ಕಿಂದರಿ ಊದಿಗೆ ಮರುಳಾದವರ ಕಲ್ಯಾಣ ಏನಾಗಲಿದೆ ಎಂದು ಆಲೋಚಿಸಬೇಕಲ್ಲವೇ?

ಬಸವ ಮಂಟಪ

ರವಿ ಹಂಜ್
vveditoped@gmail.com

ಭಾಗ-2

ಹಾಗೇನಾದರೂ ಮಸಿ ಬಳಿದುಕೊಳ್ಳುವವರಿದ್ದರೆ ಅವರು ಕಾಪಾಲಿಕರು. ಅವರೆಂದೂ ಮಠಗಳನ್ನು ಬಿಡಿ, ಮನೆಗಳನ್ನೂ ಮಾಡಿಕೊಳ್ಳದೆ ಸ್ಮಶಾನವಾಸಿಗಳಾಗಿದ್ದರು. ಕಾಳಾಮುಖರ ಬಗ್ಗೆ ಅಪಾರ ಸಂಶೋಧನೆ ಮಾಡಿರುವ ಡೇವಿಡ್ ಲೋರೆಂಜನ್ ಇದನ್ನೇ ಅನುಮೋದಿಸಿ, ''ರಾಮಾನುಜಾಚಾರ್ಯರು ಕಾಪಾಲಿಕರನ್ನು ಕಾಳಾಮುಖರೆಂದು ಬಗೆದು, 'ಕಾಳಾಮುಖರು ತಲೆ ಬುರುಡೆಯ ಭಿಕ್ಷಾಪಾತ್ರೆಯಲ್ಲಿ ಮದ್ಯಮಾಂಸಾದಿ ಸೇವನೆ ಮಾಡುವರು. ಮೈತುಂಬಾ ಶವಗಳ ಚಿತಾಭಸ್ಮವನ್ನು ಬಳಿದುಕೊಳ್ಳುವರು' ಎಂದಿದ್ದಾರೆ. ಈ ಲಕ್ಷಣಗಳೆಲ್ಲವೂ ಕಾಪಾಲಿಕರ ಲಕ್ಷಣಗಳು ಎಂಬುದು ಗ್ರಂಥೈತಿಹಾಸಿಕ ಆಕರಗಳಿಂದ ತಿಳಿದು ಬರುತ್ತದೆ. ಅಲ್ಲದೇ ಕರ್ನಾಟಕ, ತಮಿಳುನಾಡು, ಆಂಧ್ರದಲ್ಲೆಲ್ಲಾ ಇರುವ ಶಿಲಾಶಾಸನ, ದತ್ತಿ ಶಾಸನಗಳಲ್ಲಿ ಇಂಥ ಯಾವ ಉಲ್ಲೇಖವೂ ಇಲ್ಲ. ಮೇಲಾಗಿ ಈ ಎಲ್ಲಾ ಶಾಸನಗಳಲ್ಲಿ ಕಾಳಾಮುಖರ ಸಮಾಜಮುಖಿ ಧಾರ್ಮಿಕ ಶಕ್ತಿಕೇಂದ್ರ, ಜ್ಞಾನಕೇಂದ್ರ, ಆಧ್ಯಾತ್ಮಿಕ ಶಾಲೆ, ಮಠಮಾನ್ಯಗಳು ಮತ್ತು ರಾಜಗುರುತ್ವದ ವಿವರಣೆಗಳಿವೆ'' ಎಂದು ಹಲವಾರು ಶಿಲಾಶಾಸನಗಳನ್ನು ಉಲ್ಲೇಖಿಸಿ ಸ್ಪಷ್ಟವಾಗಿ ದಾಖಲಿಸಿದ್ದಾರೆ. ಹಾಗೆಯೇ ಮುಂದುವರಿಯುತ್ತಾ, ''ಪಂಥ ಶ್ರೇಷ್ಠತೆ ಮತ್ತು ಅಂದಿನ ಪಂಥ ಸ್ಪರ್ಧಾತ್ಮಕ ಸಮಾಜದಲ್ಲಿ ಉದ್ದೇಶಪೂರ್ವಕವಾಗಿ ರಾಮಾನುಜಾಚಾರ್ಯರು, ಕಾಳಾಮುಖರನ್ನು ಹೀಗೆ ಬೇಕೆಂದೇ ಕಾಪಾಲಿಕರನ್ನಾಗಿಸಿ ಅವಹೇಳನ ಮಾಡಿರುವ ಸಾಧ್ಯತೆಯೂ ಇದೆ'' ಎಂದೂ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆಸಕ್ತರು ಡೇವಿಡ್ ಲೋರೆಂಜನ್ ಅವರ The Kaapaalikaas and Kaalaamukhaas: two lost Saivite sects ಸಂಶೋಧನಾ ಕೃತಿಯನ್ನು ಪರಾಂಬರಿಸಬಹುದು.

ಅಲ್ಲಿಗೆ ಕಾಳಾಮುಖರು ಮುಖಕ್ಕೆ ಮಸಿ ಬಳಿದುಕೊಳ್ಳುತ್ತಿದ್ದರು ಎಂಬ ಜಾಮ್ದಾರರ ವಾದ ಮತ್ತು ಅವರ ಬೆಂಬಲಿಗರ- 'ಕಾಳಾಮುಖರು ಮದ್ಯಮಾಂಸಾದಿ ಸೇವಿಸಿ ಸ್ಮಶಾನವಾಸಿಗಳಾಗಿದ್ದರು' ಎಂಬ ವಾದಗಳು ಗ್ರಂಥೈತಿಹಾಸಿಕವಾಗಿ, ಶಿಲಾಶಾಸನ ಮಾನ್ಯವಾಗಿ ನಿಶ್ಶೂನ್ಯವಾಗುತ್ತದೆ.

ಇನ್ನು ಶ್ರೀಯುತ ಜಾಮ್ದಾರರು ಮಾಜಿ ಸಂಸದರೊಬ್ಬರ ಅಭಿಪ್ರಾಯವನ್ನು ಅವಹೇಳಿಸುತ್ತಾ, ''ಶಿವನು ವೇದ ಮೂಲದವನಲ್ಲ. ಲಿಂಗಾಯತರ 'ಶಿವ'ನು 'ವೈದಿಕ'ರ ಶಿವನಲ್ಲ. ಋಗ್ವೇದದಲ್ಲಿ ಬರುವ ರುದ್ರನನ್ನು ಶಿವ ಎಂದು ಹಲುಬುತ್ತಾರೆ. ಆಗಮ ಮೂಲದ ಶಿವನೂ ಅನರ್ಥ ಅರ್ಥೈಸುವಿಕೆಯಿಂದ ಭಗ್ನನಾಗಿದ್ದಾನೆ'' ಎಂದು ಶಿವನನ್ನೇ ಸನಾತನ ಶಿವ, ಲಿಂಗಾಯತ ಶಿವ ಎಂದು ಎರಡು ಹೋಳಾಗಿಸಿದ್ದಾರೆ. ಒಂದು ಮತವನ್ನು ಎರಡಾಗಿಸಿದ ಜಾಮ್ದಾರರ ಇಂಥ ಭಂಜನೆ ಹೊಸದೇನಲ್ಲ.

ಆದರೂ ಜಾಮ್ದಾರರ ಶಿವ ಪುರಾಣವನ್ನು ಸ್ವಲ್ಪ ತರ್ಕಕ್ಕೆ ಒಡ್ಡೋಣ- ವೇದಗಳಲ್ಲಿ ಪ್ರಾಥಮಿಕವಾಗಿ ಶಿವನನ್ನು ರುದ್ರ ಎಂದಿರುವುದು ಸತ್ಯ. ಹಾಗೆಯೇ ರುದ್ರನ ಗುಣ ವಿಶೇಷಣವಾಗಿ ಶಿವ ಎಂಬ ಪದವೂ ವೇದದಲ್ಲಿ ಬಳಕೆಯಾಗಿದೆ. ಅಸಾಧಾರಣ ರುದ್ರನ ಪ್ರತಾಪಗಳನ್ನು ಹಲವಾರು ನಾಮಗಳಿಂದ ವರ್ಣಿಸುವ ರೀತಿಯಲ್ಲಿ ಶಿವ ಎಂಬುದೂ ಆತನ ಒಂದು ಉಪನಾಮ ಎನ್ನಲಾಗಿದೆ. ರುದ್ರ, ಉಗ್ರ ಸ್ವರೂಪವಾದರೆ, ಶಿವ ಶಾಂತ ಸ್ವರೂಪ. ಒಬ್ಬನೇ ವ್ಯಕ್ತಿಯ ಹಲವಾರು ಭಾವನೆಗಳಿಗೆ ತಕ್ಕಂತೆ ಆತನ ಆಂಗಿಕ ಭಾಷೆ ಬದಲಾಗುವ ಕಾರಣಕ್ಕೆ ಅವನನ್ನು ಬೇರೆಬೇರೆಯದೇ ವ್ಯಕ್ತಿ ಎನ್ನಲಾಗುವುದೇ? ಹಾಗಾಗಿ ರುದ್ರ ಮತ್ತು ಶಿವ ಬೇರೆಯೆಂದಲ್ಲ, ಶಿವನನ್ನು ಮೃತ್ಯುಂಜಯ, ಈಶ್ವರ, ಶಂಕರ, ಪಾರ್ವತೀಶ ಮುಂತಾಗಿ ಹಲವಾರು ಹೆಸರುಗಳಿಂದ ಸ್ತುತಿಸುವ ಕಾರಣ ಅವೆಲ್ಲವೂ ಬೇರೆ ಬೇರೆ ವ್ಯಕ್ತಿಗಳು ಎನ್ನಲಾಗದು!

ಶಿವ ರುದ್ರರೀರ್ವರೂ ಒಂದೇ ಎಂದು ಷಟ್ಸ್ಥಲ ಚಕ್ರವರ್ತಿ ಚೆನ್ನಬಸವಣ್ಣನು ತನ್ನ ವಚನವೊಂದರಲ್ಲಿ ಹೇಳಿದ್ದಾನೆ. ಚೆನ್ನಬಸವಣ್ಣನ ವಚನ ಹೀಗಿದೆ: ''ಮಸ್ತಕದಲ್ಲಿ ಮಹಾದೇವನೆಂಬ ರುದ್ರನಿಪ್ಪನಯ್ಯಾ, ನೊಸಲಲ್ಲಿ ಲಕುಲೀಶ್ವರನೆಂಬ ರುದ್ರನಿಪ್ಪನಯ್ಯಾ. ನಾಭಿಯಲ್ಲಿ ಶಂಕರನೆಂಬ ರುದ್ರನಿಪ್ಪನಯ್ಯಾ, ಎದೆಯಲ್ಲಿ ಮಹೇಶ್ವರನೆಂಬ ರುದ್ರನಿಪ್ಪನಯ್ಯಾ. ಕೊರಳಲ್ಲಿ ಲೋಕೇಶ್ವರನೆಂಬ ರುದ್ರನಿಪ್ಪನಯ್ಯಾ. ಬಲದ ಭುಜದಲ್ಲಿ ಶ್ರೀಕಂಠನೆಂಬ ರುದ್ರನಿಪ್ಪನಯ್ಯಾ, ಎಡದ ಭುಜದಲ್ಲಿ ದೇವೇಶನೆಂಬ ರುದ್ರನಿಪ್ಪನಯ್ಯಾ. ಬಲದ ಬಾಹುವಿನಲ್ಲಿ ಈಶ್ವರನೆಂಬ ರುದ್ರನಿಪ್ಪನಯ್ಯಾ. ಎಡದ ಬಾಹುವಿನಲ್ಲಿ ಶೂಲಪಾಣಿಯೆಂಬ ರುದ್ರನಿಪ್ಪನಯ್ಯಾ. ಬಲದ ಮುಂಗೈಯಲ್ಲಿ ಕೋದಂಡನೆಂಬ ರುದ್ರನಿಪ್ಪನಯ್ಯಾ, ಎಡದ ಮುಂಗೈಯಲ್ಲಿ ಲಿಂಗಕಾಮಿಯೆಂಬ ರುದ್ರನಿಪ್ಪನಯ್ಯಾ. ಬಾಯಲ್ಲಿ ಭವನಾಶನೆಂಬ ರುದ್ರನಿಪ್ಪನಯ್ಯಾ, ನಾಸಿಕದಲ್ಲಿ ನಾಗಭೂಷಣನೆಂಬ ರುದ್ರನಿಪ್ಪನಯ್ಯಾ. ಬಲದ ಕಣ್ಣಲ್ಲಿ ಕಾಮಸಂಹರನೆಂಬ ರುದ್ರನಿಪ್ಪನಯ್ಯಾ, ಎಡದ ಕಣ್ಣಲ್ಲಿ ತ್ರಿಪುರಸಂಹರನೆಂಬ ರುದ್ರನಿಪ್ಪನಯ್ಯಾ. ಬಲದ ಕರ್ಣದಲ್ಲಿ ಪಾರ್ವತೀಪ್ರಿಯನೆಂಬ ರುದ್ರನಿಪ್ಪನಯ್ಯಾ, ಎಡದ ಕರ್ಣದಲ್ಲಿ ಏಕಾದಶನೆಂಬ ರುದ್ರನಿಪ್ಪನಯ್ಯಾ. ಹಿಂದಲೆಯಲ್ಲಿ ಪಂಚಮುಖನೆಂಬ ರುದ್ರನಿಪ್ಪನಯ್ಯಾ. ಬ್ರಹ್ಮರಂಧ್ರದಲ್ಲಿ ಬ್ರಹ್ಮಾಂಡಖಂಡಿತನೆಂಬ ರುದ್ರನಿಪ್ಪನಯ್ಯಾ; ಇಂತೀ ರುದ್ರರುಗಳು ತಮ್ಮ ತಮ್ಮ ಸ್ಥಾನಂಗಳೊಳಗಿಪ್ಪರಾಗಿ; ಇದನರಿಯದೆ ವಿಭೂತಿಯ ಧರಿಸಿದಡೆ ಕತ್ತೆ ಬೂದಿಯಲ್ಲಿ ಹೊರಳಿದಂತೆ ಕಾಣಾ ಕೂಡಲ ಚೆನ್ನಸಂಗಮದೇವಾ''.

ಶೂನ್ಯಪೀಠದ ಜಗದ್ಗುರು ಚೆನ್ನಬಸವಣ್ಣನೇ ಶಿವ ಮತ್ತು ರುದ್ರರಿಬ್ಬರೂ ಒಂದೇ ಎಂದ ಮೇಲೆ ಜಾಮ್ದಾರರು ಯಾವ 'ಲಿಂಗಾಯತ'ದ ವಕ್ತಾರರು? ಹಾಗಾಗಿಯೇ ಅವರನ್ನು ಲಿಂಗಾಹತದ ವಕ್ತಾರರು ಎನ್ನುವುದು ಅತ್ಯಂತ ಸಮಂಜಸ. ಇರಲಿ, ಶ್ರೀಯುತ ಜಾಮ್ದಾರರು ತಮ್ಮ ಹೇಳಿಕೆಯನ್ನು ಮುಂದುವರಿಸುತ್ತಾ, ''ಲಿಂಗಾಯತರ ಶಿವ ಬೂದಿಬಡುಕನಲ್ಲ. ಸ್ಮಶಾನದಲ್ಲಿ ಪಿಶಾಚಿಯಂತೆ ತಿರುಗುವವನಲ್ಲ. ಇವೆಲ್ಲ ಒಬ್ಬ ಶಿವನಿಗೆ ಕೊಟ್ಟ ವಿವಿಧ ಹೆಸರುಗಳು, ಹೆಸರಿಗೊಂದರಂತೆ ಬರೆದ ಕತೆಗಳು ಮತ್ತು ಶೈವ ಪುರಾಣಗಳ ಸೃಷ್ಟಿಗಳು. ಲಿಂಗಾಯತ ಶರಣರು ಈ ಪುರಾಣಗಳನ್ನು, 'ಪುಂಡರ ಗೋಷ್ಠಿಗಳು' ಎಂದು ಹೇಳಿ ಅವುಗಳನ್ನು ತಿರಸ್ಕರಿಸಿದ್ದಾರೆ'' ಎಂದಿದ್ದಾರೆ. ''ಇವೆಲ್ಲ ಒಬ್ಬ ಶಿವನಿಗೆ ಕೊಟ್ಟ ಹೆಸರುಗಳು'' ಎಂದು ಒಪ್ಪುತ್ತ ದ್ವಂದ್ವದ ಮಾತನಾಡುವ ಜಾಮ್ದಾರರು ಏನನ್ನು ಹೇಳಲು ಬಯಸಿದ್ದಾರೆ ಎನ್ನುವುದು ಅವರ ಮನದ ಗೊಂದಲವನ್ನು ತೋರುತ್ತದೆ ಅಥವಾ ಕಾಯಕವಾಹಿ ಅನುವಂಶೀಯತೆಯ ಜಮೇದಾರಿಕೆಯ ಕಿವಿಯೂದುವಿಕೆ ಎನಿಸುತ್ತದೆ. ಇರಲಿ, ಹಾಗಿದ್ದರೆ ಜಾಮ್ದಾರರು ಹೇಳುವ ಲಿಂಗಾಯತರ ಶಿವ ಯಾರು?

ಮೇಲಿನ ಚೆನ್ನಬಸವಣ್ಣನ ವಚನದಲ್ಲಿರುವಂತೆಯೇ ಅನೇಕ ಶರಣರ ವಚನಗಳಲ್ಲಿಯೇ ಶಿವನ ವರ್ಣನೆ ಇದೆ. ಜಾಮ್ದಾರರ ಹಕ್ಕೊತ್ತಾಯದ ಶರಣರ ವಚನದ ಶಿವನಿಗೂ, ಸನಾತನ ಶಿವನಿಗೂ ಯಾವುದೇ ವ್ಯತ್ಯಾಸವಿಲ್ಲ, ಅಸಲಿಗೆ ಶರಣರನ್ನು 'ಶಿವ'ಶರಣರು ಎಂದೇ ಸಂಬೋಧಿಸಲಾಗುತ್ತದೆ. ಸನಾತನ ಶಿವ ಮತ್ತು ಜಾಮ್ದಾರರ ಲಿಂಗಾಯತ ಶಿವ ಒಬ್ಬನೇ ಎಂದು ಬಸವಣ್ಣನೇ ತನ್ನ ಈ ವಚನದಲ್ಲಿ ಸ್ಪಷ್ಟವಾಗಿ ಹೇಳಿದ್ದಾನೆ: ''ಕಾಮದಹನವ ಮಾಡಿದನು, ದಕ್ಷನ ಯಜ್ಞವ ಕೆಡಿಸಿದನು, ಒಳ್ಳೆಯ ತ್ರಿಪುರವನುರುಹಿದನು, ಹಾಲಾಹಳವನೊಮ್ಮೆ ಧರಿಸಿದನು, ನಮ್ಮ ಕೂಡಲಸಂಗಮದೇವನು''. ಕಾಮದಹನ ಮಾಡಿದ, ದಕ್ಷನ ಯಜ್ಞ ಕೆಡಿಸಿದ, ಹಾಲಾಹಲವನ್ನು ಕುಡಿದ ಶಿವನೇ ನಮ್ಮ ಕೂಡಲಸಂಗಮದೇವ ಎಂದ ಮೇಲೆ, ಲಿಂಗಾಯತ ಶಿವ ಹೇಗೆ ಬೇರೆ ಶಿವನಾಗುತ್ತಾನೆ?

ಜಾಮ್ದಾರರೇ ಖುದ್ದು ಮತಸ್ಥಾಪಕ ಎನ್ನುವ ಬಸವಣ್ಣ ಮತ್ತವನ ಮತದ ಶೂನ್ಯಪೀಠಾಧ್ಯಕ್ಷ ಚೆನ್ನಬಸವಣ್ಣ ಇಬ್ಬರೂ ಸನಾತನ ಶಿವನನ್ನೇ ವರ್ಣಿಸುತ್ತಿರುವಾಗ, 'ಶಿವಾ'ನಂದದಲ್ಲಿ ತೇಲುತ್ತಿರುವ ಜಾಮ್ದಾರರು ಏಕೆ ಮತ್ತು ಹೇಗೆ ಬೇರೆ ಎನ್ನುತ್ತಾರೆ? ಬೇರೆ ಎನ್ನಲು ಇವರು ಬಸವಣ್ಣ ಮತ್ತು ಚೆನ್ನಬಸವಣ್ಣರಿಬ್ಬರನ್ನೂ ತಮ್ಮ ಕಚೇರಿಯ ಸೇವಕರು, ಅವರೇನು ಹೇಳುವುದು? ನಾನು ಹೇಳಿದ್ದೇ ಖಚಿತ ಎಂದುಕೊಂಡಿದ್ದಾರೆಯೇ? ಎಂಬ ಪ್ರಶ್ನೆಯೊಂದಿಗೆ ಜಾಮ್ದಾರರ ಶಿವಭಂಜನೆಯ ವಾದ ನಿಶ್ಶೂನ್ಯವಾಗುತ್ತದೆ.

ಇದೇ ರೀತಿ ಶ್ರೀಮಾನ್ ಧರ್ಮಭಂಜಕ ಜಾಮ್ದಾರರು ತಮ್ಮ ಲೇಖನಗಳಲ್ಲಿ, ''ಪಂಚಾಚಾರ್ಯರು ಶಿಲಾಲಿಂಗೋದ್ಭವರೆ?''- ತಾವು ಐವರೂ ಬೇರೆ ಬೇರೆ ಸ್ಥಳಗಳಲ್ಲಿ ಶಿಲಾಶಿವ ಲಿಂಗಗಳಲ್ಲಿ ಉದ್ಭವಿಸಿದವರೆಂದು ಪಂಚಾಚಾರ್ಯರು ಹೇಳಿಕೊಳ್ಳುತ್ತಾರೆ. ಅವರ ಪವಿತ್ರ ಗ್ರಂಥ 'ಸಿದ್ಧಾಂತ ಶಿಖಾಮಣಿ'ಯು, ರೇಣುಕನು ಮಾತ್ರ ತಾನು ಹೆಣ್ಣಿನ ಯೋನಿಯಲ್ಲಿ ಹುಟ್ಟಲು ಇಚ್ಛಿಸದೆ, ಕೊಲ್ಲಿಪಾಕಿಯ ಕಲ್ಲು ಲಿಂಗದಲ್ಲಿ ಹುಟ್ಟಿದನೆಂದು ತಿಳಿಸುತ್ತದೆ. ಸ್ವಯಂಭು ಆಗಮವು ರೇಣುಕರಂತೆಯೇ ಉಳಿದ ನಾಲ್ವರು ಆಚಾರ್ಯರೂ ದೂರ ದೂರದ ನಾಲ್ಕು ಸ್ಥಳಗಳಲ್ಲಿ (ದ್ರಾಕ್ಷಾರಾಮ, ಕಾಶಿ, ಉಜ್ಜಿನಿ ಮತ್ತು ಶ್ರೀಶೈಲ) ಬೇರೆ ಬೇರೆ ಶಿಲಾಲಿಂಗಗಳಲ್ಲಿ ಉದ್ಭವಿಸಿದರೆಂದು ಹೇಳುತ್ತದೆ. ಬಸವಣ್ಣನನ್ನು ಕೈಲಾಸದ ಶಿವನ ಒಬ್ಬ ಪ್ರಮಥನಾದ ನಂದಿಯ ಅವತಾರವೆಂದು ಪುರಾಣಗಳು ಹೇಳುತ್ತವೆ. ಅವನೂ ಶಿವನಿಂದ ಭೂಲೋಕಕ್ಕೆ ಕಳುಹಿಸಲ್ಪಟ್ಟವನೇ. ಆದರೆ ಅವನು ಮಾದಲಾಂಬಿಕೆಯ ಗರ್ಭದಿಂದ ಮಾನವ ಜೀವಿಯಾಗಿ ಹುಟ್ಟುತ್ತಾನೆ. ಅವನೇಕೆ 'ಅಯೋನಿಜ'ನಾಗಿ ಹುಟ್ಟಬಾರದಿತ್ತು? 'ಯೋನಿಜ' ಎನ್ನುವುದು ಕೆಟ್ಟದ್ದು ಎಂದಾದರೆ ಶಿವಲಿಂಗವನ್ನು ಪೂಜಿಸುವುದೇಕೆ? ಪಂಚಾಚಾರ್ಯರು ಹೇಗೆ ಅಯೋನಿಜರಾಗಲು ಸಾಧ್ಯ? ಎಂದು ಹಿಂದೂ ಲಿಂಗವಂತ ವೀರಶೈವರನ್ನು ಅವಹೇಳಿಸಿದ್ದಾರೆ.

ಈ ವಾದದಿಂದ ಶ್ರೀ ಜಾಮ್ದಾರರಿಗೆ ಅವರ ಹಕ್ಕೊತ್ತಾಯದ ಲಿಂಗಾಯತವೇ ಸರಿಯಾಗಿ ತಿಳಿದಿಲ್ಲ ಎಂದು ಮೇಲ್ನೋಟಕ್ಕೇ ತಿಳಿದುಬರುತ್ತದೆ. ಏಕೆಂದರೆ 'ಅಯೋನಿಜ' ಎಂಬುದು ಒಂದು ವೀರಶೈವ ಲಿಂಗವಂತ ಧಾರ್ಮಿಕ ಪ್ರಕ್ರಿಯೆ. ಸಮಗ್ರ ವೀರಶೈವದ ದೀಕ್ಷಾವಿಧಿಗಳನ್ನು ಅನುಸರಿಸಿ ಗುರುವಾದ ಎಲ್ಲರೂ ಆಯೋನಿಜರೇ ಆಗುತ್ತಾರೆ. ಇದರ ಅಂಗವಾಗಿ ದೀಕ್ಷಾ ಸಂಸ್ಕಾರದಲ್ಲಿ ಜರುಗುವ ಒಂದು ಮುಖ್ಯ ಪ್ರಕ್ರಿಯೆಯೇ ಮಲತ್ರಯ ನಿವಾರಣೆ. ದೀಕ್ಷಾ ಬೋಧೆಯ ಪ್ರಥಮಸ್ಥಲದಲ್ಲಿ ಗುರುವು ಶಿಷ್ಯನಿಗೆ ದೀಕ್ಷೆಯೀಯುವ ಪೂರ್ವದಲ್ಲಿ, ''ಮಲತ್ರಯಗಳು ಭಕ್ತಿಗೆ ವಿಘ್ನಗಳು. ಹಾಗಾಗಿ ಅವುಗಳನ್ನು ಕಳೆದಲ್ಲದೆ ದೀಕ್ಷೆ ಘಟಿಸದು'' ಎಂದು ಹೇಳಿ ಮಲತ್ರಯ ಸ್ವರೂಪವನ್ನೂ ಅವುಗಳ ನಿವಾರಣೋಪಾಯಗಳನ್ನು ಚೆನ್ನಬಸವಣ್ಣನೂ ಸೇರಿದಂತೆ ಕೆರೆಯ ಪದ್ಮರಸ ಮುಂತಾದ ಪಂಡಿತರ ಗ್ರಂಥಗಳಲ್ಲಿ ವಿವರಿಸಲಾಗಿದೆ. ಆಣವ ಮಲವು ರೇತರಕ್ತದ ಜಠರ ಜಾತ ಅಥವಾ ಗರ್ಭಸಂಬಂಧಿಯಾಗಿ ಅನುರೂಪವಾದುದು, 'ಮಾಯಾಮಲ'ವು ಜಾತಿಧರ್ಮಗಳ ಸುಪ್ರೀತಿರೂಪವಾದುದು ಮತ್ತು 'ಕಾರ್ಮಿಕಮಲ'ವು ಧನದ ಮೇಲಿನ ಕಾಂಕ್ಷಾರೂಪವಾದುದು. ಈ ಮಲಗಳನ್ನು ಗುರುವು ಅನುಕ್ರಮವಾಗಿ ವೇಧಾ, ಮಂತ್ರ ಹಾಗೂ ಕ್ರಿಯಾದೀಕ್ಷೆಗಳ ಪ್ರಕ್ರಿಯೆಯಿಂದ ಕಳೆಯುವನೆಂದು ಎಲ್ಲಾ ವೀರಶೈವ ಲಿಂಗವಂತ ಶಾಸ್ತ್ರಗ್ರಂಥಗಳಲ್ಲಿ ನಿರೂಪಿಸಲಾಗಿದೆ. ಗುರುವು ಸ್ಥೂಲ, ಸೂಕ್ಷ್ಮ ಹಾಗೂ ಕಾರಣ ಶರೀರಗಳಿಗೆ ಪ್ರಾಪ್ತವಾಗಿದ್ದ ಕಾರ್ಮಿಕ, ಮಾಯಾ ಹಾಗೂ ಆಣವವೆಂಬ ಮಲಗಳನ್ನು ಕ್ರಿಯಾ, ಮಂತ್ರ ಹಾಗೂ ವೇಧಾದೀಕ್ಷೆಗಳಿಂದ ಪರಿಹರಿಸಿ ಸ್ಥೂಲಶರೀರ (ತ್ಯಾಗಾಂಗ)ದಲ್ಲಿ ಇಷ್ಟಲಿಂಗವನ್ನೂ ಸೂಕ್ಷ್ಮ ಶರೀರ(ಭೋಗಾಂಗ)ದಲ್ಲಿ ಪ್ರಾಣಲಿಂಗವನ್ನೂ (ಯೋಗಾಂಗ)ದಲ್ಲಿ ಭಾವಲಿಂಗವನ್ನೂ ಸಂಬಂಧ ಮಾಡುವನು. ಕಾರಣಶರೀರ ಈ ಮಲ-ತ್ರಯಗಳ ನಿವಾರಣೆಯೆಂದರೆ ಜೀವನನ್ನು ಸುತ್ತಿಕೊಂಡಿದ್ದ ಮೂರು ವಿಧವಾದ ಬಂಧನಗಳಿಂದ ಬಿಡುಗಡೆ ಮಾಡುವುದಾಗಿದೆ.

ಶರಣರ ವಚನಗಳಲ್ಲಿ ಸಹ ಅಯೋನಿಜ ಎನ್ನುವ ಪದದ ಉಲ್ಲೇಖವಿದೆ. ಶೂನ್ಯ ಪೀಠದ ಜಗದ್ಗುರು ಚೆನ್ನಬಸವಣ್ಣನು ಖುದ್ದಾಗಿ ತಾನು ಆಯೋನಿಜನಾದೆ ಎಂದಿದ್ದಾನೆ. ಅವನ ವಚನ ಹೀಗಿದೆ: ''ಆತ್ಮನಲ್ಲಿ ಪ್ರಣವಪಂಚಾಕ್ಷರಿಯ ನಿರವಿಸಿ, ಸದ್ಗುರುವೆ ಎನ್ನ ಶಿವಾತ್ಮನ ಮಾಡಿದಿರಾಗಿ, ಆತ್ಮಶುದ್ಧಿಯಾಯಿತ್ತೆನಗೆ. ಪಂಚಭೂತಂಗಳಲಿ ಪಂಚಬ್ರಹ್ಮನನಿರಿಸಿದಿರಾಗಿ, ಭೂತಶುದ್ಧಿಯಾಯಿತ್ತೆನಗೆ. ಅಂಡಜ ಜರಾಯುಜಾದಿ ಎಂಬತ್ತುನಾಲ್ಕುಲಕ್ಷ ಯೋನಿಯಲ್ಲಿ ಬಹ ಜೀವನ 'ಅಯೋನಿಜ'ನ ಮಾಡಿದಿರಾಗಿ ಜೀವಶುದ್ಧಿಯಾಯಿತ್ತೆನಗೆ. ಅಂಗಾಶ್ರಯವ ಕಳೆದು ಲಿಂಗಾಶ್ರಯವ ಮಾಡಿದಿರಾಗಿ ಮನಶುದ್ಧಿಯಾಯಿತ್ತೆನಗೆ. ಪಶುವೆಂಬ ಅಜ್ಞಾನದ್ರವ್ಯವ ಕಳೆದು ಪರಮಸುಜ್ಞಾನದ್ರವ್ಯವ ಮಾಡಿದಿರಾಗಿ ದ್ರವ್ಯಶುದ್ಧಿಯಾಯಿತ್ತೆನಗೆ. ಇಂತು ಸರ್ವಶುದ್ಧನಂ ಮಾಡಿ ಪೂರ್ವಾಶ್ರಯವ ಕಳೆದಿರಾಗಿ ಕೂಡಲಚೆನ್ನಸಂಗಾ, ನಿಮ್ಮುವ 'ನ ಗುರೋರಧಿಕಂ ನ ಗುರೋರಧಿಕಂ ನ ಗುರೋರಧಿಕಂ' ಎನುತಿರ್ದೆನು''.

ಇನ್ನು ಬಸವಣ್ಣನು ಸಹ ಅಯೋನಿಜ ಶೂನ್ಯನಿರಾಳ ನಮ್ಮ ಕೂಡಲಸಂಗಮದೇವ ಎಂದಿದ್ದಾನೆ. ಅವನ ವಚನ ಹೀಗಿದೆ: ''ಅಷ್ಟತನುಮೂರ್ತಿ ಲಿಂಗವೆಂದೆಂಬರು ಕೇಳಿರಯ್ಯಾ: ಆದಿಯ ಮಗ ಅತೀತ, ಅತೀತನ ಮಗ ಆಕಾಶ, ಆಕಾಶನ ಮಗ ವಾಯು, ವಾಯುವಿನ ಮಗ ಅಗ್ನಿ, ಅಗ್ನಿಯ ಮಗ ಅಪ್ಪು, ಅಪ್ಪುವಿನ ಮಗ ಪೃಥ್ವಿ, ಪೃಥ್ವಿಯಿಂದ ಸಕಲ ಜನನವು. ಮನಸಿನ ಮಗ ಚಂದ್ರ, ನಯನದ ಮಗ ಸೂರ್ಯ, ದೇಹದ ಮಗನಾತ್ಮ, ಇಂತೀ ಅಷ್ಟತನುವೆಲ್ಲಕ್ಕೆಯು ಉತ್ಪತ್ಯವುಂಟು. ಉತ್ಪತ್ಯರಹಿತ 'ಅಯೋನಿಜ' ಶೂನ್ಯನಿರಾಳ ನಮ್ಮ ಕೂಡಲಸಂಗಮದೇವಂಗೆ ಮಾತಾಪಿತರಿಲ್ಲ''.

ಇನ್ನು ಅಕ್ಕಮಹಾದೇವಿ ಸಹ ಅಯೋನಿಸಂಭವ ಚೆನ್ನಮಲ್ಲಿಕಾರ್ಜುನಯ್ಯಾ ಎಂದಿದ್ದಾಳೆ. ಅವಳ ವಚನ ಹೀಗಿದೆ: ''ಕುಲಮದವೆಂಬುದಿಲ್ಲ ಅಯೋನಿಸಂಭವನಾಗಿ, ಛಲಮದವೆಂಬುದಿಲ್ಲ ಪ್ರತಿದೋರನಾಗಿ, ಧನಮದವೆಂಬುದಿಲ್ಲ ತ್ರಿಕರಣ ಶುದ್ಧನಾಗಿ, ವಿದ್ಯಾಮದವೆಂಬುದಿಲ್ಲ ಅಸಾಧ್ಯವ ಸಾಧಿಸಿದನಾಗಿ. ಮತ್ತಾವ ಮದವೆಂಬುದಿಲ್ಲ ನೀನವಗ್ರಹಿಸಿದ ಕಾರಣ, ಚೆನ್ನಮಲ್ಲಿಕಾರ್ಜುನಯ್ಯಾ, ನಿಮ್ಮ ಶರಣನು ಅಕಾಯ ಚರಿತ್ರನಾಗಿ''.

ಈ ವಚನಗಳಲ್ಲಿ ಹೇಳುವ ಅಯೋನಿಜದ ಅರ್ಥ, ಮಲತ್ರಯಗಳನ್ನು ಕಳೆದುಕೊಂಡದ್ದು ಎಂಬುದೇ ಆಗಿದೆ. ಇಂಥ ದೀಕ್ಷಾ ವಿಧಾನದ ಪರಂಪರೆಯ ಆದಿ ಪ್ರವರ್ತಕರು, ಪಂಚಾಚಾರ್ಯರು. ಹಾಗಾಗಿ ಮಲತ್ರಯಗಳನ್ನು ಕಳೆದುಕೊಂಡು ಆಯೋನಿಜರಾದ ರೇಣುಕರನ್ನು ಸಾಂಕೇತಿಕ ರೂಪಕವಾಗಿ ಲಿಂಗದಿಂದ ಉದ್ಭವರಾದರು ಎನ್ನಲಾಗಿದೆ. ಇಂಥ ರೂಪಕಗಳ ಲಿಂಗೋದ್ಭವ ಪುರುಷರ ಅನೇಕ ಶಿಲಾಮೂರ್ತಿಗಳು ಒಂದನೇ ಶತಮಾನದಿಂದಲೂ ಇವೆ.

ಅದೇ ರೀತಿ ರೇಣುಕರ ಉದ್ಭವದ ಕುರಿತು ತೋಂಟದ ಸಿದ್ದಲಿಂಗೇಶ್ವರರ ವಚನವೊಂದು ಹೀಗಿದೆ: ''ಆದಿಯಲ್ಲಿ ಶಿವತತ್ವದಲ್ಲಿ ರೇಣುಕನುದಯ (ವಾ) ಗದಿರ್ದಡೆ, ಇಲ್ಲಿ ಶಿವಲಿಂಗದಲ್ಲಿ ಉದಯವಾದ ಪರಿಯೆಂತೋ? ಆ ಶಿವನಲ್ಲಿಯೆ ಹುಟ್ಟಿ ಶಿವನಲ್ಲಿಯೇ ಲಯವಾದ ರೇವಣಸಿದ್ಧೇಶ್ವರನು, ಅನಾದಿ ಮುಕ್ತನಲ್ಲ, ಅವಾಂತರಮುಕ್ತರೆಂಬ ಅಜ್ಞಾನಿಗಳಿಗೆ ನಾಯಕನರಕ ತಪ್ಪದು. ಸಕಲಕೋಟಿ ಬ್ರಹ್ಮಾಂಡಕ್ಕಾಧಾರಕಾರಣವಾಗಿಯು ಸಮಸ್ತ ಲೋಕಂಗಳ ಪವಿತ್ರಕಾರಣವಾಗಿಯು ಪರಮೇಶ್ವರನ ನಿಜಚಿನ್ಮಯಮಪ್ಪ ಊರ್ಧ್ವಮುಖದಲ್ಲಿ ಚಿತ್ಕಲಾ ಸ್ವರೂಪರಪ್ಪ ರುದ್ರಗಣಂಗಳುದಯವಾದರು ನೋಡ. ಆ ರುದ್ರಗಣಂಗಳು ಮತ್ತೂ ಜಗತ್ಪಾವನ ಕಾರಣ ಮರ್ತ್ಯದಲ್ಲಿ ಅವತರಿಸಿದಡೆ, ಅದೇನು ಕಾರಣ ಉದಯವಾದರು ವಾಸನಾಗುಣವಿಲ್ಲದೆ ಎಂದು ಸಂದೇಹಿಸುವ ಅವಲಕ್ಷಣ ನಾಯ ನಾಲಗೆಯ, ಯಮದೂತರು ಕೀಳದೆ ಮಾಣ್ಬರೆ? ಇವರಿಂಗೆ ನಾಯಕನರಕ ತಪ್ಪದು ಕಾಣಾ, ಎಲೆ ಶಿವನೆ ನೀ ಸಾಕ್ಷಿಯಾಗಿ, ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೆ''.

ಹೀಗೆ ಜಾಮ್ದಾರರು ತಮ್ಮ ಸ್ವತಂತ್ರ ಧರ್ಮ ಹೋರಾಟದುದ್ದಕ್ಕೂ ಹಿಂದೂ ಕಾಳಾಮುಖ ವೀರಶೈವ ಲಿಂಗವಂತ ಮತಧರ್ಮದ ಅವಹೇಳನವನ್ನು ಮಾಡಿಯೂ ತಾವು ಹಿಂದೂ ಧರ್ಮವನ್ನು ಎಂದೆಂದೂ ಅವಹೇಳನ ಮಾಡಿಲ್ಲವೆನ್ನುವ ಇವರ Audacity is priceless!

ಕೇವಲ ಐಎಎಸ್ ಪರೀಕ್ಷೆಯನ್ನು ಪಾಸಾಗಲೆಂದು ಇತಿಹಾಸ ಓದಿ, ಮಲಾಯಿ ಅಧಿಕಾರಶಾಹಿಯನ್ನು ಅನುಭವಿಸಿ ನಿವೃತ್ತರಾದ ನಂತರ, ಒಂದು ಧಾರ್ಮಿಕ ಸಮಾಜದ ಮುಖಂಡನಾಗಬೇಕೆಂಬ ಹುಕಿಯಲ್ಲಿ, ಸದ್ಯದ ಕರ್ನಾಟಕದ ಜಮೀನ್ದಾರರ ಹುಕುಮತ್ತಿನಲ್ಲಿ, ''ಜೀ ಹುಜೂರ್, your Highness, ಧಣಿ, ದೊರೆ'' ಎನ್ನುತ್ತ ಜಯಕಾರ ಹಾಕುವ ಗುಲಾಮರನ್ನು ಜಮಾವಣೆಗೊಳಿಸುತ್ತ ಧರ್ಮ ವಿಶ್ಲೇಷಣೆಯಲ್ಲಿ ತೊಡಗಿರುವವರು, ''ಸಮಾಜವೆಂದರೆ ತಮ್ಮ ಕಚೇರಿಯಲ್ಲಿ ಬೆನ್ನು ಬಗ್ಗಿಸಿ ಡೊಗ್ಗು ಸಲಾಮು ಹೊಡೆಯುತ್ತಾ ಗುಲಾಮಿ ಭಾವವೇ ಮೈವೆತ್ತಂಥ ಗುಗ್ಗು ಚಪರಾಸಿಯಲ್ಲ'' ಎಂಬ ಅರಿವಳಿಕೆಯಿಂದ ಎಚ್ಚೆತ್ತು ಅರಿತುಕೊಳ್ಳಬೇಕು. ಹಾಗಾಗಿ ಇಲ್ಲಿ ಕೇವಲ ಕಾಳಾಮುಖ-ವೀರಶೈವ-ಲಿಂಗವಂತ ಸಮಾಜದ ಇತಿಹಾಸವಷ್ಟೇ ಅಲ್ಲದೆ ಜಮೇದಾರ-ಜಮಾದಾರ-ಜಾಮ್ದಾರ್ ಪದೈತಿಹಾಸವನ್ನೂ ಅವರಿಗಾಗಿ ಕೊಡಲಾಗಿದೆ. ಅಂದ ಹಾಗೆ ಬ್ರಿಟಿಷರ ಆರ್ಡರ್ಲಿ ವಂಶಸ್ಥರು ಬ್ರೆಡ್ಡಿಗೆ ಜಾಮ್ ಹಚ್ಚಿ ತಿನ್ನುವ ಕಾರಣ ವೊಡ್ಡಿ ಜಮೇದಾರ ಉರ್ಫ್ ಜಮಾದಾರ ನಾಮಪದವನ್ನು 'ಜಾಮ್'ದಾರ್ ಎಂದು ಮಾಡಿಕೊಂಡಿರಬಹುದೇ ಎಂಬುದು ಒಂದು ಪದೈತಿಹಾಸಿಕ ಜಿಜ್ಞಾಸೆ!

ಕನ್ನಡದ ಟಿವಿ ಮಾಧ್ಯಮದ ಅದೇ ಸಂವಾದದಲ್ಲಿ ಮುಂದುವರಿದು ಶ್ರೀ ಜಾಮ್ದಾರರು, ''ನಮ್ಮದು 'ಲಿಂಗಾಯತ ಸ್ವತಂತ್ರ ಧರ್ಮ' ಕ್ಕಾಗಿ ನಡೆಸುತ್ತಿರುವ ಹೋರಾಟವಲ್ಲ, ಇದು ಮೈನಾರಿಟಿ ಸ್ಟೇಟಸ್ಸಿಗಾಗಿ ನಡೆಸುತ್ತಿರುವ ಹೋರಾಟ ಎಂದರು. ಕಳೆದ ಬಾರಿಯ ಕಾಂಗ್ರೆಸ್ ಸರಕಾರದ ಅವಧಿಯಿಂದಲೂ 'ಲಿಂಗಾಯತ ಸ್ವತಂತ್ರ ಧರ್ಮ' ಎಂದೇ ಕಿಂದರಿ ಊದುತ್ತಾ ಹೋರಾಟ ಕಟ್ಟಿಕೊಂಡು ಬಂದ 'ಕಿವಿಯೂದುವ ಕಾಯಕವಾಹಿ ಅನುವಂಶೀಯತೆ'ಯ ಜಾಮ್ದಾರರು, ಈಗ ಇದ್ದಕ್ಕಿದ್ದಂತೆ ಒಂದು ಟಿವಿ ಸಂವಾದ/ಸಂದರ್ಶನದಲ್ಲಿ ತಮ್ಮ ಹೋರಾಟಗಾರರನ್ನೆಲ್ಲಾ ಕೈಬಿಟ್ಟು, ''ನಮ್ಮದು ಸ್ವತಂತ್ರ ಧರ್ಮಕ್ಕಾಗಿ ನಡೆಸುತ್ತಿರುವ ಹೋರಾಟವಲ್ಲ, ಏಕೆಂದರೆ ಸ್ವತಂತ್ರ ಧರ್ಮ ಎನ್ನುವದು ಸಾಂವಿಧಾನಿಕವಾಗಿ ಎಂದೆಂದಿಗೂ ಸಾಧ್ಯವಿಲ್ಲ, ಹಾಗಾಗಿ ನಮ್ಮದು ಮೈನಾರಿಟಿ ಸ್ಟೇಟಸ್ಸಿಗಾಗಿ ನಡೆಸುತ್ತಿರುವ ಹೋರಾಟ!'' ಎಂದರು. ಈ ವಾಕ್ಯವನ್ನು ಅಖಂಡ ವೀರಶೈವ ಲಿಂಗವಂತ ಸಮಾಜವು ನಾಲ್ಕು ಇಂಚು ಆಳಕ್ಕಿಳಿದು ನೋಡಿದಾಗ ಗೋಚರಿಸುವುದು, ಕೇವಲ ಮತ್ತು ಕೇವಲ, ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ, ಪಾತಾಳದಿಂದವತ್ತತ್ತ, ಬ್ರಹ್ಮಾಂಡದಿಂದವತ್ತತ್ತದ, ಅಗಮ್ಯ, ಅಗೋಚರ ಅಪ್ರತಿಮ ಧರ್ಮದ್ರೋಹ! ಪ್ರಜಾಪತಿ ಕೊಟ್ಟ ಗುರಿ ತಲುಪಿದನ್ನಕ್ಕ, ಚುಳುಕಾದ ಲಿಂಗಾಯತ ಪ್ರತ್ಯೇಕ ಧರ್ಮ!

ಜಾಮ್ದಾರ್ ಕಾಯಕವಾಹಿ-ಅನುವಂಶೀಯತೆಗೆ ತಕ್ಕಂತೆ ತನ್ನ ಮಾಲೀಕನಾದ ಪ್ರಜಾಪತಿಯ ಆಣತಿಯಂತೆ ಸಮಾಜಕ್ಕೆ ಕಿವಿಯೂದಿ ಧರ್ಮವನ್ನು ಛಿದ್ರಗೊಳಿಸಿ, ಸಮಾಜದ ಜನಸಂಖ್ಯೆಯನ್ನು ಮಾಲೀಕ ನಿಗದಿಗೊಳಿಸಿದ ಸಂಖ್ಯೆಗೆ ಇಳಿಸಿ, ಪಡೆಯುವುದನ್ನು ಪಡೆದುಕೊಂಡು, ಗುರಿ ಸೇರಿದ ಕಾರಣವೇ ವಿಜಯೋತ್ಸವವನ್ನು ಅರಮನೆ ಮೈದಾನದಲ್ಲಿ ನಡೆಸಿ ಜಯ ಕಲ್ಯಾಣಕೆ ಜಯ ಕಲ್ಯಾಣಕೆ ಜಯ ಕಲ್ಯಾಣಕೆ ಜಯಹೇ! ಎಂದು ಮಂಗಳ ಹಾಡಿದ್ದಾರೆ.

ಹಾಗಾಗಿಯೇ ಈಗ ಇಳಿದ ಸಮಾಜದ ಜನಸಂಖ್ಯೆಗೆ ತಕ್ಕಂತೆ ಮಾನ್ಯರು, ಮೈನಾರಿಟಿ ಸ್ಟೇಟಸ್ಸಿಗಾಗಿ ನಡೆಸುತ್ತಿರುವ ಹೋರಾಟ ಎಂಬ ಹೊಸ ರಾಗವನ್ನು ಊದುತ್ತಿದ್ದಾರೆ. ಮೀಸಲಾತಿ ಮರುಳರು, ಕಿಂದರಿ ಜೋಗಿ ಜಾಮ್ದಾರರ ಕಿಂದರಿ ಊದಿಗೆ ಮರುಳಾಗಿ ಅವರ ಹಿಂದೆ ಹೋಗುತ್ತಿರುವವರ ಕಲ್ಯಾಣ ಏನಾಗಲಿದೆ ಎಂದು ಅಖಂಡ ವೀರಶೈವ ಲಿಂಗವಂತ ಸಮಾಜವು ಚಿಂತಿಸಬೇಕು!

ಅಂದಹಾಗೆ, ಶ್ರೀಯುತರು ಕಂದಾಯ ಇಲಾಖೆಯ ಕಾರ್ಯದರ್ಶಿಗಳಾಗಿದ್ದಾಗ ಕಾರ್ಯನಿಮಿತ್ತ ಉತ್ತರ ಕರ್ನಾಟಕದ ಕಡೆ ಹೋದಾಗ ಮಹಿಳಾ ತಹಸೀಲ್ದಾರರಿದ್ದರೆ ಅವರನ್ನು ಕಚೇರಿಯಲ್ಲಿ ಭೇಟಿ ಮಾಡದೆ ಸರಕಾರಿ ನಡವಳಿಕೆ ಸಂಹಿತೆಬಾಹಿರವಾದರೂ ಸರಿಯೇ, ಹೆಣ್ಣುಮಕ್ಕಳನ್ನು ಅವರ ನೆಮ್ಮದಿತಾಣವಾದ ಅವರವರ ಮನೆಗಳಲ್ಲಿ ಭೇಟಿ ಮಾಡಿ ಚರ್ಚಿಸುತ್ತಿದ್ದರೆಂಬ ಸಾಮಾಜಿಕ ಕಳಕಳಿಗೆ ಹೆಸರುವಾಸಿಯಾಗಿದ್ದರು. ಕಾರ್ಯನಿಮಿತ್ತವಾಗಿ ಮನೆಗಳಿಗೆ ಹೋಗುವಷ್ಟು ಸಮಯಾವಕಾಶವಿಲ್ಲದಾಗ ಶ್ರೀಯುತರು ಮಹಿಳಾ ಅಧಿಕಾರಿಗಳನ್ನು ತಾವು ಉಳಿದುಕೊಂಡ ಸರಕಾರಿ ಪ್ರವಾಸಿಮಂದಿರಗಳಿಗೆ ಕರೆಸಿ ಆಪ್ತತೆಯಿಂದ ಪಕ್ಕದಲ್ಲೇ ಕೂರಿಸಿಕೊಂಡು ಕಚೇರಿಯ ಕಾರ್ಯಗಳ ಬಗ್ಗೆ ಸಲಹೆ ಸೂಚನೆ ನೀಡುತ್ತಿದ್ದರು ಎಂಬ ವಿಶಿಷ್ಟ ಮಹಿಳಾ ಕಾಳಜಿಗೆ ಖ್ಯಾತರಾಗಿದ್ದರು. ಇದಿಷ್ಟು ಅವರ ಎದ್ದುಗಾಣುವ ಮುಕುಟಮಣಿ ವ್ಯಕ್ತಿತ್ವವಾದ ಕಾರಣ ಇಲ್ಲಿ ಉಲ್ಲೇಖಿಸಲಾಗಿದೆಯಷ್ಟೇ.

ಇನ್ನುಳಿದಂತೆ ಸಮಗ್ರವಾಗಿ ಕೈಗೊಂಡ ಧರ್ಮಭಂಜಕ ಕಲ್ಯಾಣಕಾರ್ಯ ಯಶಸ್ವಿಯಾಗಿ ಜನಸಂಖ್ಯೆ ಕುಸಿಯುವಂತೆ ಮಾಡಿ ಮುಗಿಸಿದ ಕಾರಣ, ಲಿಂಗಾಯತ ಸ್ವತಂತ್ರ ಧರ್ಮ ಎಂಬುದಕ್ಕೆ ತಿಲಾಂಜಲಿಯಿತ್ತು ಈಗ ಅಲ್ಪಸಂಖ್ಯಾತ ಮಾನ್ಯತೆಗಾಗಿ ಎಂದು ಹೊಸ ಮುಖವಾಡ ಹೊತ್ತು ಬಂದಿದ್ದಾರೆ. ಇಂಥ ಕುಟಿಲ ಧರ್ಮಬೀರುಗಳಿಗೆ ವೇದಿಕೆ, ಮಾನ್ಯತೆ, ಆದ್ಯತೆ ಕೊಟ್ಟು ಜನರು ಅನುಸರಿಸುತ್ತಾರೆಂದರೆ ನಾಡಿನ ಜ್ಞಾನದ ಮಾಪಕ ಎಲ್ಲಿಗಿಳಿದಿರಬಹುದು?!

ವಿದ್ವಾನ್ ಟಿ.ಎನ್. ಮಲ್ಲಪ್ಪನವರ ಪುಸ್ತಕವನ್ನು ಪ್ರಕಾಶಿಸಿದ ಅಂದಿನ ಮುರುಘಾಮಠಕ್ಕೆ ಇಂದು ಉಸ್ತುವಾರಿಯಾಗಿ ನೇಮಕವಾಗಿರುವ ಹಂಗಾಮಿಯು ಕಾಯಂ ಆಗಲು ನಾಡಿನ ಜಮೀನ್ದಾರನ ನೊಸಲ ಮೇಲಿನ ಮೂರ್ಪಟ್ಟಿಯ ಮೇಕಪ್ಪನ್ನು ಹಾಡಿ ಹೊಗಳುವುದು, ಅಂದಿನ ಇಮ್ಮಡಿ ಶಿವಬಸವ ಶ್ರೀಗಳ ಕುಂದೂರು ಮಠದ ಇಂದಿನ ಗುರುಗಳು ಗಾಂಪಪಡೆಯಲ್ಲಿ ಕಂಗೊಳಿಸುವುದು, ಟಿ.ಎನ್. ಮಲ್ಲಪ್ಪನವರ ಮತ್ತು ಇಮ್ಮಡಿ ಶಿವಬಸವ ಸ್ವಾಮಿಗಳ ಅತ್ಯುನ್ನತ ಸಂಶೋಧನಾತ್ಮಕ ಕೃತಿಗಳು ರದ್ದಿ ಅಂಗಡಿಗಳಲ್ಲಿದ್ದು, ಪುಟದಿಂದ ಪುಟಕ್ಕೆ ರದ್ದಾಗುವ ಸಂಶೋಧನೆಗಳ ಕಲಬುರ್ಗಿ ಪುಸ್ತಕಗಳು ವಿಶ್ವವಿದ್ಯಾಲಯಗಳ ಪಠ್ಯಗಳಾಗಿರುವುದೇ ಪಾತಾಳಕ್ಕಿಳಿದಿರುವ ನಾಡಿನ ಜ್ಞಾನದ ಮಾಪಕ!

(ಲೇಖಕರು ಶಿಕಾಗೊ ನಿವಾಸಿ ಮತ್ತು ಸಾಹಿತಿ)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:299

ಸಮಾಚಾರ ಸಣ್ಣದಲ್ಲ

ಬಾಲಕನಿಗೆ ಲೈಂಗಿಕ ಕಿರುಕುಳ:38ರ ಸ್ತ್ರೀಗೆ 54 ವರ್ಷ ಜೈಲು

ಚೆನ್ನೈ: ಮಹಿಳೆಯರ ಮೇಲೆ ಕಾಮುಕ ಪುರುಷರಿಂದ ಅತ್ಯಾಚಾರವೇ ಹೆಚ್ಚಿರುವ ಸಮಾಜದಲ್ಲಿ, ತೀರಾ ಭಿನ್ನ ಎನ್ನುವಂತೆ ಮಹಿಳೆಯಿಂದಲೇ ಬಾಲಕನ ಮೇಲೆ ಅತ್ಯಾಚಾರ ನಡೆದಿದೆ. ಈ ಆಘಾತಕಾರಿ ಘಟನೆ ತಮಿಳುನಾಡಿನಲ್ಲಿ ನಡೆದಿದೆ. 14 ವರ್ಷದ ಬಾಲಕನನ್ನು ಬೆದರಿಸಿ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪದಡಿ 38 ವರ್ಷದ ಮಹಿಳೆಗೆ ನ್ಯಾಯಾಲಯ 54 ವರ್ಷಗಳಷ್ಟು ಸುದೀರ್ಘ ಅವಧಿಯ ಜೈಲು ಶಿಕ್ಷೆಯನ್ನು ವಿಧಿಸಿದೆ. ತಮಿಳುನಾಡಿನ ತಿರುವರೂರಿನಲ್ಲಿ ಡೈರಿ ಕೇಂದ್ರದಲ್ಲಿ ಅಡುಗೆ ಕೆಲಸ ಮಾಡುವ ಲಲಿತಾ ಎಂಬಾಕೆ, 9ನೇ ತರಗತಿ ವಿದ್ಯಾರ್ಥಿಯನ್ನು 2021ರಲ್ಲಿ ಪರಿಚಯ ಮಾಡಿಕೊಂಡು, ಒಂದು ದಿನ ಮನೆಗೆ ಕರೆದೊಯ್ದು ಬಲವಂತವಾಗಿ ಲೈಂಗಿಕ ಕ್ರಿಯೆಗೆ ಬಳಸಿಕೊಂಡು ಕಿರುಕುಳ ನೀಡಿದ್ದಳು. ಇದರಿಂದ ಭಯಗೊಂಡ ಬಾಲಕ ತನಗಾದ ಲೈಂಗಿಕ ಕಿರುಕುಳ ವಿಚಾರವನ್ನು ಪೋಷಕರಿಗೆ ತಿಳಿಸಿದ್ದ. ಇದರಿಂದ ಸಿಟ್ಟಿಗೆದ್ದ ಕುಟುಂಬದವರು, ಎರವಾಂಚೇರಿ ಪೊಲೀಸ್ ಠಾಣೆಗೆ ತೆರಳಿ ದೂರು ನೀಡಿದ್ದರು. 2021ರ ನ.4ರಂದು ಬಾಲಕನ ಹೇಳಿಕೆ ಪಡೆದ ಪೊಲೀಸರು, ಆರೋಪಿ ಲಲಿತಾಳನ್ನು ಬಂಧಿಸಿ, ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಿಸಿದರು. ಪ್ರಕರಣದ ವಿಚಾರಣೆ ನಡೆಸಿದ ತಿರುವರೂರು ಮಹಿಳಾ ನ್ಯಾಯಾಲಯದ ನ್ಯಾಯಾಧೀಶರಾದ ಶರತ್ ರಾಜ್, ಆರೋಪಿ ಲಲಿತಾಗೆ 54 ವರ್ಷ ಜೈಲು ಶಿಕ್ಷೆ ವಿಧಿಸಿದ್ದಾರೆ. ಅಲ್ಲದೇ, 18,000 ರು. ದಂಡವನ್ನೂ ವಿಧಿಸಿ ಗುರುವಾರ ತೀರ್ಪು ನೀಡಿದ್ದಾರೆ. ಅಷ್ಟೇ ಅಲ್ಲದೇ, ಸಂತ್ರಸ್ತ ಬಾಲಕನಿಗೆ ರಾಜ್ಯ ಸರಕಾರ 6 ಲಕ್ಷ ರು. ಪರಿಹಾರ ಧನ ಪಾವತಿಸಬೇಕು ಎಂದೂ ಆದೇಶಿಸಿದ್ದಾರೆ.

ನಾಳೆಯಿಂದ ಮೋದಿ ಭೂತಾನ್ ಪ್ರವಾಸ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಮಂಗಳವಾರ-ಬುಧವಾರ ಭೂತಾನ್ ಪ್ರವಾಸ ಕೈಗೊಳ್ಳಲಿದ್ದಾರೆ. ಈ ವೇಳೆ ಭೂತಾನ್ ದೊರೆ ಜಿಗ್ಮೆ ಖೇಸರ್ ನಮ್ಗ್ಯಾಲ್ ವಾಂಗ್‌ಚುಕ್ ಮತ್ತು ಪ್ರಧಾನಿ ತ್ಸೆರಿಂಗ್ ಟೋಬ್‌ಗೆ ಅವರ ಜತೆ ಪ್ರತ್ಯೇಕವಾಗಿ ದ್ವಿಪಕ್ಷೀಯ ಸಭೆ ನಡೆಸಿ ಭಾರತ ಮತ್ತು ಭೂತಾನ್ ನಡುವಿನ ಸ್ನೇಹ ಮತ್ತು ಸಹಕಾರದ ವಿಶೇಷ ಸಂಬಂಧಗಳನ್ನು ಬಲಪಡಿಸುವ ಕುರಿತು ಚರ್ಚೆ ನಡೆಸುವರು. 1,020 ಮೆಗಾವಾಟ್ ಜಲವಿದ್ಯುತ್ ಯೋಜನೆ ಬಗೆಗೂ ಚರ್ಚಿಸುವರು. ಅಲ್ಲದೇ, ಭೂತಾನ್ ಮಾಜಿ ದೊರೆ ಜಿಗ್ಮೆ ಸಿಂಗ್ಯೆ ವಾಂಗ್‌ಚುಕ್ ಅವರ 70ನೇ ಜನ್ಮ ದಿನಾಚರಣೆಯಲ್ಲಿಯೂ ಪ್ರಧಾನಿ ಮೋದಿ ಭಾಗವಹಿಸಲಿದ್ದಾರೆ. ಮೋದಿ ಅವರು ಥಿಂಪುವಿನ ತಾಶಿ ಚೋಡ್ಜಾಂಗ್‌ನಲ್ಲಿರುವ ಪವಿತ್ರ ಅವಶೇಷಗಳಿಗೆ ಪ್ರಾರ್ಥನೆ ಸಲ್ಲಿಸಲಿದ್ದಾರೆ ಮತ್ತು ಭೂತಾನ್ ಸರ್ಕಾರ ಆಯೋಜಿಸಿರುವ ಜಾಗತಿಕ ಶಾಂತಿ ಪ್ರಾರ್ಥನಾ ಉತ್ಸವದಲ್ಲಿ ಭಾಗವಹಿಸಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ. ಈ ಹಿಂದೆ ಮೋದಿ 2024ರ ಮಾರ್ಚ್‌ನಲ್ಲಿ ಭೂತಾನ್‌ಗೆ ಭೇಟಿ ನೀಡಿದ್ದರು. ಆಗ ಅತ್ಯುನ್ನತ ನಾಗರಿಕ ಗೌರವ 'ಆರ್ಡರ್ ಆಫ್ ದಿ ಡ್ರಕ್ ಗಯಾಲ್ಪೊ' ಪ್ರಶಸ್ತಿ ಪ್ರದಾನ ಮಾಡಲಾಗಿತ್ತು.

ಗುರುವಾಯೂರು, ತಿರುಪತಿಗೆ ಅಂಬಾನಿ

ತಿರುಮಲ: ರಿಲಯನ್ಸ್ ಇಂಡಸ್ಟ್ರೀಸ್ ಸಮೂಹದ ಮುಖ್ಯಸ್ಥ ಮುಕೇಶ್ ಅಂಬಾನಿ ಭಾನುವಾರ ಆಂಧ್ರಪ್ರದೇಶದಲ್ಲಿನ ವಿಶ್ವ ಪ್ರಸಿದ್ಧ ತಿರುಪತಿ ತಿರುಮಲ ದೇಗುಲಕ್ಕೆ ಭೇಟಿ ನೀಡಿ ಶ್ರೀ ವೆಂಕಟೇಶ್ವರ ಸ್ವಾಮಿಯ ದರ್ಶನ ಪಡೆದರು. ಅದಕ್ಕೂ ಮುನ್ನ ಕೇರಳದ ಗುರುವಾಯೂರು ಶ್ರೀಕೃಷ್ಣ ದೇಗುಲಕ್ಕೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿದರು. ಗುರುವಾಯೂರಿನಲ್ಲಿ ನಿರ್ಮಾಣ ಮಾಡಲಾಗುತ್ತಿರುವ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಶ್ರೀಕೃಷ್ಣ ದೇಗುಲದ ಆನೆಗಳಿಗೆ ಆಧುನಿಕ ಶೈಲಿಯ ಪಶು ಆಸ್ಪತ್ರೆ ನಿರ್ಮಿಸುವುದಕ್ಕಾಗಿ 15 ಕೋಟಿ ರು. ದೇಣಿಗೆ ಸಲ್ಲಿಸಿದರು. ಗುರುವಾಯೂರು ದೇಗುಲದಲ್ಲಿನ ಆನೆಗಳ ಆರೈಕೆ ಮಾಡುವುದಕ್ಕಾಗಿ ಗುಜರಾತ್‌ನಲ್ಲಿ ತಮ್ಮ ಪುತ್ರ ಸ್ಥಾಪಿಸಿರುವ ರಿಲಯನ್ಸ್ ವನ್ಯಜೀವಿ ಸಂರಕ್ಷಣಾ ಕೇಂದ್ರವಾದ 'ವನತಾರಾ' ಮಾದರಿಯಲ್ಲೇ ತಾಂತ್ರಿಕ ನೆರವು ನೀಡುವ ಭರವಸೆಯನ್ನೂ ನೀಡಿದರು.

{ ಯೋಗಿ ಆದಿತ್ಯನಾಥ್ } ಉ.ಪ್ರ ಸಿಎಂ

ನಳಂದ ವಿಶ್ವವಿದ್ಯಾಲಯವನ್ನು ದೇಶಕ್ಕೆ ಕೊಡುಗೆಯಾಗಿ ನೀಡಿದ ರಾಜ್ಯ, ಬಿಹಾರಕ್ಕೆ ಅದ್ಭುತ ಇತಿಹಾಸವಿದೆ. ಆರ್ಯಭಟ, ಆಚಾರ್ಯ ಚಾಣಕ್ಯರನ್ನು ನೀಡಿದೆ. ಗೌತಮ ಬುದ್ಧನಿಗೆ ಜ್ಞಾನೋದಯ ಮಾಡಿದ ರಾಜ್ಯ. 24 ತೀರ್ಥಂಕರರ ಜನ್ಮಸ್ಥಳವಿದು. ಇಂಥ ರಾಜ್ಯ ಸಾಕ್ಷರತೆಯಲ್ಲಿ ಕುಸಿಯಲು ಆರ್‌ಜೆಡಿ, ಕಾಂಗ್ರೆಸ್ ಕಾರಣ. ಈ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟವೇ ಗೆಲ್ಲಲಿದೆ.

ಮೂವರಿಗೂ ಪಾಕ್‌ನಲ್ಲಿ ಉಗ್ರ ತರಬೇತಿ | ದೇಶದ ವಿವಿಧೆಡೆ ಉಗ್ರ ದಾಳಿಗೆ ಸಂಚು
ಶಸ್ತ್ರಾಸ್ತ್ರಗಳ ಸಂಗ್ರಹ, ಸಾಗಣೆ ಚಟುವಟಿಕೆ | ವರ್ಷದಿಂದಲೂ ನಿಗಾ ಇರಿಸಿದ್ದ ಎಟಿಎಸ್

ಗುಜರಾತಲ್ಲಿ 3 ಐಸಿಸ್ ಉಗ್ರರ ಸೆರೆ

ಗಾಂಧಿನಗರ: ದೇಶದ ವಿವಿಧೆಡೆ ದೊಡ್ಡ ಮಟ್ಟದಲ್ಲಿ ಭಯೋತ್ಪಾದಕ ದಾಳಿಗೆ ಸಂಚು ರೂಪಿಸುತ್ತಿದ್ದ ಹಾಗೂ 'ಐಸಿಸ್' ಭಯೋತ್ಪಾದಕ ಸಂಘಟನೆಯಿಂದ ತರಬೇತಿ ಪಡೆದಿರುವ ಮೂವರು ಉಗ್ರರನ್ನು ಗುಜರಾತ್ ರಾಜ್ಯದ ಭಯೋತ್ಪಾದಕ ನಿಗ್ರಹ ದಳ(ಎಟಿಎಸ್) ಭಾನುವಾರ ಗಾಂಧಿನಗರದಲ್ಲಿ ಬಂಧಿಸಿದೆ. ಆ ಮೂಲಕ ದೇಶದ ವಿವಿಧೆಡೆ ದೊಡ್ಡ ಮಟ್ಟದಲ್ಲಿ ಭಯೋತ್ಪಾದಕ ದಾಳಿಗೆ ನಡೆದಿದ್ದ ಸಂಚನ್ನು ವಿಫಲಗೊಳಿಸಲಾಗಿದೆ.



ಬಂಧಿತರಾಗಿರುವ ಮೂವರೂ ಭಯೋತ್ಪಾದಕರ ಚಲನವಲನದ ಮೇಲೆ ಒಂದು ವರ್ಷದಿಂದಲೂ ಗುಜರಾತ್ ಎಟಿಎಸ್ ತಂಡ ನಿಗಾ ಇರಿಸಿತ್ತು. ಮೂವರೂ ಶಸ್ತ್ರಾಸ್ತ್ರಗಳ ಸಂಗ್ರಹ, ಸಾಗಣೆ, ಕೆಲವರಿಗೆ ಹಸ್ತಾಂತರಿಸಿರುವುದನ್ನೂ ಗಮನಿಸಿತ್ತು. ಮೂವರೂ ಉಗ್ರರು ದೊಡ್ಡ ಮಟ್ಟದಲ್ಲಿ ದೇಶದ ವಿವಿಧೆಡೆ ಭಯೋತ್ಪಾದಕ ಕೃತ್ಯಗಳನ್ನು ನಡೆಸಲು ಸಂಚು ರೂಪಿಸಿದ್ದಾರೆ ಎಂಬುದು ತಿಳಿದ ಬಳಿಕ ಬಂಧಿಸಲಾಗಿದೆ. ಗುಜರಾತ್‌ನ ಗಾಂಧಿನಗರದಲ್ಲಿ ಬಂಧನಕ್ಕೆ ಒಳಗಾಗಿರುವ ಮೂವರು ಐಸಿಸ್ ಭಯೋತ್ಪಾದಕರು ಹಲವು ತಿಂಗಳುಗಳಿಂದ ನಡೆಸುತ್ತಿದ್ದ ಚಟುವಟಿಕೆಗಳನ್ನು ಎಟಿಎಸ್ ಗುಪ್ತಚರರು ದಾಖಲಿಸಿಕೊಂಡಿದ್ದರು. ಅವರು ಇತ್ತೀಚೆಗೆ ನೀಡಿದ ಮಾಹಿತಿಯನ್ನು ಆಧರಿಸಿ ಭಾನುವಾರ ನಸುಕಿನಲ್ಲೇ ಯೋಜಿತ ರೀತಿ ಕಾರ್ಯಾಚರಣೆ ನಡೆಸಿ ಮೂವರನ್ನೂ ಸೆರೆ ಹಿಡಿಯಲಾಯಿತು. ಮೂವರೂ ಭಯೋತ್ಪಾದಕರು ಫಜ್ವತ್‌ಗೆ (ಪಾಕಿಸ್ತಾನದ ಭಯೋತ್ಪಾದಕ ತರಬೇತಿ ಶಿಬಿರ) ತೆರಳಿ ಅಲ್ಲಿ ನುರಿತ ಉಗ್ರರಿಂದ ಶಸ್ತ್ರಾಸ್ತ್ರ ತರಬೇತಿ ಪಡೆದಿದ್ದರು. ಮೂವರೂ ಭಾರತದ ವಿವಿಧೆಡೆ ದೊಡ್ಡ ಮಟ್ಟದಲ್ಲಿಯೇ ಭಯೋತ್ಪಾದಕ ದಾಳಿಗಳನ್ನು ನಡೆಸಲು ಯೋಜನೆ ರೂಪಿಸಿದ್ದರು. ಅದಕ್ಕಾಗಿ ಸಂಚು ರೂಪಿಸಿ ಸಾಕಷ್ಟು ತಯಾರಿ ಮಾಡಿಕೊಂಡಿದ್ದರು ಎಂಬುದು ತನಿಖೆಯಿಂದ ದೃಢಪಟ್ಟಿದೆ.

ಪಾಕ್‌ನಲ್ಲಿ ತರಬೇತಿ

ಗುಜರಾತ್‌ನ ಗಾಂಧಿನಗರದಲ್ಲಿ ಸೆರೆ ಸಿಕ್ಕಿರುವ ಮೂವರು ಐಸಿಸ್ ನಂಟಿನ ಉಗ್ರರಲ್ಲಿ ಇಬ್ಬರು ಉತ್ತರ ಪ್ರದೇಶದ ಪಶ್ಚಿಮ ಭಾಗದ ನಿವಾಸಿಗಳು ಎಂದು ತಿಳಿದುಬಂದಿದೆ. ಮತ್ತೊಬ್ಬ ಹೈದರಾಬಾದ್‌ನವನು. ಮೂವರ ವಯಸ್ಸು 30 ರಿಂದ 35 ವರ್ಷದ ಆಸುಪಾಸಿನಲ್ಲಿದೆ. ಮೂವರೂ ಸಂಪೂರ್ಣವಾಗಿ ಭಯೋತ್ಪಾದಕ ಚಟುವಟಿಕೆಗಳ ತರಬೇತಿ ಪಡೆದ ಉಗ್ರರಾಗಿದ್ದಾರೆ ಎಂದು ಗುಪ್ತಚರ ಮೂಲಗಳು ತಿಳಿಸಿವೆ. ಈ ಮೂವರೂ 'ಫಜ್ವ ಎ ಹಿಂದ್' ಹೆಸರಿನಲ್ಲಿ ತಂಡ ರಚಿಸಿಕೊಂಡು ಮುಸ್ಲಿಮೇತರರನ್ನು ಗುರಿಯಾಗಿಸಿ ಹಿಂಸಾಚಾರ ನಡೆಸಲು ಸಂಚು ರೂಪಿಸಿದ್ದರು ಎಂಬುದು ತನಿಖೆ ವೇಳೆ ತಿಳಿದುಬಂದಿದೆ. ಈ ಮೂವರು ಮತ್ತು ಜು.22ರಂದು ಬಂಧಿಸಲಾದ ಐವರ ವಿರುದ್ಧವೂ 'ಅನ್‌ಲಾಫುಲ್ ಆಕ್ಟಿವಿಟೀಸ್ ಪ್ರಿವೆನ್ಷನ್ ಆಕ್ಟ್' (ಯುಎಪಿಎ)-1967 ಮತ್ತು ಭಾರತೀಯ ನ್ಯಾಯ ಸಂಹಿತಾ-2023ನ ವಿವಿಧ ಕಲಂಗಳಡಿ ಪ್ರಕರಣ ದಾಖಲಿಸಲಾಗಿದೆ.

ಭಾರತದಲ್ಲಿ ಐಸಿಸ್ ಜಾಲ ವಿಸ್ತರಣೆ ಯತ್ನ

ಈ ಹಿಂದೆ, ದೇಶದಲ್ಲಿ ಭಯೋತ್ಪಾದಕ ದಾಳಿಗಳನ್ನು ಯೋಜಿಸಿ, ಅದರ ಜಾರಿಗಾಗಿ ಅಗತ್ಯ ಸಂಖ್ಯೆಯಲ್ಲಿ ಯುವಕರನ್ನು ನೇಮಿಸಿಕೊಂಡು, ತರಬೇತಿ ನೀಡಿ ಅವರನ್ನು ಭಯೋತ್ಪಾದನೆ ಚಟುವಟಿಕೆಗಳಿಗೆ ಸೇರಿಸಿಕೊಳ್ಳುವ ಐಸಿಸ್ ಉಗ್ರರ ಜಾಲ ಬಹಿರಂಗಗೊಂಡಿತ್ತು. ಆ ಸಂಬಂಧ ಕೆಲವು ಉಗ್ರರನ್ನು ಜಾರ್ಖಂಡ್‌ನ ರಾಜಧಾನಿ ರಾಂಚಿಯಿಂದ ಈ ಮೊದಲೇ ಬಂಧಿಸಲಾಗಿದೆ.

ಐಸಿಸ್ ಮಾದರಿ ಉಗ್ರರ ತಂಡಗಳು ದೇಶದಲ್ಲಿರುವುದು ಈ ಹಿಂದೆಯೂ ಬಹಿರಂಗವಾಗಿವೆ. ಯುವಕರ ತಲೆಗೆ ಭಯೋತ್ಪಾದಕ ಚಟುವಟಿಕೆಗಳ ಬಗ್ಗೆ ತುಂಬಿ ಅವರನ್ನು ದಾರಿ ತಪ್ಪಿಸಿ, ಭಯೋತ್ಪಾದನೆ ಚಟುವಟಿಕೆಗಳಿಗೆ ನಿಯೋಜಿಸುವ ಕೆಲಸ ನಡೆಯುತ್ತಲೇ ಇದೆ. ಐಎಸ್‌ಐಎಸ್(ಐಸಿಸ್) ಭಯೋತ್ಪಾದಕ ಸಂಘಟನೆಯು 2003-11ರ ಯುದ್ಧದ ಸಮಯದಲ್ಲಿ ಇರಾಕ್‌ನಲ್ಲಿ ಹುಟ್ಟಿಕೊಂಡಿತು. ಅಬು ಮುಸಾಬ್ ಅಲ್-ಜರ್ಕಾವಿ ನೇತೃತ್ವದಲ್ಲಿ ಅಲ್- ಕೈದಾ ಇನ್ ಇರಾಕ್ ಉಗ್ರ ಸಂಘಟನೆ ಆರಂಭವಾಯಿತು. 2006ರಲ್ಲಿ ಜರ್ಕಾವಿ ಮರಣಾನಂತರ ಸಂಘಟನೆ ಹಲವು ಸಣ್ಣ ಗುಂಪುಗಳನ್ನು ಸೇರಿಸಿಕೊಂಡು 'ಇಸ್ಲಾಮಿಕ್ ಸ್ಟೇಟ್ ಆಫ್ ಇರಾಕ್'(ಐಎಸ್‌ಐಎಸ್) ಎಂದಾಯಿತು. ಐಸಿಸ್ ಭಾರತದಲ್ಲೂ ತನ್ನ ಜಾಲವನ್ನು ವಿಸ್ತರಿಸಲು ಪ್ರಯತ್ನಿಸುತ್ತಿದೆ.

ಜುಲೈನಲ್ಲಿ ಐವರ ಬಂಧನ



ಗುಜರಾತ್ ಎಟಿಎಸ್ ಜುಲೈನಲ್ಲಿ ಬಂಧಿಸಿದ ಮೊಹಮ್ಮದ್ ಫಯೀಕ್ ರಿಜ್ವಾನ್, ಮೊಹಮ್ಮದ್ ಫರ್ದೀನ್ ರಾಯಿಸ್, ಸೈಫುಲ್ಲಾ ಖುರೇಷಿ ರಫೀಕ್, ಝೀಶನ್ ಅಲಿ ಅಸೀಫ್ ಅಲಿ ಹಾಗೂ ಶಮಾ ಪರ್ವೀನ್.

ಇದಕ್ಕೂ ಮುನ್ನ, ಇಂತಹುದೇ ಭಯೋತ್ಪಾದಕ ಕೃತ್ಯಗಳ ಸಂಚಿನ ಭಾಗವಾಗಿ ಜು.22 ಮತ್ತು 25ರಂದು ಗುಜರಾತ್ ರಾಜ್ಯದ ಇದೇ ಎಟಿಎಸ್ ಅಧಿಕಾರಿಗಳ ತಂಡವು, ಒಬ್ಬ ಮಹಿಳೆ ಸೇರಿದಂತೆ 'ಅಲ್‌ಖೈದಾ ಇನ್ ದಿ ಇಂಡಿಯನ್ ಸಬ್ ಕಾಂಟಿನೆಂಟ್'(ಎಕ್ಯುಐಎಸ್) ಉಗ್ರ ಸಂಘಟನೆಗೆ ಸೇರಿದ ಐವರನ್ನು ಬಂಧಿಸಿತ್ತು. ಫರ್ದೀನ್ ಶೇಕ್ (ಅಹಮದಾಬಾದ್), ಸೈಫುಲ್ಲಾ ಖುರೇಷಿ ರಫೀಖ್(ಮೊದಾಸಾ), ಮೊಹಮ್ಮದ್ ಫಯೀಕ್ ರಯೀಸ್(ದೆಹಲಿ) ಮತ್ತು ಝೀಷನ್ ಅಲಿ ಅಸೀಫ್ ಅಲಿಯನ್ನು(ನೊಯಿಡಾ) ಜು.22ರಂದು ಹಾಗೂ ಬೆಂಗಳೂರಿನಲ್ಲಿ ಜು.27ರಂದು ಬಂಧಿತಳಾದ ಮಹಿಳೆ ಶಮಾ ಪರ್ವೀನ್(30) ಕೂಡಾ ಸೇರಿದ್ದಾಳೆ. ಆಕೆಗೆ ಪಾಕ್‌ನಿಂದ ನಿರ್ದೇಶನಗಳು ಆನ್‌ಲೈನ್ ಮೂಲಕ ಬರುತ್ತಿದ್ದವು. ಅದರನ್ವಯ ಮುಸ್ಲಿಂ ಯುವಕರನ್ನು ಉಗ್ರ ಚಟುವಟಿಕೆಗಳ ಜಾಲಕ್ಕೆ ಸೆಳೆಯುತ್ತಿದ್ದಳು. ಈ ಐವರೂ ಉಗ್ರರನ್ನೂ ಪಾಕಿಸ್ತಾನದ ಉಗ್ರ ಸಂಘಟನೆಗಳು ನಿರ್ವಹಣೆ ಮಾಡುತ್ತಿದ್ದವು ಎಂಬುದು ತನಿಖೆಯಿಂದ ತಿಳಿದುಬಂದಿದೆ. ನೊಯಿಡಾದಲ್ಲಿನ ಝೀಷನ್ ಅಲಿಯ ಮನೆಯಲ್ಲಿ ಒಂದು ಸೆಮಿ ಆಟೊಮ್ಯಾಟಿಕ್ ಪಿಸ್ತೂಲ್ ಮತ್ತು ಗುಂಡುಗಳೂ ಸಿಕ್ಕಿವೆ ಎಂಬುದು ಗಮನಾರ್ಹ.

ಉಗ್ರರ ನಂಟು ಹೊಂದಿದ್ದ ಕಾಶ್ಮೀರ ಪೊಲೀಸರ ವಜಾ

ಶ್ರೀನಗರ: ಜಮ್ಮು-ಕಾಶ್ಮೀರದಲ್ಲಿನ ಕಥುವಾ ಜಿಲ್ಲೆಯಲ್ಲಿ ಭಯೋತ್ಪಾದಕರೊಂದಿಗೆ ನಂಟು ಹೊಂದಿದ್ದ ಆರೋಪದಡಿ ಈ ಹಿಂದೆಯೇ ಬಂಧನಕ್ಕೊಳಗಾಗಿ ತನಿಖೆ ಎದುರಿಸುತ್ತಿದ್ದ ಇಬ್ಬರು ವಿಶೇಷ ಪೊಲೀಸ್ ಅಧಿಕಾರಿಗಳನ್ನು(ಎಸ್‌ಪಿಒ) ಪೊಲೀಸ್ ಇಲಾಖೆ ಸೇವೆಯಿಂದಲೇ ವಜಾಗೊಳಿಸಿ ಭಾನುವಾರ ಆದೇಶಿಸಲಾಗಿದೆ. ಭಯೋತ್ಪಾದಕರ ಜತೆ ಸಂಪರ್ಕ ಹೊಂದಿ, ಸಹಾಯ ಹಸ್ತ ನೀಡುತ್ತಿದ್ದ ಎಸ್‌ಪಿಒಗಳಾದ ಅಬ್ದುಲ್ ಲತೀಫ್ ಮತ್ತು ಮೊಹಮ್ಮದ್ ಅಬ್ಬಾಸ್ ಎಂಬವರೇ ಪೊಲೀಸ್ ಇಲಾಖೆ ಸೇವೆಯಿಂದ ವಜಾಗೊಂಡವರು.

ಯುದ್ಧಕ್ಕೆ ಬಂದರೆ ಪ್ರತ್ಯುತ್ತರ: ಅಫ್ಘನ್

ಕಾಬೂಲ್: ಅಫ್ಘಾನಿಸ್ತಾನದ ಮೇಲೆ ಯಾರಾದರೂ ಯುದ್ಧ ಮಾಡಿದರೆ ತನ್ನನ್ನು ರಕ್ಷಿಸಿಕೊಳ್ಳುವ ಹಕ್ಕು ದೇಶಕ್ಕಿದೆ ಎಂದು ತಾಲಿಬಾನ್ ಸರಕಾರದ ಮುಖ್ಯಸ್ಥರು ಗುಟುರು ಹಾಕಿದ್ದಾರೆ. ಟರ್ಕಿ ಮತ್ತು ಕತಾರ್ ದೇಶಗಳ ಮಧ್ಯಸ್ಥಿಕೆಯಲ್ಲಿ 2 ದಿನಗಳ ಕಾಲ ನಡೆದ ಅಫ್ಘಾನಿಸ್ತಾನ ಮತ್ತು ಪಾಕಿಸ್ತಾನ ನಡುವಿನ ಶಾಂತಿ ಸಭೆ ವಿಫಲವಾದ ನಂತರ ತಾಲಿಬಾನ್ ಸರಕಾರ ಯುದ್ಧಕ್ಕೆ ಸಿದ್ಧ ಎಂದು ಅಫ್ಘಾನ್ ಸರಕಾರದ ವಕ್ತಾರ ಜಬಿಯುಲ್ಲಾ ಮುಜಾಹಿದ್ ಹೇಳಿದ್ದಾರೆ. ಈ ಪ್ರದೇಶದಲ್ಲಿ ನಮಗೇನೂ ಅಭದ್ರತೆ ಕಾಡುತ್ತಿಲ್ಲ. ಯುದ್ಧ ಮಾಡುವುದು ನಮ್ಮ ಮೊದಲ ಆಯ್ಕೆಯೇನೂ ಅಲ್ಲ. ಆದರೆ ಪಾಕಿಸ್ತಾನವೇನಾದರೂ ಯುದ್ಧ ಆರಂಭಿಸಿದರೆ ತನ್ನನ್ನು ರಕ್ಷಿಸಿಕೊಳ್ಳುವ ಹಕ್ಕು ಅಫ್ಘಾನಿಸ್ತಾನಕ್ಕೂ ಇದೆ. ತನ್ನ ನೆಲವನ್ನು ಬೇರಾವುದೋ ದೇಶದ ಆಟಾಟೋಪಕ್ಕೆ ಬಳಸಲು ಬಿಡುವುದಿಲ್ಲ ಎಂದರು.

ರೈಲಲ್ಲಿ ಆರೆಸ್ಸೆಸ್ ಗೀತೆ: ತನಿಖೆಗೆ ಕೇರಳ ಆದೇಶ

ತಿರುವನಂತಪುರಂ: ಪ್ರಧಾನಿ ನರೇಂದ್ರ ಮೋದಿ ಅವರಿಂದ ವರ್ಚುವಲ್ ಮಾರ್ಗದಲ್ಲಿ ಶನಿವಾರ ಚಾಲನೆ ಪಡೆದ 4 ವಂದೇಭಾರತ್ ಎಕ್ಸ್‌ಪ್ರೆಸ್ ರೈಲು ಗಾಡಿಗಳಲ್ಲಿ ಎರ್ನಾಕುಲಂ-ಬೆಂಗಳೂರು ಕೆಎಸ್‌ಆರ್ ಮಾರ್ಗದ ವಂದೇ ಭಾರತ್ ಸೇರಿದೆ. ಆ ರೈಲಿಗೆ ಸಾಂಕೇತಿಕವಾಗಿ ಚಾಲನೆ ನೀಡುವ ಸಂದರ್ಭ ಹಾಜರಿದ್ದ ಶಾಲಾ ವಿದ್ಯಾರ್ಥಿಗಳು ರಾಷ್ಟ್ರೀಯ ಸ್ವಯಂಸೇವಕ ಸಂಘದ(ಆರ್‌ಎಸ್‌ಎಸ್) ಗೀತೆ ಹಾಡಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಕೇರಳ ಸರಕಾರ, ಈ ಘಟನೆ ಕುರಿತು ತನಿಖೆ ನಡೆಸುವಂತೆ ಭಾನುವಾರ ಆದೇಶ ಹೊರಡಿಸಿದೆ. ರಾಜ್ಯದ ಶಿಕ್ಷಣ ಸಚಿವ ವಿ.ಶಿವನ್‌ಕುಟ್ಟಿ ಅವರು ತನಿಖೆ ನಡೆಸಿ ವರದಿ ನೀಡುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆ ನಿರ್ದೇಶಕರಿಗೆ (ಡಿಪಿಐ) ಸೂಚನೆ ನೀಡಿದ್ದಾರೆ. ದೇಶದ ಜಾತ್ಯತೀತ ಮತ್ತು ರಾಷ್ಟ್ರೀಯ ಮೌಲ್ಯಗಳನ್ನು ಎತ್ತಿಹಿಡಿಯುವ ಹೊಣೆ ಸರಕಾರದ್ದಾಗಿದೆ. ಹಾಗಾಗಿಯೇ ಸರಕಾರ ಈ ಘಟನೆಯನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದೆ ಎಂದು ಸಚಿವ ಶಿವಬ್‌ಕುಟ್ಟಿ ಹೇಳಿರುವುದಾಗಿ ಸಚಿವರ ಕಚೇರಿ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಜಾರ್ಜಿಯಾದಲ್ಲಿ ವೆಂಕಟೇಶ್, ರಾಣಾ ಅಮೆರಿಕದಲ್ಲಿ ಸೆರೆ

ಭಾರತಕ್ಕೆ ಬೇಕಾಗಿದ್ದ ಇಬ್ಬರು ಕ್ರಿಮಿನಲ್ಸ್ ವಿದೇಶದಲ್ಲಿ ಸೆರೆ

ದೆಹಲಿ: ಹರಿಯಾಣ ಪೊಲೀಸರಿಗೆ ಹಲವು ಅಪರಾಧ ಪ್ರಕರಣಗಳಲ್ಲಿ ಬೇಕಾಗಿದ್ದ ಭಾರತ ಮೂಲದ ಇಬ್ಬರು ಕುಖ್ಯಾತ ಗ್ಯಾಂಗ್‌ಸ್ಟರ್‌ಗಳನ್ನು ಅಮೆರಿಕ ಮತ್ತು ಜಾರ್ಜಿಯಾದಲ್ಲಿ ಬಂಧಿಸಲಾಗಿದೆ. ಹರಿಯಾಣ ಪೊಲೀಸ್ ಮತ್ತು ಕೇಂದ್ರ ತನಿಖಾ ದಳ ಅಧಿಕಾರಿಗಳ ತಂಡ ಇಂಟರ್‌ಪೋಲ್ ಪೊಲೀಸರ ನೆರವಿನೊಂದಿಗೆ ಕುಖ್ಯಾತರಿಬ್ಬರ ಬಂಧನ ಕಾರ್ಯಾಚರಣೆ ನಡೆಸಲಾಗಿದೆ. ಇಬ್ಬರೂ ಕ್ರಿಮಿನಲ್‌ಗಳನ್ನು ಶೀಘ್ರವೇ ಅಮೆರಿಕ ಮತ್ತು ಜಾರ್ಜಿಯಾ ಸರಕಾರ ಭಾರತಕ್ಕೆ ಗಡಿಪಾರು ಮಾಡಲಿದೆ ಎಂದು ತಿಳಿದುಬಂದಿದೆ.

ಭಾರತದಲ್ಲಿನ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದಂತೆ 25ಕ್ಕೂ ಹೆಚ್ಚು ಗ್ಯಾಂಗ್‌ಸ್ಟರ್‌ಗಳು ವಿವಿಧ ದೇಶಗಳಲ್ಲಿ ತಲೆಮರೆಸಿಕೊಂಡಿದ್ದು, ಅಲ್ಲಿಂದಲೇ ತಮ್ಮ ತಂಡದ ಸದಸ್ಯರ ಮೂಲಕ ಭಾರತದಲ್ಲಿ ಅಪರಾಧ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ.

ಹರಿಯಾಣ ರಾಜ್ಯದ ಕರ್ನಾಲ್ ನಿವಾಸಿಯಾದ ರಾಣಾ, ಸದ್ಯ ಭಾರತದ ಜೈಲಲ್ಲಿರುವ ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್ ಸಂಪರ್ಕದಲ್ಲಿದ್ದಾನೆ. ದೀರ್ಘಕಾಲದಿಂದ ಅಪರಾಧ ಲೋಕದಲ್ಲಿರುವ ಈತ, ಕೆಲ ಸಮಯದಿಂದ ಅಮೆರಿಕದಲ್ಲಿ ಅಡಗಿದ್ದ. ಹರಿಯಾಣ, ಪಂಜಾಬ್, ದೆಹಲಿಯಲ್ಲಿ ಅಪರಾಧ ಕೃತ್ಯ ನಡೆಸುತ್ತಿದ್ದ. ಪಂಜಾಬ್‌ನ ಗ್ರನೇಡ್ ದಾಳಿಯೊಂದರಲ್ಲೂ ಈತನ ಕೈವಾಡವಿದೆ ಎನ್ನಲಾಗಿದೆ. ಹರಿಯಾಣ ರಾಜ್ಯದ ನಾರಾಯಣಗಢ ನಿವಾಸಿ ವೆಂಕಟೇಶ್ ಗರ್ಗ್ ವಿರುದ್ಧ 10ಕ್ಕೂ ಹೆಚ್ಚು ಕ್ರಿಮಿನಲ್ ಪ್ರಕರಣಗಳಿವೆ. ಉತ್ತರ ಭಾರತದ ಯುವಕರನ್ನು ನೇಮಿಸಿಕೊಂಡು ಹರಿಯಾಣ, ರಾಜಸ್ಥಾನ, ದೆಹಲಿಯಲ್ಲಿ ಅಪರಾಧ ಕೃತ್ಯ ನಡೆಸುತ್ತಿದ್ದ.

ತೇಜ್‌ಪ್ರತಾಪ್‌ಗೆ ಜೀವ ಬೆದರಿಕೆ, ಭದ್ರತೆ ಹೆಚ್ಚಳ

ಪಟನಾ: ಎರಡನೇ ಹಂತದ ಮತದಾನಕ್ಕೆ ಸಿದ್ಧವಾಗಿರುವ ಬಿಹಾರದಲ್ಲಿ ರಾಜಕೀಯ ಮೇಲಾಟ ಮೇರೆ ಮೀರುತ್ತಿದೆ. ಆರ್‌ಜೆಡಿ ವರಿಷ್ಠ ಲಾಲೂ ಪ್ರಸಾದ್-ರಾಬ್ರಿದೇವಿ ದಂಪತಿಯ ಹಿರಿಯ ಪುತ್ರ, 'ಜನಶಕ್ತಿ ಜನತಾ ದಳ' ಪಕ್ಷದ ಮುಖ್ಯಸ್ಥ ತೇಜ್ ಪ್ರತಾಪ್ ಯಾದವ್ ಅವರಿಗೆ ಜೀವ ಬೆದರಿಕೆ ಎದುರಾಗಿದೆ. ಅನೇಕ ರಾಜಕೀಯ ಶತ್ರುಗಳು ತಮ್ಮನ್ನು ಕೊಲ್ಲಲು ಪ್ರಯತ್ನಿಸುತ್ತಿದ್ದಾರೆ ಎಂದು ತೇಜ್ ಪ್ರತಾಪ್ ಯಾದವ್ ದೂರಿದ್ದಾರೆ. ಆನಂತರದಲ್ಲಿ ಅವರಿಗೆ ಪೊಲೀಸ್ ಭದ್ರತೆ ಹೆಚ್ಚಿಸಲಾಗಿದೆ. ನ.6ರಂದು ಮೊದಲ ಹಂತದಲ್ಲಿ ಮತದಾನ ನಡೆದ ಮಹುವಾ ಕ್ಷೇತ್ರದಲ್ಲಿ ತೇಜ್ ಪ್ರತಾಪ್ ಯಾದವ್ ಚುನಾವಣೆಗೆ ಸ್ಪರ್ಧಿಸಿದ್ದಾರೆ.

ಅತ್ಯಾಚಾರ: ಪಂಜಾಬ್ ಎಎಪಿ ಶಾಸಕ ಆಸ್ಟ್ರೇಲಿಯಕ್ಕೆ ಪರಾರಿ

ಪಟಿಯಾಲ: ಅತ್ಯಾಚಾರ ಪ್ರಕರಣದಲ್ಲಿ ಆರೋಪಿಯಾಗಿರುವ ಪಂಜಾಬ್‌ನ ಆಮ್ ಆದ್ಮಿ ಪಕ್ಷದ (ಎಎಪಿ) ಶಾಸಕ ಹರ್ಮೀತ್ ಸಿಂಗ್ ಪಠಾಣಮಜ್ರಾ, ಆಸ್ಟ್ರೇಲಿಯಾಕ್ಕೆ ಪರಾರಿಯಾಗಿದ್ದಾರೆ. ಪಟಿಯಾಲ ಪೊಲೀಸರು ಶಾಸಕನ ವಿರುದ್ಧ ಲುಕ್‌ಔಟ್ ನೋಟಿಸ್ ಹೊರಡಿಸಿದ್ದಾರೆ.

ಆಸ್ಟ್ರೇಲಿಯ ಮೂಲದ ಪಂಜಾಬಿ ವೆಬ್ ಚಾನೆಲ್‌ಗೆ ಪಠಾಣಮಜ್ರಾ ಸಂದರ್ಶನ ನೀಡಿದ್ದು, ಆ ವೀಡಿಯೊ ಶುಕ್ರವಾರ ಜಾಲತಾಣದಲ್ಲಿ ಬಿತ್ತರವಾಗಿದೆ. ಅದರಲ್ಲಿ ಶಾಸಕ ತಮ್ಮ ಮೇಲಿನ ಆರೋಪಗಳನ್ನು ನಿರಾಕರಿಸಿದ್ದಾರೆ. ಅತ್ಯಾಚಾರ ಪ್ರಕರಣವೊಂದು 'ರಾಜಕೀಯ ಪಿತೂರಿ' ಎಂದಿದ್ದಾರೆ. 'ನಿರೀಕ್ಷಣಾ ಜಾಮೀನು ಪಡೆದ ನಂತರವೇ ಮನೆಗೆ ಮರಳುವೆ' ಎಂದೂ ಹೇಳಿದ್ದಾರೆ.

ಜಿರಾಕ್‌ಪುರದ ಮಹಿಳೆಯೊಬ್ಬರು ನೀಡಿದ ದೂರಿನ ಮೇರೆಗೆ ಸೆ.1ರಂದು ಪಟಿಯಾಲಾದಲ್ಲಿನ ಪೊಲೀಸ್ ಠಾಣೆಯಲ್ಲಿ ಶಾಸಕ ಪಠಾಣಮಜ್ರಾ ವಿರುದ್ಧ ಅತ್ಯಾಚಾರ, ವಂಚನೆ ಮತ್ತು ಕ್ರಿಮಿನಲ್ ಬೆದರಿಕೆ ಪ್ರಕರಣ ದಾಖಲಾಗಿತ್ತು. ಸೆ.2ರಂದು ಬಂಧಿಸಿ ಕರೆದೊಯ್ಯುತ್ತಿದ್ದಾಗ ಪೊಲೀಸರ ಮೇಲೆಯೇ ಗುಂಡು ಹಾರಿಸಿದ ಶಾಸಕ ತಲೆಮರೆಸಿಕೊಂಡಿದ್ದರು. ಬಳಿಕ ಆಸ್ಟ್ರೇಲಿಯಕ್ಕೆ ಪರಾರಿಯಾದರು.

ಸನೂರ್ ಕ್ಷೇತ್ರದ ಎಎಪಿ ಶಾಸಕ ಪಠಾಣ ಮಜ್ರಾ ಅಡಗಿಕೊಂಡಿರಬಹುದಾದ ಶಂಕೆಯ ಮೇರೆಗೆ ಹಲವೆಡೆ ಪಂಜಾಬ್ ಪೊಲೀಶ್ ದಾಳಿ ನಡೆಸಿದ್ದರೂ ಆರೋಪಿ ಶಾಸಕರನ್ನು ಪತ್ತೆ ಮಾಡಲಾಗಿಲ್ಲ. ಈ ವಿಡಿಯೊದಲ್ಲಿ ಕಾಣಿಸಿಕೊಂಡು ಹೇಳಿಕೆ ನೀಡಿರುವುದರಿಂದ ಪಂಜಾಬ್ ಪೊಲೀಸರು ತಲೆ ತಗ್ಗಿಸುವಂತಾಗಿದೆ. ಪಠಾಣಮಜ್ರಾ ವಿಚಾರಣೆಗೆ ಹಾಜರಾಗದ ಕಾರಣ ಪಟಿಯಾಲ ನ್ಯಾಯಾಲಯ, ಅವರನ್ನು ಘೋಷಿತ ಅಪರಾಧಿ ಎಂದು ಪರಿಗಣಿಸಿ ವಿಚಾರಣೆ ಆರಂಭಿಸಿದೆ.

ಪಾಕ್ ಸಂವಿಧಾನ ತಿದ್ದುಪಡಿ: ಮುನೀರ್‌ಗೆ ಅಸೀಮ ಹುದ್ದೆ

ಇಸ್ಲಾಮಾಬಾದ್: ಪಾಕಿಸ್ತಾನ ಹಂತ ಹಂತವಾಗಿ ಮಿಲಿಟರಿ ಆಡಳಿತದತ್ತ ಸಾಗುತ್ತಿದೆ. ಅದನ್ನು ಪುಷ್ಟೀಕರಿಸುವಂತೆ ಪಾಕ್ ಸರಕಾರದ ನಡೆ ಕಾಣಬರುತ್ತಿದೆ.

ಪಾಕ್‌ನ ಸಂವಿಧಾನಕ್ಕೆ 27ನೇ ತಿದ್ದುಪಡಿ ತಂದು ಸಂಸತ್ತಿನಲ್ಲಿ ವಿಧೇಯಕ ಮಂಡಿಸಲಾಗಿದೆ. ಹೊಸದಾಗಿ ಮೂರೂ ರಕ್ಷಣಾ ಪಡೆಗಳ ಮಹಾ ದಂಡನಾಯಕ ಹುದ್ದೆ ರಚಿಸಲೆಂದೇ ಸರಕಾರ ಸಾಂವಿಧಾನಿಕ ತಿದ್ದುಪಡಿ ತಂದಿದೆ. ಪ್ರಧಾನಿ ಶೆಹಬಾಜ್ ಷರೀಫ್ ಸರಕಾರದ ಈ ನಡೆಯಿಂದಾಗಿ ಪಾಕಿಸ್ತಾನದ ಸೇನೆಗೆ ಮತ್ತು ಅದರ ದಂಡನಾಯಕ ಅಸೀಮ್ ಮುನೀರ್‌ಗೆ ಅಪರಿಮಿತವಾದ ಅಧಿಕಾರ ಪ್ರಾಪ್ತಿಯಾಗಿದೆ.

ಸಂಸತ್ತಿನಲ್ಲಿ ಶನಿವಾರ ಮಂಡನೆಯಾದ 27ನೇ ಸಾಂವಿಧಾನಿಕ ತಿದ್ದುಪಡಿ ವಿಧೇಯಕವು ಸಂವಿಧಾನದ 243ನೇ ವಿಧಿಗೆ ಬದಲಾವಣೆ ಪ್ರಸ್ತಾಪಿಸಿದೆ. ಇದರಿಂದ 3 ಸೇನಾಪಡೆಗಳ ದಂಡನಾಯಕನಿಗೆ ಸರಕಾರದ ಮಿತಿಯನ್ನೂ ಮೀರಿದ ಅಧಿಕಾರ ಪ್ರಾಪ್ತವಾಗಲಿದೆ.

ಪಾಕ್‌ನ ಪ್ರಧಾನಿಯ ಸಲಹೆ ಮೇರೆಗೆ ರಾಷ್ಟ್ರಪತಿಯು, ಸೇನಾ ಮುಖ್ಯಸ್ಥ ಮತ್ತು ರಕ್ಷಣಾ ಪಡೆಗಳ ಮುಖ್ಯಸ್ಥರನ್ನು ನೇಮಕ ಮಾಡುತ್ತಾರೆ. ರಕ್ಷಣಾ ಪಡೆಗಳ ಮುಖ್ಯಸ್ಥರೂ ಆಗಿರುವ ಸೇನಾ ಮುಖ್ಯಸ್ಥರು, ಪ್ರಧಾನಿ ಜತೆ ಸಮಾಲೋಚಿಸಿ ರಾಷ್ಟ್ರೀಯ ಕಾರ್ಯತಂತ್ರದ ಕಮಾಂಡ್ ಇನ್ ಚೀಫ್ ಅವರ ನೇಮಕ ಮಾಡುತ್ತಾರೆ. ರಾಷ್ಟ್ರೀಯ ಕಾರ್ಯತಂತ್ರದ ಕಮಾಂಡ್‌ನ ಮುಖ್ಯಸ್ಥರು ಪಾಕಿಸ್ತಾನ ಸೇನೆಗೆ ಸೇರಿದವರಾಗಿರುತ್ತಾರೆ.

ಅಲ್ಲದೇ, ಪಾಕಿಸ್ತಾನದ ಸುಪ್ರೀಂ ಕೋರ್ಟ್‌ನ ಶ್ರೇಣಿ ತಗ್ಗಲಿದೆ. ಸುಪ್ರೀಂ ಕೋರ್ಟ್‌ಗೆ ಇನ್ನು ಮುಂದೆ ಸಾಂವಿಧಾನಿಕ ವಿಷಯಗಳಿಗೆ ಸಂಬಂಧಿಸಿದ ಅರ್ಜಿಗಳನ್ನು ವಿಚಾರಣೆ ನಡೆಸುವ ಅಧಿಕಾರ ಇರುವುದಿಲ್ಲ.

ಭಾರತದ ಆಪರೇಷನ್ ಸಿಂದೂರ್ ನಂತರ ಸೋತು ಸುಣ್ಣವಾದ ಪಾಕಿಸ್ತಾನ ಸೇನೆಯ ಮುಖ್ಯಸ್ಥನಾಗಿದ್ದ ಜನರಲ್ ಅಸಿಮ್ ಮುನೀರ್ ತಮಗೆ ತಾವೇ ಫೀಲ್ಡ್ ಮಾರ್ಷಲ್ ಹುದ್ದೆಗೆ ಬಡ್ತಿ ನೀಡಿಕೊಂಡರು. ಈಗ ಆ ಹುದ್ದೆಯಿಂದಲೂ ಬಡ್ತಿ ಪಡೆದುಕೊಂಡು ಹೆಚ್ಚಿನ ಪ್ರಮಾಣದ ಅಧಿಕಾರವನ್ನು ಪಡೆದುಕೊಂಡಿದ್ದಾರೆ. ಪ್ರಧಾನಿಯಿಂದಲೂ ತಮ್ಮ ಹುದ್ದೆಗೆ ಕುತ್ತು ಬರದಂತೆ ಸಂವಿಧಾನಕ್ಕೆ ತಿದ್ದುಪಡಿ ಮಾಡಿಸಿದ್ದಾರೆ.

2034ವರೆಗೂ ಕೈನದ್ದೇ ದರ್ಬಾರ್: ರೇವಂತ್

ಹೈದರಾಬಾದ್: ತೆಲಂಗಾಣ ರಾಜ್ಯದಲ್ಲಿ 2034ರವರೆಗೂ ಕಾಂಗ್ರೆಸ್ ಪಕ್ಷವೇ ಅಧಿಕಾರದಲ್ಲಿರುತ್ತದೆ ಎಂದು ಮುಖ್ಯಮಂತ್ರಿ ಎ.ರೇವಂತ್ ರೆಡ್ಡಿ ಭಾನುವಾರ ಮಾಧ್ಯಮಗೋಷ್ಠಿಯಲ್ಲಿ ವಿಶ್ವಾಸ ವ್ಯಕ್ತಪಡಿಸಿದರು. ಭಾರತ್ ರಾಷ್ಟ್ರೀಯ ಸಮಿತಿ(ಬಿಆರ್‌ಎಸ್) ಪಕ್ಷವನ್ನು ತರಾಟೆಗೆ ತೆಗೆದುಕೊಂಡ ರೆಡ್ಡಿ, ಹತ್ತು ವರ್ಷಗಳ ಕಾಲ ಸತತ ಆಡಳಿತ ನಡೆಸಿದ ಬಿಆರ್‌ಎಸ್ ನಾಯಕರು, ವಾರ್ಷಿಕ ಸರಾಸರಿ 2 ಲಕ್ಷ ಕೋಟಿ ರು. ತೆರಿಗೆ ವರಮಾನ ಗಳಿಸಿದ್ದರೂ ಹೈದರಾಬಾದ್ ನಗರದಲ್ಲಿ ಫ್ಲೈಓವರ್ ಅನ್ನೇ ಪೂರ್ಣಗೊಳಿಸಲಿಲ್ಲ. ಹಲವು ಯೋಜನೆಗಳನ್ನು ಜಾರಿಗೊಳಿಸಲಾಗದೇ ವಿಫಲವಾದರು. 'ಕೆಸಿಆರ್ 10 ವರ್ಷಗಳ ಆಳ್ವಿಕೆಯಲ್ಲಿ ರಾಜ್ಯವನ್ನು ಹಾಳು ಮಾಡಿದ್ದಾರೆ ಎಂದು ಟೀಕಿಸಿದರು. ಜುಬಿಲಿ ಹಿಲ್ಸ್ ವಿಧಾನ ಸಭಾ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವೇ ಗೆಲ್ಲುತ್ತದೆ. ಬಿಜೆಪಿ ಠೇವಣಿ ಕಳೆದುಕೊಳ್ಳುತ್ತದೆ ಮತ್ತು ಬಿಆರ್‌ಎಸ್ ಹೀನಾಯ ಸೋಲು ಕಾಣುತ್ತದೆ ಎಂದು ಸಿಎಂ ರೇವಂತ್ ರೆಡ್ಡಿ ಭವಿಷ್ಯ ನುಡಿದರು. 'ತೆಲಂಗಾಣದಲ್ಲಿ ಹೂಡಿಕೆ ಮಾಡಲು ಆಸಕ್ತಿ ಹೊಂದಿದ್ದ ಕೈಗಾರಿಕೆಗಳನ್ನು ಪ್ರಧಾನಿ ಆದೇಶದಂತೆ ಗುಜರಾತ್‌ಗೆ ಕಳುಹಿಸಿಕೊಟ್ಟವರು' ಎಂದು ಕೇಂದ್ರ ಸಚಿವ ಕಿಶನ್ ರೆಡ್ಡಿರನ್ನು ತರಾಟೆಗೆ ತೆಗೆದುಕೊಂಡರು.

1962ರಲ್ಲಿ ನೊಬೆಲ್ ಪುರಸ್ಕೃತರಾಗಿದ್ದ ವಿಜ್ಞಾನಿ

ಡಿಎನ್‌ಎ ರಚನೆ ಸಂಶೋಧಕ ವಿಜ್ಞಾನಿ ಜೇಮ್ಸ್‌ವಾಟ್ಸನ್ ನಿಧನ



ನ್ಯೂಯಾರ್ಕ್: ನೊಬೆಲ್ ಪ್ರಶಸ್ತಿ ಪುರಸ್ಕೃತ, 'ಡಿಎನ್‌ಎ ಡಬಲ್ ಹಿಲಿಕ್ಸ್' ಆವಿಷ್ಕಾರ ನಡೆಸಿದ ತಂಡದ ವಿಜ್ಞಾನಿ ಜೇಮ್ಸ್ ವಾಟ್ಸನ್ (97) ಅಮೆರಿಕದ ನ್ಯೂಯಾರ್ಕ್‌ನಲ್ಲಿ ಶನಿವಾರ ನಿಧನರಾದರು. ಜೇಮ್ಸ್ ವಾಟ್ಸನ್ ನಿಧನ ವಾರ್ತೆಯನ್ನು ಕೋಲ್ಡ್ ಸ್ಪ್ರಿಂಗ್ ಹಾರ್ಬರ್ ಲ್ಯಾಬೊರೇಟರಿ ದೃಢಪಡಿಸಿದೆ. 1953ರಲ್ಲಿ ಮೌರೈಸ್ ವಿಲ್ಕಿನ್ಸ್ ಮತ್ತು ಬ್ರಿಟಿಷ್ ವಿಜ್ಞಾನಿ ಫ್ರಾನ್ಸಿಸ್ ಕ್ರಿಕ್ ಜತೆಗೂಡಿ ಸಂಶೋಧನೆ ನಡೆಸಿ 'ಡಿಎನ್‌ಎ ರಚನೆ' ಗುರುತಿಸಿದ್ದರು. ಆ ಮೂಲಕ ಆಣ್ವಯಿಕ ಜೀವಶಾಸ್ತ್ರದಲ್ಲಿ ಕ್ರಾಂತಿಗೆ ಕಾರಣರಾಗಿದ್ದರು. 1962ರಲ್ಲಿ ನೊಬೆಲ್ ಪ್ರಶಸ್ತಿ ಪ್ರದಾನ ಮಾಡಿದಾಗ ಅದರ ಜತೆಗೆ ನೀಡಲಾಗಿದ್ದ ಚಿನ್ನದ ಪದಕವನ್ನು ಜೇಮ್ಸ್ 2014ರಲ್ಲಿ ಹರಾಜಿಗಿಟ್ಟರು. ವಿಜ್ಞಾನಿಯ ಈ ನಡೆ ವಿಜ್ಞಾನ ಕ್ಷೇತ್ರದತ್ತ ಆಸಕ್ತಿ ಹೊಂದಿದ್ದ ಜನರ ಹುಬ್ಬೇರುವಂತೆ ಮಾಡಿತ್ತು.

1928ರ ಏಪ್ರಿಲ್‌ನಲ್ಲಿ ಷಿಕಾಗೋದಲ್ಲಿ ಜನಿಸಿದ ಜೇಮ್ಸ್ ವಾಟ್ಸನ್, 15ನೇ ವಯಸ್ಸಿನಲ್ಲಿ ವಿದ್ಯಾರ್ಥಿ ವೇತನ ಪಡೆದು ಶಿಕಾಗೋ ವಿಶ್ವವಿದ್ಯಾಲಯಕ್ಕೆ ಸೇರಿಕೊಂಡಿದ್ದರು. ಬಳಿಕ ಡಿಎನ್‌ಎ ರಚನೆ ಕುರಿತು ಸಂಶೋಧನೆಗಾಗಿ ಇಂಗ್ಲೆಂಡಿನ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ನಡೆಸಿದ್ದರು. ಅಲ್ಲಿ ಫ್ರಾನ್ಸಿಸ್ ಕ್ರಿಕ್ ಭೇಟಿಯಾಗಿತ್ತು.

ಡಿಎನ್‌ಎ ಸಂಶೋಧನೆ ನಂತರ, ವಾಟ್ಸನ್ ಮತ್ತು ಪತ್ನಿ ಎಲಿಜಬೆತ್, ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಜೀವಶಾಸ್ತ್ರ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಇವರ ಇಬ್ಬರು ಪುತ್ರರಲ್ಲೊಬ್ಬನಿಗೆ ಮಾನಸಿಕ ಕಾಯಿಲೆ 'ಸ್ಕಿಜೊಫ್ರೇನಿಯ' ಕಂಡುಬಂದಿದ್ದರಿಂದ ವಾಟ್ಸನ್ ಡಿಎನ್‌ಎ ಸಂಶೋಧನೆ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿದ್ದರು. 'ಕಪ್ಪು-ಬಿಳಿ ಜನರಲ್ಲಿನ ಸರಾಸರಿ 'ಐಕ್ಯೂ' ವ್ಯತ್ಯಾಸಕ್ಕೆ ಜೀನ್ಸ್ ಕಾರಣ' ಎಂದು ಟಿವಿ ಕಾರ್ಯಕ್ರಮದಲ್ಲಿ ವಾಟ್ಸನ್ ಹೇಳಿದ್ದು ಭಾರಿ ವಿವಾದಕ್ಕೆ ಕಾರಣವಾಗಿತ್ತು.

ಮುರ್ಷಿದಾಬಾದ್‌ನಲ್ಲಿ ಬಿಎಸ್‌ಎಫ್ ಶೋಧ

ಎಸ್‌ಐಆರ್ : ಪ.ಬಂ.ದಲ್ಲಿ 2 ದಿನಕ್ಕೆ 150 ಬಾಂಬ್ ಪತ್ತೆ

ಕೋಲ್ಕತ್ತ: ಭಾರತೀಯ ಚುನಾವಣಾ ಆಯೋಗ ಪಶ್ಚಿಮ ಬಂಗಾಳ ರಾಜ್ಯದಲ್ಲಿನ ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರಣೆ'(ಎಸ್‌ಐಆರ್) ನಡೆಸಿರುವ ಮಧ್ಯೆಯೇ ಮುಸ್ಲಿಂ ಬಾಹುಳ್ಯದ ಮುರ್ಷಿದಾಬಾದ್ ಜಿಲ್ಲೆಯಲ್ಲಿ ಕಳೆದೆರಡು ದಿನಗಳಲ್ಲಿ 150 ಕಚ್ಚಾ ಬಾಂಬ್‌ಗಳು ಪತ್ತೆಯಾಗಿವೆ. ಇದು ಈ ಪ್ರದೇಶದಲ್ಲಿ ಭಾರಿ ಭೀತಿಗೆ ಕಾರಣವಾಗಿದೆ.

ಬಾಂಗ್ಲಾದೇಶದ ಗಡಿಗೆ ಸಮೀಪದಲ್ಲಿರುವ ಮುರ್ಷಿದಾಬಾದ್ ಜಿಲ್ಲೆಯ ವಿವಿಧೆಡೆ ರಾಜ್ಯ ಪೊಲೀಸ್ ಇಲಾಖೆ ಮತ್ತು ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಯೋಧರು ಜಂಟಿಯಾಗಿ ಶೋಧ ಕಾರ್ಯಾಚರಣೆ ನಡೆಸಿದಾಗ ಕಚ್ಚಾಬಾಂಬ್‌ಗಳು ಸರಣಿಯೋಪಾದಿಯಲ್ಲಿ ಪತ್ತೆಯಾಗಿವೆ.

ಎರಡು ದಿನಗಳಲ್ಲೇ 150ಕ್ಕೂ ಅಧಿಕ ಬಾಂಬ್‌ಗಳು ಪತ್ತೆಯಾಗಿದ್ದರಿಂದ, ನಂತರದಲ್ಲಿ ಬಿಎಸ್‌ಎಫ್ ಯೋಧರು ಡ್ರೋನ್‌ಗಳನ್ನು ಮತ್ತು ಬಾಂಬ್ ನಿಷ್ಕ್ರಿಯ ದಳವನ್ನು ಬಳಸಲಾರಂಭಿಸಿದ್ದಾರೆ. ಭಾರೀ ಸಂಖ್ಯೆಯಲ್ಲಿ ಬಾಂಬ್‌ಗಳು ಪತ್ತೆಯಾಗುತ್ತಿರುವುದರಿಂದ ಮುರ್ಷಿದಾಬಾದ್ ಸಮೀಪದ ಗ್ರಾಮಗಳ ಜನರನ್ನು ಆತಂಕಕ್ಕೆ ದೂಡಿದೆ. ಖಾರ್‌ಗ್ರಾಮ್ ಪ್ರದೇಶದಲ್ಲಿ ಮದರಸಾದಲ್ಲಿ ಕೆಲಸ ಮಾಡುವ ವ್ಯಕ್ತಿಯೊಬ್ಬನ ಮನೆಯಲ್ಲೇ 9 ಸಜೀವ ಬಾಂಬ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಬಾಂಗ್ಲಾದೇಶದ ಗಡಿ ಸಮೀಪದ ಕಂಡಿ, ಶಂಶೇರ್‌ಗಂಜ್, ಡೊಮ್‌ಕಲ್ ಮತ್ತು ಲಾಲ್‌ಗೋಲಾದಲ್ಲಿಯೂ ಹಲವಾರು ಬಾಂಬ್‌ಗಳನ್ನು ವಶಪಡಿಸಿ ಕೊಳ್ಳಲಾಗಿದೆ.

ಅಡ್ವಾಣಿಗೆ ತರೂರ್ ಶುಭಾಶಯ: ಚರ್ಚೆ

ದೆಹಲಿ: ಸದ್ಯ ಕಾಂಗ್ರೆಸ್ ಪಕ್ಷಕ್ಕೆ ಮುಜಗರ ತರುವ ನಡೆಗಳಿಂದಾಗಿ ಸುದ್ದಿಯಲ್ಲಿರುವ ಕೇರಳದ ಸಂಸದ ಶಶಿ ತರೂರ್, ಪಕ್ಷದ ವರಿಷ್ಠರ ಪಾಲಿಗೆ ಅಕ್ಷರಶಃ ಬಿಸಿ ತುಪ್ಪವಾಗಿದ್ದಾರೆ. ಈಗ ಬಿಜೆಪಿ ಹಿರಿಯ ನಾಯಕ, ಮಾಜಿ ಉಪ ಪ್ರಧಾನಿ ಲಾಲ್ ಕೃಷ್ಣ ಅಡ್ವಾಣಿ ಅವರನ್ನು ತರೂರ್ ಮುಕ್ತ ಕಂಠದಿಂದ ಹೊಗಳಿದ್ದಾರೆ.

ಆ ಮೂಲಕ ಕಾಂಗ್ರೆಸ್‌ಗೆ ಮತ್ತಷ್ಟು ಮುಜಗರವಾಗುವಂತೆ ಮಾಡಿದ್ದಾರೆ. ಎಲ್‌ಕೆ ಅಡ್ವಾಣಿ ಅವರ 98ನೇ ಜನ್ಮದಿನಕ್ಕೆ ಶುಭ ಕೋರಿರುವ ಶಶಿ ತರೂರ್, 'ಸಾರ್ವಜನಿಕ ಜೀವನದಲ್ಲಿ ಎಲ್‌ಕೆ ಅಡ್ವಾಣಿ ಅವರ ಬದ್ಧತೆ, ವಿನಯಶೀಲತೆ ಮತ್ತು ಆಧುನಿಕ ಭಾರತದ ದಿಶೆಯನ್ನು ರೂಪಿಸುವಲ್ಲಿ ಅವರ ಪಾತ್ರ ಮಹತ್ವದ್ದಾಗಿದೆ. ಅವರು ನಿಜವಾದ ರಾಷ್ಟ್ರನಾಯಕರು' ಎಂದು ಪ್ರಶಂಸಿಸಿದ್ದಾರೆ. ಇದು ಕಾಂಗ್ರೆಸ್ ವಲಯದಲ್ಲಿ ಭಾರೀ ಚರ್ಚೆಗೆ ಕಾರಣವಾಗಿದೆ.

ಸಮಾಚಾರ ಸಣ್ಣದಲ್ಲ

ಪ್ರಕೃತಿ ಚಿಕಿತ್ಸಾ ಉದ್ಘಾಟನೆ ನಾಳೆ

ಉಜಿರೆ: ಎಸ್.ಡಿ.ಎಂ ಶಿಕ್ಷಣ ಸಂಸ್ಥೆಗಳ ಆಶ್ರಯದಲ್ಲಿ ನಡೆಸಲ್ಪಡುವ ಉಜಿರೆಯಲ್ಲಿವ ಎಸ್.ಡಿ.ಎಂ. ಪ್ರಕೃತಿಚಿಕಿತ್ಸಾ ಮತ್ತು ಯೋಗವಿಜ್ಞಾನಗಳ ಕಾಲೇಜು ಮತ್ತು ಆಸ್ಪತ್ರೆಗಳ ಆಶ್ರಯದಲ್ಲಿ ಎಂಟನೆ ರಾಷ್ಟ್ರೀಯ ಪ್ರಕೃತಿಚಿಕಿತ್ಸಾ ದಿನಾಚರಣೆಯ ಉದ್ಘಾಟನಾ ಸಮಾರಂಭ ಮಂಗಳವಾರ ಅಪರಾಹ್ನ ಮೂರು ಗಂಟೆಗೆ ಬೆಂಗಳೂರಿನಲ್ಲಿ ವಿಧಾನಸೌಧದ ಬಾಂಕ್ವೆಟ್ ಸಭಾಭವನದಲ್ಲಿ ನಡೆಯಲಿದೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ.ಪ್ರಶಾಂತ್ ಶೆಟ್ಟಿ ತಿಳಿಸಿದ್ದಾರೆ. ಸಿಎಂ ಸಿದ್ಧರಾಮಯ್ಯ ಸಮಾರಂಭವನ್ನು ಉದ್ಘಾಟಿಸುವರು. ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆಯವರು ಅಧ್ಯಕ್ಷತೆ ವಹಿಸುವರು. ಸಭಾಪತಿ ಯು.ಟಿ. ಖಾದರ್, ಆರೋಗ್ಯ ಸಚಿವ ದಿನೇಶ್ಗುಂಡೂರಾವ್, ವಿಧಾನ ಪರಿಷತ್ ಸದಸ್ಯ ಕೆ. ಶಿವಕುಮಾರ್ಮತ್ತು ಕರ್ನಾಟಕ ಸರಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಗೋ ಕಾಯ್ದೆ ಹೆಸರಲ್ಲಿ ಮನೆ ಜಪ್ತಿ: ಖಂಡನೆ

ಬೆಳ್ತಂಗಡಿ: ಗೋಕಾಯ್ದೆಯ ಹೆಸರಿನಲ್ಲಿ ಅಮಾಯಕ ಮಹಿಳೆಯ ಮನೆಯನ್ನು ಜಪ್ತಿ ಮಾಡಿರುವ ಪೊಲೀಸರ ಕ್ರಮವನ್ನು ಮುಸ್ಲಿಂ ಒಕ್ಕೂಟದ ನೇತೃತ್ವದಲ್ಲಿ ತುರ್ತು ಸಭೆ ನಡೆಸಿ ಘಟನೆಯನ್ನು ಖಂಡಿಸಲಾಯಿತು. ಜಮೀಯತುಲ್ ಫಲಾಹ್ ಸಭಾಂಗಣದಲ್ಲಿ ನಡೆದ ಸಭೆಯ ಅಧ್ಯಕ್ಷತೆಯನ್ನು ತಾಲ್ಲೂಕು ಮುಸ್ಲಿಂ ಒಕ್ಕೂಟದ ಅಧ್ಯಕ್ಷ ಬಿ.ಎ ನಝೀರ್ವಹಿಸಿದ್ದರು. ಕಾನೂನು ಸುವ್ಯವಸ್ಥೆಯ ಹೆಸರಿನಲ್ಲಿ ತಾಲ್ಲೂಕಿನಲ್ಲಿ ಮುಸ್ಲಿಮರನ್ನು ಗುರಿಯಾಗಿಸಲಾಗುತ್ತಿದೆ. ಗೋ ಹತ್ಯೆಯ ಹೆಸರಿನಲ್ಲಿ ಧಾರ್ಮಿಕ ಶ್ರದ್ಧಾ ಕೇಂದ್ರವಾದ ಮಸೀದಿಗೆ ಪೊಲೀಸರು ಬಂದು ಸಮುದಾಯಕ್ಕೆ ಅವಮಾನವಾಗುವ ಹಾಗೆ ನಡೆದುಕೊಳ್ಳುತ್ತಿದ್ದಾರೆ. ದ್ವೇಷ ಭಾಷಣದ ಹೆಸರಿನಲ್ಲಿ ಹಿಂದೂ ನಾಯಕರು ವಿರುದ್ಧ ಆಗುವ ಕೇಸಿಗೆ ಪ್ರತಿಯಾಗಿ ಮುಸ್ಲಿಂ ನಾಯಕರ ವಿರುದ್ಧ ಸುಳ್ಳುಕೇಸು ಹಾಕಿ ಯಾರನ್ನೋ ಸಮಾಧಾನಪಡಿಸಲಾಗುತ್ತಿದೆ. ಈ ಎಲ್ಲಾ ಘಟನೆಗಳ ಬಗ್ಗೆ ಮೇಲಧಿಕಾರಿಗಳನ್ನು ಭೇಟಿ ಮಾಡಿ ಚರ್ಚಿಸುವುದು ಇತ್ಯಾದಿ ಬಗ್ಗೆ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

13 ಕಾಡಾನೆಗಳ ಹಿಂಡು ಸಂಚಾರ: ಆತಂಕ

ಬೆಳ್ತಂಗಡಿ: ಮಿತ್ತಬಾಗಿಲು ಗ್ರಾಮದಲ್ಲಿ ಕಾಡಾನೆಗಳ ಹಿಂಡು ಆಗಾಗ ಕಾಣಿಸಿಕೊಳ್ಳುತ್ತಿದ್ದು, ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದೆ. ಸ್ಥಳೀಯರ ಪ್ರಕಾರ, ಎರಡು ಮರಿಗಳು ಸೇರಿದಂತೆ ಒಟ್ಟು 13 ಆನೆಗಳು ಈ ಪ್ರದೇಶದಲ್ಲಿ ಓಡಾಡುತ್ತಿವೆ ಎಂದು ಹೇಳಲಾಗಿದೆ. ನವೆಂಬರ್8ರ ಸಂಜೆ, ಮಲೆಜೋಡಿ ಪ್ರದೇಶದಲ್ಲಿ ಮರಿಗಳು ಸೇರಿದಂತೆ ಎಂಟು ಆನೆಗಳು ಕಾಣಿಸಿಕೊಂಡಿದ್ದವು. ನಂತರ, ಅವು ಹಿಂಡುಕೋಡಿ, ಅಮ್ಮೆ, ಕೂಡಾಲ ಮತ್ತು ಬೆಡಿಗುತ್ತು ಪ್ರದೇಶಗಳ ಮೂಲಕ ಸಂಚರಿಸಿದ್ದವು. ಅರಣ್ಯ ಇಲಾಖೆಯ ಅಧಿಕಾರಿಗಳು ಸ್ಥಳೀಯ ನಿವಾಸಿಗಳ ಸಹಕಾರ ದೊಂದಿಗೆ ಆನೆಗಳನ್ನು ಯಶಸ್ವಿಯಾಗಿ ಓಡಿಸಿದ್ದಾರೆ. ಇದುವರೆಗೆ ಯಾವುದೇ ಬೆಳೆ ಹಾನಿಯಾಗಿರುವ ಬಗ್ಗೆ ವರದಿಯಾಗಿಲ್ಲ. ಮಿತ್ತಬಾಗಿಲು ಗ್ರಾಮ ಪಂಚಾಯತ್ ಈಗಾಗಲೇ ನಿವಾಸಿಗಳಿಗೆ ಎಚ್ಚರಿಕೆ ನೀಡಿದ್ದು, ಅರಣ್ಯ ಪ್ರದೇಶಗಳಿಗೆ ಪ್ರವೇಶಿಸದಂತೆ ಮತ್ತು ಎಚ್ಚರಿಕೆಯಿಂದ ಇರುವಂತೆ ಸೂಚಿಸಿದೆ. ಇದೇ ವೇಳೆ, ಶನಿವಾರ ಸಂಜೆ 4 ಗಂಟೆ ಸುಮಾರಿಗೆ ಧರ್ಮಸ್ಥಳದ ಮುಳಿಕ್ಕಾರು ಬಳಿಯೂ ಒಂದು ಆನೆ ಕಾಣಿಸಿಕೊಂಡಿದೆ. ಯಾವುದೇ ಹಾನಿ ವರದಿಯಾಗದಿದ್ದರೂ, ಆ ಆನೆಯು ನಂತರ ಬೊಳ್ಮನಾರು ಮತ್ತು ಪೆರಿಯಡ್ಕ ಪ್ರದೇಶಗಳ ಕಡೆಗೆ ಸಾಗಿದೆ ಎಂದು ಅರಣ್ಯ ಇಲಾಖೆ ಮೂಲಗಳು ತಿಳಿಸಿವೆ. ಮತ್ತೊಂದು ಆನೆಯು ಪದವು ಭಾಗದಲ್ಲಿದೆ ಎಂದು ವರದಿಯಾಗಿದೆ.

ಕಳ್ಳತನಕ್ಕೆ ಯತ್ನ: ಹಲ್ಲೆ

ಬೆಳ್ತಂಗಡಿ: ಮನೆ ಕಳ್ಳತನಕ್ಕೆ ಯತ್ನಿಸುತ್ತಿದ್ದ ವೇಳೆ ಸಿಕ್ಕಿ ಬಿದ್ದ ವ್ಯಕ್ತಿಯೊಬ್ಬನಿಗೆ ಸಾರ್ವಜನಿಕರು ಹಲ್ಲೆ ನಡೆಸಿ ಪೊಲೀಸರಿಗೆ ಮಾಹಿತಿ ನೀಡಿದ ಘಟನೆ ಬೆಳ್ತಂಗಡಿಯ ಮಾಲಾಡಿಯ ಬರ್ನ ಎಂಬಲ್ಲಿ ನಡೆದಿದೆ. ಪ್ರಕರಣದ ಆರೋಪಿಯನ್ನು ಚೇತನ್ ಎಂದು ಗುರುತಿಸಲಾಗಿದೆ. ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ಮನೆ ಕಳವಿಗೆ ಯತ್ನಿಸುತ್ತಿದ್ದಾಗ ಗಮನಿಸಿದ ನೆರೆಮನೆಯವರು ಸಾರ್ವಜನಿಕರ ಮೂಲಕ ಧರ್ಮದೇಟು ನೀಡಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಪೂಂಜಾಲಕಟ್ಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆರೋಪಿಯನ್ನು ಸದ್ಯ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ವಿರಾಮ
ಪ್ರತಿ ಭಾನುವಾರ

{ಈಶ್ವರ ಬಿ ಖಂಡ್ರೆ } ಸಚಿವ

ಬಂಡಿಪುರ ಮತ್ತು ನಾಗರಹೊಳೆಯ ಅರಣ್ಯದಂಚಿನಲ್ಲಿ ಹುಲಿಗಳು ಮನುಷ್ಯರ ಮೇಲೆ ಮತ್ತು ಜಾನುವಾರಗಳ ಮೇಲೆ ದಾಳಿ ಮಾಡುವ ಪ್ರಕರಣಗಳು ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಬಂಡೀಪುರ ಮತ್ತು ನಾಗರಹೊಳೆಯ ಸಫಾರಿ ಸ್ಥಗಿತಗೊಳಿಸಿ, ಅಲ್ಲಿನ ಸಿಬ್ಬಂದಿಯನ್ನು ಹುಲಿ ಸೆರೆ ಕಾರ್ಯಾಚರಣೆಗೆ ನಿಯೋಜಿಸಲಾಗಿತ್ತು.

ಉರ್ವ ಶ್ರೀ ಮಾರಿಯಮ್ಮ ಕ್ಷೇತ್ರದಲ್ಲಿ ಬ್ರಹ್ಮಕಲಶೋತ್ಸವ ನಿಮಿತ್ತ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು

ಡಿ.25 ರಿಂದ ನವಾಕ್ಷರಿ ಮಹಾಮಂತ್ರ ಯಾಗ

ಮಂಗಳೂರು: ಉರ್ವ ಶ್ರೀ ಮಾರಿಯಮ್ಮ ದೇವಸ್ಥಾನದಲ್ಲಿ ಡಿ.25 ರಿಂದ 26 ರವರೆಗೆ ನವಾಕ್ಷರಿ ಮಹಾಮಂತ್ರ ಯಾಗ ನಡೆಯಲಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ನಾಡಿನ ಸುಪ್ರಸಿದ್ಧ ಧಾರ್ಮಿಕ ಕ್ಷೇತ್ರಗಳಲ್ಲಿ ಮಂಗಳೂರು ತಾಲೂಕಿನ ಉರ್ವ ಶ್ರೀ ಮಾರಿಯಮ್ಮ ದೇವಸ್ಥಾನ ಕೂಡಾ ಒಂದೆನಿಸಿರುತ್ತದೆ. ಈ ಕ್ಷೇತ್ರವು ಸಹಸ್ರಾರು ಸಂಖ್ಯೆಯ ಭಕ್ತರ ಆರಾಧನ ಸ್ಥಳವೆನಿಸಿದೆ. ವರ್ಷಂಪ್ರತಿ ಕುಂಭ ಮಾಸದ ಶುಕ್ಲ ಪಕ್ಷದಲ್ಲಿ ಅಂದರೆ ಫೆಬ್ರವರಿ ಅಥವ ಮಾರ್ಚ್ ತಿಂಗಳಲ್ಲಿ ನಡೆಯುವ ವರ್ಷಾವಧಿ ಮಹಾಪೂಜೆಯ ಸಂದರ್ಭದಲ್ಲಿ ಸೇರುವ ಭಕ್ತ ಜನಸ್ತೋಮ ಈ ಕ್ಷೇತ್ರದ ಕಾರಣೀಕ ಹಾಗೂ ಪ್ರಸಿದ್ಧಿಗೆ ಉದಾಹರಣೆಯಾಗಿದೆ ಎಂದು ಆಡಳಿತ ಮೊಕ್ತೇಸರರು ಲಕ್ಷ್ಣ ಅಮೀನ್ ಕೋಡಿಕಲ್ ತಿಳಿಸಿದ್ದಾರೆ.

ಕಳೆದ ವರ್ಷ ಫೆಬ್ರವರಿ ತಿಂಗಳಲ್ಲಿ ಉರ್ವ ಶ್ರೀ ಮಾರಿಯಮ್ಮ ಕ್ಷೇತ್ರದಲ್ಲಿ ಬ್ರಹ್ಮಕಲಶೋತ್ಸವ ನಿಮಿತ್ತ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಬಹಳ ವೈಭವದಿಂದ ಸಂಪನ್ನವಾಗಿದ್ದು, ಅದಕ್ಕೆ ಪೂರಕವಾಗಿ ಈ ಬಾರಿ ಗ್ರಾಮ ಕ್ಷೇಮ ಮತ್ತು ಲೋಕ ಕಲ್ಯಾಣರ್ಥವಾಗಿ ಹಾಗೂ ಸಾನಿಧ್ಯ ಶ್ರೇಯೋಭಿವೃದ್ಧಿಗಾಗಿ 'ಶ್ರೀ ಮಾರಿಯಮ್ಮ ನವಾಕ್ಷರಿ ಮಹಾಮಂತ್ರ ಯಾಗ'ವನ್ನು ನೆರವೇರಿಸಲು ನಿಶ್ಚಯಿಸಲಾಗಿರುತ್ತದೆ ಎಂದರು.

ಈ ನವಾಕ್ಷರಿ ಯಾಗ ನಡೆಯಲಿರುವ ಎರಡು ದಿನಗಳಲ್ಲಿ ವಿವಿಧ ವೈದಿಕ ಆಚರಣೆಗಳು ಜರಗಲಿದ್ದು, ಮಹಾ ಅಭಿಷೇಕ, ಮಹಾರಂಗಪೂಜೆ, ಶ್ರೀ ದೇವಿಯ ದರ್ಶನ ಬಲಿ, ದೀಪೋತ್ಸವ, ರಥೋತ್ಸವ ಮತ್ತು ಮಹಾ ಅನ್ನಸಂತರ್ಪಣೆ ಕೂಡಾ ನೆರವೇರಲಿರುವುದು.

ಇದೇ ಸಂದರ್ಭ ದ.ಕ.ಜಿಲ್ಲಾ ಮಟ್ಟದ ಕುಣಿತ ಭಜನಾ ಸ್ಪರ್ಧೆ,ಆಯ್ದ ಭಜನಾ ತಂಡಗಳಿಂದ ಹರಿನಾಮ ಸಂಕೀರ್ತನೆ, ಯಕ್ಷ ತೆಲಿಕೆ – ಹಾಸ್ಯ ವೈಭವ ಕಾರ್ಯಕ್ರಮ, ಚಾ ಪರ್ಕ ಕಲಾವಿದರಿಂದ ತುಳು ನಾಟಕ ಇತ್ಯಾದಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿರುವುದು ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಅಪರೂಪದ ಈ ವಿಶಿಷ್ಟ ಮಹಾಯಾಗಕ್ಕೆ ಮತ್ತು ಈ ಸಂದರ್ಭ ನಡೆಯಲಿರುವ ಇನ್ನಿತರ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ತಾವು ತಮ್ಮ ಪ್ರಚಾರ ಮಾಧ್ಯಮದ ಮೂಲಕ ವಿಶೇಷ ರೀತಿಯಲ್ಲಿ ಪ್ರಚಾರದ ಸಹಕಾರ ಕೊಟ್ಟು, ನಮ್ಮ ಕ್ಷೇತ್ರದಲ್ಲಿ ನಡೆಯಲಿರುವ ಈ ಮಹಾ ಸತ್ಕಾರ್ಯವು ಸಂಪೂರ್ಣ ಯಶಸ್ವಿಯಾಗುವಂತೆ ಪ್ರೋತ್ಸಾಹಿಸಬೇಕಾಗಿ ಈ ಮೂಲಕ ಮನವಿ ಮಾಡುತ್ತೇವೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕರ್ನಾಟಕ ಪರ್ಶಿಯನ್ ಮೀನುಗಾರರ ಸಂಘದ ಅಧ್ಯಕ್ಷ ಅನಿಲ್ ಕುಮಾರ್ ಬೊಕ್ಕಪಟ್ಣರವರು ಲೋಕೇಶ್ ಸುವರ್ಣ ಕುದ್ರೋಳಿ 3 (ಅಧ್ಯಕ್ಷರು, ಮಂಗಳೂರು ಏಳು ಪಟ್ಟ ಮೊಗವೀರ ಸಂಯುಕ್ತ ಸಭಾ)

ಶ್ರೀ ಮೋಹನ್ ಬೆಂಗ್ರೆ, ಉಪಾಧ್ಯಕ್ಷರು, ದ.ಕ. ಮೊಗವೀರ ಮಹಾಜನ ಸಂಘ (ರಿ.) ಉಚ್ಚಿಲ, ಗೌತಮ್ ಸಾಲ್ಯಾನ್ ಕೋಡಿಕಲ್ (ಸಂಚಾಲಕರು, ಶ್ರೀ ಮಾರಿಯಮ್ಮ ನವಾಕ್ಷರಿ ಮಹಾಮಂತ್ರ ಯಾಗ ಸಮಿತಿ), ಜಗದೀಶ್ ಬಂಗೇರ ಬೋಳೂರು (ಪ್ರಧಾನ ಕಾರ್ಯದರ್ಶಿ, ಮಂಗಳೂರು ಏಳು ಪಟ್ಟ ಮೊಗವೀರ ಸಂಯುಕ್ತ ಸಭಾ) ಉಪಸ್ಥಿತರಿದ್ದರು.

ಉರ್ವ ಶ್ರೀ ಮಾರಿಯಮ್ಮ ದೇವಸ್ಥಾನದಲ್ಲಿ ನಡೆಯುವ ಮಹಾಮಂತ್ರ ಯಾಗದ ಪೋಸ್ಟರ್ ಬಿಡುಗಡೆ ಮಾಡಲಾಯಿತು.

> **ಕ್ಷೇತ್ರದ ತಂತ್ರಿವರ್ಯ ಕೋಡಿಕಲ್ ಶ್ರೀ ಸುಬ್ರಹ್ಮಣ್ಯ ತಂತ್ರಿಯವರ ನೇತೃತ್ವದ ಪೌರೋಹಿತ್ಯದಲ್ಲಿ ಡಿ.25,26 ರಂದು ಕ್ಷೇತ್ರದಲ್ಲಿ 'ಶ್ರೀ ಮಾರಿಯಮ್ಮ ನವಾಕ್ಷರಿ ಮಹಾಮಂತ್ರ ಯಾಗದ ವೈದಿಕ ವಿಧಿ-ವಿಧಾನಗಳು ನಡೆಯಲಿದೆ. ಈ ಮಹಾಮಂತ್ರ ಯಾಗವು ವಿಶಿಷ್ಠವಾದ ಯಾಗವಾಗಿದ್ದು, ಮಹಾದೇವಿಗೆ ತುಂಬಾ ಪ್ರಿಯವಾದ ಶ್ರೇಷ್ಠ ಯಾಗವೆನಿಸಿದೆ.**
>
> **-ಲಕ್ಷಣ ಅಮೀನ್ ಕೋಡಿಕಲ್**, ಆಡಳಿತ ಮೊಕ್ತೇಸರರು

ಪುತ್ತೂರಿನ ನೃತ್ಯೋಪಾಸನಾ ಕಲಾ ಅಕಾಡೆಮಿಯ 'ವರ್ಷ ಸಂಭ್ರಮ-21' ಕಾರ್ಯಕ್ರಮ

ಸಂಸ್ಕೃತಿ ಉಳಿಸುವಲ್ಲಿ ಪೋಷಕರ ಪಾತ್ರ ಮಹತ್ವದ್ದು

ಪುತ್ತೂರು: ದೇಶದ ಸಂಸ್ಕೃತಿ ಉಳಿಸಿ ಬೆಳೆಸುವಲ್ಲಿ ಪೋಷಕರ ಪಾತ್ರ ಮಹತ್ವದ್ದು. ಮಕ್ಕಳನ್ನು ಎಳವೆಯಲ್ಲೇ ಸಂಸ್ಕಾರಭರಿತ ಶಾಸ್ತ್ರೀಯ ಕಲೆಗಳ ಕಲಿಕೆಗೆ ಸೇರಿಸುವುದರಿಂದ ಭಾರತೀಯ ಗುರುಪರಂಪರೆಯನ್ನು ಉಳಿಸಲು ಸಾಧ್ಯವಿದೆ ಎಂದು ಮಂಗಳೂರು ವಿಶ್ವವಿದ್ಯಾಲಯ ಕುಲಪತಿ ಪ್ರೊ.ಪಿ.ಎಲ್.ಧರ್ಮ ಹೇಳಿದರು.

ಅವರು ಶನಿವಾರ ಪುತ್ತೂರಿನ ನೃತ್ಯೋಪಾಸನಾ ಕಲಾ ಅಕಾಡೆಮಿ ಇಲ್ಲಿನ ಜೈನ ಭವನದಲ್ಲಿ ಏರ್ಪಡಿಸಿದ 'ವರ್ಷ ಸಂಭ್ರಮ-21' ವಾರ್ಷಿಕ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪರ್ಲಡ್ಕ ಎಸ್ಡಿಪಿ ರೆಮಿಡೀಸ್ ಮತ್ತು ರಿಸರ್ಚ್ ಸೆಂಟರ್ನ ಡಾ.ಹರಿಕೃಷ್ಣ ಪಾಣಾಜೆ ಮುಖ್ಯ ಅತಿಥಿಯಾಗಿ ಮಾತನಾಡಿ, ಪ್ರತಿಯೊಂದು ಕಲೆಯನ್ನು ಆಸ್ವಾದಿಸಬೇಕು. ಶಾಸ್ತ್ರೀಯ ಕಲೆಯಲ್ಲಿ ದೈವತ್ವವನ್ನು ಕಾಣಬಹುದಾಗಿದೆ ಎಂದರು.

ನೃತ್ಯಗುರು ವಿದುಷಿ ಶಾಲಿನಿ ಆತ್ಮಭೂಷಣ್ ಪ್ರಸ್ತಾವಿಕದಲ್ಲಿ, ಶಾಸ್ತ್ರೀಯ ನೃತ್ಯಗಳ ಅಭ್ಯಾಸ ಪಠ್ಯ ಕಲಿಕೆಗೆ ಎಂದಿಗೂ ತೊಡಕಾಗದು ಎಂಬುದನ್ನು ನಮ್ಮ ಸಂಸ್ಥೆಯ ವಿದ್ಯಾರ್ಥಿಗಳೇ ಸಾಕ್ಷಿ. ಎಸ್ಎಸ್ಎಲ್ಸಿ, ಪಿಯುಸಿ ವಿದ್ಯಾರ್ಥಿಗಳು ಪಠ್ಯ ಕಲಿಕೆ ಜೊತೆಗೆ ಭರತನಾಟ್ಯವನ್ನು ಕಲಿತುಕೊಂಡು, ನೃತ್ಯ ಪ್ರದರ್ಶನಗಳಿಗೂ ನಿರಂತರ ಹಾಜರಾಗುತ್ತಾ ಕಲಿಕೆ ಮತ್ತು ನೃತ್ಯ ಪರೀಕ್ಷೆಗಳಲ್ಲಿ ಅತ್ಯುತ್ತಮ ಫಲಿತಾಂಶವನ್ನು ದಾಖಲಿಸುತ್ತಿದ್ದಾರೆ. ಪೋಷಕ ವೃಂದದ ಪ್ರೋತ್ಸಾಹ ಜೊತೆಗೆ ಮಕ್ಕಳಿಗೆ ಕಲಿಕೆಯ ತುಡಿತ ಇದ್ದಾಗ ಇದೆಲ್ಲವೂ ಸಾಧ್ಯ ಎಂದರು.

ವಿದ್ವಾನ್ ಬಾಲಕೃಷ್ಣ ಹೊಸಮನೆ ವರ್ಷಸಂಭ್ರಮ-21ನ್ನು ಉದ್ಘಾಟಿಸಿದರು. ಈ ಸಂದರ್ಭ ಅಕಾಡೆಮಿ ಅಧ್ಯಕ್ಷ ಮಂಜುನಾಥ್ ಪಿ.ಎಸ್, ಉಪಾಧ್ಯಕ್ಷ ಕೃಷ್ಣಕುಮಾರ್,ಕಾರ್ಯದರ್ಶಿ ಆತ್ಮಭೂಷಣ್, ಜೊತೆ ಕಾರ್ಯದರ್ಶಿ ರಾಧೇಶ್ ಇದ್ದರು.

ಸಂಸ್ಥೆಯ ಪೋಷಕಿ ಅನ್ನಪೂರ್ಣ ಸ್ವಾಗತಿಸಿದರು. ರಜನಿ ವಸಂತ್ ನಿರೂಪಿಸಿದರು. ಡಾ.ವಿಜಯ ಸರಸ್ವತಿ ನಿರೂಪಿಸಿದರು. ಬಳಿಕ ಅಕಾಡೆಮಿಯ ಪುತ್ತೂರು ಹಾಗೂ ಉಪ್ಪಿನಂಗಡಿ ಶಾಖಾ ವಿದ್ಯಾರ್ಥಿಗಳಿಂದ ನೃತ್ಯೋಪಾಸನಾ ಭರತನಾಟ್ಯ ಕಾರ್ಯಕ್ರಮ ಏರ್ಪಟ್ಟಿತು.

ಹಿಮ್ಮೇಳದಲ್ಲಿ ನಟುವಾಂಗ ವಿದುಷಿ ಶಾಲಿನಿ ಆತ್ಮಭೂಷಣ್, ಹಾಡುಗಾರಿಕೆಯಲ್ಲಿ ವಿದ್ವಾನ್ ಕೃಷ್ಣಾಚಾರ್ ಪಾಣೆಮಂಗಳೂರು, ವಿದುಷಿ ಡಾ.ನಿಶಿತಾ ಪುತ್ತೂರು, ಮೃದಂಗದಲ್ಲಿ ವಿದ್ವಾನ್ ಬಾಲಕೃಷ್ಣ ಹೊಸಮನೆ, ವಿದ್ವಾನ್ ಗೀತೇಶ್ ನೀಲೇಶ್ವರ ಹಾಗೂ ಕೊಳಲಿನಲ್ಲಿ ವಿದ್ವಾನ್ ರಾಜ್ಗೋಪಾಲ್ ಕಾಞಂಗಾಡ್ ಸಹಕರಿಸಿದರು.

'ವರ್ಷ ಸಂಭ್ರಮ-21' ವಾರ್ಷಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ನೃತ್ಯೋಪಾಸನಾ ಗೌರವ, ನೃತ್ಯ ಪೋಷಣ ಕಾರ್ಯಕ್ರಮ

ಈ ಸಂದರ್ಭ ಮೃದಂಗ ಮತ್ತು ಮೋರ್ಸಿಂಗ್ ಕಲಾವಿದ ವಿದ್ವಾನ್ ಬಾಲಕೃಷ್ಣ ಹೊಸಮನೆ ಅವರಿಗೆ 'ನೃತ್ಯೋಪಾಸನಾ ಗೌರವ' ಪ್ರದಾನ ಮಾಡಲಾಯಿತು. ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳನ್ನು ದತ್ತು ತೆಗೆದುಕೊಂಡು ಉಚಿತವಾಗಿ ನೃತ್ಯ ಕಲಿಸುವ 'ನೃತ್ಯ ಪೋಷಣ' ಯೋಜನೆಗೆ ಇಬ್ಬರು ವಿದ್ಯಾರ್ಥಿಗಳನ್ನು ಸೇರ್ಪಡೆಗೊಳಿಸಲಾಯಿತು. ಇದೇ ವೇಳೆ ಅಕಾಡೆಮಿಯ ನಿರ್ವಾಹಕ ಟ್ರಸ್ಟಿ, ನೃತ್ಯಗುರು ವಿದುಷಿ ಶಾಲಿನಿ ಆತ್ಮಭೂಷಣ್ ಅವರಿಗೆ ವಿದ್ವತ್ ಹಂತದ ವಿದ್ಯಾರ್ಥಿಗಳಿಂದ ಗುರು ವಂದನೆ ಏರ್ಪಟ್ಟಿತು. ಕಳೆದ ಎರಡು ಅವಧಿಯಲ್ಲಿ ಮೈಸೂರಿನ ಕರ್ನಾಟಕ ಗಂಗೂಬಾಯಿ ಹಾನಗಲ್ ಸಂಗೀತ, ನೃತ್ಯ, ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯ ನಡೆಸಿದ ಭರತನಾಟ್ಯ ಜೂನಿಯರ್,ಸೀನಿಯರ್,ವಿದ್ವತ್ ಪೂರ್ವ ಮತ್ತು ವಿದ್ವತ್ ಪರೀಕ್ಷೆಗಳಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೆರವೇರಿಸಲಾಯಿತು.

ದ್ವಿ ಚಕ್ರ ವಾಹನ ಕಳ್ಳತನ ಹೆಚ್ಚಳ: 11 ಪ್ರಕರಣ ದಾಖಲು

ಮಂಗಳೂರು: ನಗರದಲ್ಲಿ ದ್ವಿಚಕ್ರ ವಾಹನ ಕಳ್ಳತನ ಪ್ರಕರಣಗಳು ತೀವ್ರಗೊಳ್ಳುತ್ತಿದ್ದು, ಕಳೆದ ಕೆಲವು ವಾರಗಳಲ್ಲಿ ಕಮಿಷನರೇಟ್ ವ್ಯಾಪ್ತಿಯ ಹಲವು ಠಾಣೆಗಳಲ್ಲಿ ಸರಣಿ ಕಳ್ಳತನಗಳು ವರದಿಯಾಗಿವೆ. ವಿಶೇಷವಾಗಿ ಮಂಗಳೂರು ನಗರ ಮತ್ತು ಉಳ್ಳಾಲ ಪ್ರದೇಶಗಳಲ್ಲಿ ಕಳೆದ ಒಂದು ತಿಂಗಳಿನಿಂದ ಅನೇಕ ಪ್ರಯಾಣಿಕರು ತಮ್ಮ ವಾಹನ ಕಳೆದುಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಒಂದು ತಿಂಗಳಲ್ಲಿ 11 ಕಳ್ಳತನ ಪ್ರಕರಣಗಳು:

ಸೆ.30 ರಿಂದ ಅ.30ರವರೆಗೆ ಪಾಂಡೇಶ್ವರ, ಬಂದರ್, ಉರ್ವಾ, ಕದ್ರಿ, ಉಳ್ಳಾಲ, ಕೊಣಾಜೆ ಮತ್ತು ಕಂಕನಾಡಿ ನಗರ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ಒಟ್ಟು 11 ದ್ವಿಚಕ್ರ ವಾಹನ ಕಳ್ಳತನ ಪ್ರಕರಣಗಳು ದಾಖಲಾಗಿವೆ. ಹೆಚ್ಚಿನ ಕಳ್ಳತನಗಳು ರಾತ್ರಿ ವೇಳೆಯಲ್ಲಿಯೇ ನಡೆದಿದ್ದು, ವಾಹನ ಮಾಲೀಕರು ಬೆಳಿಗ್ಗೆ ಪಾರ್ಕಿಂಗ್ ಸ್ಥಳಕ್ಕೆ ಬಂದಾಗ ತಮ್ಮ ಬೈಕ್ ಕಾಣೆಯಾಗಿದ್ದು ಕಂಡು ಬಂದಿದೆ.

ಕೆಲವು ಪ್ರಕರಣಗಳಲ್ಲಿ ಕಳ್ಳತನ ಕೇವಲ 15 ನಿಮಿಷಗಳಲ್ಲಿ: ತೊಕ್ಕೊಟ್ಟು ಮತ್ತು ಪಂಪ್ವೆಲ್ ಪ್ರದೇಶಗಳಲ್ಲಿ ಕಳ್ಳರು ಕೇವಲ 15-16 ನಿಮಿಷಗಳಲ್ಲೇ ಸ್ಕೂಟರ್ಕಳ್ಳತನ ಮಾಡಿರುವುದು ಸಿಸಿಟಿವಿ ದೃಶ್ಯಗಳಲ್ಲಿ ಸ್ಪಷ್ಟವಾಗಿದೆ. ರಾಯಲ್ ಎನ್ಫೀಲ್ಡ್ ಬುಲೆಟ್, ದುಬಾರಿ ಸ್ಕೂಟರ್ಹಾಗೂ ಮೋಟಾರ್ಸೈಕಲ್ಗಳನ್ನೇ ಗುರಿಯಾಗಿಸುತ್ತಿರುವುದು ಪೊಲೀಸರ ಗಮನ ಸೆಳೆದಿದೆ.

ಪ್ರಮುಖ ಕಳ್ಳತನಗಳ ವಿವರ: ಪಾಂಡೇಶ್ವರ: ಸೆ.30 ಆಸ್ಪತ್ರೆ ಮತ್ತು ಮಾಲ್ ಪಾರ್ಕಿಂಗ್ನಿಂದ 2 ಬೈಕ್ಗಳು ಕಳವು.

ಬಂದರ್: ಅ.13 ಮತ್ತು ಅ.25 ಕೆಎಸ್ ರಾವ್ ರಸ್ತೆಯ ಸಿನಿಮಾ ಪಾರ್ಕಿಂಗ್ ಹಾಗೂ ಅಂಗಡಿ ಹೊರಗಿನಿಂದ ಕಳ್ಳತನ.

ಉರ್ವಾ: ಅ.28 ಬಿಜೈ ಕಾಪಿಕಾಡ್ ಬಳಿಯ ಅಂಗಡಿಯ ಮುಂದೆ ಬೈಕ್ ಕಳವು.

ಕದ್ರಿ: ಅ.17 ಫಳ್ನೀರ್ಆಸ್ಪತ್ರೆಯ ಹೊರಗೆ ನಿಲ್ಲಿಸಿದ್ದ ಬೈಕ್ ನಾಪತ್ತೆ.

ಉಳ್ಳಾಲ: ಅ.4 ಮತ್ತು ಅ.17 ದೇರಳಕಟ್ಟೆ ಮತ್ತು ತೊಕ್ಕೊಟ್ಟುವಿನಿಂದ ಎರಡು ಬೈಕ್ಗಳು ಕಳವು.

ಕೊಣಾಜೆ: ಅ.1 ಮತ್ತು ಅ.15 ಪಾವೂರು ಹಾಗೂ ನಾಟೆಕಲ್ ಪ್ರದೇಶಗಳಲ್ಲಿ ಸ್ಕೂಟರ್ಕಳ್ಳತನ.

ಕಂಕನಾಡಿ ನಗರ: ಅ.10 ಉಜ್ಜೋಡಿ ಕಾರು ಶೋರೂಂ ಎದುರಿನಿಂದ ಸ್ಕೂಟರ್ನಾಪತ್ತೆ.

ವಾಹನ ಮಾಲೀಕರು ತಮ್ಮ ಬೈಕ್ಗಳನ್ನು ಸುರಕ್ಷಿತವಾಗಿ ಲಾಕ್ ಮಾಡಿ, ಸಾಧ್ಯವಾದರೆ ಸಿಸಿಟಿವಿ ಮೇಲ್ವಿಚಾರಣೆಯುಳ್ಳ ಸ್ಥಳಗಳಲ್ಲಿ ಮಾತ್ರ ಪಾರ್ಕ್ ಮಾಡುವಂತೆ ಪೊಲೀಸರು ಮನವಿ ಮಾಡಿದ್ದಾರೆ. ಸಾರ್ವಜನಿಕರಿಂದ ಯಾವುದೇ ಅನುಮಾನಾಸ್ಪದ ಚಟುವಟಿಕೆ ಗಮನಿಸಿದರೆ ತಕ್ಷಣ ಹತ್ತಿರದ ಠಾಣೆಗೆ ಮಾಹಿತಿ ನೀಡಲು ಕೋರಲಾಗಿದೆ.

ಪಂಜ ಚಾವಣಿ ರಚನೆಗೆ ಮುಹೂರ್ತ

ಪಂಜ ಶ್ರೀ ಸದಾಶಿವ ಪರಿವಾರ ಪಂಚಲಿಂಗೇಶ್ವರ ದೇಗುಲದ ಒಳಾಂಗಣದ ಚಾವಣಿ ಮುಹೂರ್ತ ಮಾಡಲಾಯಿತು.

ಸುಬ್ರಹ್ಮಣ್ಯ: ಪಂಜ ಶ್ರೀ ಸದಾಶಿವ ಪರಿವಾರ ಪಂಚಲಿಂಗೇಶ್ವರ ದೇಗುಲದ ಒಳಾಂಗಣದ ಚಾವಣಿ ಮುಹೂರ್ತ ಪ್ರಾರ್ಥನೆ ಬಳಿಕ ನಡೆಯಿತು.

ಈ ಸಂದರ್ಭ ದೇಗುಲದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಡಾ.ದೇವಿಪ್ರ ಸಾದ್ಕಾನತ್ತೂರ್,ವ್ಯವಸ್ಥಾಪನಾ ಸಮಿತಿಯ ಸದಸ್ಯ ಸಂತೋಷ್ ಕುಮಾರ್ರೈ ಪಲ್ಲಿಲ್ಲಡ್ಕ ಧರ್ಮಪಾಲ ಗೌಡ ಮರಕಡ, ಧರ್ಮಣ್ಣ ನಾಯ್ಕ ಗರಡಿ, ಮಾಲಿನಿ ರುದ್ರ ಪವಿತ್ರ ಮಿಟಿ, ಗೌರವ ಸಲಹೆಗಾರ ಮಹೇಶ್, ಕುಮಾರ್ಕರಿಗಳ, ಉಮೇಶ್ ಬುಡಂಗಿ ಬಳ್ಳ, ಮಾಜಿ, ವ್ಯವಸ್ಥಾಪನಾ ಸಮಿತಿ ಸದಸ್ಯರಾದ, ವಿಶ್ವನಾಥ ಚಾರಿ, ಗಂಗಾಧರ ಗುಂಡಡ್ಕ, ಶ್ರೀ ಮೈಂದೋಡಿ ಸುಬ್ರಾಯ ದೇವಸ್ಥಾನದ, ವ್ಯವಸ್ಥಾಪನ ಸಮಿತಿಯ ಅಧ್ಯಕ್ಷ ಕೇಶವ ಗೌಡ, ಕುದ್ದ ಕೃಷ್ಣ ವೈಲಾಯ, ಗಿರಿಧರ ಇಟ್ಟಡ್ಕ, ಶೀನಪ್ಪ, ಬನ ಹಾಗೂ ಕಾಮಗಾರಿ ಮಾಡುವ, ಪೆರ್ಲದ ಗಿರೀಕ್ ಮಂಟಪಾಡಿ ಹಾಗೂ ವಿನೀಶ್ ಶಾನ ಇದ್ದರು. ದೇಗುಲದ ಪ್ರಧಾನ ಅರ್ಚಕ ರಾಮಚಂದ್ರ ಭಟ್ ಪ್ರಾರ್ಥಿಸಿ ಪ್ರಸಾದ ವಿತರಿಸಿದರು.

ಭರತಾಂಜಲಿ (ರಿ) ಕೊಟ್ಟಾರ ಮಂಗಳೂರು ಇವರು ಕಿಂಕಿಣಿ ತ್ರಿಂಶತ್ ಸಂಭ್ರಮಾಚರಣೆಯ ಸಲುವಾಗಿ ಗುರುವಾಯೂರಿನ ಪ್ರಸಿದ್ಧ ನೃತ್ಯ ಕಲಾವಿದೆಯಾದ ಮೀರಾ ಶ್ರೀನಾರಾಯಣ್ ಇವರ ನೃತ್ಯ ಕಾರ್ಯಕ್ರಮವನ್ನು ನಗರದ ಡಾನ್ ಬಾಸ್ಕೋ ಹಾಲ್ ಇಲ್ಲಿ ನವಮಂಗಳೂರು ಬಂದರು ಪ್ರಾಧಿಕಾರದ ಹಿರಿಯ ಡೆಪ್ಯೂಟಿ ಕಾರ್ಯದರ್ಶಿ ಕೃಷ್ಣ ಬಾಪ್ಪಿ ರಾಜು ಜಿ ಯವರು ಉದ್ಘಾಟಿಸಿದರು. ನಾಟ್ಯಾಚಾರ್ಯ ಗುರು ಉಳ್ಳಾಲ್ ಮೋಹನ ಕುಮಾರ್, ನೇಷನ್ ವೈಡ್ ಕಂಪನಿ ಯು.ಎಸ್.ಎ ಇದರ ಸೀನಿಯರ್ವೈಸ್ ಪ್ರೆಸಿಡೆಂಟ್ ಗುರು ಪ್ರಸಾದ್ ಸಿ.ವಿ. ಕಲಾವಿದೆ ಮೀರಾ ಶ್ರೀನಾರಾಯಣ್, ಭರತಾಂಜಲಿಯ ನೃತ್ಯ ಗುರುಗಳಾದ ಗುರು ಶ್ರೀಧರ ಹೊಳ್ಳ, ವಿದುಷಿ ಪ್ರತಿಮಾ ಶ್ರೀಧರ್, ವಿದುಷಿ ಪ್ರಕ್ಷಿಲ ಜೈನ್ ಉಪಸ್ಥಿತರಿದ್ದರು.

ಬಾಹುಬಲಿ ಮಹಾಮಸ್ತಕಾಭಿಷೇಕ ಸಿದ್ಧತಾ ಸಭೆ

ಉಡುಪಿ: ಕಾರ್ಕಳ ಬಾಹುಬಲಿ ಸ್ವಾಮಿಯ 2027 ರ ಮಹಾಮಸ್ತಕಾಭಿಷೇಕ ಪೂರ್ವಭಾವಿಯಾಗಿ ಜೈನ ಜರ್ಣೋದ್ಧಾರ ಸಂಘದ ಕಾರ್ಯಾಧ್ಯಕ್ಷ ಡಾ.ಎಂ.ಎನ್.ರಾಜೇಂದ್ರ ಕುಮಾರ್ರವರ ಅಧ್ಯಕ್ಷತೆಯಲ್ಲಿ ಎರಡನೇ ಪೂರ್ವಭಾವಿ ಸಭೆಯು ಬಾಹುಬಲಿ ಪ್ರವಚನ ಮಂದಿರದಲ್ಲಿ ನಡೆಯಿತು. ಸಭೆಯಲ್ಲಿ ಶ್ರೀ ಬಾಹುಬಲಿ ಸ್ವಾಮಿಯ ಮಹಾಮಸ್ತಕಾಭಿಷೇಕ ನಡೆಯುವ ಹಿನ್ನೆಲೆಯಲ್ಲಿ ಶಾಶ್ವತ ಯೋಜನೆ, ವಿವಿಧ ಕಾಮಗಾರಿ ನಡೆಸುವ ಕುರಿತು ಚರ್ಚಿಸಲಾಯಿತು. ಶ್ರೀ ಬಾಹುಬಲಿ ಸ್ವಾಮಿ ಮೂರ್ತಿಯನ್ನು ಪುರಾತತ್ವ ಇಲಾಖೆಯ ವತಿಯಿಂದ ಸ್ವಚ್ಛತೆ ಮಾಡುವ ಮತ್ತು ಮಹಾಮಸ್ತಕಾಭಿಷೇಕ ಪ್ರಯುಕ್ತ ಬೆಟ್ಟದಲ್ಲಿ ಆಗಬೇಕಿರುವ ಅಭಿವೃದ್ಧಿಯ ಕುರಿತು ಪುರಾತತ್ವ ಇಲಾಖೆಯ ಅಧಿಕಾರಿಗಳಾದ ಸೂರಜ್ ಮತ್ತು ಆನಂದ ನಾಯ್ಕ್ ಅವರೊಂದಿಗೆ ಚರ್ಚಿಸಲಾಯಿತು. ಈ ಸಂದರ್ಭದಲ್ಲಿ ಸಮಿತಿಯ ಕೋಶಾಧಿಕಾರಿ ಡಾ. ಜೀವಂಧರ ಬಲ್ಲಾಳ್, ಹಿರಿಯರಾದ ಶ್ರೀ ಅನಂತರಾಜ ಪೂವಣಿ ಮತ್ತು ಸಮಾಜದ ಹಿರಿಯರು ಉಪಸ್ಥಿತರಿದ್ದರು.

ಕನಕದಾಸರ ಬದುಕು ಪ್ರೇರಣೆ

ಉಡುಪಿ: ತಮ್ಮ ಭಕ್ತಿ ಸಂಕೀರ್ತನೆಗಳ ಮೂಲಕ ಜಗದ್ವಿಖ್ಯಾತರಾದ ಕನಕದಾಸರ ಬದುಕು ನಮಗೆಲ್ಲರಿಗೂ ಆದರ್ಶ. ಭಕ್ತಿಯ ಪರಾಕಾಷ್ಠೆಯ ಮೂರ್ತ ಸ್ವರೂಪರಾದ ಕನಕದಾಸರು ತಮ್ಮ ಸಂಕೀರ್ತನೆಗಳ ಮೂಲಕ ಪೊಡವಿಗೊಡೆಯ ಶ್ರೀ ಕೃಷ್ಣನನ್ನೇ ತಿರುಗುವಂತೆ ಮಾಡಿ ಇಡೀ ಜಗತ್ತಿಗೆ ಭಕ್ತಿ ಮಾರ್ಗದ ಶಕ್ತಿಯನ್ನು ತೋರಿಸಿಕೊಟ್ಟವರು. ದಾಸರಲ್ಲೇ ಶ್ರೇಷ್ಠರೆನಿಸಿಕೊಂಡ ಕನಕದಾಸರ ಬದುಕು ನಮಗೆಲ್ಲರಿಗೂ ಪ್ರೇರಣೆ ಎಂದು ಶಾಸಕ ಯಶ್ ಪಾಲ್ ಸುವರ್ಣ ಹೇಳಿದರು. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಉಡುಪಿ ಜಿಲ್ಲಾ ಕನಕದಾಸ ಸಮಾಜ ಸೇವಾ ಸಂಘ (ರಿ) ಹಾಗೂ ಹಾಲುಮತ ಮಹಾಸಭಾ (ರಿ) ಉಡುಪಿ ಜಿಲ್ಲೆ ಇವರ ಸಹಯೋಗದೊಂದಿಗೆ ನಗರದ ಅಜ್ಜರಕಾಡಿನ ಭುಜಂಗ ಪಾರ್ಕಿನಲ್ಲಿ ನಡೆದ ಕನಕದಾಸ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಕನಕದಾಸರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು. ಸಂಸದ ಕೋಟ ಶ್ರೀನಿವಾಸ್ ಪೂಜಾರಿ ಮಾತನಾಡಿದರು. ಸಂತ ಕವಿ ಕನಕದಾಸ ಅಧ್ಯಯನ ಕೇಂದ್ರದ ಸದಸ್ಯೆ, ಡಾ.ಕಾತ್ಯಾಯಿನಿ ಕುಂಜಿಬೆಟ್ಟು ವಿಶೇಷ ಉಪನ್ಯಾಸ ನೀಡಿದರು. ವಿವಿಧ ಜಾನಪದ ಕಲಾತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿತು. ಕಾರ್ಯಕ್ರಮದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನಕರ ಹೇರೂರು, ಹೆಚ್ಚುವರಿ ಜಿಲ್ಲಾಧಿಕಾರಿ ಅಬೀದ್ ಗದ್ಯಾಳ್, ಮಂಗಳೂರು ಕರಾವಳಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಂ.ಎ ಗಫೂರ್,ಕನಕದಾಸ ಸಮಾಜ ಸಂಘ (ರಿ) ಜಿಲ್ಲಾ ಅಧ್ಯಕ್ಷ ಹನುಮಂತ ಡೊಳ್ಳಿನ ಮತ್ತಿತರರು ಉಪಸ್ಥಿತರಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಪೂರ್ಣಿಮಾ ಸ್ವಾಗತಿಸಿದರು. ತೇಜಸ್ ಕೋಟ್ಯಾನ್ ನಿರೂಪಿಸಿ, ಚಿಕ್ಕಮಠ ವಂದಿಸಿದರು.

ಡಿಜಿಟಲ್ ಅರೆಸ್ಟ್: 1.16 ಕೋಟಿ ವಂಚನೆ

ಮಂಗಳೂರು: ದೆಹಲಿ ಪೊಲೀಸ್, ಸಿಬಿಐ , ಆದಾಯ ತೆರಿಗೆ ಮತ್ತು ಜಾರಿ ಇಲಾಖೆಯ ಹಿರಿಯ ಅಧಿಕಾರಿಗಳಂತೆ ವಾಟ್ಸಾಪ್ ವಿಡಿಯೊ ಮತ್ತು ಆಡಿಯೋ ಕರೆಗಳ ಮೂಲಕ ಮಹಿಳೆಯೊಬ್ಬರಿಗೆ ಬರೋಬ್ಬರಿ 1.16 ಕೋಟಿ ಕಳೆದುಕೊಂಡ ಘಟನೆ ಮಂಗಳೂರಿನಲ್ಲಿ ನಡೆದಿದೆ. ಸೈಬರ್ಠಾಣೆಯಲ್ಲಿ ನೀಡಿದ ದೂರಿನಲ್ಲಿ, ಸಂತ್ರಸ್ತೆಯು ಸೆ.24 ರಂದು ದೆಹಲಿಯ ದೂರಸಂಪರ್ಕ ಇಲಾಖೆಯಿಂದ ಬಂದಿರುವುದಾಗಿ ಹೇಳಿಕೊಂಡು ವಾಟ್ಸಾಪ್ ವೀಡಿಯೊ ಕರೆಯನ್ನು ಸ್ವೀಕರಿಸಿದ್ದಾಗಿ ತಿಳಿಸಿದ್ದಾರೆ. ಕರೆ ಮಾಡಿದ ವ್ಯಕ್ತಿ ತನ್ನ ಆಧಾರ್ಮತ್ತು ಪ್ಯಾನ್ ವಿವರಗಳನ್ನು ಬಳಸಿಕೊಂಡು ದೆಹಲಿಯಲ್ಲಿ ಸಿಮ್ ಕಾರ್ಡ್ ಖರೀದಿಸಲಾಗುತ್ತಿದೆ ಎಂದು ಸುಳ್ಳು ಮಾಹಿತಿ ನೀಡಿದ್ದಾನೆ. ಈ ಸಿಮ್ ಕಾರ್ಡ್ ಬಳಸಿ ಸಾರ್ವಜನಿಕರಿಗೆ ಅಕ್ರಮ ಜಾಹೀರಾತುಗಳು ಮತ್ತು ಕಿರುಕುಳ ಸಂದೇಶಗಳನ್ನು ಕಳುಹಿಸಲಾಗುತ್ತಿತ್ತು ಎಂದು ಆರೋಪಿಸಲಾಗಿದೆ. ಮಹಿಳೆ ಯಾವುದೇ ರೀತಿಯಲ್ಲಿ ಭಾಗಿಯಾಗಿಲ್ಲ ಎಂದು ನಿರಾಕರಿಸಿದಾಗ, ಕರೆ ಮಾಡಿದ ವ್ಯಕ್ತಿ ''ಕರೆಯನ್ನು ದೆಹಲಿ ಪೊಲೀಸರಿಗೆ ವರ್ಗಾಯಿಸುತ್ತೇನೆ'' ಎಂದು ಹೇಳಿದ್ದಾನೆ. ಮತ್ತೊಬ್ಬ ವ್ಯಕ್ತಿ ಪೊಲೀಸ್ ಸಮವಸ್ತ್ರ ಧರಿಸಿ ವೀಡಿಯೊ ಕರೆಯಲ್ಲಿ ಕಾಣಿಸಿಕೊಂಡು, ತನ್ನನ್ನು ''ದೆಹಲಿ ಪೊಲೀಸ್ ಮತ್ತು ಸಿಬಿಐ ಅಧಿಕಾರಿ'' ವಿಜಯ್ ಕುಮಾರ್ ಎಂದು ಗುರುತಿಸಿ ಕೊಂಡ. ಹಿಳಾ ಆಭರಣ ನಂತರ ನಕಲಿ ಅಧಿಕಾರಿ ಆಕೆಯ ಬ್ಯಾಂಕ್ ಖಾತೆಗಳು ಮತ್ತು ಆಸ್ತಿಗಳ ಸಂಪೂರ್ಣ ವಿವರಗಳನ್ನು ಕೇಳಿದರು. ಬಂಧನಕ್ಕೆ ಹೆದರಿ ಮಹಿಳೆ ತನ್ನ ವಿವರಗಳನ್ನು ಹಂಚಿಕೊಂಡಿದ್ದಾರೆ.

45 ಸಿನಿಮಾದ ಅಫ್ರೋ ಟಪಂಗ್ ಹಾಡಿನ ಪ್ರಮೋಷನ್ನಲ್ಲಿ ಮೋಡಿ ಮಾಡಿದ ಚಿತ್ರತಂಡ

ಅರ್ಜುನ್ ಜನ್ಯ, ರಾಜ್ ಬಿ ಶೆಟ್ಟಿಗೆ ಅನುಶ್ರೀ ಸಾಥ್

ಮಂಗಳೂರು: ಬಹುನಿರೀಕ್ಷಿತ ಖ್ಯಾತ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಚೊಚ್ಚಲ ನಿರ್ದೇಶನದಲ್ಲಿ ನಿರ್ಮಾಣಗೊಂಡಿರುವ ''45'' ಸಿನಿಮಾದ ಆಫ್ರೋ ಟಪಂಗ್ ಹಾಡಿನ ಪ್ರಮೋಷನ್ ಗಾಗಿ ಆಗಮಿಸಿದ್ದ ಚಿತ್ರತಂಡ ಫೋರಂ ಫಿಜಾ ಮಾಲ್ ನಲ್ಲಿ ನೆರೆದಿದ್ದ ಸಿನಿಮಾ ಪ್ರೇಮಿಗಳು ಮತ್ತು ಅಭಿಮಾನಿಗಳನ್ನು ಮೋಡಿ ಮಾಡಿತು. ನಿರ್ದೇಶಕ ಅರ್ಜುನ್ ಜನ್ಯ, ರಾಜ್ ಬಿ ಶೆಟ್ಟಿ, ಗಾಯಕರಾದ ನಿಶಾನ್ ರೈ, ಎಂ.ಸಿ.ಬಿಜು ಅವರಿಗೆ ಅನುಶ್ರೀ ಶೆಟ್ಟಿ ಸಾಥ್ ನೀಡಿದ್ದರು.

ಕಾರ್ಯಕ್ರಮಕ್ಕೂ ಮುನ್ನ ಹಾಡಿನ ನೃತ್ಯ ಪ್ರದರ್ಶನ ನೆರೆದಿದ್ದವರ ಮನಸೂರೆಗೊಂಡಿತು. ಹಾಡಿಗೆ ರಾಜ್ ಬಿ ಶೆಟ್ಟಿ ಟಪಾಂಗುಚ್ಚಿ ಕುಣಿಯುವ ಮೂಲಕ ಆಕರ್ಷಣೆ ಹೆಚ್ಚಿಸಿದ್ದು ವಿಶೇಷವಾಗಿತ್ತು.

ಬಳಿಕ ಮಾಧ್ಯಮಗಳ ಜತೆಗೆ ಮಾತಾಡಿದ ಅರ್ಜುನ್ ಜನ್ಯ ಅವರು, ''ಮಂಗಳೂರಿನ ಜನ ಬಹಳ ಒಳ್ಳೆಯವರು. ಇಲ್ಲಿಗೆ ಪ್ರತೀ ಬಾರಿ ಬಂದಾಗಲೂ ಒಳ್ಳೆಯ ಫೀಲ್ ಉಂಟಾಗುತ್ತೆ. ಹಾಗಾಗಿ ಸಿನಿಮಾದಲ್ಲಿ ನಿಶಾನ್ ರೈ ಬರೆದಿರುವ ತುಳು ಸಾಹಿತ್ಯವಿರುವ ಹಾಡನ್ನು ಅಳವಡಿಸಲಾಗಿದೆ. ಈಗಾಗಲೇ ಹಾಡು 25 ಮಿಲಿಯನ್ ವೀಕ್ಷಣೆ ಪಡೆಯುವ ಸನಿಹದಲ್ಲಿಯುವುದು ಖುಷಿ ಎನಿಸುತ್ತಿದೆ. ಚಿತ್ರವು ಡಿ.25ರಂದು ಬಿಡುಗಡೆಯಾಗುತ್ತಿದೆ ಎಲ್ಲರೂ ಸಿನಿಮಾ ನೋಡಿ ಪ್ರೋತ್ಸಾಹಿಸಿ'' ಎಂದರು. ನಟ ರಾಜ್ ಬಿ ಶೆಟ್ಟಿ ಮಾತಾಡಿ, '45 ಸಿನಿಮಾದಲ್ಲಿ ಶಿವರಾಜ್ ಕುಮಾರ್, ಉಪೇಂದ್ರ ಅವರೊಂದಿಗೆ ನಟಿಸಿರುವುದು ರೋಮಾಂಚನಕಾರಿ ಅನುಭವ. ಸಿನಿಮಾ ಚೆನ್ನಾಗಿ ಮೂಡಿಬಂದಿದ್ದು ಆಫ್ರೋ ಟಪಂಗ್ ಹಾಡಿಗೆ ಒಳ್ಳೇ ರೆಸ್ಪಾನ್ಸ್ ಬರುತ್ತಿದೆ. ತುಳುವರು ಸಿನಿಮಾ ನೋಡಿ' ಎಂದರು. ಫೋರಂ ಫಿಜಾ ಮಾಲ್ ನ ಬಿ.ಎಂ.ಫಾರೂಕ್ ಮಾತಾಡಿ, ಚಿತ್ರತಂಡ ಒಳ್ಳೆಯ ಪ್ರಯತ್ನಕ್ಕೆ ಕೈಹಾಕಿದೆ. ತುಳು ಸಾಹಿತ್ಯವನ್ನು ಹಾಡಿನಲ್ಲಿ ಬಳಕೆ ಮಾಡಿರುವುದು ನಮಗೆ ಹೆಮ್ಮೆಯ ವಿಚಾರ'' ಎಂದರು. ಅನುಶ್ರೀ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.



ಫೋರಂ ಫಿಜಾ ಮಾಲ್ ನಲ್ಲಿ ಖ್ಯಾತ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಅವರಿಗೆ ಸನ್ಮಾನಿಸಲಾಯಿತು.

ಮೊದಲ ಬಾರಿಗೆ ಕನ್ನಡ ಸಿನಿಮಾದಲ್ಲಿ ಉಗಾಂಡಾ ಮಕ್ಕಳ ನೃತ್ಯ ವೈಭವ

ರೀಲ್ಸ್ ಮೂಲಕವೇ ವಿಶ್ವದಾದ್ಯಂತ ಜನಪ್ರಿಯತೆ ಗಳಿಸಿದ್ದ ಉಗಾಂಡಾ ದೇಶದ ಹಳ್ಳಿಯ ಮಕ್ಕಳ ತಂಡ ''ಗೆಟ್ಟೋ ಕಿಡ್ಸ್'' ಅನ್ನು 45 ಸಿನಿಮಾದ ಟಪಂಗ್ ಹಾಡಿನಲ್ಲಿ ಕುಣಿಸಿರುವುದು ಸಿನಿಮಾದ ವಿಶೇಷವಾಗಿದೆ. ಈ ಕುರಿತು ಮಾತಾಡಿದ ನಿರ್ದೇಶಕ ಅರ್ಜುನ್ ಜನ್ಯ ರೀಲ್ಸ್ ಮೂಲಕ ನೋಡಿದ್ದ ಮಕ್ಕಳ ಪ್ರಸಿದ್ಧ ನೃತ್ಯ ತಂಡವನ್ನು ಕರೆಸುವ ಮೂಲಕ ಸಿನಿಮಾದ ಹಾಡನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ತಲುಪಿಸುವಲ್ಲಿ ಯಶಸ್ಸು ಸಿಕ್ಕಿದೆ.

ಜೆಎಸ್‌ಎಸ್ ಅಕಾಡೆಮಿಯ ಘಟಿಕೋತ್ಸವದಲ್ಲಿ ಉಪರಾಷ್ಟ್ರಪತಿ

ಶಿಕ್ಷಣದ ನಂತರ ಹೊಸ ಪಯಣ ಆರಂಭ

ಮೈಸೂರಿನ ಸುತ್ತೂರು ಶಾಖ ಮಠಕ್ಕೆ ಭಾನುವಾರ ಭೇಟಿ ನೀಡಿದ ಉಪರಾಷ್ಟ್ರಪತಿ ರಾಧಾಕೃಷ್ಣನ್ ಅವರು ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ವೀರಶೈವ ಲಿಂಗಾಯತ ಮಠಾಧಿಪತಿಗಳನ್ನು ಭೇಟಿ ಮಾಡಿದರು. ಈ ವೇಳೆ ಸುತ್ತೂರು ಶ್ರೀಗಳು ಹಾಗೂ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋತ್ ಇದ್ದಾರೆ.

ಮೈಸೂರು: ಶಿಕ್ಷಣ ಮುಗಿದ ನಂತರ ಜೀವನ ಮುಗಿದಂತಾಗುವುದಿಲ್ಲ. ಅದು ನಿಮ್ಮ ಹೊಸ ಪಯಾಣದ ಪ್ರಾರಂಭ ಎಂದು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಮೈಸೂರಿನ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ 16ನೇ ಘಟಿಕೋತ್ಸವದಲ್ಲಿ ಮುಖ್ಯ ಅತಿಥಿಯಾಗಿ ಅವರು ಘಟಿಕೋತ್ಸವ ಭಾಷಣ ಮಾಡಿದರು. ನಿಮ್ಮ ಗುರಿ, ಕನಸು ಮತ್ತು ಭವಿಷ್ಯವನ್ನು ನಿಜಗೊಳಿಸಲು ನೀವು ಪ್ರಯತ್ನಿಸಬೇಕು. ಯಶಸ್ವಿಯಾಗುವುದು ಎಲ್ಲರಿಗೂ ಸಾಧ್ಯ. ಪ್ರತಿಭೆ ದೇವರ ಕೊಡುಗೆ ಆಗಬಹುದು, ಆದರೆ ಸ್ಥಿರತೆ ನಿಮ್ಮ ಕೈಯಲ್ಲಿದೆ. ನಿಮ್ಮ ಗುರಿಯತ್ತ ನಿಮ್ಮ ವೇಗದಲ್ಲಿ ನಿರಂತರವಾಗಿ ಸಾಗಬೇಕು ಎಂದರು. ವಿಫಲತೆಗಳಿಂದ ಕುಗ್ಗಬೇಡಿ. ಹೆಚ್ಚು ಬಾರಿ ಸೋತವರು, ಹೆಚ್ಚು ಬಲಿಷ್ಠರಾಗುತ್ತಾರೆ. ಆದರೆ ಪ್ರಯತ್ನ ಮತ್ತು ಪರಿಶ್ರಮದಿಂದ ಹಿಂದೆ ಸರಿಯಬೇಡಿ ಎಂದ ಅವರು, ಸ್ವಾಮಿ ವಿವೇಕಾನಂದರು ಹೇಳಿದಂತೆ ಉದ್ದೇಶವನ್ನು ಸಾಧಿಸುವವರೆಗೆ ನಿಲ್ಲಬೇಡಿ. ಎಂದೆಂದಿಗೂ ಶ್ರಮವನ್ನು ನಿಲ್ಲಿಸಬೇಡಿ. ಕೆಲವೊಮ್ಮೆ ವಿಶ್ರಾಂತಿ ಬೇಕಾಗಬಹುದು ಅದು ಸಹಜ. ಆದರೆ ವಿಶ್ರಾಂತಿ ನಂತರ ಹೆಚ್ಚು ಉತ್ಸಾಹದಿಂದ ಪುನರಾರಂಭಿಸಬೇಕು. ನನ್ನ ಜೀವನದ ಉದಾಹರಣೆ ನೀಡುತ್ತೇನೆ. ನಾನು ಐದು ಚುನಾವಣೆಗಳಲ್ಲಿ ಸ್ಪರ್ಧಿಸಿದೆ. ಅದರಲ್ಲಿ ಎರಡು ಬಾರಿ ಗೆದ್ದಿದ್ದೇನೆ, ಮೂರು ಬಾರಿ ಸೋತಿದ್ದೇನೆ. ಏಕೆ ಸೋತಿದ್ದೇನೆ ಎಂಬುದನ್ನು ನನಗೂ ತಿಳಿಯಲಿಲ್ಲ, ಆದರೆ ಎಲ್ಲರೂ ಗೆಲ್ಲುವುದಾಗಿ ನಂಬಿದ್ದರು. ಅದೇ ನಿರಂತರ ಶ್ರಮದಿಂದ ಇಂದು ನಾನು ರಾಷ್ಟ್ರದ ಉಪರಾಷ್ಟ್ರಪತಿಯಾಗಿ ಸೇವೆ ಸಲ್ಲಿಸುತ್ತಿದ್ದೇನೆ ಎಂದು ಹೇಳಿದರು.

ಇತರರೊಂದಿಗೆ ನಿಮ್ಮನ್ನು ಹೋಲಿಸಿಕೊಳ್ಳಬೇಡಿ. ದೇವರು ಪ್ರತಿಯೊಬ್ಬನನ್ನೂ ವಿಭಿನ್ನ ಪ್ರತಿಭೆಯಿಂದ ಸೃಷ್ಟಿಸಿದ್ದಾನೆ. ಕೆಲವೊಮ್ಮೆ ವಿಫಲತೆಗಳು ಎದುರಾಗಬಹುದು. ಎಲ್ಲರಿಗೂ ಸಮಸ್ಯೆಗಳಿರುತ್ತವೆ, ಅದನ್ನು ಎದುರಿಸಿ ಮುನ್ನಡೆದರೆ ಕೇವಲ ನೀವು ನಿಮ್ಮದನ್ನು ಹೆಚ್ಚು ಅರಿಯುತ್ತೀರಿ ಎಂದು ತಿಳಿಸಿದರು. ಒಂದು ಕಾಲದಲ್ಲಿ ನಮ್ಮ ದೇಶದ ಯಾವುದೇ ವಿಶ್ವವಿದ್ಯಾಲಯವೂ ಅಂತಾರಾಷ್ಟ್ರೀಯ ಮಟ್ಟದಲ್ಲಿ 1500 ರ‍್ಯಾಂಕ್ ಒಳಗೆ ಇರಲಿಲ್ಲ. ಆದರೆ ಇಂದು ನಮ್ಮ ಸಂಸ್ಥೆ ವಿಶ್ವದ 54ನೇ ಸ್ಥಾನದಲ್ಲಿದೆ. ಇದು ಆಡಳಿತ ಮಂಡಳಿ ಹಾಗೂ ವಿದ್ಯಾರ್ಥಿಗಳ ಶ್ರಮ ಮತ್ತು ಸಹಕಾರದಿಂದ ಸಾಧಿಸಿರುವ ಮಹತ್ತರ ಸಾಧನೆ ಎಂದು ಅವರು ಶ್ಲಾಘಿಸಿದರು.

ಪದವಿ ಪೂರ್ಣಗೊಳಿಸುವುದು ಕೇವಲ ಶೈಕ್ಷಣಿಕ ಆಸಕ್ತಿಯ ವಿಷಯವಲ್ಲ. ಅದು ನಿಮ್ಮ ಜೀವನದ ಆಸಕ್ತಿಯಾಗಿದೆ. ಇಲ್ಲಿ ನೀವು ಕೇವಲ ಜ್ಞಾನವನ್ನೇ ಅಲ್ಲ, ಶಿಸ್ತನ್ನೂ, ಹೊಣೆಗಾರಿಕೆಯನ್ನು, ಹೇಗೆ ವರ್ತಿಸಬೇಕು, ಯಾವಾಗ ಮತ್ತು ಏನು ಮಾಡಬೇಕು ಎಂಬುದನ್ನೂ ಕಲಿಯುತ್ತೀರಿ ಎಂದರು.

ವೇದಿಕೆಯಲ್ಲಿ ರಾಜ್ಯಪಾಲ ಥಾವರ್ ಚಂದ್‌ಗೆಹ್ಲೋತ್, ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸುಪ್ರಿಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಡಾ. ಶಿವರಾಜ್ ಪಾಟೀಲ್, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ. ಬೆಟಸೂರಮಠ, ಸಮ ಕುಲಾಧಿಪತಿ ಡಾ.ಬಿ. ಸುರೇಶ್, ಕುಲಪತಿ ಡಾ.ಎಚ್. ಬಸವನಗೌಡಪ್ಪ ಇದ್ದರು.

ಕರ್ನಾಟಕದ ನೆಲ ಪವಿತ್ರ ಕನ್ನಡ ಶ್ರೀಮಂತ ಭಾಷೆ

ಕರ್ನಾಟಕದ ಪವಿತ್ರ ನೆಲೆಗೆ ನೀಡಿದ ನನ್ನ ಮೊದಲ ಭೇಟಿ ಇದು. ಇಂದು ಬೆಳಗ್ಗೆ ಶ್ರವಣಬೆಳಗೊಳಕ್ಕೆ ಭೇಟಿ ನೀಡಿ, ಈಗ ಮೈಸೂರು ಪವಿತ್ರ ಭೂಮಿಗೆ ಬಂದಿದ್ದೇನೆ. ಕರ್ನಾಟಕ ತನ್ನ ಶ್ರೀಮಂತ ಸಂಸ್ಕೃತಿ ಮತ್ತು ಆರೋಗ್ಯಕರ ಜೀವನ ಶೈಲಿಯಿಂದ ಪ್ರಸಿದ್ಧವಾಗಿದೆ. ಧಾರ್ಮಿಕ ತಾಣಗಳಿಂದ ತುಂಬಿರುವ ಈ ಪವಿತ್ರ ರಾಜ್ಯವನ್ನು ನಾನು ಪವಿತ್ರ ಕರ್ನಾಟಕ ಎಂದು ಕರೆಯುತ್ತೇನೆ. ಕನ್ನಡ ಭಾಷೆ ವಿಶ್ವದ ಅತ್ಯಂತ ಶ್ರೀಮಂತ ಭಾಷೆಗಳಲ್ಲೊಂದು. ಕರ್ನಾಟಕದ ಗೀತೆ ಕೇಳಿದರೆ ಅದು ಎಷ್ಟು ದಿವ್ಯ, ಎಷ್ಟು ಮನಮುಟ್ಟುವಂತಿದೆ ಎಂಬುದು ಗೊತ್ತಾಗುತ್ತದೆ ಎಂದು ಉಪರಾಷ್ಟ್ರಪತಿ ರಾಧಾಕೃಷ್ಣನ್ ಹೇಳಿದರು.

ಚಿನ್ನದ ಪದಕ ಪ್ರದಾನ

ಬಿಡಿಎಸ್‌ನಲ್ಲಿ ಸುಹಾನಿ ಜೆ.ನ್ ನಾಲ್ಕು ಚಿನ್ನದ ಪದಕ, ಬಿ. ಫಾರ್ಮಾದಲ್ಲಿ ಎಸ್. ಉಮಾ ಮಹೇಶ್ವರಿ ನಾಲ್ಕು ಚಿನ್ನದ ಪದಕ, ಎಂ. ಫಾರ್ಮಾದಲ್ಲಿ ಜೆ. ವಿಘ್ನೇಶ್ ಮೂರು ಚಿನ್ನದ ಪದಕ, ಎಂಬಿಬಿಎಸ್ ನಲ್ಲಿ ಇಶಾ ಕುಮತೆಕರ್‌ಮೂರು ಚಿನ್ನದ ಪದಕ, ಜನರಲ್ ಮೆಡಿಷನ್‌ಎಂಡಿಯಲ್ಲಿ ಡಾ. ಯೆನಮಾಲ ಕೀರ್ತಿ ಮೂರು ಚಿನ್ನದ ಪದಕ ಸೇರಿ ಒಟ್ಟು 68 ಮಂದಿ ವಿವಿಧ ವಿಭಾಗಗಳಲ್ಲಿ ಚಿನ್ನದ ಪದಕ ಪಡೆದರು.

ಶಾಂತಿಸಾಗರ ಮಹಾರಾಜರ ಪ್ರತಿಮೆ ಅನಾವರಣ ಮಾಡಿದ ಉಪರಾಷ್ಟ್ರಪತಿ ರಾಧಾಕೃಷ್ಣನ್

ಕನ್ನಡಿಗರಿಂದ ಸಂಸ್ಕೃತಿ ಉಳಿಸುವ ಕೆಲಸ

ಹಾಸನ: ಇಡೀ ಕರ್ನಾಟಕವೇ ಪುಣ್ಯಕ್ಷೇತ್ರ. ಸಂಸ್ಕೃತಿ, ಪರಂಪರೆ, ಅಧ್ಯಾತ್ಮವನ್ನು ರಕ್ಷಿಸುವ ಕೆಲಸವನ್ನು ಕನ್ನಡಿಗರು ಮಾಡುತ್ತಿದ್ದಾರೆ ಎಂದು ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಹೇಳಿದರು.

ಶಾಂತಿಸಾಗರ ಮಹಾರಾಜರ ಶ್ರವಣಬೆಳಗೊಳ ಭೇಟಿಯ ಶತಮಾನೋತ್ಸವದ ನಿಮಿತ್ತ ಭಾನುವಾರ ನಡೆದ ಶಾಂತಿಸಾಗರ ಮಹಾರಾಜರ 10 ಅಡಿ ಎತ್ತರದ ಪ್ರತಿಮೆ ಅನಾವರಣ, ಅವರ ಚರಿತ್ರೆಯ ಶಿಲಾಶಾಸನ, ನಾಲ್ಕನೇ ಬೆಟ್ಟ ಶಾಂತಿಗಿರಿ ಅನಾವರಣ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜೈನ ಸಂಸ್ಕೃತಿ ಪ್ರತೀಕವಾಗಿರುವ ಶ್ರವಣಬೆಳಗೊಳ ಕ್ಷೇತ್ರ ಧಾರ್ಮಿಕತೆ, ಶಾಂತಿ, ತ್ಯಾಗದ ಸಂಕೇತವೂ ಆಗಿದೆ. ಭಾರತೀಯ ಸಂಸ್ಕೃತಿ ಪರಂಪರೆಗೆ ಜೈನ ಧರ್ಮದ ಕೊಡುಗೆ ಅಪಾರವಾಗಿದೆ ಎಂದು ಬಣ್ಣಿಸಿದರು. ತಮಿಳುನಾಡು ಹಾಗೂ ಜೈನ ಧರ್ಮದ ಮಧ್ಯೆ ಅವಿನಾಭಾವ ಸಂಬಂಧವಿದೆ. ತಮಿಳು ಸಾಹಿತ್ಯಕ್ಕೆ ಜೈನ ಧರ್ಮದ ಕೊಡುಗೆ ಅಪಾರವಾಗಿದೆ. ಅನೇಕ ಜೈನ ಮಠಗಳು, ಮಂದಿರಗಳು ತಮಿಳುನಾಡಿನಲ್ಲಿವೆ ಎಂದು ಹೇಳಿದರು. ಶ್ರವಣಬೆಳಗೊಳ ಕ್ಷೇತ್ರದ ಅಭಿವೃದ್ಧಿಗೆ ಹಿಂದಿನ ಕರ್ಮಯೋಗಿ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರು ಅಪಾರ ಶ್ರಮ ವಹಿಸಿದ್ದಾರೆ. 4 ಮಹಾಮಸ್ತಕಾಭಿಷೇಕ ನಡೆಸಿದ್ದಲ್ಲದೇ, ಪ್ರಾಕೃತ ಅಧ್ಯಯನ ಹಾಗೂ ಸಂಶೋಧನಾ ಸಂಸ್ಥೆ ಸ್ಥಾಪಿಸುವ ಮೂಲಕ ಜೈನ ಸಾಹಿತ್ಯದ ಅಧ್ಯಯನಕ್ಕೆ ಅವಕಾಶ ಮಾಡಿದರು. ಶಿಕ್ಷಣ, ಆರೋಗ್ಯ ಸೇರಿದಂತೆ ಸಮಾಜದ ಅಭಿವೃದ್ಧಿಗೆ ಭದ್ರವಾದ ಬುನಾದಿ ಹಾಕಿದವರು ಎಂದು ಸ್ಮರಿಸಿದರು. ಅದೇ ಮಾರ್ಗದಲ್ಲಿ ಮುನ್ನಡೆಯುತ್ತಿರುವ ಇಂದಿನ ಅಭಿನವ ಚಾರುಕೀರ್ತಿ ಸ್ವಾಮೀಜಿಯವರು, ಶಾಂತಿಸಾಗರ ಮಹಾರಾಜರ ಭೇಟಿಯ ಶತಮಾನೋತ್ಸವ ಆಚರಿಸುವ ಮೂಲಕ ಧರ್ಮ ಪ್ರಜ್ಞೆ ಜಾಗೃತಿಯ ಕೆಲಸ ಮಾಡಿದ್ದಾರೆ. ಪ್ರತಿಮೆ, ಅವರ ಜೀವನ ಚರಿತ್ರೆಯ ಶಿಲಾಶಾಸನ ನಿರ್ಮಿಸುವ ಮೂಲಕ ಶಾಂತಿಸಾಗರ ಮಹಾರಾಜರ ತತ್ವ, ಸಿದ್ಧಾಂತ, ಸಂದೇಶಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಕೆಲಸ ಆಗಿದೆ ಎಂದು ಬಣ್ಣಿಸಿದರು.

ಕ್ಷೇತ್ರದ ಪೀಠಾಧಿಪತಿ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ, ಸಚಿವ ಡಿ. ಸುಧಾಕರ್, ಸಂಸದ ಶ್ರೇಯಸ್ ಪಟೇಲ್, ಶಾಸಕ ಅಭಯ್ ಪಾಟೀಲ್, ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ, ಎಸ್ಪಿ ಮೊಹಮ್ಮದ್ ಸುಜೀತಾ ಸೇರಿದಂತೆ ದೇಶದ ವಿವಿಧೆಡೆಯಿಂದ ಬಂದಿದ್ದ ಸಾವಿರಾರು ಜನರು ಭಾಗವಹಿಸಿದ್ದರು. ಶಾಸಕ ಸಿ.ಎನ್. ಬಾಲಕೃಷ್ಣ ಸ್ವಾಗತಿಸಿದರು.

ಸಂತ ಪರಂಪರೆ ಪರಿಚಯಿಸುವ ಕಾರ್ಯಕ್ರಮ

ಶಾಂತಿ, ಅಹಿಂಸೆ, ಕರುಣೆಯ ಪ್ರತೀಕವಾಗಿ ಬಾಹುಬಲಿಯ ಕ್ಷೇತ್ರವಾಗಿರುವ ಶ್ರವಣಬೆಳಗೊಳದಲ್ಲಿ ಸಂತ ಪರಂಪರೆ ಪರಿಚಯಿಸುವ ಕಾರ್ಯಕ್ರಮ ಇದಾಗಿದೆ. ಧರ್ಮ, ಸಂಪ್ರದಾಯಗಳು ಕೇವಲ ಗ್ರಂಥದಲ್ಲಿ ಅಲ್ಲ, ಆಚರಣೆಯಲ್ಲಿವೆ ಎಂದು ತೋರಿಸಿದವರು ಶಾಂತಿಸಾಗರ ಮಹಾರಾಜರು ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋತ್ ಹೇಳಿದರು.ರಾಷ್ಟ್ರೀಯ ಚೇತನಯ ಉತ್ಸವವಾಗಿದೆ. ಸತ್ಯ, ಅಹಿಂಸೆಯ ಭಾರತೀಯ ಆತ್ಮವನ್ನು ಈ ಕಾರ್ಯಕ್ರಮ ಪ್ರತಿಬಿಂಬಿಸುತ್ತದೆ. ಈ ಪ್ರತಿಮೆಯ ಆತ್ಮಾವಲೋಕನಕ್ಕೆ ಪ್ರೇರಣೆ ನೀಡಲಿದೆ. ಶಾಂತಿಗಿರಿಯು ಸಾಧನೆ, ಅಧ್ಯಾತ್ಮದ ಬೆಟ್ಟವಾಗಿದೆ. ತಪ, ತ್ಯಾಗ, ಸಂಯಮದ ಸಾಕ್ಷಿಯಾಗಿ ನಿಲ್ಲಲಿದೆ. ಅಹಿಂಸೆ, ತ್ಯಾಗ, ಮೈತ್ರಿ, ಶಾಂತಿಯ ಸೂತ್ರಗಳನ್ನು ತಿಳಿಸಿದ ಭಗವಾನ್ ಬಾಹುಬಲಿ ಅವರ ಪುಣ್ಯಕ್ಷೇತ್ರ ಆತ್ಮಶಾಂತಿ, ಅಧ್ಯಾತ್ಮದ ಕೇಂದ್ರವಾಗಿದೆ ಎಂದರು.
ಫೋಟೊ: ಶಾಂತಿಸಾಗರ ಮಹಾರಾಜರ ಪ್ರತಿಮೆಯನ್ನು ಶ್ರವಣಬೆಳಗೊಳದಲ್ಲಿ ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅನಾವರಣ ಮಾಡಿದರು. ಈ ವೇಳೆ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋತ್, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಸಚಿವ ಕೃಷ್ಣಬೈರೇಗೌಡ, ಸಂಸದ ಶ್ರೇಯಸ್ ಪಟೇಲ್ ಇದ್ದರು.

ನಾಗರಿಕತೆಯ ಸಂಕೇತ: ಎಚ್‌ಡಿಕೆ

ಧಾರ್ಮಿಕತೆ, ಪರಂಪರೆಯ ಪ್ರತೀಕವಾಗಿರುವ ಶ್ರವಣಬೆಳಗೊಳ ಕ್ಷೇತ್ರದಲ್ಲಿ ಶಾಂತಿಸಾಗರ ಮಹಾರಾಜರ ಪ್ರತಿಮೆ ಅನಾವರಣ ಆಗಿದೆ. ಇದು ಕೇವಲ ಕ್ಷೇತ್ರವಲ್ಲ, ಇದು ನಾಗರಿಕತೆಯ ಸಂಕೇತ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾ ರಸ್ವಾಮಿ ಹೇಳಿದರು. 1925 ರಲ್ಲಿ ನಡೆದ ಮಹಾಮಸ್ತಕಾಭಿಷೇಕದಲ್ಲಿ 20 ನೇ ಶತಮಾನದ ಪ್ರಥಮಾಚಾರ್ಯರ ಶಾಂತಿಸಾಗರ ಮಹಾರಾಜರು ಭಾಗವಹಿಸಿ ದ್ದರು. ಅದರ ಸ್ಮರಣೆಗಾಗಿ ಶಾಂತಿಗಿರಿ ಬೆಟ್ಟದ ಅನಾವರಣ ಮಾಡಲಾಗಿದ್ದು, ಅವರ ಪ್ರತಿಮೆಯ ಅನಾವರಣ ಮಾಡಲಾಗಿದೆ. ಅವರು ಹಾಕಿಕೊಟ್ಟಿರುವ ಮಾರ್ಗದಲ್ಲಿ ಮುನ್ನಡೆಯೋಣ. ಅವರ ಸಂದೇಶಗಳು ಆಧುನಿಕ ಭಾರತ ನಿರ್ಮಾಣಕ್ಕೆ ದಾರಿದೀಪವಾಗಿವೆ ಎಂದರು. ಕಾರ್ಯಕ್ರಮದಲ್ಲಿ ಕ್ಷೇತ್ರದ ಪೀಠಾಧಿಪತಿ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ, ಸಚಿವ ಡಿ. ಸುಧಾಕರ್, ಸಂಸದ ಶ್ರೇಯಸ್ ಪಟೇಲ್, ಶಾಸಕ ಅಭಯ್ ಪಾಟೀಲ್, ಜಿಲ್ಲಾಧಿಕಾರಿ ಕೆ. ಎಸ್. ಲತಾಕುಮಾರಿ, ಎಸ್ಪಿ ಮೊಹಮ್ಮದ್ ಸುಜೀತಾ ಸೇರಿದಂತೆ ದೇಶದ ವಿವಿಧೆಡೆಯಿಂದ ಬಂದಿದ್ದ ಸಾವಿರಾರು ಜನರು ಭಾಗವಹಿಸಿದ್ದರು. ಶಾಸಕ ಸಿ. ಎನ್. ಬಾಲಕೃಷ್ಣ ಸ್ವಾಗತಿಸಿದರು.

ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಮೇಲುಕೋಟೆಗೆ ಉಪರಾಷ್ಟ್ರಪತಿ ಸಿ.ಪಿ ರಾಧಾಕೃಷ್ಣನ್ ಭಾನುವಾರ ಭೇಟಿ ನೀಡಿ ಚೆಲುವರಾಯಸ್ವಾಮಿ ದೇವರ ದರ್ಶನ ಪಡೆದರು.

ವಿಶ್ವದಲ್ಲಿರುವ ಏಳು ಖಂಡಗಳಲ್ಲಿ ಅಂಟಾರ್ಟಿಕ ಹೊರತುಪಡಿಸಿ ಇನ್ನುಳಿದ ಆರು ಖಂಡಗಳಲ್ಲಿ ಕನ್ನಡ ಒಕ್ಕೂಟಗಳಿರುವುದು ಕನ್ನಡಿಗರ ಶಕ್ತಿಯನ್ನು ತೋರಿಸುತ್ತದೆ. ಅಮೆರಿಕದಲ್ಲಿಯೇ ಅತಿಹೆಚ್ಚು ಕನ್ನಡ ಸಂಘಟನೆಗಳಿದ್ದು, ಬಳಿಕ ಯುರೋಪ್‌ನಲ್ಲಿ ಹೆಚ್ಚು ಸಂಘಟನೆಗಳಿವೆ. ಕ್ಯಾಲಿಫೋರ್ನಿಯಾದಲ್ಲಿ 1973ರಲ್ಲಿ ಆರಂಭವಾದ ಕರ್ನಾಟಕ ಸಾಂಸ್ಕೃತಿಕ ಸಂಘ ಕನ್ನಡದ ಎಲ್ಲ ಒಕ್ಕೂಟಗಳಿಗೆ ಹಿರಿಯಣ್ಣನಂತೆ ಎಂದರೆ ತಪ್ಪಾಗುವುದಿಲ್ಲ. 70ನೇ ಕರ್ನಾಟಕ ರಾಜ್ಯೋತ್ಸವದ ಈ ಸಮಯದಲ್ಲಿ ವಿದೇಶಿ ನೆಲದಲ್ಲಿ ಕನ್ನಡ ಸೇವೆಯಲ್ಲಿ ತೊಡಗಿರುವ ಸಂಘಟನೆಗಳ ಮಾಹಿತಿ ಇಲ್ಲಿದೆ.

ಕನ್ನಡ ಸಂಘ ಟೊರಾಂಟೊ, ಕೆನಡಾ

ಕೆನಡಾಗೆ ಬಂದರೂ ಎಂದೆದಿಗೂ ಕನ್ನಡಿಗರಾಗಿಯೇ ಉಳಿಯುವ, ಬೆಳೆಯುವ ಕನಸು ಹೊತ್ತು, 1960ರ ದಶಕದಲ್ಲಿ ಒಂದು ಚಿಕ್ಕ ಮನೆಯ ಬೇಸ್ ಮೆಂಟ್‌ನಲ್ಲಿ ಒಂದಿಬ್ಬರು ಕನ್ನಡಿಗರ ಒಡನಾಟದಲ್ಲಿ ಪ್ರಾರಂಭವಾದ ಈ ಕನಸಿಗೆ, ಒಂದು ರೂಪ ಬರಲು ಮತ್ತೊಂದು ದಶಕವೇ ಆಯಿತು.

ಆ ಕನಸು ನನಸಾದ ದಿನ 8 ಜುಲೈ 1973. ಅಂದು ಗಣೇಶನನ್ನು ಪೂಜಿಸಿ, ಕನ್ನಡಿಗರ ಒಡನಾಟಕ್ಕೆ ಕನ್ನಡ ಸಂಘ ಟೊರಾಂಟೊ ಎಂದು ಹೆಸರು ಇಡಲಾಯಿತು. ಮುಂದೆ 22 ಜುಲೈ 1973 ರಂದು, ಲಾಭರಹಿತ ಸಂಸ್ಥೆಯಾಗಿ ಅಧಿಕೃತವಾಗಿ ಸ್ಥಾಪಿತವಾಯಿತು. ಅಂದಿನಿಂದ, ಕೆನಡಾ ಕನ್ನಡಿಗರ, ಮನದ ಮನೆಯಾಗಿ ಬೆಳೆಯುತ್ತಿದೆ, ಬೆಳಗುತ್ತಿದೆ. ಕಳೆದ 50 ವರ್ಷಗಳಿಂದ ನಿರಂತರವಾಗಿ ನಡೆದು ಬರುತ್ತಿವೆ. ನೂರಾರು ಕನ್ನಡಿಗರನ್ನು ಒಟ್ಟುಗೂಡಿಸುತ್ತ ನಲಿಸಿವೆ, ಬೆಳೆಸಿವೆ. 10-15 ಕುಟುಂಬಗಳು ಸೇರಿ ಶುರು ಮಾಡಿದ ನಮ್ಮ ಸಂಘದಲ್ಲಿ, ಈ ವರ್ಷ 800ಕ್ಕೂ ಹೆಚ್ಚು ಕನ್ನಡ ಕುಟುಂಬಗಳು ಸಂಭ್ರಮದಿಂದ ಭಾಗವಹಿಸುತ್ತಿವೆ. ದೀಪಾವಳಿಯನ್ನು ಬಿಂಬಿಸುವ 'ನಾಡ ಹಬ್ಬ', ಹಿರಿಯರಿಗಾಗಿ 'ಸುವರ್ಣ ಕನ್ನಡಿಗರ ದಿನ', ಹೊಸದಾಗಿ ಬಂದವರಿಗಾಗಿ ನವಕನ್ನಡಿಗರ ದಿನ', ಸಂಘದ ಮಕ್ಕಳು / ಯುವಕರು ನಡೆಸುವ 'ಸಾಂಸ್ಕೃತಿಕ ದಿನ', ಸಂಭ್ರಮದ ಹಿರೀ ಹಬ್ಬ 'ಯುಗಾದಿ', ನಮ್ಮ ಹೆಮ್ಮೆಯ ಕನ್ನಡ ಕಲಿಕೆ ಶಾಲೆ ವಾರ್ಷಿ ಕೋತ್ಸವ, ಆಟೋಟ ದಿನ, ಪಗಡೆ, ಚೌಕಾಬಾರ, ಚದುರಂಗ, ಇತ್ಯಾದಿ, ವರ್ಷ ಸಂಪನ್ನವಾಗಲು – ನಿಸರ್ಗದ ಮಡಿಲಲ್ಲಿ ಪಿಕ್‌ನಿಕ್ ಮಾಡಲಾಗುತ್ತದೆ. ಕಲಿಯ ಬಯಸುವ ಮಕ್ಕಳು ಮತ್ತು ಹಿರಿಯರಿಗಾಗಿ ಸಂಘದ ಶಾಲೆಯಲ್ಲಿ 25 ಸ್ವಯಂ-ಸೇವಕ ಉಪಧ್ಯಾಯರುಗಳು ಕನ್ನಡ ಕಲಿಸುತ್ತಿದ್ದಾರೆ. ಟೊರಾಂಟೊ ಮಾತ್ರವಲ್ಲದೆ ಕೆನಡಾದ ಇತರ ಪ್ರಾಂತ್ಯ ಗಳಿಂದಲೂ ಮತ್ತು ಅಮೆರಿಕದಿಂದಲೂ, ಒಟ್ಟು 41 ಪಟ್ಟಣಗಳಿಂದ, 200ಕ್ಕೂ ಹೆಚ್ಚು ಮಕ್ಕಳು ನಮ್ಮ ಶಾಲೆಯಲ್ಲಿ ಕಲಿ ಯುತ್ತಿದ್ದಾರೆ. ಸಂಘದ ವತಿಯಿಂದ ಆಹಾರ ದಾನ, ರಕ್ತ ದಾನ, ಹಸಿರು ಕ್ರಾಂತಿ ಗಿಡ-ಮರ ನೆಡುವುದು, ಆರಂ ಭಿಕ ನೌಕರಿ ಸಹಾಯ, ವಿದ್ಯಾರ್ಥಿಗಳಿಗೆ ಸಾಂಧರ್ಭಿಕ ಸಲಹೆ ಸಹಾಯ, ಮುಂತಾದ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಸಂಘ ಸಕ್ರಿಯವಾಗಿ ಭಾಗವಹಿಸುತ್ತದೆ. ತನ್ನ ಯಶಸ್ವೀ ಕಾರ್ಯಕ್ರಮಗಳ ಮೂಲಕ ನಮ್ಮ ಕನ್ನಡ ಸಂಘವು ಬೃಹತ್ ಟೊರೊಂಟೊ ಪ್ರದೇಶದಲ್ಲಿ, ಬಹಳ ಗೌರವದ ಸ್ಥಾನ ಪಡೆದಿದೆ. ಕೆನಡಾದ ಇನ್ನಿತರ ಸಹೋದರ ಕನ್ನಡ ಸಂಘಗಳಿಗೆ ಮಾದರಿಯಾಗಿದೆ.

ಕುವೆಂಪು ಕನ್ನಡ ಸಂಘ, ಸ್ಯಾನ್ ಅಂಟೋನಿಯೋ, ಟೆಕ್ಸಾಸ್

ಬೆಂಕಿ ಬಸಣ್ಣ, ನ್ಯೂಯಾರ್ಕ್

ಅಮೆರಿಕ ದೇಶದ ಟೆಕ್ಸಾಸ್ ರಾಜ್ಯದಲ್ಲಿರುವ ಸ್ಯಾನ್ ಅಂಟೋನಿಯೋ ನಗರದ ಕುವೆಂಪು ಕನ್ನಡ ಸಂಘ 1989ರಲ್ಲಿ ಸ್ಥಾಪನೆಗೊಂಡಿತು. 80 ದಶಕದ ಕೊನೆಯಲ್ಲಿ ದಕ್ಷಿಣ ಟೆಕ್ಸಾಸ್‌ನಲ್ಲಿ ಇದ್ದದ್ದು ಬೆರಳೆಣಿಕೆಯಷ್ಟು ಕನ್ನಡಿಗರು ಮಾತ್ರ. ಆ ಭಾಗದ ಪ್ರಮುಖ ನಗರವಾದ ಸ್ಯಾನ್ ಅಂಟೋನಿಯೋನಲ್ಲಿ ವಾಸವಾಗಿದ್ದ ಕೆಲವು ಕನ್ನಡ ಮಾತನಾಡುವ ಕುಟುಂಬಗಳು ಒಟ್ಟಾಗಿ ಸೇರಿ ಯುಗಾದಿ, ಸಂಕ್ರಾಂತಿ, ದೀಪಾವಳಿ ಮತ್ತು ದಸರಾ ಹಬ್ಬಗಳನ್ನು ಆಚರಿಸಲು ಪ್ರಾರಂಭಿಸಿದರು. ಈ ರೀತಿಯಾಗಿ ಹಬ್ಬಗಳನ್ನು ಒಟ್ಟಾಗಿ ಆಚರಿಸುವುದೇ ಕನ್ನಡ ಸಂಘಕ್ಕೆ ನಾಂದಿಯಾಯಿತು. ಸಂಘ ಪ್ರಾರಂಭಗೊಂಡ ಕೆಲವು ದಿನಗಳಲ್ಲಿ ಸಂಸ್ಥಾಪಕರಾದ ಡಾ. ಹಳೇಕೋಟೆ ಕುಮಾರ ಮತ್ತು ಅವರ ಪರಿವಾರದವರು ರಾಷ್ಟ್ರಕವಿ ಕುವೆಂಪು ಅವರನ್ನು ಅವರ ಮೈಸೂರಿನ ನಿವಾಸದಲ್ಲಿ ಭೇಟಿ ಮಾಡಿ ಬಿನ್ನವತ್ತಳೆಯನ್ನ ಪ್ರಸ್ತುತ ಪಡಿಸಿದರು. ರಾಷ್ಟ್ರಕವಿ ಕುವೆಂಪು ಅವರ ಆಶೀರ್ವಾದದಿಂದ ಪ್ರಾರಂಭಗೊಂಡ ಈ ಸಂಘಕ್ಕೆ ಕುವೆಂಪು ಕನ್ನಡ ಸಂಘ ಅಂತ ಹೆಸರಿಡಲಾಯಿತು.

ಪ್ರಾರಂಭದ ದಿನಗಳಲ್ಲಿ ಹಬ್ಬಗಳನ್ನು ಆಚರಿಸಿ, ಕನ್ನಡದಲ್ಲಿ ಮಾತನಾಡಿ, ಹಾಡುಗಳನ್ನು ಹೇಳಿ, ಕರ್ನಾಟಕದ ತಿಂಡಿ ತಿನಿಸುಗಳನ್ನು ಆಸ್ವಾದಿಸುವ ಅವಕಾಶಗಳನ್ನು ಕಲ್ಪಿಸಿಕೊಡುತ್ತಿದ್ದ ಸಂಘ, ಕ್ರಮೇಣವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳು, ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ, ನೃತ್ಯ, ನಾಟಕಗಳಿಗೆ ವೇದಿಕೆಯಾಯಿತು. ಸುತ್ತಮುತ್ತಲಿನ ಕನ್ನಡಿಗರಿಗೆ ಕನ್ನಡ ನಾಡು, ನುಡಿ, ಕಲೆ, ಸಂಸ್ಕೃತಿಗಳನ್ನು ಮೆರೆಯಲು ಮತ್ತು ಹಂಚಿಕೊಳ್ಳಲು ಒಂದು ಸದೃಢ ಸ್ತಂಭವಾಯಿತು. ಈಗ 36 ವರ್ಷಕ್ಕೆ ಕಾಲಿಟ್ಟಿರುವ ಕುವೆಂಪು ಕನ್ನಡ ಸಂಘ ವರ್ಷಕ್ಕೆ ನಾಲ್ಕು ಪ್ರಮುಖ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ.

ಸಂಕ್ರಾಂತಿ, ಯುಗಾದಿ ಹಬ್ಬಗಳನ್ನು ಸಾಂಸ್ಕೃತಿಕ ಸಂಜೆಗಳ ಮೂಲಕ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಜನರ ಮನೋರಂಜನೆಗಾಗಿ ವೈವಿಧ್ಯಮಯ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತವೆ. ಸಾಂಪ್ರದಾಯಿಕ ಚಟುವಟಿಕೆಗಳಾದ ರಂಗೋಲಿ, ಗಾಳಿಪಟ ಹಾರಿಸುವುದರ ಜೊತೆಗೆ ಹೋಳಿಗೆ, ಹೋಳಿಗೆ ಸಾರು, ಸಕ್ಕರೆ ಪೊಂಗಲ್, ಹುಗ್ಗಿ, ಎಳ್ಳು ಬೆಲ್ಲ, ಬೇವು ಬೆಲ್ಲಗಳನ್ನು ಕೂಡಿದ ವಿಶೇಷ ತಿಂಡಿಗಳೂ ಇರುತ್ತವೆ. ಪುರಂದರೋತ್ಸವ ಕಾರ್ಯಕ್ರಮಕ್ಕೆ ಪ್ರವೇಶ ಶುಲ್ಕವಿರುವುದಿಲ್ಲ. ಆಸಕ್ತರೆಲ್ಲರೂ ಉಚಿತವಾಗಿ ಬಂದು ಪುರಂದರದಾಸರ ಕೀರ್ತನೆಗಳನ್ನು ಹಾಡಿನ ಮತ್ತು ನೃತ್ಯಗಳ ಮೂಲಕ ಆಸ್ವಾದಿಸಬಹುದು. ಭಾರತದ ಪ್ರಾದೇಶಿಕ ಹಾಗೂ ಭಾಷಾವಾರು ಸಂಘಸಂಸ್ಥೆಗಳು ಮತ್ತು ಟೆಕ್ಸಾಸ್ ರಾಜ್ಯದ ಪ್ರಮುಖ ನಗರಗಳ ಕಲಾವಿದರು ಇದರಲ್ಲಿ ಪಾಲ್ಗೊಳ್ಳುತ್ತಾರೆ. ಕರ್ನಾಟಕ ಸಂಗೀತದ ಪಿತಾಮಹರಾದ ಪುರಂದರದಾಸರನ್ನ ಸ್ಮರಣೆ ಮಾಡಿ ಅವರ ಕೃತಿಗಳನ್ನ ಆರಾಧಿಸುವ ವಿಶೇಷ ಹಬ್ಬವಿದು.

ಕರ್ನಾಟಕದ ಮೂಲದ ಅಮೆರಿಕದ ಮಕ್ಕಳಿಗೆ ಪಾಠಶಾಲೆಯ ಮುಖಾಂತರ ಮಕ್ಕಳಿಗೆ ಕನ್ನಡವನ್ನು ಹೇಳಿಕೊಡಲಾಗುತ್ತಿದೆ. ಮಕ್ಕಳಿಗೆ ನಮ್ಮ ಇತಿಹಾಸ, ಭಾಷೆ, ಮತ್ತು ಸಂಸ್ಕೃತಿಯ ಮೇಲೆ ಅಕ್ಕರೆ ಹೆಚ್ಚಿಸುವ ವಾತಾವರಣವನ್ನ ನಿರ್ಮಿಸುತ್ತಿದೆ. ಕರುನಾಡಿನಲ್ಲಿ ವಾಸಿಸುತ್ತಿರುವ ಅಜ್ಜ ಅಜ್ಜಿಗಳೊಂದಿಗೆ ಮಕ್ಕಳು ಕನ್ನಡದಲ್ಲಿ ಮಾತನಾಡುವುದನ್ನು ಕೇಳುವುದು ಬಲು ಸೊಗಸು! ಪಾಠಶಾಲೆಯ ವಿದ್ಯಾರ್ಥಿಗಳು ಅನೇಕ ಬಹುಳ-ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಇತಿಹಾಸದ ಬಗ್ಗೆ ಭಿತ್ತಿಪತ್ರಗಳು, ಛಾಯಾಚಿತ್ರಗಳನ್ನ ಪ್ರಸ್ತುತಪಡಿಸಿ ಇಲ್ಲಿನ ಸಮಾಜಕ್ಕೆ ಕನ್ನಡ ನಾಡಿನ ರಾಯಭಾರಿಗಳಾಗಿ ಹೊಮ್ಮಿದ್ದಾರೆ.

ಸಹ್ಯಾದ್ರಿ ಕನ್ನಡ ಸಂಘ, ಸಿಯಾಟಲ್

ವಾಷಿಂಗ್ಟನ್ ರಾಜ್ಯದ ಕನ್ನಡಿಗರನ್ನು ಬೆಸೆಯಲು 2003ರಲ್ಲಿ ಸ್ಥಾಪಿತವಾದ ಸಹ್ಯಾದ್ರಿ ಕನ್ನಡ ಸಂಘ, ಸಿಯಾಟಲ್ ಒಂದು ಲಾಭರಹಿತ ಸಂಸ್ಥೆಯಾಗಿದ್ದು, ಸಿಯಾಟಲ್ ಮತ್ತು ಸುತ್ತಮುತ್ತಲಿನ ಕನ್ನಡ ಮಾತನಾಡುವ ಸಮುದಾಯಕ್ಕೆ ಸಾಂಸ್ಕೃತಿಕ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತದೆ. ಕರ್ನಾಟಕದ ಶ್ರೀಮಂತ ಪರಂಪರೆ, ಭಾಷೆ ಮತ್ತು ಸಂಪ್ರದಾಯಗಳನ್ನು ಉತ್ತೇಜಿಸುವುದು ಮತ್ತು ಸಂರಕ್ಷಿಸುವುದು, ಈ ಪ್ರದೇಶದಲ್ಲಿ ಕನ್ನಡಿಗರ ನಡುವೆ ಏಕತೆ ಮತ್ತು ಸಾಂಸ್ಕೃತಿಕ ಬಾಂಧವ್ಯವನ್ನು ಬೆಳೆಸುವುದು ಇದರ ಉದ್ದೇಶವಾಗಿದೆ. ಸಂಸ್ಥೆಯು ನೂರಾರು ದಾನಿಗಳು ಹಾಗೂ ಸ್ವಯಂ ಸೇವಕರನ್ನು ಅವಲಂಬಿಸಿದೆ.

ಯುಗಾದಿ, ದೀಪಾವಳಿ ಮತ್ತು ರಾಜ್ಯೋತ್ಸವದಂತಹ ಸಾಂಪ್ರದಾಯಿಕ ಆಚರಣೆಗಳನ್ನು ಆಯೋಜಿಸುತ್ತದೆ. ಸ್ಥಳೀಯ ಮತ್ತು ಅಂತಾರಾಷ್ಟ್ರೀಯ ಕಲಾವಿದರನ್ನು ಒಳಗೊಂಡ ಸಂಗೀತ ಮತ್ತು ನೃತ್ಯ ಪ್ರದರ್ಶನಗಳು, ನಾಟಕಗಳು ಮತ್ತು ಸಾಹಿತ್ಯಕ ಚಟುವಟಿಕೆಗಳನ್ನು ಆಯೋಜಿಸುತ್ತದೆ. ಕರ್ನಾಟಕದ ಸಂಸ್ಕೃತಿಯನ್ನು ರೋಮಾಂಚಕವಾಗಿಡಲು ಜಾನಪದ ಮತ್ತು ಶಾಸ್ತ್ರೀಯ ಕಲೆಗಳಲ್ಲಿ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುತ್ತದೆ. ಪ್ರತಿವರ್ಷ ವಾಷಿಂಗ್ಟನ್ ರಾಜ್ಯದ ಸಾಧಕ ಕನ್ನಡಿತಿಯೊಬ್ಬರಿಗೆ ವರ್ಷದ ವಾಷಿಂಗ್ಟನ್ ಕನ್ನಡತಿ ಎನ್ನುವ ಪ್ರಶಸ್ತಿ ನೀಡಲಾಗುತ್ತಿದೆ. ಇದರೊಂದಿಗೆ 2023ರಿಂದ ಪ್ರತಿಷ್ಠಿತ ವಿಶ್ವ ಶ್ರೇಷ್ಠ ಕನ್ನಡಿಗ ಪ್ರಶಸ್ತಿ ನೀಡಲಾಗುತ್ತಿದೆ.

ರಿಚ್ಮಂಡ್ ಕನ್ನಡ ಸಂಘ, ವರ್ಜೀನಿಯಾ, ಅಮೆರಿಕ

ಉತ್ತರ ಅಮೆರಿಕದ ಪೂರ್ವ ಭಾಗದ ವರ್ಜೀನಿಯಾ ರಾಜ್ಯದ ರಾಜಧಾನಿ ನಗರವಾದ ರಿಚ್ಮಂಡ್ ನಗರದಲ್ಲಿನ ಕನ್ನಡಿಗ ಸಂಸಾರಗಳು ಒಟ್ಟು ಮನಸ್ಸಿನಿಂದ ಹುಟ್ಟು ಹಾಕಿದ ಸಂಸ್ಥೆಯ ಹೆಸರು ರಿಚ್ಮಂಡ್ ಕನ್ನಡ ಸಂಘ. ಸುಮಾರು 1970 – 80ರ ದಶಕದಲ್ಲಿ ಕನ್ನಡಿಗರ ಸಂಸಾರಗಳು ರಿಚ್ಮಂಡ್ ನಗರಕ್ಕೆ ವಲಸೆ ಬಂದವು. ಇದರಲ್ಲಿ ಮುಖ್ಯವಾಗಿ ಶರತ್ ಚಂದ್ರ, ಡಾ. ವಿಜಯ ರಾಘವನ್ , ಮುದ್ದಪ್ಪರಂಗಪ್ಪ, ನಂಜುಂಡ ರಾಮ್, ಈಶ್ವರ್ ರಾಜು, ಗೋಪಾಲ ಕೃಷ್ಣ, ಗಂಗಾಧರಮೂರ್ತಿ, ಹನುಮಯ್ಯ ಗೌಡ, ಡಾ. ಅಶೋಕ್ ಕುಮಾರ್, ಡಾ. ಪ್ರಕಾಶ್ ಇಟಿಗಿ, ಡಾ. ಜಿ.ಎಸ್.ಮೂರ್ತಿ ಕುಟುಂಬದವರುಗಳು ಕನ್ನಡ ಜಾಗೃತಿಯನ್ನು ಬೆಳೆಸಲು ಮುಂಚೂಣಿಯಲ್ಲಿದ್ದವರು. ಈ ಕುಟುಂಬಗಳು ರಿಚ್ಮಂಡ್ ಕನ್ನಡ ಸಂಘವನ್ನು ಅಧಿಕೃತವಾಗಿ ಸ್ಥಾಪಿಸುವ ಮುಂಚಿನಿಂದಲೂ ವಾರಾಂತ್ಯದಲ್ಲಿಯೋ ಅಥವಾ ಹಬ್ಬ ಹರಿದಿನಗಳಲ್ಲಿ ಒಟ್ಟಾಗಿ ಸೇರಿ ಕನ್ನಡ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿವೆ. ರಿಚ್ಮಂಡ್ ಕನ್ನಡ ಸಂಘವು 2000ನೇ ಇಸವಿಯಲ್ಲಿ ಅಧಿಕೃತವಾಗಿ ನೊಂದಣಿಯಾಗಿದ್ದು, ದಿನದಿಂದ ದಿನಕ್ಕೆ ಬೆಳೆ ಯುತ್ತಿದೆ. ಅಂಕಿ ಅಂಶದ ಪ್ರಕಾರ ಕನ್ನಡ ಸಂಘವು ಕನಿಷ್ಟ ಮುನ್ನೂರು ಕನ್ನಡಿಗರ ಸಂಸಾರಗಳನ್ನು ಸದಸ್ಯರನ್ನಾಗಿ ಹೊಂದಿದೆ. ಸ್ಥಳೀಯ ದೇವಸ್ಥಾನವನ್ನು ಬೆಂಬಲಿಸುವ ಉದ್ದೇಶ ದಿಂದ ಹಲವಾರು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿ ಸುವಿಕೆ, ಭಾರತೀಯ ಸಂಸ್ಕೃತಿಯನ್ನು ಉಳಿಸುವಲ್ಲಿ ಕರ್ನಾಟಕವನ್ನು ಪ್ರತಿನಿಧಿಸುವ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿಕೆಯೇ ಮೊದಲಾದವುಗಳಲ್ಲೂ ಸಂಘವು ಸಕ್ರಿಯ ಪಾತ್ರವಹಿಸಿದೆ. ಭಾಷೆಯನ್ನು ಬೆಳೆಸುವ ದಿಶೆಯಲ್ಲಿ 'ಆಪ್ತಮಿತ್ರ', 'ಮತದಾನ', 'ಮುಂಗಾರು ಮಳೆ', 'ನಾನು ಗಾಂಧಿ', 'ಮಾತಾಡ್ ಮಾತಾಡ್ ಮಲ್ಲಿಗೆ', 'ರಂಗಿತರಂಗ', 'ಗಂಧದ ಗುಡಿ 2' ಮುಂತಾದ ಚಲನಚಿತ್ರಗಳನ್ನು ರಿಚ್ಮಂಡ್ ಕನ್ನಡಿಗರು ತೆರೆ ಮೇಲೆ ನೋಡುವ ಸೌಭಾಗ್ಯವನ್ನು ಒದಗಿಸಿತ್ತು. ಇದರೊಂದಿಗೆ ಚಿತ್ರರಂಗದ ಕಣ್ಮಣಿಗಳಾದ ಶ್ರೀನಾಥ್, ಗೀತಾ, ಸರಿತಾ, ಸರೋಜಾದೇವಿ, ನಂಜುಂಡೇಗೌಡ, ನಾಗತಿಹಳ್ಳಿ ಚಂದ್ರಶೇಖರ್, ಬಿ.ಕೆ. ಸುಮಿತ್ರ ಅವರುಗಳನ್ನು ಭೇಟಿ ಮಾಡಿಸುವುದರ ಮೂಲಕ ಚಿತ್ರರಂಗವನ್ನು ಪ್ರೋತ್ಸಾಹಿಸುವ ದಿಶೆಯಲ್ಲೂ ಹೆಜ್ಜೆ ಇಟ್ಟಿದೆ. ಇನ್ನು ಸಾಹಿತ್ಯ ಕ್ಷೇತ್ರದಲ್ಲಿ ಆಸಕ್ತರಾಗಿರುವವರಿಗಾಗಿ ಪ್ರೊ. ಕೃಷ್ಣಗೌಡರು, ಮೈಸೂರ್ ಆನಂದ್, ರಿಚರ್ಡ್ ಲೂಯಿಸ್, ಜರಗನಹಳ್ಳಿ ಶಿವಶಂಕರ್ ಸೇರಿದಂತೆ ಸಾಹಿತ್ಯ ಕ್ಷೇತ್ರದ ಅನೇಕರನ್ನು ಸನ್ಮಾನಿಸಲಾಗಿದೆ.

ಈ ಹಿಂದೆ, 'ಕಲಿ-ನಲಿ' ಕಾರ್ಯಕ್ರಮದ ಮೂಲಕ ಸಂಘದ ಮಕ್ಕಳಿಗೆ ಕನ್ನಡ ಪಾಠ ಹೇಳಿಕೊಡುವ ಪ್ರಯತ್ನವನ್ನೂ ಮಾಡಲಾಗಿದೆ. ಸಂಘದಲ್ಲಿ ವೈದ್ಯರ ಜ್ಞಾನವನ್ನು ಬಳಸಿಕೊಂಡು ಜನರಲ್ಲಿ ಆರೋಗ್ಯದ ವಿಷಯದಲ್ಲಿ ಅರಿವು ಮೂಡಿಸುವ ಉತ್ತಮ ಪ್ರಯತ್ನವನ್ನೂ ಮಾಡಿದ್ದೇವೆ. 2019ರಲ್ಲಿ ಮತ್ತೊಮ್ಮೆ ಕನ್ನಡವನ್ನು ಕಲಿಸುವ ಒಂದು ಪ್ರಯತ್ನವನ್ನು ಮಾಡಲಾಗಿತ್ತು. ಕನ್ನಡ ಸಂಘದ ರಿಚ್ಮಂಡ್ ಕನ್ನಡ ಕಲಿ ಕನ್ನಡ ಭಾಷೆಯನ್ನು ಕಲಿಸುವ ಒಂದು ಸಂಸ್ಥೆ. ಆರು ವರ್ಷದಿಂದ ಯಶಸ್ವಿಯಾಗಿ ನಡೆದು ಬರುತ್ತಿರುವ ಈ ಸಂಸ್ಥೆಯು ಮೊದಲಿಗೆ 24 ವಿದ್ಯಾರ್ಥಿಗಳಿಂದ ಪ್ರಾರಂಭವಾಗಿ ಈಗ 50 ವಿದ್ಯಾರ್ಥಿಗಳನ್ನು ಮತ್ತು 15 ಶಿಕ್ಷಕರನ್ನು ಹೊಂದಿರುವ ಸಂಸ್ಥೆಯಾಗಿ ಬೆಳೆದಿದೆ.

ವಿಶ್ವವಾಣಿ @vishwavaninews
ಆರಾಮ
ಬೆಂಗಳೂರು
10-11-2025
ಸೋಮವಾರ
ಅನುದಿನವೂ ವಿರಾಮಕ್ಕೆ ಒಂದು ನೆಪ

ಮೇಘಾಲಯದ ವಿಸ್ಮಯಕರ ಜೀವಂತ ಬೇರು ಸೇತುವೆಗಳು!

● ರಮಣ್ ಶೆಟ್ಟಿ ರೆಂಜಾಳ, ಮುಂಬಯಿ

ಮೇಘಾಲಯದ ರಾಜಧಾನಿ ಶಿಲ್ಲಾಂಗ್ ಅನ್ನು 'ಭಾರತದ ಪರ್ವತಗಳ ನಿವಾಸ' ಎಂದು ಕರೆಯಲಾಗುತ್ತದೆ. ಈ ಪ್ರದೇಶವು ತನ್ನ ಹವಾಮಾನ, ಹಚ್ಚ ಹಸಿರಿನ ವಾತಾವರಣ ಮತ್ತು ಅನನ್ಯ ಪ್ರಕೃತಿ ಕೌಶಲಗಳಿಗಾಗಿ ಪ್ರಸಿದ್ಧವಾಗಿದೆ. ಇಲ್ಲಿ ಕಾಣಸಿಗುವ 'ಜೀವಂತ ಬೇರು ಸೇತುವೆಗಳು' (ಲಿವಿಂಗ್ ರೂಟ್ ಬ್ರಿಡ್ಜಸ್) ಪ್ರಪಂಚದ ಅತ್ಯಂತ ಅಚ್ಚರಿಯ ಪ್ರಾಕೃತಿಕ ವಿಸ್ಮಯಗಳಲ್ಲೊಂದೆನಿಸಿವೆ. ಇವು ಜೀವಂತ ಮರದ ಬೇರುಗಳಿಂದ ನಿರ್ಮಿತವಾಗಿರುವ ನೈಸರ್ಗಿಕ ಸೇತುವೆಗಳಾಗಿವೆ. ಮುಖ್ಯವಾಗಿ ಮೇಘಾಲಯದ ಪೂರ್ವ ಖಾಸಿ ಹಿಲ್ಸ್ ಮತ್ತು ಪಶ್ಚಿಮ ಖಾಸಿ ಹಿಲ್ಸ್ ಭಾಗಗಳಲ್ಲಿ ಕಂಡುಬರುತ್ತವೆ. ಶಿಲ್ಲಾಂಗ್‌ಗೆ ಸಮೀಪದಲ್ಲಿರುವ ಚಿರಾಪುಂಜಿ ಮತ್ತು ಮಾವ್ಲಿನೊಂಗ್ ಪರಿಸರಗಳಲ್ಲಿ ಇವು ವಿಶೇಷವಾಗಿ ಪ್ರಸಿದ್ಧವಾಗಿವೆ.

ವಿಶಿಷ್ಟ ನಿರ್ಮಾಣತಂತ್ರ

ಇಲ್ಲಿನ 'ಫಿಕಸ್ ಎಲಾಸ್ಟಿಕಾ' ಎಂಬ ರಬ್ಬರ್ ಮರದ ಗಟ್ಟಿಯಾದ ಬೇರುಗಳನ್ನು ಸೇತುವೆ ನಿರ್ಮಾಣಕ್ಕೆ ಬಳಸಲಾಗುತ್ತದೆ. ಬೇರುಗಳನ್ನು ನದಿಗಳಲ್ಲಿ ಅಥವಾ ಕಣಿವೆಗಳಲ್ಲಿ ದಾಟಿಸಿ, ನದಿ ನೀರಿನಿಂದ ತೇವಭರಿತವಾಗಿರುವ ಹಳೆ ಬೇರುಗಳಲ್ಲಿ ಹಲವು ಹೊಸಬೇರುಗಳು ಚಿಗುರೊಡೆಯುವಂತಾಗಿಸಿ, ವರ್ಷಗಳ ಕಾಲ ಬಿದಿರು ಅಥವಾ ಮರದ ತಾತ್ಕಾಲಿಕ ಸಂಕೋಲೆಗಳ ಮೂಲಕ ಹಾಯಿಸಿ ಬೆಳೆಸಿ ಸೇತುವೆ ನಿರ್ಮಿಸಲು ಸೂಕ್ತವಾಗುವಂತೆ ತಯಾರು ಮಾಡಲಾಗುತ್ತದೆ.

ಈ ಪ್ರಕ್ರಿಯೆ ಸುಮಾರು15-30 ವರ್ಷಗಳ ಕಾಲ ನಡೆಯುತ್ತದೆ. ಈ ಸೇತುವೆಗಳು ಸಾಮಾನ್ಯವಾಗಿ 8 ಅಡಿ ಅಗಲ ಮತ್ತು 70 ಅಡಿಗಳಷ್ಟು ಉದ್ದವಾಗಿರುತ್ತವೆ. ಸ್ಥಳೀಯ ಖಾಸಿ ಮತ್ತು ಜೈಂತಿಯಾ ಬುಡಕಟ್ಟು ಜನಾಂಗದ ಜನರು ಕೌಶಲಪೂರ್ಣವಾದ ಈ ಪರಿಸರ-ಸ್ನೇಹಿ ಸೇತುವೆ ನಿರ್ಮಾಣ ತಂತ್ರವನ್ನು ಶತಮಾನಗಳಿಂದ (ಕೃತಕ ನಿರ್ಮಾಣ ಸಾಧನಗಳು ಉಪಲಬ್ಧವಿಲ್ಲದ ಕಾಲದಿಂದಲೂ) ಬಳಸಿಕೊಂಡು ಬರುತ್ತಿದ್ದು ಇದು ಪರಂಪರಾಗತ ತಂತ್ರಜ್ಞಾನವೆನಿಸಿದೆ. 'ಜಿಂಗ್ ಕೀಂಗ್ ಜ್ರಿ' ಎಂದು ಸ್ಥಳೀಯವಾಗಿ ಕರೆಯಲ್ಪಡುವ ಈ ಸೇತುವೆಗಳು ನೂರಾರು ವರ್ಷಗಳವರೆಗೆ ಬಾಳಿಕೆ ಬರಬಲ್ಲವಾಗಿದ್ದು ಬೇರುಗಳು ಬೆಳೆಯುತ್ತಾ ಹೋದಂತೆ ಸೇತುವೆಯೂ ಬಲಿಷ್ಠವಾಗುತ್ತಿರುತ್ತದೆ.

ಕಡಿಮೆ ಖರ್ಚು, ಅಗಾಧ ಶಕ್ತಿ

ನಿರ್ಮಾಣದ ಮೊದಲ ಹಂತದಲ್ಲಿ, ನದಿಯ ಎರಡೂ ದಡಗಳ ಮೇಲೆ ಸೂಕ್ತ ರಬ್ಬರ್ ಮರದ ಸಸಿಗಳನ್ನು ನೆಟ್ಟು ಬಲಿಷ್ಠ ಕಾಂಡದ ವೃಕ್ಷಗಳನ್ನು ಬೆಳೆಸಲಾಗುತ್ತದೆ. 15-30 ವರ್ಷಗಳ ಅವಧಿಯಲ್ಲಿ ಸ್ಥಳೀಯ ಜನಾಂಗದವರು ಇವುಗಳ ಬೇರುಗಳನ್ನು, ಮೇಲೆ ನಮೂದಿಸಿದ ರೀತಿಯಲ್ಲಿ ಹೆಣೆದು ನದಿಗಳ ಮೇಲೆ ಸೇತುವೆ ನಿರ್ಮಿಸುತ್ತಾರೆ. ಈ ಪ್ರದೇಶದ ತೇವಾಂಶಭರಿತ ಹವಾಮಾನದೊಂದಿಗೆ ಮಾನವ ಸಂಚಾರದ ಪಾದ ತುಳಿತದಿಂದ ಬೇರುಗಳ ಮೇಲೆ ಮಣ್ಣು ಗಟ್ಟಿಗೊಂಡು ಸೇತುವೆ ದಪ್ಪವೂ ಸುದೃಢವೂ ಆಗುತ್ತದೆ. ಇವು ಒಮ್ಮೆಗೆ ಸುಮಾರು 35 ಜನರು ಸಂಚರಿಸಬಹುದಾದಷ್ಟು ಗಟ್ಟಿ ಮುಟ್ಟಾಗಿರುತ್ತವೆ. ಕಾಲ ಸಂದಂತೆ ಸಿಮೆಂಟ್-ಕಾಂಕ್ರೀಟ್ ದುರ್ಬಲಗೊಳ್ಳುತ್ತದೆ. ಆದರೆ ಈ ನೈಸರ್ಗಿಕ ಸೇತುವೆಗಳು ಮರಗಳಿರುವ ವರೆಗೂ ವಿಲೋಮಾನುಪಾತದಲ್ಲಿ ಸುದೃಢವಾಗುತ್ತಾ ಹೋಗುತ್ತವೆ; ಈಶಾನ್ಯ ಭಾರತದ ಹಠಾತ್ ನೆರೆ ಹಾಗೂ ಭೀಕರ ಬಿರುಗಾಳಿಯನ್ನು ತಡೆಯುವ ಶಕ್ತಿ ಪಡೆದು ಕಡಿಮೆ ಖರ್ಚಿನಲ್ಲಿ ಪರ್ವತ ಹಾಗೂ ಕಣಿವೆ ಪ್ರದೇಶಗಳಿಗೆ ದೀರ್ಘಕಾಲೀನ ಸಂಪರ್ಕ ಸಾಧಿಸುತ್ತವೆ!

ಚಿರಾಪುಂಜಿ ಸೂಕ್ತ

ಜಗತ್ತಿನಲ್ಲಿ ಅತಿ ಹೆಚ್ಚು ಮಳೆಯಾಗುವ ಚಿರಾಪುಂಜಿಯಂಥ ಮಳೆಭರಿತ ಪರಿಸರವು ಇಂಥ ಸೇತುವೆಗಳ ಬೆಳವಣಿಗೆಗೆ ಅತ್ಯಂತ ಸೂಕ್ತವಾಗಿದೆ. ಚಿರಾಪುಂಜಿ ಸಮೀಪದ 'ನಾಂಗ್ರಿಯಾಟ್' ಎಂಬ ಗ್ರಾಮದಲ್ಲಿ ಎರಡು ಹಂತಗಳಲ್ಲಿ ನಿರ್ಮಿತವಾದ ಜೀವಂತ ಸೇತುವೆ ಅಸ್ತಿತ್ವದಲ್ಲಿದ್ದು ಇದು 'ಡಬಲ್ ಡೆಕ್ಕರ್ ಲಿವಿಂಗ್ ರೂಟ್ ಬ್ರಿಡ್ಜ್' ಎಂದು ಪ್ರವಾಸಿಗರಲ್ಲಿ ಅತ್ಯಂತ ಜನಪ್ರಿಯವೆನಿಸಿದೆ. 'ಉಂಶಿಯಾಂಗ್ ಡಬಲ್ ಡೆಕ್ಕರ್ ಬ್ರಿಡ್ಜ್' ಎಂಬ ನಾಮಾಂಕಿತದ ಸದರಿ ಸೇತುವೆ ಸುಮಾರು100 ಅಡಿಗಳಷ್ಟು ಉದ್ದವಿದ್ದು 180 ವರ್ಷಗಳ ಇತಿಹಾಸವನ್ನು ಹೊಂದಿದೆ. ಇದನ್ನು ತಲುಪಲು ಸುಮಾರು 2,400 ಅಡಿ ಇಳಿಜಾರಿನ ಪಥವನ್ನು ಹಾದುಸಾಗಬೇಕಾಗುತ್ತದೆ.

'ಮಾವ್ಕಿರ್ನಾಟ್ ಸೇತುವೆ' ಮೇಘಾಲಯದ ಅತಿ ಉದ್ದದ ಲಿವಿಂಗ್ ರೂಟ್ ಬ್ರಿಡ್ಜ್ ಆಗಿದ್ದು 175 ಅಡಿಗಳಷ್ಟು ಉದ್ದವಿದೆ. ಇದು ರಂಗ್ಥಿಲ್ಲಿಯಾಂಗ್ ಎಂಬಲ್ಲಿ ಅಸ್ತಿತ್ವದಲ್ಲಿದ್ದು ಶಿಲ್ಲಾಂಗ್‌ನಿಂದ ಸುಮಾರು 78 ಕಿ.ಮೀ. ದೂರದಲ್ಲಿದೆ. ಭಾರತದ ಅತಿ ಹೆಚ್ಚು ಸ್ವಚ್ಛ ಗ್ರಾಮವೆಂಬ ಖ್ಯಾತಿಗೆ ಭಾಜನವಾಗಿರುವ2 ಮಾವ್ಲಿನೋಂಗ್‌ನಲ್ಲೂ ಜೀವಂತ ಸೇತುವೆಗಳಿವೆ. ಇವು ಮಿಕ್ಕವುಗಳಿಗಿಂತ ಸುಲಭವಾಗಿ ಪ್ರವಾಸಿಗರು ಸಂದರ್ಶಿಸಬಹುದಾದ ಸ್ಥಳವಾಗಿವೆ.

ತಾಣದ ಮಹತ್ವ

ತಂತ್ರಜ್ಞಾನದ ನೈಸರ್ಗಿಕ ರೂಪ ಹಾಗೂ ಮಾನವನ ಜೈವಿಕ ಹಸ್ತಕ್ಷೇಪದ ಜೀವಂತ ಉದಾಹರಣೆಯಾಗಿರುವ ಇಂಥ ಪರಿಸರ-ಸ್ನೇಹಿ ಸಾಧನಗಳು ಇಂದಿನ ಕಾಲಕ್ಕೆ ಮಹತ್ವಪೂರ್ಣವಾಗಿವೆ. ಯುನೆಸ್ಕೋ ವಿಶ್ವ ಪರಂಪರೆಯ ತಾಣಗಳ ತಾತ್ಕಾಲಿಕ ಪಟ್ಟಿಗೆ ಸೇರಿರುವ ಈ ವಿಸ್ಮಯಕರ ಸೇತುವೆಗಳು ನಿಸರ್ಗದತ್ತ ಮತ್ತು ಸಾಂಸ್ಕೃತಿಕ ಆಸ್ತಿಯ ಮಹತ್ವವನ್ನು ಬಿಂಬಿಸುತ್ತವೆ. ಈ ಸೇತುವೆಗಳು ಕೇವಲ ಪ್ರವಾಸಿಗರ ಆಕರ್ಷಣೆಯಾಗುಳಿಯದೆ ಸ್ಥಳೀಯರ ದೈನಂದಿನ ಜೀವನದಲ್ಲಿ ಮಾನವ ಹಾಗೂ ಸರಕು ಸಾಗಣೆಯ ನಿಟ್ಟಿನಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಆದ್ದರಿಂದ ಇವುಗಳ ನಿರ್ವಹಣೆ ಮತ್ತು ಸಂರಕ್ಷಣೆಗೆ ಸ್ಥಳೀಯ ಸಮುದಾಯಗಳು ನಿರಂತರ ಪ್ರಯತ್ನಿಸುತ್ತಿವೆ.

ಚಾರಣದ ಪರಿ

ಈ ಸೇತುವೆಗಳನ್ನು ನೋಡಲು ಕಠಿಣವಾದ ಕಾಡುದಾರಿಯಲ್ಲಿ ನಡೆಯುತ್ತಾ ಚಾರಣ ಮಾಡಬೇಕಾಗುತ್ತದೆ. ಮಳೆಗಾಲದಲ್ಲಿ ರಸ್ತೆ ಜಾರುವ ಪ್ರಸಂಗಗಳು ಎದುರಾಗುವುದರಿಂದ ಜಾಗರೂಕರಾಗಿ ಸಾಗಬೇಕು. 'ನಾಂಗ್ ರಿಯಾಟ್'ನಲ್ಲಿರುವ 'ಡಬಲ್ ಡೆಕ್ಕರ್ ಲಿವಿಂಗ್ ರೂಟ್ ಸೇತುವೆ' ನೋಡಲು ಶಿಲ್ಲಾಂಗ್-ಚಿರಾಪುಂಜಿ ಹೆದ್ದಾರಿಯಲ್ಲಿ ಸಾಗುವಾಗ ಮೊಟ್ಟ ಮೊದಲು ಮ್ಯಾಕ್ಡಾಕ್ ಸೇತುವೆ ಕಾಣಸಿಗುತ್ತದೆ. ಪ್ರಶಾಂತ ವಾತಾವರಣವಿರುವ ಈ ಕಣಿವೆಯಲ್ಲಿ ಹಿಂದಿ ಚಲನಚಿತ್ರಗಳ ಚಿತ್ರೀಕರಣವೂ ನಡೆದಿದೆಯಂತೆ. ಸಣ್ಣ ಸರೋವರವೊಂದು ಇಲ್ಲಿದ್ದು ಪರಿಸರ ಸೌಂದರ್ಯ ಅಮೋಘವಾಗಿದೆ. ಇಲ್ಲಿಂದ ಚಿರಾಪುಂಜಿಯ ಬೆಟ್ಟಗಳ ವಿಹಂಗಮ ನೋಟ ನಿಚ್ಚಳವಾಗಿ ಗೋಚರಿಸುತ್ತದೆ. ಮುಂದೆ ಸಾಗುತ್ತಾ ಸೊಹ್ರಾ ಎಂಬಲ್ಲಿ ಎರಡು ಹಂತಗಳಲ್ಲಿ ನೂರಾರು ಮೀಟರ್‌ಗಳಷ್ಟು ಕೆಳಗೆ ಕಡಿದಾದ ಬಂಡೆಯ ಮೇಲಿಂದ ಧುಮ್ಮಿಕ್ಕುವ ಜಲಪಾತವೊಂದನ್ನು ಕಾಣಬಹುದು. ಇದುವೇ ರೋಮಾಂಚಕಾರಿ 'ವಾ ಕಾಬಾ ಜಲಪಾತ'. ಮುಂದಕ್ಕೆ ಚಿರಾಪುಂಜಿಯ ನಂತರ ಸಿಗುವ ಪೂರ್ವ ಖಾಸಿ ಬೆಟ್ಟಗಳ ದಟ್ಟ ಕಾನನದ ನಡುವೆ ನೊಂಗ್ರಿಯಾಟ್ ಗ್ರಾಮದಿಂದ ಸೇತುವೆಯತ್ತ ದಾರಿ ಆರಂಭವಾಗುತ್ತದೆ. ಇಲ್ಲಿಂದ ಕಡಿದಾದ ಇಳಿಜಾರುಗಳಲ್ಲಿ 3-4 ಸಾವಿರ ಮೆಟ್ಟಿಲುಗಳನ್ನು ಸುಮಾರು 2-3 ಗಂಟೆಗಳಲ್ಲಿ ಇಳಿದು ತಿರ್ನಾ ಗ್ರಾಮದಲ್ಲಿ ಡಬಲ್ ಡೆಕ್ಕರ್ ಬೇರು ಸೇತುವೆಯನ್ನು ತಲುಪಬಹುದು. ಉಂಶಿಯಾಂಗ್ ನದಿಯ ಮೇಲಿರುವ ಇದೊಂದು ಅದ್ಭುತ ನಿರ್ಮಿತಿ! ಚಾರಣಿಗರಿಗೆ ಇಲ್ಲಿನ ನೋಟವು ಪಾದ ಯಾತ್ರೆಯ ನೋವನ್ನು ಮರೆಸುವಷ್ಟು ಉತ್ಸಾಹವನ್ನು ಇಮ್ಮಡಿಸುತ್ತದೆ. ಇಲ್ಲಿ ವಿವಿಧ ಗ್ರಾಮಗಳಾದ್ಯಂತ ನೂರಕ್ಕಿಂತ ಹೆಚ್ಚು ಲಿವಿಂಗ್ ರೂಟ್ ಸೇತುವೆಗಳಿವೆ. ಚಾರಣಪ್ರಿಯರು ಭೇಟಿ ನೀಡಲೇಬೇಕಾದ ನೈಸರ್ಗಿಕ ವಿಸ್ಮಯಗಳ ರುದ್ರರಮಣೀಯ ತಾಣವಿದಾಗಿದೆ.

ಕವನ

ಕುಲವಿಲ್ಲದ ಕನಕ!

● ರಂಗನಾಥ್ ಜಿ.ಎಲ್., ಹೊಸದುರ್ಗ

ಜಗಕೆ ಬಂದರು ಕನಕ
ಬಾಡ ಗ್ರಾಮದ ಜನಕ
ಬೀರಪ್ಪ ಬಚ್ಚಮ್ಮರ ಕುಲತಿಲಕ
ನಾಮಂಕಿತ ತಿಮ್ಮಪ್ಪನಾಯಕ.



ಕೀರ್ತನೆಗಳ ರಚಿತ ಲೇಖಕ
ಕೆಟ್ಟ ಪಿಡುಗುಗಳ ನಿವಾರಕ
ಸನ್ನಡತೆಯ ಪರಿಪಾಲಕ
ಕಾಗಿನೆಲೆ ಆದಿಕೇಶವನ ಆರಾಧಕ.
ಕ್ಷತ್ರಿಯರಾಗಿ ದಾಸರಾದ ಕಾಯಕ
ದಾಸರಾಗಿ ಸಮಾಜದ ಉದ್ಧಾರಕ
ಆದರ್ಶಪಥದ ಮಾರ್ಗದರ್ಶಕ
ಸಾರ್ಥಕ ಕನಕರೆಂಬ ನಾಮಫಲಕ.

ಪುಟ್ಟಕಥೆಗಳು

● ಅರವಿಂದ ಜಿ. ಜೋಷಿ, ಮೈಸೂರು

- ತಾನು ಕುಳಿತ ಮರದಡಿ, ಯಾರೋ ಹಾಕಿದ ಕಾಳು ಕಂಡ ಹಕ್ಕಿ, ಅಲ್ಲಿಗೆ ಹಾರಿ ಬಂದು ತನ್ನ ಮಿತ್ರರನ್ನು ಕೂಗಿ ಕರೆದಿತ್ತು.
- ಮನೆಯ ಎದುರು ಯಾರೋ ಎಸೆದ ರೊಟ್ಟಿಯನ್ನು ಕಂಡ ಕಾಗೆ, ಸರ್ರನೇ ಹಾರಿ ಬಂದು ತನ್ನ ಕೊಕ್ಕಿನಲ್ಲಿ ಹಿಡಿದು, ಗಾಯಗೊಂಡು ಉಪವಾಸವಿದ್ದ ನಾಯಿಯ ಮುಂದೆ ಇಟ್ಟಿತ್ತು.
- ಜಾತ್ರೆಯಲ್ಲಿ ಅಮ್ಮನನ್ನು ಕಳೆದುಕೊಂಡ ಪುಟ್ಟ ಮಗು, ಎಲ್ಲೆಡೆ ಹುಡುಕಾಡಿ, ಸುಸ್ತಾಗಿ ದೇವಸ್ಥಾನದ ಹಿಂಭಾಗದ ಅರಳಿಕಟ್ಟೆ ಮೇಲೆ ಮಲಗಿದಾಗ, ಎಲ್ಲಿಂದಲೋ ಒಂದು ಬಿಸ್ಕತ್ ಪೊಟ್ಟಣ ಹಿಡಿದುಕೊಂಡು ಬಂದ ಮಂಗಣ್ಣ, ಮಗುವಿನ ಪಕ್ಕದಲ್ಲಿ ಕುಳಿತು ಅದು ಏಳುವುದನ್ನೇ ಕಾಯುತ್ತಿತ್ತು.

ನಿರ್ಲಕ್ಷಿಸು ಬಾಳ ಬಡಿವಾರ, ನಿರುಕಿಸು ಜೈವಿಕ ಗಡಿಯಾರ

● ಮಾಯಾ ಬಾಲಚಂದ್ರ

ಪ್ರತಿಯೊಬ್ಬರ ಜೈವಿಕ ವಯಸ್ಸನ್ನು ನಿರ್ಧರಿಸುವುದು ಅವರವರ ಮಾನಸಿಕ ಸ್ಥಿತಿಯೇ. ನಿರಂತರವಾಗಿ ಧಾವಂತದಿಂದಲೇ ಜೀವನವನ್ನು ನಡೆಸುತ್ತಿರುವವರ ವಯಸ್ಸು ಶೀಘ್ರ ಮುಂದೋಡುತ್ತಿರುವುದು ಹಾಗೂ ಸಾವಧಾನದಿಂದ ಬದುಕನ್ನು ಸಾಗಿಸುತ್ತಿರುವವರ ಜೈವಿಕ ವಯಸ್ಸು ನಿಧಾನ ಗತಿಯಲ್ಲಿ ಚಲಿಸುವುದನ್ನು ನಾವು ಗಮನಿಸಬಹುದು. ಈ ಪ್ರಕ್ರಿಯೆ, ವೈಯಕ್ತಿಕ ಮಟ್ಟಕ್ಕೆ ಸೀಮಿತವಾಗದೆ, ಒಂದಿಡೀ ಸಮಾಜಕ್ಕೂ ಅನ್ವಯಿಸುತ್ತದೆ. ಸಮಾಜವು ತೀವ್ರ ಗತಿಯಲ್ಲಿ ತನ್ನ ಕಾರ್ಯಚಟುವಟಿಕೆಗಳನ್ನು ಸಾಗಿಸುತ್ತಿದ್ದರೆ, ಧಾವಂತದಿಂದ ಓಡುತ್ತಿದ್ದರೆ, ಆ ಸಮಾಜದ ಜೈವಿಕ ಗಡಿಯಾರವು, ಅಷ್ಟೇ ಶೀಘ್ರವಾಗಿ ಚಲಿಸಿಬಿಡುತ್ತದೆ. ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ ಸಮಾಜದ ಪ್ರತಿ ಸದಸ್ಯನ ವ್ಯಕ್ತಿತ್ವವನ್ನು, ಮನಸ್ಥಿತಿಯನ್ನು ರೂಪಿಸುವುದು ಆ ಸಮಾಜವೇ. ಇಡೀ ಸಮಾಜದ ಗ್ರಹಿಕೆ ಮತ್ತು ಮೊದಲಿಂದ ನಡೆದುಕೊಂಡು ಬಂದ ಆಚರಣೆಗಳೇ ಒಬ್ಬೊಬ್ಬ ವ್ಯಕ್ತಿಯ ಗ್ರಹಿಕೆಯಾಗುತ್ತದೆ, ಆಚರಣೆಯಾಗುತ್ತದೆ. ಹೀಗೆ, ವ್ಯಕ್ತಿಯ ಜೈವಿಕ ವಯಸ್ಸನ್ನು ಒಂದು ಸಮಾಜವೂ ನಿರ್ಧರಿಸಬಲ್ಲದು.

ಜಪಾನ್‌ನ, ಓಕಿನಾವ ಪ್ರದೇಶದಲ್ಲಿ ನೆಲೆಸಿರುವ ಜನರ ಆರೋಗ್ಯ ಸ್ಥಿತಿ ಅತ್ಯುತ್ತಮವಾಗಿದ್ದು, ಅವರು ದೀರ್ಘಾಯುಷಿ ಗಳೂ ಆಗಿದ್ದಾರೆ. ಇದಕ್ಕೆ ಮುಖ್ಯ ಕಾರಣ, ಅವರ ಆಹಾರ ಹಾಗೂ ಜೀವನ ಪದ್ಧತಿ. ಜತೆಗೆ ಧಾವಂತವಿಲ್ಲದ, ಶಾಂತಚಿತ್ತದ ಕಾರ್ಯೋನ್ಮುಖತೆ. ಮಾಡುವ ಕೆಲಸಗಳೆಲ್ಲವನ್ನು ಪೂರ್ಣ ಮಗ್ನತೆಯಿಂದ ಮಾಡುತ್ತಾ, ಅದರಲ್ಲಿಯೇ ಆನಂದವನ್ನು ಕಂಡುಕೊಳ್ಳುತ್ತಾ, ಮುಂದಕ್ಕೆ ಓಡಬೇಕೆಂಬ ಆತುರವಿಲ್ಲದೆ ನಡೆಸುವ ಸಹಜ ಜೀವನ ಇವರ ವಂಶವಾಹಿಯಲ್ಲಿಯೇ ಸೇರಿಕೊಂಡಿದೆ. ಪಾರಂಪರಿಕವಾಗಿಯೇ ಅದು ಅವರಿಗೆ ಸಿದ್ಧಿಸಿದೆ. ಇಲ್ಲಿಯ ಜನರ ವಯಸ್ಸಾಗುವಿಕೆಯ ಪ್ರಕ್ರಿಯೆಯು, ಪ್ರಪಂಚದ ಬೇರೆ ಬೇರೆ ಪ್ರದೇಶಗಳ ಜನರಿಗೆ ಹೋಲಿಸಿದರೆ, ಬಹಳ ಮಂದಗತಿಯಲ್ಲಿ ಕ್ರಮಿಸುತ್ತದೆ.

''ಯಾವ ಸಮಯಕ್ಕೆ ನಿಲ್ದಾಣ ಬಿಟ್ಟು ಈ ರೈಲು ಹೊರಡುತ್ತದೆ? ಎನ್ನುವುದರ ಬದಲು,

ಯಾವ ನಿಲ್ದಾಣದಲ್ಲಿ, ಈ ರೈಲು ಸಮಯವನ್ನು ಬಿಟ್ಟು ಹೊರಡುತ್ತದೆ? ಎಂದು ನೀವು ಕೇಳಿದರೆ, ನಿಮ್ಮ ದೃಷ್ಟಿಕೋನ ಪಲ್ಲಟವಾದಂತೆಯೇ..'' ಎಂದು ಐನ್‌ಸ್ಟೈನ್ ಹೇಳುತ್ತಿದ್ದರಂತೆ. ನಮ್ಮ ಶರೀರದಲ್ಲಿ ನಿರಂತರವಾಗಿ ನಡೆಯುವ ಪ್ರಕ್ರಿಯೆಗಳ ಬಗ್ಗೆಯೂ ನಮ್ಮ ಜ್ಞಾನವನ್ನು ಹೀಗೆಯೇ ಪಲ್ಲಟಗೊಳಿಸಲು ಯತ್ನಿಸಿದರೆ, ನಾವು ಕಾಣುತ್ತಿರುವ ಇಂದ್ರಿಯಗ್ರಾಹ್ಯ ಸತ್ಯವನ್ನು ಮೀರಿದ ವಿಚಾರಗಳು ಅರಿವಿಗೆ ಬರಬಹುದು. 'ದೇಶ ಮತ್ತು ಕಾಲ'ದ ವಿಚಾರವಾಗಿಯೂ, ನಮ್ಮ ಗ್ರಹಿಕೆಗಿಂತಲೂ ವಾಸ್ತವತೆ ಭಿನ್ನವಾಗಿರಲು ಸಾಧ್ಯವಿದೆ. 'ನನಗೆ ಯಾವುದಕ್ಕೂ ಸಮಯವೇ ಸಾಲುತ್ತಿಲ್ಲ' ಎಂದು ವಿಲಪಿಸುವ ಒಬ್ಬನು, 'ನನಗೆ ಬೇಕಾದಷ್ಟು ಸಮಯವಿದೆ ಕೆಲಸ ಮಾಡಲು' ಎನ್ನುವ ಮತ್ತೊಬ್ಬನು! ಈ ಇಬ್ಬರು ನೋಡುವ ಗಡಿಯಾರ ಒಂದೇ ಆಗಿದ್ದರೂ, ಮೊದಲನೆಯವನ ದೃಷ್ಟಿಯಲ್ಲಿ ವೇಳೆ ಬಹಳ ವೇಗವಾಗಿ ಗಮಿಸುತ್ತಿರುತ್ತದೆ. ಅವನ ಆಂತರಿಕ ಗಡಿಯಾರವು ಕೂಡ ಅಷ್ಟೇ ಶೀಘ್ರವಾಗಿ ಓಡುತ್ತಿರುತ್ತದೆ. ಅಂಥವರ ಹೃದಯ ಬಡಿತ, ಬೆಳವಣಿಗೆಯ ಹಾರ್ಮೋನ್, ಗ್ಲೈಕೋಜನ್ ಮಟ್ಟ, ಗ್ಲೂಕೋಸ್ ಮಟ್ಟ ಎಲ್ಲವೂ ಅತಿಯಾಗಿಯೇ ಇರುತ್ತವೆ ಎಂದು ವಿಜ್ಞಾನಿಗಳು ಸಂಶೋಧನೆಯಿಂದ ಕಂಡುಕೊಂಡಿದ್ದಾರೆ. ಇಂಥವರು ಹೃದಯಾಘಾತದಿಂದಲೋ ಅಥವಾ ಇನ್ನಾವುದೋ ಶರೀರ ಸಂಬಂಧಿ ಆಘಾತದಿಂದಲೋ, ಬೇಗ ಕಾಲವಶವಾಗಿ, ತಮಗೆ ಸಿಗುತ್ತಿಲ್ಲ ಅನ್ನುತ್ತಿದ್ದ ಕಾಲದಲ್ಲಿಯೇ ಶೀಘ್ರ ಲೀನವಾಗಿಬಿಡಬಹುದು. ನಮ್ಮ ಸುತ್ತಲಿನ ಪರಿಸರದಲ್ಲಿ ನಡೆಯುತ್ತಿರುವ ಲೌಕಿಕದ ವಿಚಾರಗಳನ್ನು ಒಂದಿಷ್ಟು ಸಮಯ ನಿರ್ಲಕ್ಷಿಸಿ, ನಮ್ಮೊಳಗಿರುವ ಚೇತನವನ್ನು, ವಿಶ್ವಚೇತನದೊಂದಿಗೆ ಪ್ರಜ್ಞಾಪೂರ್ವಕವಾಗಿ ವಿನಿಮಯ ಮಾಡಿಕೊಳ್ಳುವುದರಿಂದ, ವೇಗದ ಓಟದ ಬದುಕು ಸಹಜ ಸ್ಥಿತಿಗೆ ಬರಲು ಸಾಧ್ಯ. ಇದೇ ಧ್ಯಾನ. ಇದರಿಂದ ನಮ್ಮೊಳಗಿನ ಹಾಗೂ ಹೊರಗಿನ ಪರಿಸರವನ್ನು ಪ್ರಶಾಂತವಾಗಿಟ್ಟುಕೊಳ್ಳಲು ಸಾಧ್ಯ.

ರತ್ನ-ಪದ್ಮ ಭೂಷಣರು

● ರವೀಂದ್ರ ವೀ. ಮುನ್ನೋಳಿಮಠ, ನವಲೂರು

ಭಾರತ ರತ್ನ, ಕರ್ನಾಟಕ ರತ್ನ, ಪದ್ಮ ವಿಭೂಷಣ, ಪದ್ಮ ಭೂಷಣ ಮುಂತಾದ ಪ್ರಶಸ್ತಿಗಳಿಂದ ಭಾಜನರಾದವರ ಸಾಧನೆ-ಸೇವೆಯ ಅಗಾಧತೆಯನ್ನು ಕಂಡು 'ಇಂಥವೆಲ್ಲ ನಮ್ಮಂಥ ಸಾಮಾನ್ಯರಿಗಾದೀತೇ...?' ಎಂದು ನಿಟ್ಟುಸಿರು ಬಿಟ್ಟು ಬದುಕಿನ ಬಂಡಿ ತಳ್ಳೋದು ಬಹುತೇಕರ ಮನೋಧರ್ಮವಾಗಿರುತ್ತದೆ.

ಹೌದು, ಅಂಥ ಸಾಧನೆ ಮಾಡೋದಿರಲಿ, ಅಂಥ ಯೋಚನೆಯ ಹತ್ತಿರವೂ ನಾವೆಲ್ಲ ಸುಳಿಯಲಾರೆವು. ಈ ರೀತಿಯ ಸಾಧನೆಗಳ ಹಿಂದೆ ಅಪಾರ ಸಮರ್ಪಣಾ ಭಾವ, ಸಂಯಮ, ತ್ಯಾಗ, ಸೇವೆ, ಬದ್ಧತೆ ಮುಂತಾದವು ಸಂದಾಯವಾಗಿರುತ್ತವೆ. ದಿನನಿತ್ಯದ ಜಂಜಾಟದಲ್ಲಿ ಮುಳುಗೇಳುತ್ತಿರುವ ಶ್ರೀಸಾಮಾನ್ಯನಿಗೆ ಇವೆಲ್ಲ ಸಾಧ್ಯವೇ? ಎಂದು ನಮ್ಮನ್ನು ನಾವೇ ಪ್ರಶ್ನಿಸಿಕೊಂಡು, 'ಅದೇನಿದ್ದರೂ ಕೆಲವೇ ಕೆಲವರ ಸೊತ್ತು' ಎಂಬ ಸಿದ್ಧ ತೀರ್ಮಾನಕ್ಕೆ ಬಂದು, ಸಾಮಾಜಿಕ-ನೈತಿಕ ಹೊಣೆಯಿಂದ ನಮ್ಮನ್ನು ನಾವೇ ವಿಮುಖವಾಗಿಸಿಕೊಂಡು ನುಣುಚಿಕೊಳ್ಳಲು ಯತ್ನಿಸಿರುತ್ತೇವೆ.

ಹಾಗಾದರೆ ಈ ಪದಕ-ಪ್ರಶಸ್ತಿಗಳು, ಬಿರುದು-ಬಾವಲಿಗಳು ಸಾಮಾನ್ಯರಿಗೆ ಕೈಗೆಟುಕದ ಗಗನಕುಸುಮಗಳೆ? ಅಸಾಧ್ಯದ ತಪವೇ? ಜಗಿಯಲಾರದ ಕಬ್ಬಿಣದ ಕಡಲೆಯೇ? ಈಜಲಾರದ ಸೊಕ್ಕಿದ ಕಡಲೇ? ಏರಲಾರದ ಗೌರಿಶಂಕರವೇ? 'ಹೌದು' ಎನ್ನುವ ತೀರ್ಮಾನಕ್ಕೆ ಬರುವ ಮುನ್ನ ತುಸು ಆಲೋಚನೆಗಿಳಿದು ನೋಡೋಣ: ರಸ್ತೆ ಬದಿಯಲ್ಲಿ ತರಕಾರಿ ಮಾರುವ ವೃದ್ಧರ ಬಳಿ ಚೌಕಾಸಿರಹಿತವಾಗಿ ವ್ಯವಹರಿಸೋಣ. ಜನನಿಬಿಡ ಪ್ರದೇಶದಲ್ಲಿ ಬಸ್ ಹತ್ತುವ ಧಾವಂತದಲ್ಲಿ ಅಸಹಾಯಕರಿಗೆ ಮೊದಲ ಆದ್ಯತೆ ನೀಡೋಣ. ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ಕೈಲಾದಷ್ಟು ನೆರವು ಒದಗಿಸೋಣ. ನಿತ್ಯ ಸಂಚರಿಸುವ ಅಥವಾ ಭೇಟಿ ನೀಡುವ ರಸ್ತೆ, ಉದ್ಯಾನ, ಮಂದಿರ, ಮಾರುಕಟ್ಟೆ, ಕ್ರೀಡಾಂಗಣ, ಆಸ್ಪತ್ರೆ, ಬಸ್/ರೈಲು ನಿಲ್ದಾಣ, ವಾಯುವಿಹಾರದ ತಾಣ ಮುಂತಾದ ಪ್ರದೇಶಗಳಲ್ಲಿ ನೈರ್ಮಲ್ಯವನ್ನು ಕಾಪಾಡೋಣ. ಅಗತ್ಯವೆನಿಸಿದರೆ ಸಂಗ್ರಹವಾಗಿದ್ದ ತ್ಯಾಜ್ಯವನ್ನು ಸ್ಥಳಾಂತರಿಸೋಣ. ಹುಟ್ಟುಹಬ್ಬ, ವಾರ್ಷಿಕೋತ್ಸವದಂಥ ಸಂದರ್ಭಗಳಲ್ಲಿ ಒಂದೆರಡು ಗಿಡ ನೆಡೋಣ. ಕ್ವಚಿತ್ತೆನಿಸುವಷ್ಟಾದರೂ ದಾನ ಗುಣವನ್ನು ಹೊಂದಿರುವಂಥವರಾಗೋಣ. ಸಹಜೀವಿಗಳೊಂದಿಗೆ ಪ್ರೀತಿಯಿಂದ ಒಡನಾಡೋಣ. ಸಂಬಂಧಗಳಲ್ಲಿ ಅನ್ಯೋನ್ಯತೆಯನ್ನು ಕಾಪಾಡಿಕೊಳ್ಳೋಣ. ಪರಿಶುದ್ಧ ಕಾಯಕ ಪ್ರವೃತ್ತಿಯನ್ನು ಅಳವಡಿಸಿಕೊಳ್ಳೋಣ. ಸರಳತೆಯನ್ನು ಮೈಗೂಡಿಸಿಕೊಳ್ಳೋಣ. ಸಹಿಷ್ಣುತೆಯನ್ನು ಮೂಲಮಂತ್ರವಾಗಿರಿಸಿಕೊಳ್ಳೋಣ. ಸಕಲರ ಲೇಸಿಗೆ ಸಾಧ್ಯವಾದಷ್ಟು ಚಿಂತಿಸೋಣ. ಮೂಕ ಪ್ರಾಣಿಗಳ ಸಂವೇದನೆಗೆ ಕಿವಿಗೊಡೋಣ.

ಇಷ್ಟೇ ಅಲ್ಲ, ಸಾಧಕರನ್ನು, ಗುರು-ಹಿರಿಯರನ್ನು ಹೃನ್ಮನದಿಂದ ಸ್ಮರಿಸೋಣ. ರೈತರು, ಯೋಧರು, ವಿಜ್ಞಾನಿಗಳನ್ನು ಮನಸಾರೆ ಗೌರವಿಸೋಣ. ಅಗುಳಿನ ಅನ್ನವನ್ನು ಪ್ರಸಾದವೆಂದು ಸೇವಿಸೋಣ. ಎದೆಯೊಳಗೆ ಅವಿತಿರುವ ಆಪ್ತಭಾವಕ್ಕೆ ಮೃದುತ್ವದ, ಸತ್ಯದ, ಮಧುರ ಸ್ಪರ್ಶದ ಸಿಂಚನಗೈದು ಸುತ್ತಣ ವಾತಾವರಣವನ್ನು ಸಿಂಗರಿಸಿಡೋಣ. ಈಗ ನೋಡಿ.... ಇದನ್ನು ಸಾಧಿಸಿದ ಒಬ್ಬೊಬ್ಬರೂ 'ರತ್ನ ಪದ್ಮ' ಭೂಷಿತರೇ ಆಗಿರುತ್ತೇವೆ. ಅಷ್ಟೇ ಗೌರವ ಮನ್ನಣೆಗಳಿಗೆ ಕಾರಣೀಭೂತರಾಗಿರುತ್ತೇವೆ. ಬೀದಿ-ಊರು-ಕೇರಿಗಳ ತುಂಬೆಲ್ಲ ರತ್ನ-ಪದ್ಮಾಕರರೆ ತುಳುಕಾಡುತ್ತಾರೆ....!

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ

1	■	2	■	3	■	4		5
6			■	7			■	
		8						
	9			10	11		12	
13			14				15	
■	16	17		18	■	19		■
20	■		■	21			■	22
	■	23			■	24		
25								

ಎಡದಿಂದ ಬಲಕ್ಕೆ

4. ನೆಲೆಯಿಲ್ಲದ ಅಥವಾ ಭದ್ರವಲ್ಲದ (3)
6. ಹೂವಿನ ಧೂಳಿ (3)
7. ಮರ-ಗಿಡಗಳ ಚಿಗುರು (3)
8. ಶಿಲ್ಪ ಅಥವಾ ಶಾಸನಗಳನ್ನು ಕೊರೆಯುವವನು ತಿರುಗಿ ಬಂದಿದ್ದಾನೆ (3)
9. ಸ್ವರ್ಗಕ್ಕೆ ಮತ್ತೊಂದು ಪದ (2)
10. ಆತ ವಿಷಯವೊಂದರಲ್ಲಿ ನಿಷ್ಣಾತ (4)
13. ನೀರಿನ ಉಗಿ (2)
15. ಶಿವನಿಗೆ ಮತ್ತೊಂದು ಹೆಸರು (2)
16. ಲೆಕ್ಕ ಬರೆಯುವವನು (4)
19. ಬಾಗು ಅಥವಾ ಥಳಿಸು ಎಂದರ್ಥ (2)
21. ಸೀತಾಮಾತೆಯನ್ನು ಅಪಹರಿಸಿದವನು (3)
23. ಅಸ್ತವ್ಯಸ್ತವಾಗಿ ಬಂದಿರುವ ಲಕ್ಷ್ಯ (3)
24. ಮೋಸಮಾಡು ಅಥವಾ ಕಣ್ಣು ತಪ್ಪಿಸು (3)
25. ಮಣದ ನಡುವೆ ಸಿಲುಕಿದೆ ಸಾವು (3)

ಮೇಲಿಂದ ಕೆಳಕ್ಕೆ

1. ತೀವ್ರವಾದ ಆಸೆಯನ್ನು ಹೀಗೆ ಹೇಳಬಹುದು (3)
2. ದೇಶವೊಂದರ ಪ್ರಜ್ಞಾವಂತ ಪ್ರಜೆ (4)
3. ಅಪೂರ್ವವಾದ ಅಥವಾ ವಿರಳವಾದ ಎಂದರ್ಥ (4)
4. ಕೆಟ್ಟ ಗುಣ ಅಥವಾ ದೋಷ (4)
5. ನಿಜ ಹೇಳಿದ್ದು ಇರುಳಿನಲ್ಲಿ (3)
9. ನಾವೆಯನ್ನು ಮುನ್ನಡೆಸುವವನು (3)
11. ಶತ್ರು ಎನ್ನಲು ಎರಡೇ ಅಕ್ಷರ ಸಾಕು (2)
12. ಋಣಿಯಾಗಿ ಇರಬೇಕಾದ ಯುವತಿ (3)
14. ಬಾಗು ಎನ್ನುತ್ತಾ ಬಂದಿರುವ ರತ್ನ (2)
17. ಯುದ್ಧಭೂಮಿಗೆ ಮತ್ತೊಂದು ಹೆಸರು (4)
18. ಆಪತ್ತು ತಂದಿತೇ ಕೈಚಳಕ (4)
19. ಸಾಕಷ್ಟು ಹಣವಿರುವಾತ (4)
20. ಸಡಗರ ಅಥವಾ ಆಡಂಬರ (3)
22. ಅಷ್ಟ ಸರ್ಪಗಳಲ್ಲಿ ಒಂದು (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ
4.ಅಸ್ಥಿರ 6.ಪರಾಗ 7.ಪಲ್ಲವ 8.ರಿವಾರೂ 9.ನಾಕ 10.ಪರಿಣತ 13.ಆವಿ 15.ರುದ್ರ 16.ಕರಣಿಕ 19.ಹಣಿ 21.ರಾವಣ 23.ಗನಮ 24.ವಂಚಿಸು 25.ಮರಣ

ಮೇಲಿಂದ ಕೆಳಕ್ಕೆ
1.ಚಪಲ 2.ನಾಗರಿಕ 3.ಅಪರೂಪ 4.ಅವಗುಣ 5.ರಜನಿ 9.ನಾವಿಕ 11.ರಿಪು 12.ತರುಣಿ 14.ಮಣಿ 17.ರಣಾಂಗಣ 18.ಕರಾಮತ್ತು 19.ಹಣವಂತ 20.ಸಂಭ್ರಮ 22.ವಾಸುಕಿ

ಉಪಕಾರಸ್ಮರಣೆ ಇಲ್ಲದ ಮನುಷ್ಯ

ಪೂರ್ವ ಯುಗದಲ್ಲಿ ಒಬ್ಬಾತ ತನ್ನ ಪತ್ನಿ-ಮಕ್ಕಳ ಜತೆ ನೆಲೆಸಿದ್ದನು. ಅವನ ಮನೆಯಲ್ಲಿ ಒಂದು ಹಸು ಇದ್ದು, ಅದು ಕೊಡುವ ಹಾಲಿನಿಂದ ಕುಟುಂಬಕ್ಕೆ ಸಾಕಾಗುವಷ್ಟು ಮೊಸರು, ತುಪ್ಪ, ಬೆಣ್ಣೆ ಒದಗುತ್ತಿತ್ತು. ಆದರೆ, ಹಸು ಹಾಲು ಕೊಡುವುದನ್ನು ನಿಲ್ಲಿಸಿದ ಕೂಡಲೇ ಮನೆಯವನು ಅದನ್ನು ಕಾಡಿಗೆ ಅಟ್ಟಿದನು. ಕಾಡಿಗೆ ಬಂದ ಗೋವು ಹಸಿವೆ, ಬಾಯಾರಿಕೆಯಿಂದ ಬಳಲಿತು. ಅದು ಹಾಗೇ ಒಂದು ಶಿವನ ದೇವಸ್ಥಾನಕ್ಕೆ ಹೋಗಿ 'ಈ ಸ್ವಾರ್ಥಿ ಮನುಷ್ಯ ನನ್ನಿಂದ ಉಪಯೋಗವಾಗುವವರೆಗೆ ಬಳಸಿಕೊಂಡು ಈಗ ನನ್ನನ್ನು ಕಾಡಿಗೆ ಅಟ್ಟಿದ್ದಾನೆ. ನನಗೆ ನೀನೇ ದಿಕ್ಕು' ಎಂದು ಪ್ರಾರ್ಥಿಸಿತು. ಭಗವಂತನ ಅಗೋಚರ ಶಕ್ತಿಯ ಪ್ರೇರಣೆಯಿಂದ ದೂರದ ಕಾಡಿಗೆ ಹೋಗಿ ನೆಲೆ ಕಂಡುಕೊಂಡಿತು.

ಒಂದು ದಿನ ಕಟ್ಟಿಗೆ ತರಲು ಒಬ್ಬ ಮಹಿಳೆ ಬಂದಳು. ಹಸುವನ್ನು ನೋಡಿದಳು, ಅದು ಗರ್ಭಿಣಿಯಾಗಿತ್ತು. 'ಇದು ಕೆಲವೇ ದಿನಗಳಲ್ಲಿ ಕರುವನ್ನು ಹಾಕುತ್ತದೆ. ನಾನು ಹಸುವನ್ನು ಮನೆಗೆ ಕರೆದುಕೊಂಡು ಹೋದರೆ ಮನೆಗೆ ಬೇಕಾದಷ್ಟು ಹಾಲು ಸಿಗುತ್ತದೆ ಮತ್ತು ಮಾರಿ ಹಣ ಸಂಪಾದನೆ ಮಾಡಬಹುದು' ಎಂದು ಆಕೆ ಯೋಚಿಸಿ, ಅದನ್ನು ಒಯ್ಯಲು ತನ್ನ ಗಂಡನನ್ನು ಕರೆತರಲು ಹೋದಳು. ಆದರೆ ಅವಳು ಗಂಡನೊಂದಿಗೆ ಬರುವ ಹೊತ್ತಿಗೆ ಆ ಹಸು ಅಲ್ಲಿ ಇರಲಿಲ್ಲ, ಬೇರೆ ಕಡೆಗೆ ಹೋಗಿತ್ತು. ಹಸುವು ಸುರಕ್ಷಿತ ಜಾಗಕ್ಕೆ ತೆರಳಿ ಕರುವನ್ನು ಹಾಕಿತು. ಅದು ಕರು ಹಾಕಿದ ಸ್ವಲ್ಪ ಹೊತ್ತಿಗೆ, ಅದೇ ಮಹಿಳೆ ಕಟ್ಟಿಗೆಯನ್ನು ತರಲು ಕಾಡಿಗೆ ಬಂದಳು, ಹಸುವು ಕರು ಹಾಕಿರುವುದನ್ನು ನೋಡಿದಳು. 'ಇದು ಈ ಹಿಂದೆ ನಾನು ನೋಡಿದ ಹಸು. ಈಗ ಕರು ಹಾಕಿದೆ; ಹಸು ಮತ್ತು ಕರುವನ್ನು ಮನೆಗೆ ಕರೆದೊಯ್ಯುವೆ' ಎಂದು ಸಂತೋಷದಿಂದ ಅಂದುಕೊಂಡು ಗಂಡನನ್ನು ಕರೆತರಲು ಹೊರಟಳು.

ಹಾಗೆ ಹೊರಟಿದ್ದ ಮಹಿಳೆಗೆ ಹಸು, 'ಅಕ್ಕ ನನಗೆ ಸ್ವಲ್ಪ ಸಹಾಯಮಾಡು. ಈಗ ತಾನೆ ಹುಟ್ಟಿದ ನನ್ನ ಕರು ಕೆಳಗೆ ಬಿದ್ದು ಮಣ್ಣುಮೆತ್ತಿ ಗಲೀಜಾಗಿದೆ, ಅದು ಕಾಲೂರಿ ನಡೆಯಲು ಎಂಟು ತಿಂಗಳು ಬೇಕು. ಕೆಳಗೆ ಬಿದ್ದ ನನ್ನ ಕರುವನ್ನು ಎತ್ತಿ ನನ್ನ ಬೆನ್ನ ಮೇಲೆ ಹಾಕು, ನಾನು ಸುರಕ್ಷಿತ ಜಾಗಕ್ಕೆ ಕರೆದುಕೊಂಡು ಹೋಗಿ ಅದಕ್ಕೆ ನಡೆಯಲು ಬರುವವರೆಗೆ ನೋಡಿಕೊಳ್ಳಬೇಕು' ಎಂದಿತು. ಆದರೆ ಮಹಿಳೆ ಕರುವನ್ನು ನೋಡಿದಳು. ಆಗಷ್ಟೇ ಹುಟ್ಟಿದ ಅದರ ಮೈಯೆಲ್ಲಾ ಗಲೀಜಾಗಿತ್ತು. ಗೋವನ್ನು ಉದ್ದೇಶಿಸಿ ಆಕೆ- 'ಛೀ ಛೀ ಇಷ್ಟು ಗಲೀಜಾದ ನಿನ್ನ ಮಗುವನ್ನು ನಾನು ಮುಟ್ಟಲಾರೆ ನನಗೆ ಅಸಹ್ಯ' ಎಂದು ನಿರಾಕರಿಸಿದಳು. ಅಸಹಾಯಕ ಹಸುವಿಗೆ ಕೋಪ ಬಂದು, 'ನೀವು ಮನುಷ್ಯರು ಉಪಯೋಗ ಸಿಗುವ ತನಕ ಬಳಸಿಕೊಳ್ಳುತ್ತೀರಿ, ನಿಮ್ಮ ಮಗು ಹುಟ್ಟಿದ ಕೂಡಲೇ ನಡೆಯುತ್ತದೆ, ಅದಕ್ಕೇ ನಿಮಗೆ ಇಷ್ಟು ಅಹಂಕಾರ. ನನ್ನ ಕರು ಹುಟ್ಟಿದ ಎಂಟು ತಿಂಗಳಿಗೆ ತನ್ನ ಕಾಲ ಮೇಲೆ ನಿಲ್ಲುತ್ತದೆ. ಆದರೆ ಈಗ ನಾನು ಶಾಪ ಕೊಡುವೆ, ಇನ್ನು ಮುಂದೆ ನಿಮಗೆ ಹುಟ್ಟಿದ ಮಗು ಎದ್ದು ನಿಲ್ಲಲು ಎಂಟು ತಿಂಗಳು ಆಗುತ್ತದೆ, ಇಲ್ಲಿಯ ತನಕ ಹುಟ್ಟಿದ ನನ್ನ ಕರುಗಳು ನಿಲ್ಲಲು ಎಂಟು ತಿಂಗಳು ಬೇಕಾಗಿತ್ತು. ಇನ್ನು ಮುಂದೆ ಪ್ರಾಣಿ ಸಂಕುಲದಲ್ಲಿ ಮರಿ ಮತ್ತು ಕರುಗಳು ಹುಟ್ಟಿದ ಕೂಡಲೇ ಎದ್ದು ತಮ್ಮ ಕಾಲ ಮೇಲೆ ತಾವೇ ನಿಲ್ಲುತ್ತವೆ' ಎಂದಿತು. ಈ ರೀತಿ ಗೋವು ಮಹಿಳೆಗೆ ಕೊಟ್ಟ ಶಾಪದಿಂದಾಗಿ ಮನುಷ್ಯರಿಗೆ ಹುಟ್ಟಿದ ಮಕ್ಕಳು ಎದ್ದು ನಿಲ್ಲಲು 8-10 ತಿಂಗಳು ಬೇಕಾಗುತ್ತದೆ. ಪ್ರಾಣಿಗಳಿಗೆ ಹುಟ್ಟಿದ ಮರಿ-ಕರುಗಳು, ಕೆಲವೇ ಸಮಯದಲ್ಲಿ ಎದ್ದು ನಿಂತು ಓಡಾಡುತ್ತವೆ. 'ಹುಟ್ಟಿಸಿದ ದೇವರು ಹುಲ್ಲು ಮೇಯಿಸಿಯಾನೆ?' ಎನ್ನುವಂತೆ, ತಾನು ಸೃಷ್ಟಿಸಿದ ಜೀವಗಳನ್ನು ಭಗವಂತ ತಾನೇ ರಕ್ಷಿಸುತ್ತಾನೆ...

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ನೀವೂ ಬರೆಯಬಹುದು | ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ರಿಟೇನ್ ಪಟ್ಟಿಗೆ ನ.15 ಡೆಡ್‌ಲೈನ್

ಮುಂಬೈ: ವಿಶ್ವದ ಅತ್ಯಂತ ಶ್ರೀಮಂತ ಕ್ರಿಕೆಟ್ ಲೀಗ್ ಟೂರ್ನಿಯ 19ನೇ ಆವೃತ್ತಿಗೆ ಡಿಸೆಂಬರ್ 15ರಂದು ಭಾರತದಲ್ಲೇ ಮಿನಿ ಹರಾಜು ನಡೆಯುವ ಸಾಧ್ಯತೆಗಳಿವೆ. ದುಬೈನ ಜೆಡ್ಡಾದಲ್ಲಿ ನಡೆದ ಕೊನೆಯ ಎರಡು ಹರಾಜಿಗಿಂತಲೂ ಭಿನ್ನವಾಗಿ 2026ರ ಹರಾಜು ಪ್ರಕ್ರಿಯೆಯನ್ನು ಭಾರತ ದಲ್ಲೇ ನಡೆಸಲು ತಯಾರಿ ನಡೆದಿದೆ. ನವೆಂಬರ್ 15ರ ಒಳಗೆ ಎಲ್ಲಾ ಫ್ರಾಂಚೈಸಿಗಳು ರಿಟೇನ್ ಆಟಗಾರರ ಪಟ್ಟಿ ಬಿಡುಗಡೆ ಮಾಡುವಂತೆ ಐಪಿಎಲ್ ಮಂಡಳಿ ಸೂಚನೆ ನೀಡಿದೆ. ಇದಕ್ಕೂ ಮುನ್ನ 4ನೇ ಆವೃತ್ತಿಯ ಮಹಿಳಾ ಪ್ರೀಮಿಯರ್ ಲೀಗ್ ಟೂರ್ನಿಗೆ ಇದೇ ನವೆಂಬರ್ 27ರಂದು ದೆಹಲಿಯಲ್ಲಿ ಮೆಗಾ ಹರಾಜು ನಡೆಯಲಿದೆ. ಅದಕ್ಕಾಗಿ ಈಗಾಗಲೇ ಎಲ್ಲಾ 5 ಫ್ರಾಂಚೈಸಿಗಳು ನ.6ರಂದೇ ರಿಟೇನ್ ಆಟಗಾರರ ಪಟ್ಟಿಯನ್ನ ಪ್ರಕಟಿಸಿವೆ.

ಸಂಜು ಬದಲು ಜಡ್ಡುಗೆ ರಾಜಸ್ಥಾನ್ ಬೇಡಿಕೆ

ಚೆನ್ನೈ: ಡಿ.15ರ ಐಪಿಎಲ್ ಮಿನಿ ಹರಾಜಿಗೂ ಮುನ್ನವೇ ಸಂಜು ಸ್ಯಾಮ್ಸನ್ , 5 ಬಾರಿ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ (ಇಖಓ) ತಂಡವನ್ನ ಸೇರಿಕೊಳ್ಳಲಿದ್ದಾರೆ ಎನ್ನಲಾಗಿದೆ. ಮಿನಿ ಹರಾಜಿಗೂ ಮುನ್ನವೇ ರಾಜಸ್ಥಾನ್ ರಾಯಲ್ಸ್ ಫ್ರಾಂಚೈಸಿ ಸಂಜು ಅವರನ್ನು ಸಿಎಸ್‌ಕೆಗೆ ಬಿಟ್ಟುಕೊಡಲು ಮುಂದಾಗಿದೆ. ಆದ್ರೆ ಟ್ರೇಡ್ ಇನ್ ವಿಂಡೋ ನಿಯಮದ ಅಡಿಯಲ್ಲಿ ರಾಜಸ್ಥಾನ್ ಸಂಜು ಬದಲಿಗೆ ಆಲ್‌ರೌಂಡರ್ ರವೀಂದ್ರ ಜಡೇಜಾ ಹಾಗೂ ಸ್ಫೋಟಕ ಬ್ಯಾಟರ್ ಡೆವಾಲ್ಡ್ ಬ್ರೆವಿಸ್ ಅವರನ್ನ ಬಿಟ್ಟುಕೊಡುವಂತೆ ಕೇಳಿದೆ. ಹೀಗಾಗಿ ಚೆನ್ನೈ ಸೂಪರ್ ಕಿಂಗ್ಸ್ ಈ ಆಫರ್ ಒಪ್ಪುವ ಬಗ್ಗೆ ಸಂದೇಹಗಳಿವೆ. ರವೀಂದ್ರ ಜಡೇಜಾ 2012ರಿಂದಲೂ ಚೆನ್ನೈ ಸೂಪರ್ ಕಿಂಗ್ಸ್ ತಂಡದಲ್ಲಿದ್ದಾರೆ. 2025ರ ಮೆಗಾ ಹರಾಜಿಗೂ ಮುನ್ನ ಸಿಎಸ್‌ಕೆ 18 ಕೋಟಿಗೆ ಜಡ್ಡುರನ್ನ ಉಳಿಸಿಕೊಂಡಿತು. ಇತ್ತ ರಾಜಸ್ಥಾನ್ ಕೂಡ ಸಂಜು ಸ್ಯಾಮ್ಸನ್‌ರನ್ನ 18 ಕೋಟಿಗೆ ಉಳಿಸಿಕೊಂಡಿತ್ತು. ಡೇವಾಲ್ಡ್ ಬ್ರೆವಿಸ್ 18ನೇ ಆವೃತ್ತಿಯ ಐಪಿಎಲ್‌ನಿಂದ ಸಿಎಸ್‌ಕೆ ತಂಡವನ್ನು ಸೇರಿಕೊಂಡಿದ್ದಾರೆ. ರಾಜಸ್ಥಾನ್ ರಾಯಲ್ಸ್ ತಂಡದ ನಾಯಕನಾಗಿದ್ದ ಸಂಜು ಸ್ಯಾಮ್ಸನ್ 2025ರ ಟೂರ್ನಿಯ ಬಹುತೇಕ ಪಂದ್ಯಗಳಲ್ಲಿ ಇಂಪ್ಯಾಕ್ಟ್ ಪ್ಲೇಯರ್ ಆಗಿ ಕಣಕ್ಕಿಳಿದಿದ್ದರು. ಸಂಜು ಸಿಎಸ್‌ಕೆ ಸೇರಿಕೊಂಡ ಬಳಿಕ ಧೋನಿ ಬದಲು ವಿಕೆಟ್ ಕೀಪರ್ ಬ್ಯಾಟರ್ ಆಗಲಿದ್ದಾರೆ ಎನ್ನಲಾಗಿದೆ.

71 ರನ್, 4 ವಿಕೆಟ್ ಪಡೆದು ಮಿಂಚಿದ ಶ್ರೇಯಸ್ ಗೋಪಾಲ್, ಮಹಾ ವಿರುದ್ಧ ಮೇಲುಗೈ

2ನೇ ದಿನ ರಾಜ್ಯಕ್ಕೆ ಶ್ರೇಯಸ್ಸು

ಪುಣೆ: ಮುಂಬೈ ತೊರೆದು ಮಹಾರಾಷ್ಟ್ರ ತಂಡವನ್ನು ಸೇರಿಕೊಂಡ ಪೃಥ್ವಿ ಶಾ, ತಮ್ಮ ಬ್ಯಾಟಿಂಗ್ ಅಬ್ಬರ ಮುಂದುವರಿಸಿದ್ದು ಕರ್ನಾಟಕ ಎದುರಿನ ರಣಜಿ ಪಂದ್ಯದಲ್ಲಿ ವೇಗದ ರಣಜಿ ಅರ್ಧ ಶತಕ (71 ರನ್, 92 ಎಸೆತ) ದಾಖಲಿಸಿ ತಮ್ಮ 26ನೇ ಜನ್ಮ ದಿನವನ್ನು ಸ್ಮರಣೀಯವಾಗಿಸಿಕೊಂಡಿದ್ದಾರೆ. ಇದೇ ವೇಳೆ ರಾಜ್ಯದ ಪರ ಶ್ರೇಯಸ್ ಗೋಪಾಲ್ ಬ್ಯಾಟಿಂಗ್ (71ರನ್ 162 ಬಾಲ್) ಮತ್ತು ಬೌಲಿಂಗ್ (4/46) ನಲ್ಲಿ ಮಿಂಚಿ ಮತ್ತೊಮ್ಮೆ ಆಪತ್ಬಾಂಧವನಾದರು.

ಪುಣೆಯಲ್ಲಿ ನಡೆಯುತ್ತಿರುವ ರಣಜಿ ಇಲೈಟ್ ಬಿ ಗ್ರೂಪ್ ಪಂದ್ಯದ ಎರಡನೇ ದಿನ ಉತ್ತಮ ಆರಂಭದ ಹೊರತಾಗಿಯೂ, ಮಹಾರಾಷ್ಟ್ರ ತಂಡವು 59 ಓವರ್‌ಗಳ ಅಂತ್ಯಕ್ಕೆ 166-5 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದೆ. ಮೂರನೇ ದಿನ ಮಹಾರಾಷ್ಟ್ರವು ತಮ್ಮ ಮುನ್ನಡೆಯನ್ನು ಹೆಚ್ಚಿಸಿಕೊಳ್ಳುವತ್ತ ಚಿತ್ತ ನೆಟ್ಟಿದೆ. ಕರ್ನಾಟಕವು ಉಳಿದ ವಿಕೆಟ್‌ಗಳನ್ನು ಬೇಗನೆ ಕಬಳಿಸಿ ಪಂದ್ಯದಲ್ಲಿ ಮತ್ತೆ ಹಿಡಿತ ಸಾಧಿಸಲು ಪ್ರಯತ್ನಿಸಬೇಕಿದೆ.

ಮೊದಲ ದಿನ ಉತ್ತಮ ಆರಂಭ ಕಂಡಿದ್ದ ಕರ್ನಾಟಕ, ಮಯಂಕ್ ಅಗರ್ವಾಲ್ ಅವರ 80 ರನ್‌ಗಳ ಬಲದಿಂದ ದಿನದಂತ್ಯಕ್ಕೆ 5 ವಿಕೆಟ್ ನಷ್ಟಕ್ಕೆ 257 ರನ್ ಗಳಿಸಿತ್ತು. ಆದರೆ, ಎರಡನೇ ದಿನ ಇನ್ನುಳಿದ ಆಟಗಾರರು ಕ್ರೀಸ್‌ನಲ್ಲಿ ನಿಲ್ಲಲು ವಿಫಲರಾಗಿ, ಕೇವಲ 313 ರನ್‌ಗಳಿಗೆ ತಂಡ ಆಲೌಟ್ ಆಯಿತು. ರಾಜ್ಯದ ಕೊನೆಯ ನಾಲ್ವರು ಆಟಗಾರರು ಒಂದು ರನ್ ಕೂಡ ಸೇರಿಸಲು ವಿಫಲರಾದರು.

ಇದರೊಂದಿಗೆ ಬಲಿಷ್ಠ ಮಹಾರಾಷ್ಟ್ರ ವಿರುದ್ಧ ದೊಡ್ಡ ಮೊತ್ತ ದಾಖಲಿಸುವ ಮಾಯಾಂಕ್ ಪಡೆಯ ಕನಸು ನನಸಾಗಲಿಲ್ಲ. ಮೊದಲ ದಿನ 31 ರನ್ ಗಳಿಸಿ ಎರಡನೇ ದಿನಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದ ಗೋಪಾಲ್ ಅಂತಿಮ ಕ್ಷಣದವರೆಗೂ ಹೋರಾಡಿ 71 ರನ್ ಗಳಿಸಿ ಔಟಾದರು. ಮೊದಲ ದಿನ 31 ರನ್ ಗಳಿಸಿದ್ದ ಅಭಿನವ್ ಮನೋಹರ್ 47 ರನ್‌ಗಳಿಗೆ ವಿಕೆಟ್ ಒಪ್ಪಿಸಿದರು. ಅಭಿನವ್ ಔಟಾದಾಗ ರಾಜ್ಯ ತಂಡ ಆರು ವಿಕೆಟ್ ನಷ್ಟಕ್ಕೆ 276 ರನ್ ಗಳಿಸಿತ್ತು. ಆದರೆ ನಂತರ ಬಂದ ಎಂ ವೆಂಕಟೇಶ್, ಮೊಹ್ಸಿನ್ ಖಾನ್ ಮತ್ತು ಅಭಿಲಾಷ್ ಶೆಟ್ಟಿ ಸೊನ್ನೆ ಸುತ್ತಿದರು. ಈ ಹಂತದಲ್ಲಿ ಬಿರುಸಿನ ಆಟಕ್ಕಿಳಿದ ಶ್ರೇಯಸ್ ಗೋಪಾಲ್ 71 ರನ್‌ಗಳಿಗೆ ವಿಕೆಟ್ ಒಪ್ಪಿಸುವ ಮೂಲಕ ರಾಜ್ಯದ ಹೋರಾಟ ಕೊನೆಯಾಯಿತು.

ಮಹಾರಾಷ್ಟ್ರ ಪರ ಇನ್ನಿಂಗ್ಸ್ ಆರಂಭಿಸಿದ ಪೃಥ್ವಿ ಶಾ ಮತ್ತು ಅರ್ಶಿನ್ ಕುಲಕರ್ಣಿ ಮೊದಲ ವಿಕೆಟ್‌ಗೆ 98 ರನ್ ಗಳಿಸಿ ತಂಡಕ್ಕೆ ಭದ್ರ ಬುನಾದಿ ಹಾಕಿಕೊಟ್ಟರು. ಆದರೆ 34 ರನ್ ಗಳಿಸಿದ ಕುಲಕರ್ಣಿ ಅವರನ್ನು ಔಟ್ ಮಾಡುವ ಮೂಲಕ ಶ್ರೇಯಸ್ ಗೋಪಾಲ್ ಮಹಾರಾಷ್ಟ್ರ ಪತನಕ್ಕೆ ನಾಂದಿ ಹಾಡಿದರು. ನಾಯಕ ಸಿದ್ದೇಶ್ ವೀರ್ ಮತ್ತು ಅಂಕಿತ್ ಬಾವಣೆ ಶ್ರೇಯಸ್ ಸ್ಪಿನ್ ಮೋಡಿಗೆ ಸಿಲುಕಿದರು. ಶತಕದತ್ತ ಸಾಗಿದ್ದ ಪೃಥ್ವಿ ಶಾ ಅವರನ್ನು ಮೊಹ್ಸಿನ್ ಬೌಲಿಂಗ್‌ನಲ್ಲಿ ಔಟಾದರು. ಈ ಮೂಲಕ ಮಹಾರಾಷ್ಟ್ರ ಎಂಟು ರನ್ ಅಂತರದಲ್ಲಿ ಪೃಥ್ವಿ ಶಾ ಸೇರಿದಂತೆ ಮಹತ್ವದ ಮೂರು ವಿಕೆಟ್‌ಗಳನ್ನು ಕಳೆದುಕೊಂಡಿತು. ದಿನದಂತ್ಯಕ್ಕೆ ಜಲಜ್ ಸಕ್ಸೇನಾ (34) ವಿಕ್ಕಿ ಓಸ್ವಾಲ್ (4) ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ.

ಪೃಥ್ವಿ ಶಾ ಅಬ್ಬರ

ತಮ್ಮ 26ನೇ ಹುಟ್ಟುಹಬ್ಬದ ದಿನದಂದು ವೇಗದ ಅರ್ಧಶತಕ (71 ರನ್) ಗಳಿಸಿ, ಪೃಥ್ವಿ ಶಾ ತಂಡಕ್ಕೆ ಆಸರೆಯಾದರು. ಇದು ಈ ಋತುವಿನಲ್ಲಿ ಅವರ 3ನೇ ಅರ್ಧಶತಕವಾಗಿದೆ. ಮೊದಲ ಪಂದ್ಯದಲ್ಲಿ ವಿಫಲರಾದರೂ ಚಂಡೀಗಢ ವಿರುದ್ಧ 222 ರನ್ ಗಳಿಸಿ ಭಾರತದ ಮಾಜಿ ಆರಂಭಿಕ ಆಟಗಾರ ಪೃಥ್ವಿ ಶಾ ಗಮನ ಸೆಳೆದಿದ್ದರು. 3ನೇ ಪಂದ್ಯದಲ್ಲಿ ಕಳಪೆ ಪ್ರದರ್ಶನ ನೀಡಿದ ನಂತರ, ಪೃಥ್ವಿ ಮತ್ತೊಮ್ಮೆ ಅರ್ಧಶತಕ ದಾಖಲಿಸಿ ತಮ್ಮ ಮೌಲ್ಯವನ್ನು ಸಾರಿದರು. ಶಾ ಈಗ ಈ ರಣಜಿ ಋತುವಿನಲ್ಲಿ ಆಡಿದ ನಾಲ್ಕು ಪಂದ್ಯಗಳಲ್ಲಿ ಮೂರು ಬಾರಿ 50ರ ಮೇಲಿನ ರನ್ ಮತ್ತು ಒಂದು ದ್ವಿಶತಕವನ್ನು ಗಳಿಸಿದ್ದಾರೆ.

ರಿಚಾ ಘೋಷ್ ಈಗ ಡಿಎಸ್‌ಪಿ

ಕೋಲ್ಕತಾ: ಐಸಿಸಿ ಮಹಿಳಾ ಏಕದಿನ ವಿಶ್ವಕಪ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ 22 ವರ್ಷದ ವಿಕೆಟ್ ಕೀಪರ್, ಬ್ಯಾಟರ್ ರಿಚಾ ಘೋಷ್ ಅವರಿಗೆ ಪಶ್ಚಿಮ ಬಂಗಾಳ ಸರಕಾರ ಉಪ ಪೊಲೀಸ್ ವರಿಷ್ಠಾಧಿಕಾರಿ (ಡಿಎಸ್‌ಪಿ) ಸ್ಥಾನಕ್ಕೆ ಪದೋನ್ನತಿ ನೀಡಿದೆ. ನವೆಂಬರ್ 8ರ ಶನಿವಾರ ಈಡನ್ ಗಾರ್ಡನ್‌ನಲ್ಲಿ ನಡೆದ ಭವ್ಯ ಸನ್ಮಾನ ಸಮಾರಂಭದಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರಿಗೆ ನೇಮಕಾತಿ ಪತ್ರವನ್ನು ಹಸ್ತಾಂತರಿಸಿದರು.

ಪ್ರತಿಷ್ಠಿತ ಬಂಗ ಭೂಷಣ್ ಪ್ರಶಸ್ತಿಯನ್ನು ಪಡೆದ ರಿಚಾ ಅವರಿಗೆ ಬಂಗಾಳ ಕ್ರಿಕೆಟ್ ಸಂಸ್ಥೆ ಚಿನ್ನ ಲೇಪಿತ ಬ್ಯಾಟ್ ಮತ್ತು ಚೆಂಡನ್ನು ನೀಡಿ ಗೌರವಿಸಿತು. ಫೈನಲ್‌ನಲ್ಲಿ ಅವರು ಗಳಿಸಿದ ಪ್ರತಿ ರನ್‌ಗೆ ಒಂದು ಲಕ್ಷದಂತೆ 34 ಲಕ್ಷ ರೂ. ನಗದು ಬಹುಮಾನವನ್ನು ಸಂಘ ನೀಡಿದೆ. ಮಮತಾ ಸರಕಾರ ಚಿನ್ನದ ಸರ ನೀಡಿ ಗೌರವಿಸಿದೆ. ಇದರೊಂದಿಗೆ, ದೀಪ್ತಿ ಶರ್ಮಾ (ಯುಪಿ ಪೊಲೀಸ್), ಮೊಹಮ್ಮದ್ ಸಿರಾಜ್ (ತೆಲಂಗಾಣ ಪೊಲೀಸ್) ಮತ್ತು ಜೋಗಿಂದರ್ ಶರ್ಮಾ (ಹರಿಯಾಣ ಪೊಲೀಸ್) ಸೇರಿದಂತೆ ಕ್ರೀಡಾ ಶ್ರೇಷ್ಠತೆಗಾಗಿ ಡಿಎಸ್ಪಿ ಶ್ರೇಣಿಯನ್ನು ಪಡೆದ ಅಪರೂಪದ ಕ್ರಿಕೆಟಿಗರ ಪಟ್ಟಿಗೆ ರಿಚಾ ಸೇರಿದ್ದಾರೆ. ಕಳೆದ ವರ್ಷ ರಿಚಾ 12ನೇ ತರಗತಿ ಪರೀಕ್ಷೆಗಳನ್ನು ಬರೆದಿದ್ದರಿಂದ ದ್ವಿಪಕ್ಷೀಯ ಸರಣಿಯಿಂದ ಹೊರಗುಳಿದಿದ್ದರು. ಈಡನ್ ಗಾರ್ಡನ್ಸ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾರತದ ಮಾಜಿ ನಾಯಕರಾದ ಸೌರವ್ ಗಂಗೂಲಿ ಮತ್ತು ಜೂಲನ್ ಗೋಸ್ವಾಮಿ ಅವರೊಂದಿಗೆ ರಿಚಾ ವೇದಿಕೆ ಹಂಚಿಕೊಂಡರು. ಇತ್ತೀಚೆಗೆ ಮುಕ್ತಾಯಗೊಂಡ ವಿಶ್ವಕಪ್‌ನಲ್ಲಿ ರಿಚಾ ಅವರು ಎಂಟು ಪಂದ್ಯಗಳಲ್ಲಿ 40 ಸರಾಸರಿಯಲ್ಲಿ ಮತ್ತು 133.52 ಸ್ಟ್ರೈಕ್ ರೇಟ್‌ನೊಂದಿಗೆ 235 ರನ್ ಗಳಿಸಿದ್ದಾರೆ.

ವಿಶ್ವದಾಖಲೆ ಬರೆದ ಮೇಘಾಲಯ ಬ್ಯಾಟರ್
11 ಎಸೆತಗಳಲ್ಲೇ ಅರ್ಧಶತಕ

ಸೂರತ್: ಮೇಘಾಲಯ ಕ್ರಿಕೆಟಿಗ ಆಕಾಶ್ ಕುಮಾರ್ ಚೌಧರಿ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಅತ್ಯಂತ ವೇಗದ ಅರ್ಧಶತಕ ಸಿಡಿಸುವ ಮೂಲಕ ವಿಶ್ವದಾಖಲೆ ಬರೆದಿದ್ದಾರೆ. 25 ವರ್ಷದ ಆಕಾಶ್ ಕೇವಲ 11 ಎಸೆತಗಳಲ್ಲಿ ಅರ್ಧಶತಕ ಗಳಿಸಿದರು. ಸೂರತ್‌ನಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿಯಲ್ಲಿ ಅರುಣಾಚಲ ಪ್ರದೇಶ ವಿರುದ್ಧದ ಪ್ಲೇಟ್ ಗ್ರೂಪ್ ಪಂದ್ಯದಲ್ಲಿ ಅವರು ಈ ಸಾಧನೆ ಮಾಡಿದರು.

ಈ ಮೂಲಕ ಆಕಾಶ್ ವೇಯ್ನ್ ವೈಟ್ ಅವರ ದಾಖಲೆಯನ್ನು (12 ಎಸೆತಗಳಲ್ಲಿ ಅರ್ಧಶತಕ) ಮುರಿದಿದ್ದಾರೆ. 2012 ರಲ್ಲಿ, ಲೀಸೆಸ್ಟರ್‌ಶೈರ್ ಆಟಗಾರ ವೇಯ್ನ್ ವೈಟ್ ಎಸೆಕ್ಸ್ ವಿರುದ್ಧದ ಪಂದ್ಯದಲ್ಲಿ 12 ಎಸೆತಗಳಲ್ಲಿ ಅರ್ಧಶತಕ ಗಳಿಸಿದ್ದರು. ಈಗ ಈ ದಾಖಲೆಯನ್ನ ಆಕಾಶ್ ಮುರಿದಿದ್ದಾರೆ. ಆಕಾಶ್ 50 ರನ್ ಗಳಿಸಿದ ಬಳಿಕ ಮೂರು ಎಸೆತಗಳನ್ನು ಎದುರಿಸಿದರೂ ಯಾವುದೇ ರನ್ ಗಳಿಸದೇ ಅಜೇಯರಾಗಿ ಉಳಿದರು. ಇದಕ್ಕೂ ಮುನ್ನ ಅವರು ಒಂದೇ ಓವರ್‌ನಲ್ಲಿ ಆರು ಸಿಕ್ಸರ್‌ಗಳ ಸಹಿತ ಎಂಟು ಸಿಕ್ಸರ್‌ಗಳನ್ನು ಬಾರಿಸಿದರು. ಈ ಅನುಕ್ರಮದಲ್ಲಿ, ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಸತತ ಎಂಟು ಸಿಕ್ಸರ್‌ಗಳನ್ನು ಬಾರಿಸಿದ ವಿಶ್ವದ ಮೊದಲ ಆಟಗಾರ ಎಂಬ ದಾಖಲೆಯನ್ನು ಸೃಷ್ಟಿಸಿದರು. ಈ ಹಿಂದೆ ಗ್ಯಾರಿ ಸೋಬರ್ಸ್ ಮತ್ತು ರವಿಶಾಸ್ತ್ರಿ ಅವರು ಸತತ ಆರು ಸಿಕ್ಸರ್‌ಗಳನ್ನು ಬಾರಿಸಿದ್ದರು. ಇದು ಕೇವಲ ರಣಜಿ ಟ್ರೋಫಿ ಮಾತ್ರವಲ್ಲದೆ, ಪ್ರಥಮ ದರ್ಜೆ ಕ್ರಿಕೆಟ್‌ನ ಇತಿಹಾಸದಲ್ಲಿ ಅತ್ಯಂತ ವೇಗದ ಅರ್ಧಶತಕವೂ ಆಗಿದೆ. ಇದು ದೇಶೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ದಶಕಗಳಷ್ಟು ಹಳೆಯದಾದ ದಾಖಲೆ ಯನ್ನು ಸಹ ಮುರಿದಿದೆ. ಭಾರತೀಯರಲ್ಲಿ, ಹಿಂದಿನ ದಾಖಲೆಯನ್ನು ಜಮ್ಮು ಮತ್ತು ಕಾಶ್ಮೀರದ ಬಂದೇವ್ ಸಿಂಗ್ ಹೊಂದಿದ್ದರು, ಅವರು 15 ಎಸೆತಗಳಲ್ಲಿ ಅರ್ಧಶತಕ ಗಳಿಸಿದ್ದರು. ಇದನ್ನು ಆಕಾಶ್ ಮುರಿದಿದ್ದಾರೆ.

ಇದಲ್ಲದೇ ಮೇಘಾಲಯ ಬ್ಯಾಟ್ಸ್‌ಮನ್‌ಗಳಾದ ಅರ್ಪಿತ್ (207), ರಾಹುಲ್ ದಲಾಲ್ (144), ಮತ್ತು ಕಿಶನ್ ಲಿಂಗ್ಡೊ (119) ರನ್‌ಗಳ ಪ್ರವಾಹ ಹರಿಸಿದರು. ಇದರೊಂದಿಗೆ ತಂಡವು ಮೊದಲ ಇನ್ನಿಂಗ್ಸ್ ಅನ್ನು 628/6 ಕ್ಕೆ ಡಿಕ್ಲೇರ್ ಮಾಡಿತು. ಇದಕ್ಕುತ್ತರವಾಗಿ ಮೊದಲ ಇನ್ನಿಂಗ್ಸ್ ಆರಂಭಿಸಿದ ಅರುಣಾಚಲ ಪ್ರದೇಶ 73 ರನ್‌ಗಳಿಗೆ ಸರ್ವಪತನಗೊಂಡಿತು. ಮೇಘಾಲಯದ ಸ್ಪಿನ್ನರ್ ಆರ್ಯನ್ (4/16) ಭರ್ಜರಿ ಪ್ರದರ್ಶನ ದೊಂದಿಗೆ ಮಿಂಚಿದರು. ಉಳಿದಂತೆ ಆರನ್ 2, ಡಿಪ್ಪು ಸಂಗ್ಮಾ 2, ಆಕಾಶ್ ಮತ್ತು ಸ್ವಸ್ತಿಕ್ ತಲಾ ಒಂದು ವಿಕೆಟ್ ಪಡೆದುಕೊಂಡರು.

ಧ್ರುವ್ ಜುರೆಲ್ ಅವಳಿ ಶತಕ ವ್ಯರ್ಥ; 417 ರನ್ ಬಾರಿಸಿಯೂ ಸೋತ ಭಾರತ

ಹರಿಣಗಳಿಗೆ ಅನಿರೀಕ್ಷಿತ ಜಯ

ಬೆಂಗಳೂರು: ದಕ್ಷಿಣ ಆಫ್ರಿಕಾ ಎ ಹಾಗೂ ಭಾರತ ಎ ತಂಡಗಳ ನಡುವೆ ನಡೆದ ಎರಡು ಪಂದ್ಯಗಳ ಅನಧಿಕೃತ ಟೆಸ್ಟ್ ಸರಣಿ 1-1ರ ಸಮಬಲದೊಂದಿಗೆ ಅಂತ್ಯಗೊಂಡಿದೆ. ಉಭಯ ತಂಡಗಳ ನಡುವಿನ ಮೊದಲ ಪಂದ್ಯವನ್ನು ಸುಲಭವಾಗಿ ಗೆದ್ದುಕೊಂಡಿದ್ದ ರಿಷಭ್ ಪಂತ್ ಪಡೆ ಎರಡನೇ ಪಂದ್ಯದಲ್ಲೂ ಗೆಲುವಿನ ಹುಮ್ಮಸ್ಸಿನಲ್ಲಿತ್ತು. ಇದಕ್ಕೆ ಪೂರಕವಾಗಿ ಕೊನೆಯ ದಿನದಲ್ಲಿ ಆಫ್ರಿಕಾ ತಂಡಕ್ಕೆ 417 ರನ್‌ಗಳ ಗೆಲುವಿನ ಬೃಹತ್ ಗುರಿಯನ್ನು ನೀಡಿತ್ತು. ಆದರೆ ಈ ಬೃಹತ್ ಗುರಿಯನ್ನು ಯಶಸ್ವಿಯಾಗಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ತಂಡ ಸರಣಿಯನ್ನು ಸಮಬಲಗೊಳಿಸಿತು. ಈ ಮೂಲಕ ಗೆಲುವಿನ ಖುಷಿಯೊಂದಿಗೆ ತಂಡ ನವೆಂಬರ್ 14ರಿಂದ ಆರಂಭವಾಗುವ ಟೆಸ್ಟ್ ಸರಣಿ ಆಡಲು ಸಿದ್ಧವಾಗಿದೆ.

ಬೆಂಗಳೂರಿನ ಬಿಸಿಸಿಐ ಸೆಂಟರ್ ಆಫ್ ಎಕ್ಸಲೆನ್ಸ್ ಮೈದಾನ 1 ರಲ್ಲಿ ನಡೆದ ಈ ಪಂದ್ಯದಲ್ಲಿ ಭಾರತದ ಬಲಿಷ್ಠ ಬೌಲಿಂಗ್ ಪಡೆಗೆ ಈ ಬೃಹತ್ ಗುರಿಯನ್ನು ಕಾಪಾಡಿಕೊಳ್ಳಲು ಸಾಧ್ಯವಾಗಲಿಲ್ಲ. ತಂಡದಲ್ಲಿ ಮೊಹಮ್ಮದ್ ಸಿರಾಜ್, ಆಕಾಶ್ ದೀಪ್, ಕುಲ್ದೀಪ್ ಯಾದವ್ ಮತ್ತು ಪ್ರಸಿದ್ಧ್ ಕೃಷ್ಣರಂತಹ ಸ್ಟಾರ್ ಬೌಲರ್‌ಗಳಿದ್ದರೂ ಸಹ ದಕ್ಷಿಣ ಆಫ್ರಿಕಾದ ಬ್ಯಾಟಿಂಗ್ ಬಲವನ್ನು ಮುರಿಯಲು ಸಾಧ್ಯವಾಗಲಿಲ್ಲ.

ಧ್ರುವ್ ಜುರೆಲ್ ಎರಡು ಶತಕ ವ್ಯರ್ಥ: ಈ ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲಿ ಭಾರತ ತಂಡವು ಧ್ರುವ್ ಜುರೆಲ್ ಅವರ ಅಜೇಯ 132 ರನ್‌ಗಳ ಸಹಾಯದಿಂದ 255 ರನ್ ಕಲೆಹಾಕಿತ್ತು. ಮೊದಲ ಇನ್ನಿಂಗ್ಸ್‌ನಲ್ಲಿ ಅವರನ್ನು ಹೊರತುಪಡಿಸಿ, ಬೇರೆ ಯಾವುದೇ ಬ್ಯಾಟ್ಸ್‌ಮನ್‌ಗೂ 30 ರನ್‌ಗಳ ಗಡಿ ತಲುಪಲು ಸಾಧ್ಯವಾಗಲಿಲ್ಲ. ಆದರೆ ಮೊದಲ ಇನ್ನಿಂಗ್ಸ್‌ನಲ್ಲಿ ಅದ್ಭುತ ಬೌಲಿಂಗ್ ಪ್ರದರ್ಶನ ನೀಡಿದ ಭಾರತ ಬೌಲರ್‌ಗಳು ದಕ್ಷಿಣ ಆಫ್ರಿಕಾವನ್ನು 221 ರನ್‌ಗಳಿಗೆ ಕಟ್ಟಿಹಾಕಿದ್ದರು. ತಂಡದ ಪರ ಪ್ರಸಿದ್ಧ್ ಕೃಷ್ಣ ಮೂರು ವಿಕೆಟ್ ಪಡೆದರೆ, ಆಕಾಶ್ ದೀಪ್ ಮತ್ತು ಮೊಹಮ್ಮದ್ ಸಿರಾಜ್ ತಲಾ ಎರಡು ವಿಕೆಟ್ ಪಡೆದರು ಮತ್ತು ಕುಲ್ದೀಪ್ ಯಾದವ್ ಮತ್ತು ಹರ್ಷ್ ದುಬೆ ತಲಾ ಒಂದು ವಿಕೆಟ್ ಪಡೆದರು.

ಮೊದಲ ಇನ್ನಿಂಗ್ಸ್‌ನಲ್ಲಿ ಮುನ್ನಡೆ ಸಾಧಿಸಿದ ಭಾರತ ಎರಡನೇ ಇನ್ನಿಂಗ್ಸ್‌ನಲ್ಲಿ ಉತ್ತಮ ಬ್ಯಾಟಿಂಗ್ ಪ್ರದರ್ಶಿಸಿತು. ತಂಡವು 7 ವಿಕೆಟ್‌ಗೆ 382 ರನ್‌ಗಳಿಸಿ ಇನ್ನಿಂಗ್ಸ್ ಡಿಕ್ಲೇರ್ ಮಾಡಿತ್ತು. ಎರಡನೇ ಇನ್ನಿಂಗ್ಸ್‌ನಲ್ಲಿಯೂ ಸಹ ಧ್ರುವ್ ಜುರೆಲ್ 127 ರನ್ ಬಾರಿಸಿ ಅಜೇಯರಾಗಿ ಉಳಿದರು. ಹರ್ಷ್ ದುಬೆ ಕೂಡ 84 ರನ್‌ಗಳ ಇನ್ನಿಂಗ್ಸ್ ಆಡಿದರೆ, ನಾಯಕ ರಿಷಭ್ ಪಂತ್ 65 ರನ್‌ಗಳ ಕೊಡುಗೆ ನೀಡಿದರು. ಹೀಗೆ ಭಾರತ ತಂಡವು ದಕ್ಷಿಣ ಆಫ್ರಿಕಾಕ್ಕೆ 417 ರನ್‌ಗಳ ಗುರಿ ನೀಡಿತ್ತು.

ಪಂದ್ಯ ಕೈ ಚೆಲ್ಲಿದ ಬೌಲರ್‌ಗಳು

ಭಾರತದ ಪಿಚ್‌ನಲ್ಲಿ ಅದರಲ್ಲೂ ಕೊನೆಯ ಇನ್ನಿಂಗ್ಸ್‌ನಲ್ಲಿ 417 ರನ್‌ಗಳ ಗುರಿಯನ್ನು ಬೆನ್ನಟ್ಟುವುದು ಸುಲಭದ ಕೆಲಸವಲ್ಲ. ಆದರೂ ದಕ್ಷಿಣ ಆಫ್ರಿಕಾದ ಬ್ಯಾಟ್ಸ್‌ಮನ್‌ಗಳು ಕೇವಲ ಐದು ವಿಕೆಟ್‌ಗಳನ್ನು ಕಳೆದುಕೊಂಡು ಈ ಸಾಧನೆ ಮಾಡುವಲ್ಲಿ ಯಶಸ್ವಿಯಾದರು. ತಂಡದ ಪರ ಜೋರ್ಡಾನ್ ಹರ್ಮನ್ 91 ರನ್ ಗಳಿಸಿದರೆ, ಲೆಸೆಗೊ ಸೆನೊಕ್ವಾನೆ 77 ರನ್ ಗಳಿಸಿ ತಂಡಕ್ಕೆ ಉತ್ತಮ ಆರಂಭ ನೀಡಿದರು. ನಂತರ ಜುಬೈರ್ ಹಮ್ಜಾ 77 ರನ್ ಮತ್ತು ಟೆಂಬಾ ಬವುಮಾ 59 ರನ್ ಗಳಿಸಿ ಗೆಲುವಿನ ಭರವಸೆ ಮೂಡಿಸಿದರು. ನಂತರ, ಕಾನರ್ ಎಸ್ಟರ್‌ಹುಯಿಜೆನ್ ಅಜೇಯ 52 ರನ್ ಗಳಿಸಿ ತಂಡವನ್ನು ಗೆಲುವಿನತ್ತ ಕೊಂಡೊಯ್ದರು. ಎರಡನೇ ಇನ್ನಿಂಗ್ಸ್‌ನಲ್ಲಿ ಭಾರತದ ಪರ ಪ್ರಸಿದ್ಧ್ ಕೃಷ್ಣ 2 ವಿಕೆಟ್ ಪಡೆದರೆ, ಮೊಹಮ್ಮದ್ ಸಿರಾಜ್ ಮತ್ತು ಆಕಾಶ್ ದೀಪ್ ತಲಾ ಒಂದು ವಿಕೆಟ್ ಮಾತ್ರ ಪಡೆದರು. ಕುಲ್ದೀಪ್ ಯಾದವ್ ವಿಕೆಟ್ ಪಡೆಯಲಿಲ್ಲ. ಇದು ಭಾರತದ ಐದು ವಿಕೆಟ್‌ಗಳ ಸೋಲಿಗೆ ಕಾರಣವಾಯಿತು.

ವಿ ಟಾಕೀಸ್

ಟೈಟಾನ್ ಏರಿ ಹಾಲಿವುಡ್‌ಗೆ ಬಂದ ರವಿ

ಕನ್ನಡದ ಖ್ಯಾತ ಸಂಗೀತ ನಿರ್ದೇಶಕರ ಸಾಲಿಗೆ ಸೇರಿರುವ ರವಿ ಬಸ್ರೂರು, ಕೆಜಿಎಫ್ ಮೂಲಕ ಸಂಗೀತ ಪ್ರಿಯರ ಮನಸೂರೆಗೊಂಡರು. ಹಲವು ಪ್ಯಾನ್ ಇಂಡಿಯಾ ಸಿನಿಮಾಗಳಿಗೆ ಸಂಗೀತ ಸಂಯೋಜಿಸಿ ಸೈ ಎನಿಸಿಕೊಂಡರು. ಮಾತ್ರವಲ್ಲ ಕರಾವಳಿಯ ಸಾಂಸ್ಕೃತಿ ಹಿನ್ನೆಲೆಯ ವೀರಚಂದ್ರಹಾಸ ಚಿತ್ರವನ್ನು ನಿರ್ದೇಶಿಸಿ ಯಕ್ಷ ಲೋಕವನ್ನೇ ಸೃಷ್ಟಿಸಿದ ರವಿ ಬಸ್ರೂರು, ಭಾರತ್ವಿಯ ಚಿತ್ರರಂಗವನ್ನೇ ಕನ್ನಡದ ಚಿತ್ರರಂಗದತ್ತ ತಿರುಗಿ ನೋಡುವಂತೆ ಮಾಡಿಸರು. ಈಗ ಟೈಟಾನ್ ಏರಿ ಹಾಲಿವುಡ್ ಅಂಗಳಕ್ಕೂ ಪ್ರವೇಶಿಸಿದ್ದಾರೆ.

ಹೌದು ರವಿಬಸ್ರೂರು ಟೈಟಾನ್ ದಿ ಜರ್ನಿ ಬಿಗಿನ್ಸ್ ಶೀರ್ಷಿಕೆಯಲ್ಲಿ ಆಲ್ಬಂ ಸಾಂಗ್ ರೆಡಿಮಾಡಿದ್ದು, ಈಆಲ್ಬಂನ ಒಂದೊಂದೇ ಗೀತೆ ಬಿಡುಗಡೆಯಾಗಿವೆ. ಸದ್ಯ ಬಿಡುಗಡೆಯಾಗಿರುವ ಎರಡನೇ ಹಾಡಿಗೆ ಭರ್ಜರಿ ರೆಸ್ಪಾನ್ಸ್ ವ್ಯಕ್ತವಾಗುತ್ತಿದೆ. ರೋರ್ ಆಫ್ ಟಾರ್ನೊಡೊ ಎಂಬ ಹಾಡು ಇದಾಗಿದ್ದು, ಸಂಗೀತ ಪ್ರಿಯರ ಮನಸೂರೆಗೊಂಡಿದೆ. ಈ ಹಾಡಿಗೆ ಸಂಗೀತ ಶಕ್ತಿ ತುಂಬಿದೆ.

ಟೈಟಾನ್ ಆಲ್ಬಂ ಗೀತೆಯನ್ನು ಮೆಚ್ಚಿಕೊಂಡಾಡಿರುವ ಹಾಲಿವುಡ್ ಮಂದಿ ರವಿಬಸ್ರೂರು ಸಂಗೀತಕ್ಕೆ ಮನಸೋತಿದ್ದಾರೆ. ಹಾಗಾಗಿ ತಮ್ಮ ಮುಂದಿನ ಚಿತ್ರಗಳಿಗೆ ಸಂಗೀತ ಸಂಯೋಜಿಸಲು ರವಿ ಅವರನ್ನು ಕೇಳಿಕೊಂಡಿದ್ದಾರೆ. ಅದರಲ್ಲಿಯೂ ಹಾಲಿವುಡ್ ನ ಖ್ಯಾತ ನಟ ಟಾಮ್ ಕ್ರೂಸ್ ನಟಿಸುತ್ತಿರುವ ಹೊಸ ಚಿತ್ರಕ್ಕೆ ರವಿ ಬಸ್ರೂರು ಸಂಗೀತ ಸಂಯೋಜಿಸಲಿದ್ದಾರೆ. ಅದರ ಜತೆಗೆ ಮತ್ತೆರಡು ಹಾಲಿವುಡ್ ಸಿನಿಮಾಗಳಿಗೂ ಸಂಗೀತ ಸಂಯೋಜಿಸಲು ಸಹಿ ಹಾಕಿದ್ದಾರೆ. ಸ್ಯಾಂಡಲ್ ವುಡ್ ನಲ್ಲಿ ಸಂಗೀತದ ಮೂಲಕವೇ ಮೋಡಿ ಮಾಡಿ ಈಗ ಹಾಲಿವುಡ್ ಗೂ ಹಾರಿರುವ ರವಿ ಬಸ್ರೂರು ಕನ್ನಡಕ್ಕೆ ಹೆಮ್ಮೆ ತಂದಿದ್ದಾರೆ. ಅದರ ಜತೆಗೆ ಹೊಸತರದ ಸಿನಿಮಾಗಳ ನಿರ್ದೇಶನದತ್ತಲೂ ಗಮನಹರಿಸಿದ್ದಾರೆ.

ಲಂಡನ್ ಕೆಫೆಯಲ್ಲಿ ಮಿಂಚಿದ ಮೇಘಾ

ಆಪರೇಷನ್ ಲಂಡನ್ ಕೆಫೆ ಆರಂಭದಿಂದಲೂ ಸಾಕಷ್ಟು ಸದ್ದು ಮಾಡುತ್ತಿತ್ತು. ಈ ಸಿನಿಮಾದ ಬಿಡುಗಡೆಗೆ ಸಿನಿಪ್ರಿಯರು ಕಾತರರಾಗಿದ್ದರು. ಈ ತಿಂಗಳಿನಲ್ಲಿಯೇ ಆಪರೇಷನ್ ಲಂಡನ್ ಕೆಫೆ ತೆರೆಗೆ ಬರಲಿದೆ. ಈಗ ಚಿತ್ರದ ಹಾಡು ಬಿಡುಗಡೆಯಾಗಿದ್ದು ಸಿನಿಪ್ರಿಯರ ಮನಗೆದ್ದಿವೆ. ಸಡಗರ ರಾಘವೇಂದ್ರ, ಈ ಚಿತ್ರವನ್ನು ನಿರ್ದೇಶಿಸುವ ಜತೆಗೆ ಹಾಡಿಗೆ ಸಾಹಿತ್ಯ ರಚಿಸಿದ್ದಾರೆ. ಕವೀಶ್ ಶೆಟ್ಟಿ ನಾಯಕನಾಗಿ ನಟಿಸಿದ್ದು, ರಗಡ್ ಆಗಿ ಕಂಗೊಳಿಸಿದ್ದಾರೆ. ಮೇಘಾ ಶೆಟ್ಟಿ ನಾಯಕಿಯಾಗಿ ಬಣ್ಣ ಹಚ್ಚಿದ್ದಾರೆ. ಪ್ರಕೃತಿ ಮತ್ತು ಮಾನವ ಸಹಜ ಪ್ರೀತಿ ಸಂಬಂಧಗಳ ಬಗ್ಗೆ ಸುಂದರವಾಗಿ ವರ್ಣಿಸುವ ಸಿನಿಮಾ ಇದಾಗಿದ್ದು, ಅದ್ದೂರಿಯಾಗಿ ಮೂಡಿಬಂದಿದೆ.

ಈ ಚಿತ್ರದಲ್ಲಿ ಅಪ್ಪಟ ಬಜಾರಿ ಹುಡುಗಿಯಾಗಿ ಕಾಣಿಸಿಕೊಂಡಿರುವ ಮೇಘಾ, ಲಂಗ ದಾವಣಿ ತೊಟ್ಟು ಮಿಂಚಿದ್ದಾರೆ. ಮೇಘಾ ಶೆಟ್ಟಿ ಹಿಂದೆಂದಿಗಿಂತಲೂ ಲವಲವಿಕೆಯಿಂದ ಕಾಣಿಸಿಕೊಂಡು ರೈ ರೈ ರೈ... ಈ ಪ್ರೀತಿ ಶ್ಯಾನೆ ಮಜವಾಗುತ್ತೈತಿ, ಮನಸಾಗ ಎಲಿಯಡಿಕಿ ಆಗಿಯಾಕತ್ತೈತಿ .... ಎನ್ನುತ್ತಾ ತನ್ನ ಅಭಿಮಾನಿಗಳನ್ನು ರಂಜಿಸುತ್ತಿದ್ದಾರೆ. ಕವೀಶ್ ಶೆಟ್ಟಿ ನಕ್ಸಲೈಟ್ ಗೆಟಪ್ಪಿನಲ್ಲಿ ಮೀಸೆ ತಿರುವುತ್ತಾ ಖದರಾಗಿ ಕಾಣಿಸಿಕೊಂಡಿದ್ದಾರೆ. ಆಪರೇಷನ್ ಲಂಡನ್ ಕೆಫೆ ಕನ್ನಡದ ಜತೆಗೆ ಮರಾಠಿಯಲ್ಲಿಯೂ ಏಕಕಾಲಕ್ಕೆ ನಿರ್ಮಾಣವಾಗಿದೆ. ಹಿಂದಿಯಲ್ಲಿಯೂ ಬಿಡುಗಡೆಯಾಗಲಿದೆ. ಈ ಚಿತ್ರದ ಮೂಲಕ

ಮೇಘಾ ಶೆಟ್ಟಿ ಹಿಂದಿ ಹಾಗೂ ಮರಾಠಿ ಚಿತ್ರರಂಗಕ್ಕೂ ಲಗ್ಗೆಯಿಟ್ಟಿದ್ದಾರೆ. ಛಾಯಾಗ್ರಾಹಕ ಆರ್.ಡಿ.ನಾಗಾರ್ಜುನ್ ಹಾಡಿಗೆ ತಕ್ಕ ಹಾಗೆ ಪ್ರಕೃತಿಯ ಸುಂದರ ದೃಶ್ಯಗಳನ್ನು ತನ್ನ ಕ್ಯಾಮೆರಾದಲ್ಲಿ ಅದ್ಬುತವಾಗಿ ಸೆರೆ ಹಿಡಿದಿದ್ದಾರೆ. ಪ್ರಾಂಶು ಝಾ ಸಂಗೀತ ಸಂಯೋಜಿಸಿದ್ದಾರೆ. ಜಿಲ್ಕಾ ಚಿತ್ರದ ನಂತರ ಎರಡನೆಯ ಬಾರಿ ತಮ್ಮ ವಿಶೇಷ ವಿಶಿಷ್ಟ ಸಂಗೀತ ಸಂಯೋಜನೆಯ ಮೂಲಕ ಮತ್ತೊಮ್ಮೆ ಸೈ ಎನಿಸಿಕೊಂಡಿದ್ದಾರೆ.

ಇಂಪಾದ ಗಾಯನದ ಮೂಲಕ ಕನ್ನಡಿಗರ ಮನ ಸೂರೆಗೊಂಡಿರುವ ಗಾಯಕಿ ಐಶ್ವರ್ಯಾ ರಂಗರಾಜನ್ ಈ ಮೂಲಕ ಮತ್ತೊಂದು ಹಿಟ್ ಹಾಡನ್ನು ತನ್ನ ಬತ್ತಳಿಕೆಗೆ ಸೇರಿಸಿಕೊಂಡಿದ್ದಾರೆ

ಇಂಡಿಯನ್ ಫಿಲಂ ಫ್ಯಾಕ್ಟರಿ ಮತ್ತು ದೀಪಕ್ ರಾಣೆ ಫಿಲಂಸ್ ಸಂಸ್ಥೆಯಲ್ಲಿ ಅದ್ದೂರಿಯಾಗಿ ನಿರ್ಮಾಣವಾಗಿರುವ ಈ ಚಿತ್ರವನ್ನು ವಿಜಯ್ ಕುಮಾರ್ ಶೆಟ್ಟಿ, ರಮೇಶ್ ಕೊಠಾರಿ, ದೀಪಕ್ ರಾಣೆ ಮತ್ತು ವಿಜಯ್ ಪ್ರಕಾಶ್ ನಿರ್ಮಾಣ ಮಾಡಿದ್ದಾರೆ.

ಈಗಾಗಲೇ ಮಾಸ್ ಆ್ಯಕ್ಷನ್ ಪೋಸ್ಟರ್ ಮೂಲಕ ಗಮನ ಸೆಳೆದಿದ್ದ ಆಪರೇಷನ್ ಲಂಡನ್ ಕೆಫೆ ಈಗ ಹಾಡಿನ ಮೂಲಕ ಚಿತ್ರದ ಬಗ್ಗೆ ಮತ್ತಷ್ಟು ಕುತೂಹಲ ಹೆಚ್ಚಿಸಿದೆ. ಇದೇ 28 ರಂದು ಆಪರೇಷನ್ ಲಂಡನ್ ಕೆಫೆ ಕನ್ನಡ, ಮರಾಠಿ ಹಾಗೂ ಹಿಂದಿ ಭಾಷೆಯಲ್ಲಿ ತೆರೆಗೆ ಬರಲಿದೆ.

ಮಂಜುಗೆ ಕಂಕಣ ಭಾಗ್ಯ

ಉಗ್ರಂ ಮೂಲಕ ಖ್ಯಾತಿ ಗಳಿಸಿದ ಮಂಜು, ಕಳೆದ ಸೀಸನ್ ನಲ್ಲಿ ಬಿಗ್ ಬಾಸ್ ಮನೆಗೂ ಎಂಟ್ರಿಕೊಟ್ಟಿದ್ದರು. ಬಿಗ್ ಬಾಸ್ ಮನೆಯಲ್ಲಿಯೂ ಮಂಜು ಮದುವೆ ಯಾವಾಗ ಎಂಬ ಪ್ರಶ್ನೆ ಕೇಳಿಬಂದಿತ್ತು. ಬಿಗ್ ಬಾಸ್ ಮನೆಯಿಂದ ಹೊರ ಬಂದ ಮೇಲೂ ಅದೇ ಪ್ರಶ್ನೆ ಕೇಳಿಬಂದಿತ್ತು. ಅಂತು ಈಗ ಉಗ್ರಂ ಮಂಜು ಹಸೆಮಣೆ ಏರಲು ಸಜ್ಜಾಗಿದ್ದಾರೆ. ಸದ್ದಿಲ್ಲದೆ ಮಂಜು ನಿಶ್ಚಿತಾರ್ಥವೂ ನೆರವೇರಿದೆ. ಸಂಧ್ಯಾ ಎಂಬುದವವರ ಜತೆಗೆ ನಿಶ್ಚಿತಾರ್ಥ ನೆರವೇರಿದೆ. ಸಂಧ್ಯಾ ಹಾಗೂ ಮಂಜು ಕುಟುಂಬಸ್ಥರು, ಆತ್ಮೀಯರ ಸಮ್ಮುಖದಲ್ಲಿ ಮದುವೆ ನಿಶ್ಚಿತಾರ್ಥ ನೆರವೇರಿಸಿಕೊಂಡಿದ್ದಾರೆ.

ಬದುಕಿನ ಹೊಸ ಅಧ್ಯಾಯ ಆರಂಭವಾಗಿದೆ... ನಿಮ್ಮ ಆಶೀರ್ವಾದ ನಮ್ಮ ಮೇಲಿರಲಿ, ದೇವರ ಕೃಪೆಯಿಂದ, ಕುಟುಂಬದ ಆಶೀರ್ವಾದದಿಂದ ನಾವು ಜೀವನದ ಹೊಸ ಹಾದಿಗೆ ಕಾಲಿಟ್ಟಿದ್ದೇವೆ, ಹೊಸ ಬಂಧದ ಆರಂಭ ನಿಶ್ಚಿತಾರ್ಥದ ಸುಂದರ ಕ್ಷಣ ನಿಮ್ಮೆಲ್ಲರೊಂದಿಗೆ ಹಂಚಿಕೊಳ್ಳುತ್ತಿದ್ದೇವೆ ಎಂದು ಮಂಜು ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ. ಸಂಧ್ಯಾ ಬೆಂಗಳೂರಿನ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಶೀಘ್ರದಲ್ಲಿಯೇ ಇಬ್ಬರ ವಿವಾಹ ನೆರವೇರಲಿದೆ.

ಮಂಜು ಬಿಗ್ ಬಾಸ್ ಮನೆಗೆ ಯೋಗಿ ಬಂದ ಬಳಿಕ ಅವರ ಅದೃಷ್ಟವೂ ಬದಲಾಗಿದ್ದು, ಅವರಿಗೆ ಸಾಲು ಸಾಲು ಅವಕಾಶಗಳು ಅರಸಿ ಬರುತ್ತಿವೆ. ಮ್ಯಾಕ್ಸ್ ನಲ್ಲಿ ಉಗ್ರಂ ಮಂಜು ತಮ್ಮ ಪಾತ್ರದ ಮೂಲಕ ಗಮನಸೆಳೆದಿದ್ದರು. ಈಗ ಅಂತಹದ್ದೇ ಪಾತ್ರಗಳು ಅವರನ್ನು ಅರಸಿ ಬರುತ್ತಿವೆ.

ಅಬ್ಬರಿಸಲು ಸಿದ್ಧವಾದ ಮಾರುತ

ಎಸ್.ನಾರಾಯಣ್ ನಿರ್ದೇಶನದ ಮಾರುತ ಸಿನಿಮಾ ಬಿಡುಗಡೆಯ ಹಂತಕ್ಕೆ ಬಂದಿದೆ. ಎಲ್ಲಾ ಅಂದುಕೊಂಡಂತೆ ಆಗಿದ್ದರೆ ಕಳೆದ ವಾರವೇ ಈ ಸಿನಿಮಾ ತೆರೆಕಾಣಬೇಕಿತ್ತು. ಕಾರಣಾಂತರಗಳಿಂದ ಬಿಡುಗಡೆಯ ದಿನಾಂಕವನ್ನು ಮುಂದೂಡಲಾಗಿತ್ತು. ಇದೀಗ ಬಿಡುಗಡೆಯ ದಿನಗಳನ್ನು ಎದಿರು ನೋಡುತ್ತಿರುವ ಚಿತ್ರತಂಡದಿಂದ ಒಂದೊಂದೇ ಹಾಡುಗಳು ಹೊರ ಬರುತ್ತಿವೆ. ಈಗಾಗಲೇ ಅನಾವರಣಗೊಂಡಿರುವ ಟೀಸರ್, ಟ್ರೇಲರ್ ಹಾಗೂ ಹಾಡುಗಳು ಗಮನ ಸೆಳೆದಿವೆ.

ದುನಿಯಾ ವಿಜಯ್, ಶ್ರೇಯಸ್ ಮಂಜು ಪ್ರಮುಖ ಪಾತ್ರದಲ್ಲಿ ನಟಿಸಿರುವ ಈ ಚಿತ್ರದಲ್ಲಿ ಬೃಂದಾ ಆಚಾರ್ಯ ನಾಯಕಿಯಾಗಿ ಅಭಿನಯಿಸಿದ್ದಾರೆ.

ತಾರಾ, ರಂಗಾಯಣ ರಘು, ಸಾಧುಕೋಕಿಲ, ಕಲ್ಯಾಣಿ, ಶರತ್ ಲೋಹಿತಾಶ್ವ, ಪ್ರಮೋದ್ ಶೆಟ್ಟಿ, ಸುಜಯ್ ಶಾಸ್ತ್ರಿ ಹೀಗೆ ಅನುಭವಿ ಕಲಾವಿದರ ದೊಡ್ಡ ತಾರಾಬಳಗವೇ ಇದೆ. ಕ್ರೇಜಿಸ್ಟಾರ್ ರವಿಚಂದ್ರನ್ ಅತಿಥಿ ಪಾತ್ರದಲ್ಲಿ ಅಭಿನಯಿಸಿದ್ದಾರೆ.

ನನ್ನ ಈ ಹಿಂದಿನ ಎಲ್ಲಾ ಸಿನಿಮಾಗಳಿಗಿಂತ ಮಾರುತ ಹೊಸಬಗೆಯ ಸಿನಿಮಾವಾಗಿದೆ.

ಇದು ಸಾಮಾಜಿಕ ಕಳಕಳಿ ಅಡಕವಾಗಿರುವ ಕಥೆ. ಈ ಚಿತ್ರದಲ್ಲಿ ಪೋಷಕರಿಗೆ ಒಂದು ಸಂದೇಶವಿದೆ. ಅದರಲ್ಲೂ ಹೆಣ್ಣು

ಮಕ್ಕಳ ಪೋಷಕರು ಈ ಸಿನಿಮಾವನ್ನು ನೋಡಲೇಬೇಕು. ಪೋಷಕರೇ ನಿಮ್ಮ ಮಕ್ಕಳ ಬಗ್ಗೆ ಎಚ್ಚರ ಇರಲಿ. ಅವರ ಚಲನವಲನದ ಬಗ್ಗೆ ನಿಗಾ ಇರಲಿ. ಅವರ ಕೈಯಲ್ಲಿರುವ ಮೊಬೈಲ್ ಚಟುವಟಿಕೆಗಳ ಬಗ್ಗೆ ನಿಮಗೆ ತಿಳಿದಿದ್ದರೆ ಒಳಿತು ಎಂಬ ಸಂದೇಶ ಈ ಚಿತ್ರದಲ್ಲಿ ಬೆರೆತಿದೆ ಎನ್ನುತ್ತಾರೆ ನಿರ್ದೇಶಕ ಎಸ್.ನಾರಾಯಣ್.

ಈಶಾ ಪ್ರೊಡಕ್ಷನ್ಸ್ ಬ್ಯಾನರ್ ನಲ್ಲಿ ಈ ಚಿತ್ರ ನಿರ್ಮಾಣವಾಗಿದೆ. ಶಿವಪ್ರಸಾದ್ ಯಾದವ್ ಸಂಕಲನ, ವಿನೋದ್ ಹಾಗೂ ಅರ್ಜುನ್ ಸಾಹಸ ನಿರ್ದೇಶನ ಮತ್ತು ಮೋಹನ್ ಕುಮಾರ್, ಸಂತು ನೃತ್ಯ ನಿರ್ದೇಶನವಿದೆ. ಎಸ್.ನಾರಾಯಣ್ ಹಾಗೂ ಜೆಸ್ಸಿಗಿಫ್ಟ್ ಸಂಗೀತ ಸಂಯೋಜಿಸಿದ್ದಾರೆ. ಇದೇ 21 ರಂದು ಮಾರುತ ಸದ್ದು ಮಾಡಲಿದೆ.

ಕಿಂಗ್‌ನಲ್ಲಿ ಮಿಂಚಿದ ಶಾರುಖ್

ಸಾಲು ಸಾಲು ಸೋಲುಗಳಿಂದ ಕಂಗೆಟ್ಟಿದ್ದ ಶಾರುಖ್ ಖಾನ್ ಗೆ ದೊಡ್ಡ ಗೆಲುವು ತಂದುಕೊಟ್ಟಿದ್ದು ಪಠಾಣ್. ಈ ಚಿತ್ರವನ್ನು ನಿರ್ದೇಶಿಸಿದ್ದ ಸಿದ್ದಾರ್ಥ ಆನಂದ್ , ಶಾರುಖ್ ಖಾನ್ ಅವರಿಗೆ ಹೊಸ ಇಮೇಜ್ ತಂದುಕೊಟ್ಟರು. ಶಾರುಖ್ ಹಿಂದೆಂದೂ ಕಾಣದ ಲುಕ್ ನಲ್ಲಿ ಮಿಂಚಿದರು, ಆ್ಯಕ್ಷನ್ ನಲ್ಲಿಯೂ ಅಬ್ಬರಿಸಿದರು. ಪಠಾಣ್ ಭರ್ಜರಿ ಯಶಸ್ಸು ಕಂಡಿತು, ಬಾಕ್ಸ್ ಆಫೀಸ್ ನಲ್ಲಿ ಒಳ್ಳೆಯ ಕಲೆಕ್ಷನ್ ಮಾಡಿತು. ಈಗ ಶಾರುಖ್ ಮತ್ತು ಸಿದ್ದಾರ್ಥ ಆನಂದ್ ಒಂದಾಗಿದ್ದು ಇಬ್ಬರ ಕಾಂಬಿನೇಷನ್ ನಲ್ಲಿ ಕಿಂಗ್ ಸಿನಿಮಾ ಮೂಡಿಬರುತ್ತಿದೆ.

ಈಗಾಗಲೇ ಬಿಡುಗಡೆಯಾಗಿರುವ ಕಿಂಗ್ ಟೀಸರ್ ಗೆ ಭರ್ಜರಿ ರೆಸ್ಪಾನ್ಸ್ ವ್ಯಕ್ತವಾಗಿತ್ತು. ಈ ಚಿತ್ರದಲ್ಲಿ ಶಾರುಕ್ ಲುಕ್ ನೋಡಿ ಅವರ ಅಭಿಮಾನಿಗಳು ಬಹುಪರಾಕ್ ಎಂದಿದ್ದಾರೆ. ಕಿಂಗ್ ???ಕ್ಷನ್ ಚಿತ್ರವಾಗಿದ್ದು ಬರೋಬ್ಬರಿ ಆರು ರೋಚಕ ಸಾಹಸ ಸನ್ನಿವೇಗಳಿವೆಯಂತೆ. ಶಾರುಕ್ ಈ ಚಿತ್ರದಲ್ಲಿ ಭರ್ಜರಿ ಆ್ಯಕ್ಷನ್ ನಲ್ಲಿ ಮಿಂಚಿದ್ದಾರೆ. ವಿಶೇಷ ಎಂದರೆ ಶಾರುಖ್ ಪುತ್ರಿ ಸುಹಾನಾ ಖಾನ್ ಕೂಡ ಕಿಂಗ್ ಚಿತ್ರದಲ್ಲಿ ನಟಿಸಿದ್ದಾರೆ. ಹಾಗಾಗಿಯೇ ಈ ಸಿನಿಮಾದ ಮೇಲೆ ಶಾರುಖ್ ಗೆ ವಿಶೇಷ ಪ್ರೀತಿ. ದೀಪಿಕಾ ಪಡುಕೋಣೆ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಹಾಗಾಗಿಯೇ ಕಿಂಗ್ ಬರೋಬ್ಬರಿ ಮುನ್ನೂರ ಐವತ್ತು ಕೋಟಿ ಬಜೆಟ್ ನಲ್ಲಿ ನಿರ್ಮಾಣವಾಗಿದ್ದು, ನಿರೀಕ್ಷೆ ಹೆಚ್ಚಿಸಿದೆ. ಕಿಂಗ್ ಮುಂದಿನ ವರ್ಷ ಅದ್ದೂರಿಯಾಗಿ ತೆರೆಗೆ ಬರಲಿದೆ.